ರಾಷ್ಟ್ರ ಜಾಗೃತಿಯ ದೈನಿಕ

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ

ಬೆಂಗಳೂರು
ಬುಧವಾರ, 27 ಮೇ 2026
ಸಂಪುಟ 33, ಸಂಚಿಕೆ 206, ಪುಟಗಳು 14+4
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
RNI: 58231/94
REG No.KA/BG GPO/2532/2021-23
hosadigantha.com
epaper.hosadigantha.com
Hosadigantha Digital

ಐಪಿಎಲ್ ಫೈನಲ್‌ಗೆ ಆರ್‌ಸಿಬಿ



• ಪುಟ ೧೩

ಪರಿಷತ್‌ಗೆ ಜೂ.18ಕ್ಕೆ ಮತದಾನ | ೦೨

ಸುಪ್ರೀಂಗೆ ಡಿಕೆಶಿ ಧನ್ಯವಾದ | ೦೩

ದಿಲ್ಲಿಯಲ್ಲಿ ವರಿಷ್ಠರಿಂದ ಸರಣಿ ಸಭೆ

ಹೈಕಮಾಂಡ್‌ನ ಪರಿಹಾರ ಸೂತ್ರ



• **ಹೊಸದಿಲ್ಲಿ:** ಕಳೆದ ಕೆಲ ದಿನಗಳಿಂದ ಕರ್ನಾಟಕದಲ್ಲಿ ಉಂಟಾಗಿದ್ದ ನಾಯಕತ್ವ ಗೊಂದಲಕ್ಕೆ ಕಾಂಗ್ರೆಸ್ ಹೈಕಮಾಂಡ್ ಕೊನೆಗೂ ಮಂಗಳವಾರ ಪರಿಹಾರ ಸೂತ್ರವನ್ನು ಕಂಡುಕೊಂಡಿದೆ. ಶೀಘ್ರದಲ್ಲೇ ಅದು ಅನುಷ್ಠಾನಕ್ಕೆ ಬರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದಿಲ್ಲಿಗೆ ಬರುವಂತೆ ಕಾಂಗ್ರೆಸ್ ಹೈಕಮಾಂಡ್ ಸೋಮವಾರ ಸೂಚನೆ ನೀಡಿತ್ತು. ಅದರಂತೆ ಸಿದ್ದರಾಮಯ್ಯ ದಿಲ್ಲಿಗೆ ತೆರಳಿದ್ದರು. ಇತ್ತ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕೂಡ ದಿಲ್ಲಿಗೆ ದೌಡಾಯಿಸಿದ್ದರು. ಮಂಗಳವಾರ ಎಐಸಿಸಿ ಕಚೇರಿಯ ಇಂದಿರಾ ಭವನಕ್ಕೆ ಉಭಯ ನಾಯಕರನ್ನು ಕರೆಸಿಕೊಂಡ ಕಾಂಗ್ರೆಸ್ ಹೈಕಮಾಂಡ್ ಅವರೊಂದಿಗೆ ಸರಣಿ ಸಭೆಗಳನ್ನು ನಡೆಸಿದೆ. ➡ಪುಟ 9

ಇಂದು ಬೆಂಗಳೂರಿಗೆ ಕೆಸಿವಿ, ಸುರ್ಜೆವಾಲಾ

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ಕರ್ನಾಟಕ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ಅವರು ಬುಧವಾರ ಬೆಂಗಳೂರಿಗೆ ಆಗಮಿಸಲಿದ್ದಾರೆ. ಬೆಂಗಳೂರಿನಲ್ಲಿ ಸಭೆ ನಡೆಸುವ ಸಾಧ್ಯತೆಗಳಿವೆ. ಬೆಳಗ್ಗೆ 10.30ಕ್ಕೆ ಕೆಪಿಸಿಸಿ ಕಚೇರಿಯಲ್ಲಿ ಪಂಡಿತ್ ಜವಾಹರಲಾಲ್ ನೆಹರು ಅವರ ಪುಣ್ಯಸ್ಮರಣೆ ಕಾರ್ಯಕ್ರಮ ಏರ್ಪಡಿಸಲಾಗಿದೆ. ಅದರಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪಾಲ್ಗೊಳ್ಳಲಿದ್ದು, ಬಳಿಕ ವಿಧಾನಸೌಧದ ಆವರಣದಲ್ಲಿರುವ ನೆಹರು ಅವರ ಪ್ರತಿಮೆಯ ಬಳಿ ಅವರ ಭಾವಚಿತ್ರಕ್ಕೆ ಗೌರವಾರ್ಪಣೆ ಮಾಡಲಿದ್ದಾರೆ.

ಜನಜಾಗೃತಿ ಅಭಿಯಾನಕ್ಕೆ ಸಿದ್ಧತೆ

ಮೋದಿ ಸರ್ಕಾರಕ್ಕೆ 12 ವರ್ಷದ ಹರ್ಷ

- ಜೂ.5ರಿಂದ 21 ರವರೆಗೆ ಜನಜಾಗೃತಿ
- ರಾಷ್ಟ್ರವ್ಯಾಪಿ ಅಭಿಯಾನದಲ್ಲಿ ಜನರಿಗೆ ಅರಿವು
- 22 ಪ್ರಮುಖ ಸಾಧನೆಗಳ ಬಗ್ಗೆ ಮಾಹಿತಿ



• **ಹೊಸದಿಲ್ಲಿ:** ಕೇಂದ್ರದ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರಕಾರದ ಆಡಳಿತಕ್ಕೆ ಮಂಗಳವಾರ 12 ವರುಷಗಳು ತುಂಬಿದವು. ಈ ಸಾಧನೆ ಸಂಭ್ರಮಿಸುವ ಅನ್ವಯ ಮತ್ತು ಮೋದಿ ಸರಕಾರದ ಜನಪರ ಯೋಜನೆಗಳನ್ನು ರಾಷ್ಟ್ರವ್ಯಾಪಿ ಪರಿಚಯಿಸುವ, ಅರ್ಥೈಸುವ ಜನಜಾಗೃತಿ ಅಭಿಯಾನಕ್ಕೆ ಬಿಜೆಪಿ ಮತ್ತದರ ಮಿತ್ರಪಕ್ಷಗಳು ಅಣಿಯಾಗುತ್ತಿವೆ. ಎನ್‌ಡಿಎ ಸರಕಾರ ಜನರಿಗೆ ನೀಡಿರುವ, ನೀಡುತ್ತಿರುವ ಕಲ್ಯಾಣಪರ ಆಡಳಿತ, ಬಿಗು ಪಾರದರ್ಶಿತ್ವದ ವ್ಯವಸ್ಥೆಗಳು ಮತ್ತು ಜಾಗತಿಕ ರಂಗದಲ್ಲಿ ಬೆಳೆಯುತ್ತಿರುವ ಭಾರತದ ರಾಜತಾಂತ್ರಿಕ ಪ್ರಭಾವ ಇತ್ಯಾದಿ ಎಲ್ಲಕ್ಕೂ ಪ್ರಧಾನಿ ನರೇಂದ್ರ ಮೋದಿ ಅವರ ಸಮರ್ಥ ನಾಯಕತ್ವ ಮೂಲ ಕಾರಣವೆಂದು ಬಿಜೆಪಿ ಮತ್ತು ಮಿತ್ರಪಕ್ಷ ಜೆಡಿಯು ನಾಯಕರು ಹೆಮ್ಮೆಯಿಂದ ಹೇಳಿದ್ದಾರೆ.

ಮೋದಿ ಸರಕಾರ ಜನಪರವಾಗಿ ಜಾರಿಗೊಳಿಸಿರುವ ಕಲ್ಯಾಣ ಕಾರ್ಯಕ್ರಮಗಳು, ಮೂಲಸೌಕರ್ಯ, ವಿದೇಶಾಂಗ ನೀತಿಸಹಿತ ಸರಕಾರದ 22 ಪ್ರಮುಖ ಸಾಧನೆಗಳ ಮಾಹಿತಿಯನ್ನು ಅಭಿಯಾನದಲ್ಲಿ ರಾಷ್ಟ್ರವ್ಯಾಪಿ ಜನರಿಗೆ ಪರಿಚಯಿಸಲಾಗುವುದು, ಪ್ರದರ್ಶಿಸಲಾಗುವುದು. ➡ಪುಟ 9

ಬಲಿಷ್ಠ ಜಾಗತಿಕ ಮಾನ್ಯತೆ

ಹಿಂದಿನ ಸರಕಾರಗಳಿಗೆ ಹೋಲಿಸಿದಲ್ಲಿ, ಭಾರತದ ಜಾಗತಿಕ ಮಾನ್ಯತೆ ಇಂದು ಅದೆಷ್ಟೋ ಪಾಲು ಬಲಿಷ್ಠವಾಗಿರುವುದು ನಿರ್ವಿವಾದ ಸಂಗತಿ. ಸಂಘರ್ಷ ನಿರತ ಹಲವು ರಾಷ್ಟ್ರಗಳು ಇದೀಗಲೂ ಸಮಾನ ಭರವಸೆಯೊಂದಿಗೆ ಭಾರತದತ್ತ ನೋಡುತ್ತಿವೆ. ➡ಪುಟ 9

ಜನಸಂಖ್ಯೆ ಸ್ವರೂಪ ಪರಾಮರ್ಶೆ ಹಿನ್ನೆಲೆ

ಉನ್ನತ ಅಧ್ಯಯನ ತಂಡ ರಚನೆ: ಶಾ ಘೋಷಣೆ



• **ಹೊಸದಿಲ್ಲಿ:** ರಾಷ್ಟ್ರೀಯ ಭದ್ರತೆ, ಸಾರ್ವಭೌಮತೆ ಮತ್ತು ಸಾಮಾಜಿಕ ಸ್ಥಿರತೆಗೆ ತೊಡಕುಗಳೊಂದಿಗೆ ಗಂಭೀರ ಸವಾಲಾಗಿ ಪರಿಣಮಿಸಿರುವ, ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆಗಳ ಸಮಗ್ರ ಪರಾಮರ್ಶೆ ಮತ್ತು ಅಧ್ಯಯನಕ್ಕಾಗಿ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನಾವ್ದೋಲೇಕರ್ ನೇತೃತ್ವದಲ್ಲಿ, ಉನ್ನತ ಮಟ್ಟದ ಅಧ್ಯಯನ ತಂಡ ರಚಿಸಲಾಗಿದೆ. ತಂಡವು ದೇಶಾದ್ಯಂತ ಜನಸಂಖ್ಯಾ ಸ್ವರೂಪದಲ್ಲಾಗಿರುವ ಬದಲಾವಣೆಗಳ ಅಧ್ಯಯನ ನಡೆಸಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಘೋಷಿಸಿದ್ದಾರೆ. ➡ಪುಟ 9

ರಾಷ್ಟ್ರದ ವರ್ತಮಾನ, ಭವಿಷ್ಯಕ್ಕೆ ತೊಂದರೆ

ಅಕ್ರಮ ನುಸುಳುವಿಕೆ ಮತ್ತು ಜನಸಂಖ್ಯಾ ಸ್ವರೂಪದಲ್ಲಿ ಅಸ್ವಾಭಾವಿಕ ಬದಲಾವಣೆಗೆ ಕಾರಣಕರ್ತ ಇತರ ಅಂಶಗಳು ಯಾವುದೇ ರಾಷ್ಟ್ರದ ವರ್ತಮಾನ ಮತ್ತು ಭವಿಷ್ಯಕ್ಕೆ ಗಂಭೀರ ಸವಾಲೊಡ್ಡಲಿವೆ. ಪ್ರಧಾನಿ ನರೇಂದ್ರ ಮೋದಿ ಅವರು 2025ರ ಆ.15ರಂದು ಘೋಷಿಸಿದಂತೆ, ಇದೀಗ ಈ ಸಮಸ್ಯೆಯ ಅಧ್ಯಯನಕ್ಕಾಗಿ ಉನ್ನತಾಧಿಕಾರ ತಂಡ ರಚಿಸಲಾಗಿದೆ. ಜನಗಣತಿ ಆಯುಕ್ತ ಮತ್ತು ಮಾಜಿ ಐಎಎಸ್ ಅಧಿಕಾರಿ ದುರ್ಗಾ ಶಂಕರ್ ಮಿಶ್ರಾ, ಮಾಜಿ ಐಪಿಎಸ್ ಅಧಿಕಾರಿ ಬಾಲಾಜಿ ಶ್ರೀವಾಸ್ತವ, ಆರ್ಥಿಕ ತಜ್ಞರಾದ ಶಮಿಕಾ ರವಿ ತಂಡದಲ್ಲಿರುವರು. ಗೃಹ ವ್ಯವಹಾರ ಖಾತೆಯಲ್ಲಿನ ಜಂಟಿ ಕಾರ್ಯದರ್ಶಿ (ವಿದೇಶೀಯರು-1)ಗಳು ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ರುವರು ಎಂದು ಸಚಿವ ಶಾ ಮಾಹಿತಿ ನೀಡಿದ್ದಾರೆ.

ಕರ್ನಾಟಕ ಸರ್ಕಾರಕ್ಕೆ ಕೇಂದ್ರ ಮಾಹಿತಿ

ದ್ವೇಷದ ಭಾಷಣ ತಡೆ ಕಾನೂನು ಅಗತ್ಯವಿಲ್ಲ



• **ಹೊಸದಿಲ್ಲಿ:** ದೇಶದಲ್ಲಿ ಪ್ರಸಕ್ತ ಅಸ್ತಿತ್ವದಲ್ಲಿರುವ ಕಾನೂನುಗಳು ದ್ವೇಷ ಭಾಷಣ-ದ್ವೇಷಯುಕ್ತ ಅಪರಾಧಗಳ ನಿಯಂತ್ರಿಸಲು ಸಂಪೂರ್ಣ ಶಕ್ತವಿವೆ ಮತ್ತು ಸಮರ್ಥವಾಗಿವೆ. ಹಾಗಾಗಿ ಈ ವಿಚಾರದಲ್ಲಿ ಪ್ರತ್ಯೇಕ ಕಾನೂನಿನ ಅಗತ್ಯವಿಲ್ಲವೆಂದು ಕೇಂದ್ರ ಸರಕಾರ ಕರ್ನಾಟಕ ಸರಕಾರಕ್ಕೆ ಸ್ಪಷ್ಟವಾಗಿ ಹೇಳಿದೆ. ಈ ಮೂಲಕ ಪ್ರತ್ಯೇಕ ಕಾನೂನು ಜಾರಿ ಮಾಡುವ ಕರ್ನಾಟಕ ಸರಕಾರದ ಪ್ರಯತ್ನಕ್ಕೆ ಹಿನ್ನಡೆಯಾಗಿದೆ.

ಕರ್ನಾಟಕದ ಪ್ರಸ್ತಾವಿತ ದ್ವೇಷ ಭಾಷಣ ನಿಯಂತ್ರಣ ಶಾಸನ ಬೆಂಬಲಿಸಲು ಕೇಂದ್ರ ಗೃಹ ಖಾತೆ ನಿರಾಕರಿಸಿದೆ. ಅಂತಹ ಅಪರಾಧ ನಿಯಂತ್ರಿಸಲು ಸದ್ಯ ಅಸ್ತಿತ್ವದಲ್ಲಿರುವ ಕಾನೂನುಗಳು ಸಾಕಷ್ಟು ಸಮರ್ಥವಿವೆ. ಪ್ರತ್ಯೇಕ ಕಾನೂನು ಜಾರಿಗೊಳಿಸುವ ಕರ್ನಾಟಕ ಸರಕಾರದ ಕ್ರಮವು ಕಾನೂನು ಅತಿಕ್ರಮಣ ಮತ್ತು ಅಸಂಗತತೆಗೆ ಕಾರಣವಾಗಲಿದೆ ಎಂದು ಕೇಂದ್ರ ಗೃಹ ಸಚಿವಾಲಯ ಎಚ್ಚರಿಸಿದೆ. ➡ಪುಟ 9

ಏಕರೂಪತೆ ಕೊರತೆ, ನಕಲಿತನಕ್ಕೆ ಎಡೆ

ರಾಜ್ಯಮಟ್ಟದಲ್ಲಿ ಪ್ರತ್ಯೇಕ ಶಾಸನ ರಚನೆಯ ಅಗತ್ಯವಿಲ್ಲ. ಇದು ಕಾನೂನು ನಿಯಮಾವಳಿಗಳ ನಕಲಿತನ ಮತ್ತು ದೇಶಾದ್ಯಂತ ಪ್ರಸ್ತುತ ಕಾನೂನು ಅನುಷ್ಠಾನದಲ್ಲಿನ ಏಕರೂಪತೆಗೆ ತೊಡಕುಂಟು ಮಾಡಲಿದೆ ಎಂದು ಗೃಹ ಖಾತೆ ಕರ್ನಾಟಕ ಸರಕಾರಕ್ಕೆ ಸ್ಪಷ್ಟಪಡಿಸಿದೆ. ಬೆನ್ನಲ್ಲೇ, ಕೇಂದ್ರ ಸರಕಾರ ವ್ಯಕ್ತಪಡಿಸಿರುವ ಆಕ್ಷೇಪಗಳಿಗೆ ಪ್ರತಿಯಾಗಿ, ವಿಸ್ತೃತವಾದ ಪ್ರತ್ಯುತ್ತರ ನೀಡುವಂತೆ ಕರ್ನಾಟಕದ ಕಾನೂನು ಇಲಾಖೆ ರಾಜ್ಯದ ಗೃಹ ಇಲಾಖೆಯನ್ನು ಕೋರಿದೆ.

ಮೇಲ್ಮನೆಗೆ ಅವಕಾಶ ನೀಡಲು ಕಾಂಗ್ರೆಸ್ ಆಕಾಂಕ್ಷಿಗಳ ಮನವಿ



• **ಬೆಂಗಳೂರು:** ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದಿಂದ ಮೇಲ್ಮನೆಗೆ ಪ್ರವೇಶ ಬಯಸಿರುವ ಆಕಾಂಕ್ಷಿಗಳು ಮಂಗಳವಾರ ದಿಲ್ಲಿಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಡಾ. ಸೈಯದ್ ನಾಸಿರ್ ಹುಸೇನ್ ಮತ್ತು ಕರ್ನಾಟಕದ ಉಸ್ತುವಾರಿ ಅಭಿಷೇಕ್ ದತ್ ಅವರನ್ನು ಭೇಟಿಯಾಗಿ ಮನವಿ ಮಾಡಿದರು.

ಜೂ. 30ರಂದು ವಿಧಾನಪರಿಷತ್‌ನ ಏಳು ಸ್ಥಾನಗಳು ಖಾಲಿಯಾಗಲಿವೆ. ಈ ಹಿನ್ನೆಲೆಯಲ್ಲಿ ಅವಕಾಶ ನೀಡಬೇಕೆಂದು ಆಕಾಂಕ್ಷಿಗಳು ಪಕ್ಷದ ಸಂಘಟನೆಗಾಗಿ ತಳಮಟ್ಟದಿಂದ ನಿರಂತರವಾಗಿ ಶ್ರಮಿಸುತ್ತಿರುವ ನಿಷ್ಠಾವಂತ ಕಾರ್ಯಕರ್ತರು ಮತ್ತು ಮುಖಂಡರ ಸೇವೆಯನ್ನು ಗುರುತಿಸಿ, ಮುಂಬರುವ ವಿಧಾನಪರಿಷತ್ ಸ್ಥಾನಗಳಲ್ಲಿ ಸೂಕ್ತ ಅವಕಾಶ ಕಲ್ಪಿಸಿಕೊಡುವಂತೆ ಈ ಸಂದರ್ಭದಲ್ಲಿ ನಾಯಕರ ಬಳಿ ಒಕ್ಕೊರಲಿನ ಮನವಿ ಸಲ್ಲಿಸಿದರು. ನಿಯೋಗದಲ್ಲಿ ಎ.ಎನ್. ನಟರಾಜ್ ಗೌಡ, ಬಿ.ಆರ್ ನಾಯ್ಡು, ಮೆಹರೋಜ್ ಖಾನ್, ಶಾಕಿರ್ ಸನದಿ, ಮಂಜುನಾಥ್ ಸುಣಗಾರ್, ಸುನೀಲ್ ಹನುಮಣ್ಣನವರ್, ಕಾಂತಾ ನಾಯಕ್ ಮತ್ತು ರಾಜೇಶ್ವರಿ ಪಾಟೀಲ್ ಇದ್ದರು.

ರಾಮ ಬಾಣ



ಉನ್ನತ ಅಧ್ಯಯನ ತಂಡ ರಚನೆ: ಶಾ ಘೋಷಣೆ



ಪುಟ 1 ➡ ಅಕ್ರಮ ವಲಸೆ ಮತ್ತಿತರ ಅಸ್ವಾಭಾವಿಕ ಅಂಶಗಳಿಂದಾಗಿ ದೇಶದ ಜನಸಂಖ್ಯಾ ಗಾತ್ರದಲ್ಲಾಗಿರುವ ಸ್ಥಿತ್ಯಂತರ ಅಥವಾ ಬದಲಾವಣೆಗಳ ಅಧ್ಯಯನಕ್ಕಾಗಿ, ಸಮರ್ಪಿತ ನಿಯೋಗವೊಂದನ್ನು ರಚಿಸಲಾಗುವುದು ಎಂದು ಪ್ರಧಾನಿ ನರೇಂದ್ರ ಮೋದಿ 2025ರ ಸ್ವಾತಂತ್ರ್ಯ ದಿನದಂದು ಘೋಷಿಸಿದ್ದರು. ದೇಶಾದ್ಯಂತ ಅಕ್ರಮ ನುಸುಳುವಿಕೆ ಮತ್ತು ಅಸ್ವಾಭಾವಿಕವಾದ ಜನಸಂಖ್ಯಾ ಬದಲಾವಣೆಗಳ ಪರಿಣಾಮಗಳ ಅಧ್ಯಯನ ಮಾಡಲಿರುವ ಉನ್ನತ ಮಟ್ಟದ ಸಮಿತಿಗೆ, ಸರಕಾರವೀಗ ವಿಧ್ಯುಕ್ತ ಚಾಲನೆ ನೀಡಿದೆ ಎಂದು ಅಮಿತ್ ಶಾ ಎಕ್ಸ್‌ಗೆ ಹಾಕಿರುವ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ತಂಡದ ಕಾರ್ಯವೈಖರಿ: ಉನ್ನತಾಧಿಕಾರ ತಂಡವು ಭಾರತಾದ್ಯಂತ ಜನಸಂಖ್ಯಾ ಸ್ವರೂಪದಲ್ಲಾಗಿರುವ ಬದಲಾವಣೆಗಳ ಕುರಿತು ಸಮಗ್ರ ಅಧ್ಯಯನ ನಡೆಸಲಿದೆ. ಅಕ್ರಮ ವಲಸೆ ಮತ್ತು ಇತರ ಅಸ್ವಾಭಾವಿಕ ಕಾರಣಗಳಿಂದ ಆಗಿರುವ ಸ್ಥಿತ್ಯಂತರಗಳನ್ನು ಪರಿಶೀಲಿಸುವುದು, ಮತ-ಧರ್ಮೀಯ ಮತ್ತು ಸಾಮಾಜಿಕ ಗುಂಪುಗಳ ಜನಸಂಖ್ಯಾ ಬೆಳವಣಿಗೆ ದರದಲ್ಲಿ ಆಗಿರುವ ಅಸ್ವಾಭಾವಿಕ ವ್ಯತ್ಯಾಸಗಳನ್ನು ವಿಶ್ಲೇಷಿಸಲಿದೆ ಮತ್ತು ವ್ಯವಸ್ಥಿತವಾದ , ಕಾಲಮಿತಿ ಆಧಾರಿತ ಪರಿಹಾರವನ್ನು ಶಿಫಾರಸು ಮಾಡಲಿದೆ. ಜನಸಂಖ್ಯಾ ಡೇಟಾವನ್ನು ಮೀರಿದ ಸಮಸ್ಯೆ ಇದಾಗಿದೆ. ಜನಸಂಖ್ಯಾ ಸ್ವರೂಪದಲ್ಲಿನ ಬದಲಾವಣೆ ಅಥವಾ ವ್ಯತ್ಯಯವು ದೇಶದ ಸಾರ್ವಭೌಮತೆ, ಕಾನೂನು ಸುವ್ಯವಸ್ಥೆ, ಸಾಮಾಜಿಕ ಚೌಕಟ್ಟು, ದೇಶದ ಬುಡಕಟ್ಟು ಸಮುದಾಯಗಳ ಸಂರಕ್ಷಣೆಯೇ ಇತ್ಯಾದಿಗಳಿಗೆ ನೇರ ತೊಂದರೆಯೊಡ್ಡಲಿವೆ ಎಂದು ಸಚಿವ ಶಾ ಹೇಳಿದ್ದಾರೆ.

ಉನ್ನತಾಧಿಕಾರ ತಂಡವು ಜನಸಂಖ್ಯಾ ಡೇಟಾದ ವಿಶ್ಲೇಷಣೆ ನಡೆಸಲಿದೆ ಮತ್ತು ಸ್ಥಳೀಯ ಮುಖಂಡರು ಅಥವಾ ಸಂಬಂಧಪಟ್ಟ ಸಂಸ್ಥೆಗಳನ್ನು ಸಂಪರ್ಕಿಸಿ, ಎದುರಾಗಲಿರುವ ಸಮಸ್ಯೆಗಳ ನಿವಾರಣೆಗೆ ನೀತಿ ನಿಯಮಗಳ ಪ್ರಸ್ತಾವ ಮುಂದಿಟ್ಟು ಸಮಾಲೋಚನೆ ನಡೆಸಲಿದೆ. ಕ್ರಿಯಾತ್ಮಕ ಪರಿಹಾರ ಸಹಿತ ತನ್ನ ಶಿಫಾರಸುಗಳನ್ನು ನಿಗದಿತ ಕಾಲಮಿತಿಯೊಳಗೆ ಸಲ್ಲಿಸುವ ನಿರೀಕ್ಷೆಯಿದೆ. ಸಮಗ್ರ ಮಾಹಿತಿ- ನಿರ್ಧಾರಾತ್ಮಕ ಕ್ರಮಗಳ ಬಲದಿಂದ ದೇಶದ ಸಮಗ್ರತೆ ಮತ್ತು ಸಾಮಾಜಿಕ ವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ, ಕ್ರಿಯಾಪರ ಪ್ರಯತ್ನಗಳಿಗೆ ಸಾಕ್ಷಿಯಾಗಿದೆ ಪ್ರಸ್ತುತ ಉಪಕ್ರಮ ಎಂದು ಅಧಿಕಾರಿಗಳು ವಿಶ್ಲೇಷಿಸಿದ್ದಾರೆ.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಮೊದಲು ಒಳ್ಳೆಯವನಾಗು , ಬಳಿಕ ಸಂಪಾದನೆ ಮಾಡು ಅಂತ ಹಿಂದಿನ ಕಾಲದಲ್ಲಿ ಹೇಳುತ್ತಿದ್ದರು. ಸಂಪಾದನೆಯ ಮೂಲಕ ಸಮಾಜದಲ್ಲಿ ಒಳ್ಳೆಯವನೆನಿಸಿಕೊ ಅಂತ ಇಂದಿನ ಕಾಲದಲ್ಲಿ ಹೇಳುತ್ತಾರೆ
- ಕೀಮಾರು ತ್ರೀಗಳು
- **ಆಗ ಒಳ್ಳೆಯವನಾಗು ಅಂತ ಹೇಳಿದರೆ ಗುಣದಲ್ಲಿ ಎನ್ನುವ ಅರ್ಥವಿತ್ತು, ಈಗ ಒಳ್ಳೆಯವನಾಗು ಅಂತ ಹೇಳಿದರೆ ಹಣದಲ್ಲಿ ಎನ್ನುವ ಅರ್ಥವಿದೆ!**

ದಿನ ಭವಿಷ್ಯ

ಮೇಷ
ನೆಗೆಟಿವ್ ಚಿಂತನೆ ಜನರನ್ನು ದೂರವಿಡಿ. ಅವರ ಪ್ರಭಾವಕ್ಕೆ ಸಿಲುಕಬೇಡಿ. ನಿಜವಾಗಿ ಉತ್ತಮ ಫಲವನ್ನು ಗ್ರಹಗತಿ ಸೂಚಿಸುತ್ತಿದೆ.

ವೃಷಭ
ಎಲ್ಲವೂ ನಿಮಗೆ ಪೂರಕವಾಗಿಲ್ಲವೆ? ನಿಮ್ಮ ಕಾರ್ಯಶೈಲಿಯಲ್ಲಿ ಕೆಲ ಬದಲಾವಣೆ ಮಾಡಿಕೊಳ್ಳಿ. ಗಣೇಶನನ್ನು ಪ್ರಾರ್ಥಿಸಿ. ನಿಮಗೆ ಒಳಿತಾಗಲಿದೆ.

ಮಿಥುನ
ಸಂಬಂಧದಲ್ಲಿ ದೊಡ್ಡ ತಿರುವು ಉಂಟಾದೀತು. ವಿವಾಹ ಸಂಬಂಧ ಒದಗಬಹುದು. ವದಂತಿಗೆ ಕಿವಿಗೊಡಬೇಡಿ. ಆರ್ಥಿಕ ಪರಿಸ್ಥಿತಿ ಸುಧಾರಣೆ.

ಕಟಕ
ಇಂದು ಗಂಭೀರ ಮನಸ್ಥಿತಿ ತೋರುವಿರಿ. ಲಘು ಧೋರಣೆ ತೊರೆಯುವಿರಿ. ಇದು ನಿಮಗೆ ಒಳಿತನ್ನೇ ತರಲಿದೆ. ಆರ್ಥಿಕ ದೃಢತೆ.

ಸಿಂಹ
ಕೆಲಸದಲ್ಲಿ ಬದ್ಧತೆ ಇರಲಿ. ಕಾಟಾಚಾರದ ಕೆಲಸ ಮಾಡಬೇಡಿ. ಹಿರಿಯರ ಕಿವಿಮಾತು ಗಂಭೀರವಾಗಿ ಪರಿಗಣಿಸಿ. ಸಂಬಂಧದಲ್ಲಿ ಒಡಕು.

ಕನ್ಯಾ
ಎಲ್ಲರಿಂದ ಮೆಚ್ಚುಗೆ ಪಡೆಯುವ ದಿನ. ನಿಮ್ಮ ಕ್ಷೇತ್ರದಲ್ಲಿ ಸಾಧನೆಯ ಗರಿ. ಹಣದ ವಿಚಾರದಲ್ಲಿ ರಿಸ್ಕ್ ಬೇಡ. ಎಚ್ಚರಿಕೆಯ ಹೆಜ್ಜೆ ಇಡುವುದೊಳಿತು.

ತುಲಾ
ಆಪ್ತರ ಬೆಂಬಲದಿಂದ ನಿಮ್ಮ ಕಾರ್ಯ ಸುಗಮ. ಕಾಡುವ ಒತ್ತಡಕ್ಕೆ ಶೀಘ್ರ ಪರಿಹಾರ ಸಿಗಲಿದೆ. ಆರ್ಥಿಕ ಹಿನ್ನಡೆ ಸಂಭವ.

ವೃಶ್ಚಿಕ
ಇಂದು ಆರಂಭಿಸುವ ಕೆಲಸದಲ್ಲಿ ಸಫಲತೆ ಖಚಿತ. ಎಲ್ಲರ ಜತೆ ಸೌಹಾರ್ದ ಸಂಬಂಧ ಕಾಯ್ದುಕೊಳ್ಳಿ. ಕ್ಷುಲ್ಲಕ ವಿಷಯ ಬಂಧುತ್ವ ಕೆಡಿಸದಿರಲಿ.

ಧನು
ಪ್ರೀತಿಯಲ್ಲಿ ಅಪಯಶಸ್ಸು. ಹಳೆಯ ಅನುಭವ ಕಹಿಯಾಗಿ ಕಾಡಲಿದೆ. ಮಾನಸಿಕ ಉದ್ವಿಗ್ನತೆ. ಬಂಧುಗಳ ಅಸಹಕಾರ.

ಮಕರ
ವೈರುಧ್ಯಮಯ ಭಾವನೆಗಳ ತಾಕಲಾಟ. ಹೊಣೆಗಾರಿಕೆ ಹೆಚ್ಚಳ. ಸಹಕಾರ ಕಡಿಮೆ. ತಾಳ್ಮೆಯಿಂದ ಕಾಯಿರಿ. ಒಳ್ಳೆದಿನ ಬರಲಿದೆ.

ಕುಂಭ
ಕಳೆದ ಕೆಲದಿನಗಳ ಗೊಂದಲ ಇಂದು ಇತ್ಯರ್ಥ. ನಿಶ್ಚಿತ ನಿರ್ಧಾರಕ್ಕೆ ಬರುವಿರಿ. ಸಂಕಷ್ಟಗಳು ಪರಿಹಾರ. ಸಂಬಂಧ ಸುಧಾರಣೆ.

ಮೀನ
ಅನಿರೀಕ್ಷಿತ ಕಾರ್ಯದೊತ್ತಡ. ಆದರೂ ಸರಿಯಾಗಿ ನಿಭಾಯಿಸುವಿರಿ. ಆರ್ಥಿಕ ಲಾಭ. ಚರ್ಮದ ಅಲರ್ಜಿ ಕಾಡಬಹುದು.

ರಾಹುಕಾಲ: 12.00-1.30
ಗುಳಿಕಕಾಲ: 10.30-12.00

ಅದೃಷ್ಟ ಸಂಖ್ಯೆ : 4,9,6,3

ವೀರಸಾವರ್ಕರ್ ಜಯಂತಿ ಕಾರ್ಯಕ್ರಮದಲ್ಲಿ ಬಿ.ಎಲ್.ಸಂತೋಷ್ ಹೇಳಿಕೆ

ಗಾಂಧಿಯಿಂದ ನೆಹರು ಪ್ರಧಾನಿ

• **ಜಮಖಂಡಿ:** ಸ್ವಾತಂತ್ರ್ಯ ನಂತರದ ದೇಶದಲ್ಲಿ ಗಾಂಧೀಜಿಯವರ ಬೆಂಬಲದಿಂದ ನೆಹರು ಪ್ರಧಾನಿಯಾದರೆ ಹೊರತು ಕಾಂಗ್ರೆಸ್ಸಿನ ಒಳಗಿನಿಂದ ಮತ್ತು ಹೊರಗಿನಿಂದಲ್ಲ, ಗಾಂಧಿಯ ಬೆಂಬಲವಿಲ್ಲದಿರದಿದ್ದರೆ ಅಂದು ಸರ್ದಾರ ಪಟೇಲರು ಪ್ರಧಾನಿಯಾಗಿರುತ್ತಿದ್ದರು ಎಂದು ಭಾರತೀಯ ಜನತಾ ಪಾರ್ಟಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಹೇಳಿದರು.

ನಗರದ ಬಸವ ಭವನ ಆವರಣದಲ್ಲಿ ಸ್ವಾತಂತ್ರ್ಯ ವೀರ ಸಾವರ್ಕರ್ ಪ್ರತಿಷ್ಠಾನದ ಆಡಿಯಲ್ಲಿ ಏರ್ಪಡಿಸಿದ್ದವೀರಸಾವರ್ಕರ್‌ಜಯಂತಿಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಮಾತನಾಡಿದರು.

ಸಾವರ್ಕರ್ ಅವರೊಬ್ಬ ಶ್ರೇಷ್ಠ ಸಾಹಿತಿ, ಕ್ರಾಂತಿಕಾರಿ, ಸೃಜನಶೀಲ ಸಮಾಜೋದ್ಧಾರಕ, ಸಮಾನತಾವಾದಿಯಾಗಿದ್ದರು. ಅವರಿಂದಲೇ ರತ್ನಗಿರಿಯಲ್ಲಿ ಪತಿತ ಪಾವನ ಮಂದಿರ ಸ್ಥಾಪಿಸಿ ಅಸ್ಪೃಶ್ಯತೆಯನ್ನು ತೊಡೆದು ಹಾಕಲು ಪ್ರಯತ್ನಿಸಿದ ವ್ಯಕ್ತಿಯಾಗಿದ್ದರು. ನಾವೆಲ್ಲ ಓದಿದ ಸಿಪಾಯಿ ದಂಗೆಯನ್ನು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ಘಂಟಾಘೋಷವಾಗಿ ಹೇಳಿ ಪುಸ್ತಕ ಬರೆದರು.

ಅದು ಬಿಡುಗಡೆಗೂ ಮುನ್ನವೇ ಬ್ಯಾನ್ ಆಗಿತ್ತು. ಆದರೂ ಸಹ 18 ಭಾಷೆಯಲ್ಲಿ ತರ್ಜುಮೆಯಾಗಿ ಹೊರ ಬಂದಿತ್ತು. ಅಂತಹ ಧೀರ ವ್ಯಕ್ತಿಗೆ ಪದೇ ಪದೇ ಕಾಂಗ್ರೆಸ್ ಮೋಸ ಮಾಡುತ್ತಲೇ ಬಂದಿದೆ ಎಂದರು. ದೇಶದಲ್ಲಿ ಎರಡು ಬಾರಿ ಕರಿ ನೀರಿನ ಶಿಕ್ಷೆ ಅನುಭವಿಸಿದ ವ್ಯಕ್ತಿಯೆಂದರೆ ಇವರೊಬ್ಬರೇ. 13 ವರ್ಷ ಅಂಡಮಾನ ಜೈಲು ನಂತರ ರತ್ನಾಗಿರಿಯಲ್ಲಿ 11 ವರ್ಷದ ಕಠಿಣ ಕಾರಾಗೃಹವಾಸ ಮಾಡಿದ್ದರು. ಕೆಲವೊಬ್ಬರು ದಾಖಲೆಗೆ ಜೈಲು ಸೇರಿದ್ದು ಆದರೆ ಇವರು ಜೈಲು ಸೇರಿದ್ದೇ ಒಂದು ದಾಖಲೆಯಾಗಿತ್ತು.



'ಕರ್ಮಯೋಗಿ ಪ್ರಶಸ್ತಿ' ಪ್ರದಾನ

ಚಿಕ್ಕೋಡಿ ತಾಲೂಕಿನ ಶಮನೇವಾಡಿ ಗ್ರಾಮದಲ್ಲಿ ಮಂಗಳವಾರ ಎಜಿಎಂ ಇಂಜಿನಿಯರಿಂಗ್ ಕಾಲೇಜ್ ಉದ್ಘಾಟನೆ, 151 ಅಡಿ ಎತ್ತರದ ಭಗವಾನ ಪಾರ್ಶ್ವನಾಥರ ಮೂರ್ತಿ ಶಂಕುಸ್ಥಾಪನೆ ಹಾಗೂ ಸರಸ್ವತಿ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಸಮ್ಮುಖದಲ್ಲಿ ರಾಷ್ಟ್ರಸಂತ ಆಚಾರ್ಯ ಗುಣಧರನಂದಿ ಮಹಾರಾಜರು ಅವರು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರಿಗೆ 'ಕರ್ಮಯೋಗಿ ಪ್ರಶಸ್ತಿ' ಪ್ರದಾನ ಮಾಡಿದರು. ಈ ವೇಳೆ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಸ್ವಾಮೀಜಿ ಇದ್ದರು.

> **ಸ್ವಾತಂತ್ರ್ಯ ದೀವಿಗೆಯನ್ನು ಹಚ್ಚಿದ ಸಾವರ್ಕರ್ ಹೆಸರು ಇತಿಹಾಸದ ಪುಟದಲ್ಲಿಯೇ ಸೇರಿಸಲಿಲ್ಲ. ಅಂದು ಶಿಕ್ಷಣ ಮಂತ್ರಿಯಾಗಿದ್ದ ಮೌಲಾನಾ ಅಬ್ದುಲ್ ಕಲಾಂ ಆಜಾದ್‌ರ ಕೃಪೆಯಿಂದ ಅನೇಕ ಹೋರಾಟಗಾರರು ಇತಿಹಾಸದ ಪಠ್ಯಕ್ರಮದಿಂದ ಮರೆಮಾಚಿ ಹೋಗಿದ್ದಾರೆ. ಈಗ ಮತ್ತೆ ನಾವು ಮುನ್ನೆಲೆಗೆ ತರುವ ಪ್ರಯತ್ನ ಮಾಡುತ್ತಿದ್ದೇವೆ.**
> ■ ಬಿ.ಎಲ್.ಸಂತೋಷ್, ಬಿಜೆಪಿ ಪ್ರಧಾನ ಕಾರ್ಯದರ್ಶಿ

ಅಂತಹ ಅಂಡಮಾನ ಜೈಲನ್ನು ಕಾಂಗ್ರೆಸ್ಸಿಗರು ಆಸ್ಪತ್ರೆಯನ್ನಾಗಿ ಮಾಡಲು ಹೊರಟಿದ್ದು ಅಸಹ್ಯಕರವಾಗಿತ್ತು. ಏಕೆಂದರೆ ಅಲ್ಲಿ ಸುಮಾರು 860ಕ್ಕೂ ಅಧಿಕ ಕೈದಿಗಳು ತಮ್ಮ ಹೆಸರು ಬರೆದು ಆತ್ಮಾರ್ಪಣೆ ಮಾಡಿಕೊಂಡಿದ್ದರು. ಆದರೆ, ಆ ಹೆಸರಿನಲ್ಲಿ ಯಾವುದೇ ಓರ್ವ ಕಾಂಗ್ರೆಸ್ಸಿಗರ ಹೆಸರಿಲ್ಲ ಎಂದರು. ಸ್ವಾತಂತ್ರ್ಯ ಅನೇಕ ಕಾರಣದಿಂದ ಸಿಕ್ಕಿದೆ. ಸ್ವಾತಂತ್ರ್ಯಾ ನಂತರ ಕೆಲವೊಂದು ಸಂಗತಿಯನ್ನು ತೆಗೆದು ಹಾಕಿದ್ದಾರೆ. ನಮ್ಮೆಲ್ಲರ ಮತದ ಪ್ರಭಾವದಿಂದ ಮತ್ತೆ ಪಠ್ಯದಲ್ಲಿ ಸೇರ್ಪಡೆಯಾಗಿದೆ ಎಂದರು. ರುದ್ರಾವಧೂತ ಮಠದ ಕೃಷ್ಣಾನಂದ ಅವಧೂತರು ಸಾನ್ನಿಧ್ಯ ವಹಿಸಿದ್ದರು. ಡಾ. ತಾತಾಸಾಹೇಬ ಬಾಂಗಿ ಅಧ್ಯಕ್ಷತೆ ವಹಿಸಿದ್ದರು.

ಎಐ ಸಕ್ರಿಯ ಆಡಳಿತ ರಾಜ್ಯವಾಗಲಿದೆ: ಶಾಲಿನಿ

• **ಬೆಂಗಳೂರು:** ಸಾರ್ವಜನಿಕ ಸೇವೆ ವಿತರಣೆ, ಆಡಳಿತಾತ್ಮಕ ಪ್ರತಿಕ್ರಿಯೆ ಮತ್ತು ಒಳಗೊಳ್ಳುವಿಕೆಯನ್ನು ಸುಧಾರಿಸುವ ಮೂಲಕ ಕರ್ನಾಟಕವನ್ನು ಎಐ ತಂತ್ರಜ್ಞಾನದ ಹಬ್ ಮಾತ್ರವಲ್ಲದೆ, ಎಐ-ಸಕ್ರಿಯ ಆಡಳಿತ ರಾಜ್ಯವನ್ನಾಗಿ ಮಾಡುವುದು ಸರ್ಕಾರದ ದೂರದೃಷ್ಟಿಯಾಗಿದೆ ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ತಿಳಿಸಿದರು.

ಕರ್ನಾಟಕ ಸರ್ಕಾರದ ಇ-ಆಡಳಿತ ಕೇಂದ್ರದ ವತಿಯಿಂದ ಖಾಸಗಿ ಹೋಟೆಲ್‌ನಲ್ಲಿ ಹಮ್ಮಿಕೊಳ್ಳಲಾದ ಎಐ-ಸಿಒಇ (ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಸೆಂಟರ್ ಆಫ್ ಎಕ್ಸಲೆನ್ಸ್) ಅನುಷ್ಠಾನ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಎಐ ಎನ್ನುವುದು ಕೇವಲ ತಂತ್ರಜ್ಞಾನದ ಚರ್ಚೆಯಲ್ಲ, ಇದು ಮೂಲಭೂತವಾಗಿ ನಂಬಿಕೆ, ಜವಾಬ್ದಾರಿ, ಪಾರದರ್ಶಕತೆ ಮತ್ತು ನಾಗರಿಕರ ಮೇಲಿನ ಪ್ರಭಾವದ ಕುರಿತಾಗಿದೆ ಎಂದರು.

ಆಡಳಿತದಲ್ಲಿ ಸುರಕ್ಷಿತ ಮತ್ತು ನಾಗರಿಕ ಕೇಂದ್ರಿತ ಎಐ ಪರಿಸರ ವ್ಯವಸ್ಥೆಯನ್ನು ನಿರ್ಮಿಸುವ ಕುರಿತು ಚರ್ಚಿಸಲು ವಿವಿಧ ರಾಜ್ಯಗಳ ಹಿರಿಯ ಸರ್ಕಾರಿ ಅಧಿಕಾರಿಗಳು, ನೀತಿ ನಿರೂಪಕರು, ಉದ್ಯಮದ ಮುಖಂಡರು, ಶಿಕ್ಷಣ ತಜ್ಞರು, ನವೋದ್ಯಮಗಳು ಮತ್ತು ಪರಿಸರ ವ್ಯವಸ್ಥೆಯ ಪಾಲುದಾರರು ಈ ಕಾರ್ಯಾಗಾರದಲ್ಲಿ ಒಟ್ಟಾಗಿ ಭಾಗವಹಿಸಿರುವುದು ಹೆಮ್ಮೆಯ ವಿಷಯವಾಗಿದೆ ಎಂದು ತಿಳಿಸಿದರು.

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ



ಇಲಾಖೆಯ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಮಾತನಾಡಿ, ಮರುಬಳಕೆ ಮಾಡಬಹುದಾದ ಎಐ ಸೇವೆಗಳು, ಬಹುಭಾಷಾ ಇಂಟರ್ಫೇಸ್‌ಗಳನ್ನು ಬೆಂಬಲಿಸಲು ಕರ್ನಾಟಕ ಎಐ ಸ್ಟಾಕ್ ಅನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದ ಅವರು, ಕರ್ನಾಟಕದ ಶಕ್ತಿಯು ಕೇವಲ ತಂತ್ರಜ್ಞಾನ ಸೃಷ್ಟಿಯಲ್ಲಷ್ಟೇ ಅಲ್ಲ, ಅದನ್ನು ಜನಸಾಮಾನ್ಯರ ಒಳಿತಿಗಾಗಿ ಬಳಸುವುದಾಗಿದೆ ಎಂದರು.

ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಕಾರ್ಯದರ್ಶಿ ಡಾ. ಎನ್. ಮಂಜುಳಾ ಅವರು, ಕರ್ನಾಟಕದಲ್ಲಿ ವಿವಿಧ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ 20 ಕ್ಕೂ ಹೆಚ್ಚು ಸೆಂಟರ್ ಆಫ್ ಎಕ್ಸಲೆನ್ಸ್‌ಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ ಮೂರು ಎಐಗೆ ಮೀಸಲಾಗಿವೆ ಎಂದರು.

ಕಾರ್ಯಾಗಾರದಲ್ಲಿ ಆಂಧ್ರಪ್ರದೇಶ, ಕೇರಳ ಮತ್ತು ಮಹಾರಾಷ್ಟ್ರ ರಾಜ್ಯಗಳ ಪ್ರತಿನಿಧಿಗಳು ಹಾಗೂ ಇಂಡಿಯಾ ಎಐ ಮಿಷನ್‌ನ ಅಧಿಕಾರಿಗಳು ಭಾಗವಹಿಸಿದ್ದರು.

ಹೈಕಮಾಂಡ್‌ನ ಪರಿಹಾರ ಸೂತ್ರ

ಪುಟ 1 ➡ ಮೊದಲಿಗೆ ಸಿದ್ದರಾಮಯ್ಯ ಅವರೊಂದಿಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಭೆ ನಡೆಸಿದ್ದಾರೆ. ಬಳಿಕ ಡಿ.ಕೆ. ಶಿವಕುಮಾರ್ ಅವರೊಂದಿಗೆ ಮಾತುಕತೆ ನಡೆಸಿದ್ದಾರೆ. ತರುವಾಯ ಉಭಯ ನಾಯಕರೊಂದಿಗೆ ಆಗಮಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮಾಧ್ಯಮಗಳೊಂದಿಗೆ ಮಾತನಾಡಿದ್ದಾರೆ. ಸಭೆಯಲ್ಲಿ ಮುಂಬರುವ ಚುನಾವಣೆಗಳ ಕುರಿತಾಗಿ ಚರ್ಚಿಸಿದ್ದಾಗಿ ತಿಳಿಸಿದ್ದಾರೆ. ಆದರೆ, ರಾಜ್ಯ ರಾಜಕಾರಣದಲ್ಲಿ ಮಹತ್ವದ ಬದಲಾವಣೆಗಳಾಗುವ ಮುನ್ಸೂಚನೆ ಲಭಿಸಿದೆ. ಸಚಿವರಾದ ಪರಮೇಶ್ವರ, ಸತೀಶ್ ಜಾರಕಿಹೊಳಿ, ಎಚ್.ಸಿ ಮಹದೇವಪ್ಪ, ಬೈರತಿ ಸುರೇಶ್, ಕೆ.ಜೆ ಜಾರ್ಜ್, ಎಂ.ಬಿ.ಪಾಟೀಲ ಅವರೂ ದಿಲ್ಲಿಗೆ ತೆರಳಿದ್ದರು. ಬೆಳಗ್ಗೆ ವರಿಷ್ಠರ ಸಭೆಯ ಮುಂಚೆ ಸಚಿವರೊಂದಿಗೆ ಸಿಎಂ ಸಿದ್ದರಾಮಯ್ಯ ಮಾತುಕತೆ ನಡೆಸಿದ್ದರು.

ಸಭೆಯ ನಂತರ ಸಚಿವ ಕೆ.ಜೆ ಜಾರ್ಜ್ ಅವರ ದಿಲ್ಲಿಯಲ್ಲಿರುವ ನಿವಾಸಕ್ಕೆ ತೆರಳಿದರು. ಹೈಕಮಾಂಡ್ ನಾಯಕರ ಕರೆಯ ಮೇಲೆ ಸೋಮವಾರವೇ ದಿಲ್ಲಿಗೆ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವರಿಷ್ಠರ ಜೊತೆಗೆ ಮಾತುಕತೆ ನಡೆಸಿ ಮಂಗಳವಾರ ರಾತ್ರಿಯೇ ಆಪ್ತರೊಂದಿಗೆ ವಿಶೇಷ ವಿಮಾನದ ಮೂಲಕ ಬೆಂಗಳೂರಿಗೆ ವಾಪಸ್ಸಾಗಿದ್ದಾರೆ. ಆದರೆ, ರಾಜ್ಯದ ಜನ ಕುತೂಹಲಭರಿತರಾಗಿ ರಾಜ್ಯ ರಾಜಕಾರಣದತ್ತ ದೃಷ್ಟಿ ನೆಟ್ಟಿದ್ದು, ಕಾಂಗ್ರೆಸ್ ಹೈಕಮಾಂಡ್ ಕಂಡುಕೊಂಡಿರುವ ಪರಿಹಾರ ಸೂತ್ರದ ಕುರಿತಾಗಿ ವ್ಯಾಪಕ ಚರ್ಚೆಯಲ್ಲಿ ತೊಡಗಿಕೊಂಡಿದ್ದಾರೆ.

ಮುಂಬರುವ ಚುನಾವಣೆ ಕುರಿತು ಚರ್ಚೆ

ಮುಂಬರುವ ವಿಧಾನ ಪರಿಷತ್ ಚುನಾವಣೆ ಮತ್ತು ರಾಜ್ಯಸಭಾ ಚುನಾವಣೆಗೆ ಸಂಬಂಧಿಸಿದಂತೆಯೂ ದಿಲ್ಲಿಯಲ್ಲಿ ಸುದೀರ್ಘವಾಗಿ ಚರ್ಚೆ ನಡೆಸಲಾಗಿದೆ. ಅಭ್ಯರ್ಥಿಗಳ ಆಯ್ಕೆ ಮತ್ತು ಚುನಾವಣಾ ಕಾರ್ಯತಂತ್ರಗಳ ಬಗ್ಗೆ ಮಾತುಕತೆಯಾಗಿದೆ. ಜೂನ್‌ನಲ್ಲಿ ರಾಜ್ಯಸಭೆಯ ನಾಲ್ಕು ಸ್ಥಾನಗಳು ಮತ್ತು ಕರ್ನಾಟಕ ವಿಧಾನ ಪರಿಷತ್‌ನ ಏಳು ಸ್ಥಾನಗಳು ತೆರವಾಗಲಿದ್ದು, ಚುನಾವಣೆ ನಡೆಯಲಿದೆ. ಈ ಹಿನ್ನೆಲೆಯಲ್ಲಿ ಚರ್ಚೆ ನಡೆದಿದೆ.

ದ್ವೇಷದ ಭಾಷಣ ತಡೆ ಕಾನೂನು ಅಗತ್ಯವಿಲ್ಲ

ಪುಟ 1 ➡ ಮಸೂದೆಗೆ ಮಂಜೂರಾತಿ ನೀಡಲು ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ನಿರಾಕರಿಸಿದ್ದ ಹಿನ್ನೆಲೆಯಲ್ಲಿ, ಕರ್ನಾಟಕ ದ್ವೇಷ ಭಾಷಣ, ದ್ವೇಷ ಅಪರಾಧಗಳ (ನಿಯಂತ್ರಣ) ಮಸೂದೆಗೆ ಸಂಬಂಧಿತ ಮಾಹಿತಿಯನ್ನು, ಗೃಹ ವ್ಯವಹಾರಗಳ ಖಾತೆಯ ಕೇಂದ್ರ-ರಾಜ್ಯ ವಿಭಾಗವು ಈ ವರ್ಷದ ಆರಂಭ ದಲ್ಲಿ ರಾಷ್ಟ್ರಪತಿಗಳ ಅಂಕಿತಕ್ಕೆ ರವಾನಿಸಿತ್ತು. ಪ್ರತಿಯಾಗಿ, ಯಾವ ಸಮಸ್ಯೆಗಳ ನಿವಾರಣೆ ಅಥವಾ ನಿಯಂತ್ರಣ ಪ್ರಸ್ತಾವಿತ ಮಸೂದೆಯ ಆಶಯವೋ, ಅವೆಲ್ಲವೂ ಈಗಾಗಲೆ ಅಸ್ತಿತ್ವದಲ್ಲಿರುವ ಕಾನೂನುಗಳ ಸಹಿತ 2023ರ ಭಾರತೀಯ ನ್ಯಾಯಸಂಹಿತೆಯ ವಿವಿಧ ನಿಯಮಾವಳಿಗಳಲ್ಲಿ ಬಹುತೇಕ ಅಡಕವಾಗಿವೆ ಎಂದು ಗೃಹ ವ್ಯವಹಾರಗಳ ಖಾತೆ ಮೇ 12ರಂದು ಪ್ರತ್ಯುತ್ತರಿಸಿತ್ತು.

ಚರ್ಚೆಗೆ ಸ್ಪೀಕರ್ ನಕಾರ: ವಿವಾದಾಸ್ಪದ ಮಸೂದೆಯನ್ನು ಕರ್ನಾಟಕ ಸರಕಾರ ಕಳೆದ ವರ್ಷ ಡಿಸೆಂಬರ್‌ನಲ್ಲಿ ವಿಪಕ್ಷಗಳ ವಿರೋಧದ ಮಧ್ಯೆ ಅಂಗೀಕರಿಸಿತ್ತು. ಮಸೂದೆ ಮೇಲೆ ಚರ್ಚೆ ಪೂರ್ತಿಯಾಗೋ ಮುನ್ನವೇ ಮಸೂದೆಯನ್ನು ಮಂಜೂರು ಮಾಡಲಾಗಿತ್ತು. ಮಸೂದೆ ಬಗ್ಗೆ ವಿಸ್ತೃತ ಚರ್ಚೆಯಾಗಬೇಕು ಮತ್ತು ಸದನ ಸಮಿತಿ ಮಸೂದೆಯನ್ನು ಪರಾಮರ್ಶಿಸಬೇಕೆಂಬ ವಿಪಕ್ಷೀಯರ ಬೇಡಿಕೆಯನ್ನು ಸಭಾಪತಿ ಯು.ಟಿ.ಖಾದರ್ ತಿರಸ್ಕರಿಸಿದ್ದು, ಸಭಾಪತಿ ನಡೆಯನ್ನು ವಿರೋಧಿಸಿ ವಿಪಕ್ಷ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದ್ದರು.

ಕರ್ನಾಟಕದ ಪ್ರಸ್ತಾವಿತ ಶಾಸನದಲ್ಲಿ ದ್ವೇಷಪೂರಿತ ಅಪರಾಧಗಳಿಗೆ ಕಠಿಣ ಸಜೆಯನ್ನು ನಿಗದಿಪಡಿಸಲಾಗಿದೆ. ಮಸೂದೆಯಡಿ, ಮೊದಲ ಬಾರಿ ಅಪರಾಧವೆಸಗಿದರೆ 1ರಿಂದ 7ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು 50ಸಾವಿರ ರೂ.ದಂಡ ವಿಧಿಸಲಾಗುವುದು. ಅಪರಾಧ ಪುನರಾವರ್ತನೆಯಾದಲ್ಲಿ, ಗರಿಷ್ಠ 7ವರ್ಷ ಸಜೆ ಮತ್ತು 1ಲಕ್ಷ ರೂವರೆಗೆ ದಂಡ ವಿಧಿಸಲಾಗುವುದು. ಆದರೆ ಮಸೂದೆಯಲ್ಲಿನ ಹಲವು ನಿಯಮಗಳು ಸಾಂವಿಧಾನಿಕವಾಗಿ ಸಂರಕ್ಷಿತ ಪ್ರಜಾತಾಂತ್ರಿಕ ಅಭಿವ್ಯಕ್ತಿ ಮೇಲೆ ಪ್ರತಿಕೂಲ ಪರಿಣಾಮ ಬೀರಲಿದೆ ಎಂಬ ಪ್ರತ್ಯುತ್ತರದೊಂದಿಗೆ, ಮಸೂದೆಗೆ ಮಂಜೂರಾತಿ ನೀಡಲು ರಾಜ್ಯಪಾಲ ಗೆಹ್ಲೋತ್ ನಿರಾಕರಿಸಿದ್ದರು ಮತ್ತು ಮಸೂದೆಯನ್ನು ರಾಜ್ಯ ಸರಕಾರಕ್ಕೆ ವಾಪಸ್ ಕಳುಹಿಸಿಕೊಟ್ಟಿದ್ದರು.

ರಾಜಧಾನಿಯಲ್ಲಿ ಇಬೋಲಾ ವೈರಸ್ ರೋಗದ ಶಂಕಿತ ಪ್ರಕರಣ ಪತ್ತೆ

• **ಬೆಂಗಳೂರು:** ನಗರದಲ್ಲಿ ಇಬೋಲಾ ವೈರಸ್ ರೋಗದ ಶಂಕಿತ ಪ್ರಕರಣವೊಂದು ಪತ್ತೆಯಾಗಿದೆ ಎನ್ನಲಾಗುತ್ತಿದ್ದು, ರಾಜಧಾನಿ ಜನತೆಯಲ್ಲಿ ತೀವ್ರ ಆತಂಕ ಮೂಡಿಸಿದೆ. ಉಗಾಂಡಾ ದೇಶದ ಕ್ಯಾಂಪಲಾ ಮೂಲದ ನಾಗಿರೆ ಲತಿಫಾ (28) ಮಹಿಳೆಯಲ್ಲಿ ಜ್ವರದ ರೋಗ ಲಕ್ಷಣಗಳು ಕಾಣಿಸಿಕೊಂಡಿದ್ದು, ಸದ್ಯ ಅವರನ್ನು ತೀವ್ರ ನಿಗಾದಲ್ಲಿ ಇರಿಸಲಾಗಿದೆ. ಈಕೆ ಕಳೆದ ಮೇ 23ರಂದು ಬೆಂಗಳೂರಿಗೆ ಆಗಮಿಸಿದ್ದರು.

Department of Health & Family Welfare

ರಾಯಲ್ ಏಸ್ ಬೂಟಿಕ್ ಹೋಟೆಲ್‌ನ ರೂಮ್ ನಂಬರ್ 303ರಲ್ಲಿ ತಂಗಿದ್ದರು ಎಂದು ತಿಳಿದುಬಂದಿದೆ.

ಮಹಿಳೆಯಲ್ಲಿ ಇಬೋಲಾ ಮಾದರಿಯ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಂಡ ಹಿನ್ನೆಲೆ ಆರೋಗ್ಯ ಇಲಾಖೆ ಎಚ್ಚೆತ್ತುಕೊಂಡಿದ್ದು, ಆ್ಯಂಬುಲೆನ್ಸ್ ಮೂಲಕ ಅವರನ್ನು ಆಸ್ಪತ್ರೆಗೆ ದಾಖಲಿಸಿ ಐಸೋಲೇಷನ್‌ನಲ್ಲಿ ಇರಿಸಲಾಗಿದೆ. ಮಹಿಳೆಯಿಂದ ಮೇ 25ರಂದು ರಕ್ತ ಹಾಗೂ ಇತರ ಅಗತ್ಯ ಮಾದರಿಗಳನ್ನು ಸಂಗ್ರಹಿಸಿ, ಹೆಚ್ಚಿನ ಪರೀಕ್ಷೆಗಾಗಿ ಪುಣೆಯ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ವರದಿ ಬಂದ ಬಳಿಕವಷ್ಟೇ ಸೋಂಕು ದೃಢವಾಗಲಿದೆ ಎಂದು ಆರೋಗ್ಯ ಇಲಾಖೆ ಮೂಲಗಳಿಂದ ತಿಳಿದುಬಂದಿದೆ. ಬುಧವಾರದೊಳಗೆ ಪರೀಕ್ಷಾ ವರದಿ ಲಭ್ಯವಾಗುವ ನಿರೀಕ್ಷೆಯಿದ್ದು, ವರದಿ ಆಧರಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳಲಾಗುವುದು. ಸಾರ್ವಜನಿಕರು ಅನಗತ್ಯ ಆತಂಕಕ್ಕೆ ಒಳಗಾಗಬಾರದು, ಮುನ್ನೆಚ್ಚರಿಕಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಅನುಸರಿಸಲಾಗುತ್ತಿದೆ ಎಂದು ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ.

ವಿಧಾನ ಪರಿಷತ್‌ಗೆ ಜೂ.18ರಂದು ಮತದಾನ

• **ಬೆಂಗಳೂರು:** ಭಾರತ ಚುನಾವಣಾ ಆಯೋಗವು ಕರ್ನಾಟಕ ವಿಧಾನ ಪರಿಷತ್‌ನಲ್ಲಿ ಖಾಲಿಯಾಗಲಿರುವ 7 ಸ್ಥಾನಗಳಿಗೆ ವೇಳಾಪಟ್ಟಿ ಪ್ರಕಟಿಸಿದೆ. ಜೂನ್ 18ರಂದು ಮತದಾನ ನಡೆಯಲಿದ್ದು, ಅದೇ ದಿನ ಫಲಿತಾಂಶ ಹೊರಬೀಳಲಿದೆ. ವಿಧಾನ ಪರಿಷತ್ ಸದಸ್ಯರಾದ ಗೋವಿಂದ ರಾಜು, ನಸೀರ್ ಅಹಮ್ಮದ್, ಎನ್.ನಾಗರಾಜು (ಎಂಟಿಬಿ), ಪ್ರತಾಪ ಸಿಂಹ ನಾಯಕ್ ಕೆ., ತಿಪ್ಪಣ್ಣಪ್ಪ, ಸುನೀಲ್ ವಲ್ಯಾಪುರ ಹಾಗೂ ಬಿ.ಕೆ.ಹರಿಪ್ರಸಾದ್ ಅವರ ಅವಧಿ ಜೂ.30 ರಂದು ಕೊನೆಗೊಳ್ಳಲಿದೆ. ತೆರವಾಗುವ ಈ ಸ್ಥಾನಗಳಿಗೆ ಹೊಸ ಸದಸ್ಯರ ಆಯ್ಕೆ ಮಾಡಬೇಕಾಗಿದೆ.

ಚುನಾವಣಾ ಆಯೋಗ ಪ್ರಕಟಿಸಿರುವ ವೇಳಾಪಟ್ಟಿ ಪ್ರಕಾರ, ಜೂ.1ರಂದು ಅಧಿಸೂಚನೆ ಹೊರಡಿಸಲಾಗುತ್ತದೆ. ಜೂ.8 ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾಗಿದೆ. ಜೂ.9 ನಾಮಪತ್ರ ಪರಿ ಶೀಲನೆ ನಡೆಯಲಿದ್ದು, ಜೂ.11ನಾಮಪತ್ರ ಹಿಂಪಡೆಯಲು ಕೊನೆ ದಿನವಾಗಿದೆ. ಜೂ.18ಕ್ಕೆ ಬೆಳಗ್ಗೆ 9 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ಜರುಗಲಿದೆ. ತರುವಾಯ ಮತ ಎಣಿಕೆ ನಡೆಯಲಿದ್ದು, ಫಲಿತಾಂಶ ಪ್ರಕಟವಾಗಲಿದೆ.

ನರೇಂದ್ರ ಮೋದಿ ಸರ್ಕಾರಕ್ಕೆ 12 ವರ್ಷದ ಹರ್ಷ

ಪುಟ 1 ➡ ಎಲ್ಲರನ್ನೂ ಒಳಗೊಂಡ ಆಡಳಿತ ಸಿದ್ಧಾಂತದ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಮೋದಿ ಸರಕಾರ, ದೇಶದ ಬಡವರ್ಗದ ಬದುಕನ್ನು ಗಮನಾರ್ಹವಾಗಿ ಸುಧಾರಿಸುತ್ತಿದೆ ಅಥವಾ ಇದಕ್ಕೆ ಪೂರಕ ಯೋಜನೆಗಳಿಗೆ ಆದ್ಯತೆ ನೀಡುತ್ತಿದೆ ಎಂದು ಬಿಹಾರದ ಸಚಿವ ರಾಮ್ ಕೃಪಾಲ್ ಯಾದವ್ ಸುದ್ದಿಗಾರರಿಗೆ ತಿಳಿಸಿದರು.

ಸಬ್‌ಕಾ ಸಾಥ್ , ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್: ಪ್ರಧಾನಿ ನರೇಂದ್ರ ಮೋದಿ ಸರಕಾರ 12 ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಈ ಅವಧಿಯಲ್ಲಿ ಪ್ರಧಾನಿ ಮೋದಿ ಅವರು ಸಬ್ ಕಾ ಸಾಥ್, ಸಬ್‌ಕಾ ವಿಕಾಸ್ ಮತ್ತು ಸಬ್‌ಕಾ ವಿಶ್ವಾಸ್ ಸಿದ್ಧಾಂತಗಳ ಆಧಾರದಲ್ಲಿ, ಮುಖ್ಯವಾಗಿ ದೇಶದ ಬಡವರ್ಗದ ಏಳಿಗೆಗಾಗಿ ಹಲವು ಜನಪರ ಉಪಕ್ರಮಗಳನ್ನು ಜಾರಿಗೊಳಿಸಿದ್ದಾರೆ. ಪರಿಣಾಮ, ದೇಶವಿಂದು ಸರ್ವತ್ರ ಮುನ್ನಡೆ ಸಾಧಿಸುತ್ತಿದೆ ಮತ್ತು ದೇಶದ 140 ಕೋಟಿ ಜನತೆ ತುಂಬು ನೆಮ್ಮದಿ -ಸಂತೃಪ್ತಿ ವ್ಯಕ್ತಪಡಿಸುತ್ತಿದ್ದಾರೆ ಎಂದವರು ಪ್ರಶಂಸಿಸಿದ್ದಾರೆ.

ಜಗದ ಜನಪ್ರಿಯ ನಾಯಕ: ಪ್ರಧಾನಿ ನರೇಂದ್ರ ಮೋದಿ ಸರಕಾರ 12 ವರುಷಗಳ ಆಡಳಿತವನ್ನು ಯಶಸ್ವಿಯಾಗಿ ಪೂರ್ತಿಗೊಳಿಸಿರುವ ದ್ಯೋತಕವಾಗಿ ಬಿಜೆಪಿಯು ಜೂ.5ರಿಂದ 21ರವರೆಗೆ ದೇಶಾದ್ಯಂತ ಕಾರ್ಯಕ್ರಮಗಳನ್ನು ಆಯೋಜಿಸಲಿದೆ ಎಂದು ಬಿಹಾರ ಬಿಜೆಪಿ ಅಧ್ಯಕ್ಷ ಸಂಜಯ್ ಸರೋಗಿ ತಿಳಿಸಿದ್ದಾರೆ. ರಾಷ್ಟ್ರ ಮೊದಲು ಎಂಬ ದೃಢ ಧ್ಯೇಯಕ್ಕೆ ಬದ್ಧರಾಗಿ ಪ್ರಧಾನಿ ನರೇಂದ್ರ ಮೋದಿ 12 ವರ್ಷಗಳ ಆಡಳಿತವನ್ನು ಪರಿಪೂರ್ಣವಾಗಿ ಮತ್ತು ಯಶಸ್ವಿಯಾಗಿ ಪೂರೈಸಿದ್ದಾರೆ. ಇಂದು ಜಗತ್ತಿನ ಅತ್ಯಂತ ಜನಪ್ರಿಯ ನಾಯಕರಲ್ಲೊಬ್ಬರಾಗಿರುವ ಪ್ರಧಾನಿ ಮೋದಿ ಅವರನ್ನು ದೇಶದ ಬಹುತೇಕ ಎಲ್ಲಾ ಪ್ರಜೆಗಳು ಅತ್ಯಂತ ಗೌರವ-ಆತ್ಮವಿಶ್ವಾಸದೊಂದಿಗೆ ಬೆಂಬಲಿಸುತ್ತಿದ್ದಾರೆ. ಮೋದಿಯವರು 12 ವರ್ಷ ಕಾಲ ಯಶಸ್ವೀ ಪ್ರಧಾನಿಯಾಗಿ ಸಾರ್ಥಕ ಆಡಳಿತ ನಿರ್ವಹಿಸಿದ ಸಾಧನೆಯ ದ್ಯೋತಕವಾಗಿ ಜೂ.5ರಿಂದ 21ರ ತನಕ ಪಾಕ್ಷಿಕ ಅವಧಿಗೆ ಪಕ್ಷವು ದೇಶಾದ್ಯಂತ ಅಭಿಯಾನ ನಡೆಸಲಿದೆ ಎಂದು ಸರೋಗಿ ಮಾಹಿತಿ ನೀಡಿದ್ದಾರೆ.

ಜನರ ಮನೆಬಾಗಿಲಿಗೆ ಎನ್‌ಡಿಎ ನಾಯಕರು: ರಾಷ್ಟ್ರವ್ಯಾಪಿ ಅಭಿಯಾನದಂಗವಾಗಿ ಕೇಂದ್ರ ಸಚಿವರು, ಮುಖ್ಯಮಂತ್ರಿಗಳು, ಸಂಸದರು ಮತ್ತು ಹಿರಿಯ ಬಿಜೆಪಿ ನಾಯಕರು ದೇಶಾದ್ಯಂತ ಜನರ ಮನೆಬಾಗಿಲಿಗೆ ತೆರಳಿ ನರೇಂದ್ರ ಮೋದಿ ಸರಕಾರದ ಭರ್ಜರಿ ಜನಪರ ಸಾಧನೆ -ಯೋಜನೆ-ಕಾರ್ಯಕ್ರಮಗಳನ್ನು ಪರಿಚಯಿಸುವರು. ಮುಖ್ಯವಾಗಿ ಮೋದಿ ಸರಕಾರವು ಕೈಗೊಂಡಿರುವ ಜನಪರ ಕಲ್ಯಾಣ ಕಾರ್ಯಕ್ರಮಗಳು, ಡಿಜಿಟಲ್ ಗವರ್ನೆನ್ಸ್, ಮೂಲಸೌಕರ್ಯ ಬೆಳವಣಿಗೆ, ಆರ್ಥಿಕ ಸುಧಾರಣೆಗಳು ಮತ್ತು ವಿದೇಶಾಂಗ ನೀತಿ ಉಪಕ್ರಮಗಳನ್ನು ಜನರಿಗೆ ಮನವರಿಕೆ ಮಾಡುವರೆಂದು ಪಕ್ಷ ನಾಯಕರು ತಿಳಿಸಿದ್ದಾರೆ.

ಬಹುತೇಕ ಕುಗ್ಗಿದೆ ಭ್ರಷ್ಟಾಚಾರಗಳು: ಮೋದಿ ಸರಕಾರ ಆಡಳಿತ ವ್ಯವಸ್ಥೆಯಲ್ಲಿ ಜಾರಿಗೊಳಿಸಿರುವ ಸುಧಾರಣೆಗಳು, ಭಾರತದ ವಿದೇಶಾಂಗ ಬಾಂಧವ್ಯಗಳು ಅದ್ಭುತವೆಂದು ಜೆಡಿಯು ರಾಷ್ಟ್ರೀಯ ವಕ್ತಾರ ರಾಜೀವ್ ರಂಜನ್ ಪ್ರಶಂಸಿಸಿದ್ದಾರೆ. 12 ವರ್ಷಗಳ ಅವಧಿಯಲ್ಲಿ ಮುಖ್ಯವಾಗಿ ಪಾರದರ್ಶಿತ್ವಕ್ಕೆ ಸಂಬಂಧಿಸಿ ನರೇಂದ್ರ ಮೋದಿ ಸರಕಾರ ಕೈಗೊಂಡ ಮಹತ್ತ್ವದ ನಿರ್ಧಾರಗಳಿಂದಾಗಿ ಭ್ರಷ್ಟಾಚಾರವಿಂದು ಬಹುತೇಕ ಕಡಿಮೆಯಾಗಿದೆ.

ಹಿಂದಿನ ಸರಕಾರಗಳಿಗೆ ಹೋಲಿಸಿದರೆ, ಹೊಣೆಗಾರಿಕೆಗಳ ಗುರುತಿಸುವುದು ಮತ್ತು ಲೋಪಗಳ ಗುರುತಿಸುವಿಕೆ ಬಲು ಸುಗಮವಾಗಿದೆ. ಈಚಿನ ವರ್ಷಗಳಲ್ಲಿ ಜಾಗತಿಕ ಅಂಗಣದಲ್ಲಂತು ಭಾರತದ ಸ್ಥಾನಮಾನ ಅತ್ಯಂತ ಬಲಿಷ್ಠವಾಗಿದೆ ಎಂದು ಭಾರತದ ರಾಜತಾಂತ್ರಿಕ ಧೋರಣೆಗಳನ್ನು ಉಲ್ಲೇಖಿಸಿ, ಮೋದಿ ಸರಕಾರದ ವಿದೇಶಾಂಗ ನೀತಿ ಮತ್ತು ಆಡಳಿತ ನಿರ್ವಹಣೆ ದಾಖಲೆಯನ್ನು ರಾಜೀವ್ ರಂಜನ್ ಹೊಗಳಿದ್ದಾರೆ.

ಬಲಿಷ್ಠ ಜಾಗತಿಕ ಮಾನ್ಯತೆ

ಪುಟ 1 ➡ ಚೀನಾ ಇರಲಿ, ರಷ್ಯಾ ಅಥವಾ ಅಮೆರಿಕ ಹೀಗೆ ಪ್ರತಿಯೊಂದು ರಾಷ್ಟ್ರಗಳೊಂದಿಗೆ ಭಾರತವು ಸಮತೋಲಿತ ಬಾಂಧವ್ಯವನ್ನು ಕಾಯ್ದುಕೊಂಡಿರುವುದೇ ಇದಕ್ಕೆ ಕಾರಣವೆಂದು ಗಮನ ಸೆಳೆದ ರಾಜೀವ್‌ರಂಜನ್, ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರ ತೃತೀಯ ಅವಧಿಗೆ 2024ರಲ್ಲಿ ಅಧಿಕಾರಕ್ಕೆ ಮರಳಿದೆ ಮತ್ತು ಮೋದಿ ನೇತೃತ್ವದ ಎನ್‌ಡಿಎ ಸರಕಾರ ಜನಪರ ಕಲ್ಯಾಣ ಕಾರ್ಯಕ್ರಮಗಳ ವಿಸ್ತೃತತೆ, ಮೂಲಸೌಕರ್ಯಗಳ ಸೃಷ್ಟಿ ಮತ್ತು ಜಾಗತಿಕ ರಾಜತಾಂತ್ರಿಕತೆಗಳಿಗೆ ತಮ್ಮ ನಿರಂತರ ಆದ್ಯತೆಯೆಂಬ ರಾಜಕೀಯ ಸಂದೇಶ ರವಾನಿಸಿದೆ.

ದೇಗುಲ, ಶಾಲೆಗಳ ಬಳಿ ಮದ್ಯದಂಗಡಿ ಬಂದ್

• **ಕಲ್ಯಾಣಿ/ ಕೋಲ್ಕತ್ತಾ:** ಪಶ್ಚಿಮ ಬಂಗಾಳದಲ್ಲಿ ಶಾಲೆ, ಕಾಲೇಜು ಹಾಗೂ ದೇವಾಲಯಗಳ ಸುತ್ತಮುತ್ತ ಮದ್ಯದಂಗಡಿಗಳಿಗೆ ಕಟ್ಟುನಿಟ್ಟಿನ ನಿರ್ಬಂಧ ಹೇರಲು ಮುಖ್ಯಮಂತ್ರಿ ಸುವೇಂದು ಅಧಿಕಾರಿ ಮುಂದಾಗಿದ್ದು, 1 ಕಿಲೋಮೀಟರ್ ವ್ಯಾಪ್ತಿಯೊಳಗೆ ಯಾವುದೇ ಮದ್ಯದಂಗಡಿಗೆ ಅನುಮತಿ ನೀಡುವುದಿಲ್ಲ ಎಂದು ಅವರು ತಿಳಿಸಿದ್ದಾರೆ.

ನಾದಿಯಾ ಜಿಲ್ಲೆಯ ಕಲ್ಯಾಣಿಯಲ್ಲಿ ನಡೆದ ಆಡಳಿತಾತ್ಮಕ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಮತ್ತು ಕುಟುಂಬಗಳ ವಾತಾವರಣವನ್ನು ರಕ್ಷಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗುತ್ತಿದೆ ಎಂದರು. ಶಿಕ್ಷಣ ಹಾಗೂ ಧಾರ್ಮಿಕ ಕೇಂದ್ರಗಳ ಸಮೀಪ ಮದ್ಯದಂಗಡಿಗಳ ಬಗ್ಗೆ ಸಾರ್ವಜನಿಕರಿಂದ ದೀರ್ಘಕಾಲದಿಂದಲೂ ಆಕ್ಷೇಪ ವ್ಯಕ್ತವಾಗುತ್ತಿತ್ತು ಎಂದು ಹೇಳಿದರು. ಇದೇ ವೇಳೆ ರಾಜ್ಯ ಸರ್ಕಾರ ಹಲವು ಜನಪರ ಯೋಜನೆಗಳನ್ನೂ ಘೋಷಿಸಿದೆ. ರಾಜ್ಯದಾದ್ಯಂತ ಸುಮಾರು 400 ಕ್ಯಾಂಟೀನ್‌ಗಳಲ್ಲಿ ಕೇವಲ 5 ರೂ.ಗೆ 'ಮಾಚ್-ಭಾತ್' (ಮೀನು-ಅನ್ನ) ಊಟ ಒದಗಿಸಲಾಗುವುದು ಎಂದು ಸುವೇಂದು ಅಧಿಕಾರಿ ತಿಳಿಸಿದರು. ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಕಡಿಮೆ ದರದಲ್ಲಿ ಪೌಷ್ಟಿಕ ಆಹಾರ ಒದಗಿಸುವುದು ಇದರ ಉದ್ದೇಶವಾಗಿದೆ. ಇದರ ಜೊತೆಗೆ 'ಅನ್ನಪೂರ್ಣ ಯೋಜನೆ' ಅಡಿಯಲ್ಲಿ ಅರ್ಹ ಮಹಿಳೆಯರಿಗೆ ಪ್ರತಿ ತಿಂಗಳು 3,000 ರೂ. ಆರ್ಥಿಕ ನೆರವು ನೀಡಲಾಗುವುದು ಎಂದು ಘೋಷಿಸಲಾಗಿದೆ. ಮೇ 27ರಿಂದ ಅರ್ಜಿ ವಿತರಣೆ ಆರಂಭವಾಗಲಿದೆ ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

ಹದಗೆಡುತ್ತಿದೆ ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ: ಆರ್.ಅಶೋಕ

• **ಹಾಸನ:** ರಾಜ್ಯ ಸರ್ಕಾರದ ಆರ್ಥಿಕ ಸ್ಥಿತಿ ದಿನದಿಂದ ದಿನಕ್ಕೆ ಹದಗೆಡುತ್ತಿದ್ದು, ಗ್ಯಾರಂಟಿ ಯೋಜನೆಗಳ ಪರಿಣಾಮವಾಗಿ ರಾಜ್ಯದ ಸಾಲದ ಮೊತ್ತ 7 ಲಕ್ಷ ಕೋಟಿ ದಾಟಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದರು. ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ



ಮಾತನಾಡಿದ ಅವರು, ಮುಂದಿನ ವರ್ಷಕ್ಕೆ ಸಾಲದ ಪ್ರಮಾಣ 8.5 ಲಕ್ಷ ಕೋಟಿಗೆ ಏರಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರ ಬಿಡುವ ವೇಳೆಗೆ ಅದು 10 ಲಕ್ಷ ಕೋಟಿಗೆ ತಲುಪಲಿದೆ. ಇದುವರೆಗೆ ರಾಜ್ಯದ ಎಲ್ಲಾ ಸಿಎಂಗಳು ಮಾಡಿದ ಸಾಲಕ್ಕಿಂತ ಹೆಚ್ಚು ಸಾಲವನ್ನು ಸಿದ್ದರಾಮಯ್ಯ ಮಾಡಿದ್ದಾರೆ ಎಂದು ಟೀಕಿಸಿದರು.

ರಾಜ್ಯದಲ್ಲಿ ಅಧಿಕಾರ ಹಂಚಿಕೆ ಕಿತ್ತಾಟದಲ್ಲಿ ಸರ್ಕಾರ ಕೋಮಾದಲ್ಲಿದೆ. ಯಾರು ಮುಖ್ಯಮಂತ್ರಿ ಆಗುತ್ತಾರೆ, ಯಾರು ಹೋಗುತ್ತಾರೆ ಎಂಬ ಗೊಂದಲವೇ ಆಡಳಿತವನ್ನು ಹಾಳು ಮಾಡಿದೆ. ಅವ್ಯವಸ್ಥೆ ಸರಿಪಡಿಸಲು ಕಾಂಗ್ರೆಸ್ ಹೈಕಮಾಂಡ್ ದುರ್ಬಲವಾಗಿದೆ. 2028ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ಬರಲಿದೆ ಎಂದರು. ಗ್ಯಾರಂಟಿ ಯೋಜನೆ ಕುರಿತು ಪ್ರತಿಕ್ರಿಯಿಸಿದ ಅವರು, ಗ್ಯಾರಂಟಿ ವಿರೋಧಿ ನಾವುಗಳಲ್ಲ, ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಭಾಗ್ಯಲಕ್ಷ್ಮಿ, ಸೈಕಲ್ ವಿತರಣೆ ಯೋಜನೆ ಜಾರಿಗೆ ತಂದಿದ್ದೆವು. ನಾವು ಆದಾಯಕ್ಕೆ ಅನುಗುಣವಾಗಿ ಯೋಜನೆ ರೂಪಿಸಿದ್ದೆವು. ಆದರೆ ಕಾಂಗ್ರೆಸ್ ಚುನಾವಣೆ ಗೆಲ್ಲಲು ಗ್ಯಾರಂಟಿ ಘೋಷಿಸಿ ಈಗ ಅದಕ್ಕೆ ಕತ್ತರಿ ಹಾಕಲು ಹೊರಟಿದೆ ಎಂದು ಲೇವಡಿ ಮಾಡಿದರು.

ರಾಜ್ಯದಲ್ಲಿ ಪಡಿತರ ಅಕ್ಕಿ ವಿತರಣೆಯಲ್ಲಿಯೂ ಅವ್ಯವಸ್ಥೆ ಉಂಟಾಗಿದೆ. ಕೇಂದ್ರ ಸರ್ಕಾರದಿಂದ ಒಂದು ತಿಂಗಳಿಗೂ ಅಕ್ಕಿ ಬಾಕಿ ಇಲ್ಲ, ಆದರೂ ಅನೇಕ ಪಡಿತರ ಅಂಗಡಿಗಳಲ್ಲಿ ಅಕ್ಕಿ ಸಿಗುತ್ತಿಲ್ಲ, ಮೂರು ತಿಂಗಳಿಂದ ಪಿಂಚಣಿ ಸಹ ಸರಿಯಾಗಿ ವಿತರಣೆ ಆಗುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸನ್ಮಾನ



ಪದ್ಮಶ್ರೀ ಪುರಸ್ಕೃತರಾದ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಪುಸ್ತಕ ಮನೆ ರೂವಾರಿ ಎಂ. ಅಂಕೇಗೌಡ ಅವರನ್ನು ದಿಲ್ಲಿಯ ತಮ್ಮ ನಿವಾಸಕ್ಕೆ ಬರಮಾಡಿಕೊಂಡ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಮಂಗಳವಾರ ಆತ್ಮೀಯವಾಗಿ ಗೌರವಿಸಿದರು.

ಅನುಮತಿ ರಹಿತ ಕೇಂದ್ರಗಳಲ್ಲಿ ಕೋಚಿಂಗ್‌ಗೆ ಕಠಿಣ ಕ್ರಮ

• **ಬೆಂಗಳೂರು:** ಇಲಾಖೆಯಿಂದ ಅನುಮೋದನೆ ಪಡೆದಿರುವ ಸ್ಥಳಗಳನ್ನು ಬಿಟ್ಟು ಬೇರೆ ಕಡೆಗಳಲ್ಲಿ ಪಾಠ ನಡೆಸುತ್ತಿರುವ ಹಾಗೂ ಖಾಸಗಿ ಕೋಚಿಂಗ್ ಕೇಂದ್ರಗಳಲ್ಲಿ ತರಗತಿಗಳನ್ನು ನಡೆಸುತ್ತಿರುವ ಕೆಲವು ಪದವಿ ಪೂರ್ವ ಕಾಲೇಜುಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಎಚ್ಚರಿಕೆ ನೀಡಿದೆ.

2026–27ನೇ ಶೈಕ್ಷಣಿಕ ಸಾಲಿನ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಪ್ರವೇಶಕ್ಕೆ ಸಂಬಂಧಿಸಿ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ನಿರ್ದೇಶಕರು ಸಾರ್ವಜನಿಕ ಸಲಹೆ ಪ್ರಕಟಿಸಿದ್ದು, ಕೆಲವು ಕಾಲೇಜುಗಳು ಇಲಾಖೆಯ ಅನುಮೋದನೆ ಇಲ್ಲದ ಸ್ಥಳಗಳಲ್ಲಿ ಶೈಕ್ಷಣಿಕ ಚಟುವಟಿಕೆ ನಡೆಸುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ವಿದ್ಯಾರ್ಥಿಗಳಿಗೆ ಮಾನ್ಯತೆ ಪಡೆದ ಕಾಲೇಜುಗಳಲ್ಲಿ ಪ್ರವೇಶ ನೀಡಿದರೂ, ವಾಸ್ತವವಾಗಿ ಪಾಠಗಳನ್ನು ಖಾಸಗಿ ತರಬೇತಿ ಮತ್ತು ಕೋಚಿಂಗ್ ಸಂಸ್ಥೆಗಳಲ್ಲಿ ನಡೆಸಲಾಗುತ್ತಿದೆ ಎಂಬ ಮಾಹಿತಿ ಲಭ್ಯವಾಗಿದೆ.

ಇಂತಹ ಕ್ರಮಗಳು ಕರ್ನಾಟಕ ಶಾಲಾ ಶಿಕ್ಷಣ ನಿಯಮಗಳು–2024 ಹಾಗೂ ಕರ್ನಾಟಕ ಶಿಕ್ಷಣ ಕಾಯ್ದೆ–1983ರ ನಿಯಮಗಳಿಗೆ ವಿರುದ್ಧವಾಗಿವೆ ಎಂದು ಇಲಾಖೆ ಸ್ಪಷ್ಟಪಡಿಸಿದೆ. ನಿಯಮ ಉಲ್ಲಂಘನೆ ನಡೆಸುವ ಸಂಸ್ಥೆಗಳಿಗೆ ಸ್ಪಷ್ಟೀಕರಣಕ್ಕೆ ಅವಕಾಶ ನೀಡಿ, ನಂತರ ಕಾಲೇಜುಗಳ ಮಂಜೂರಾತಿ ಮತ್ತು ಶೈಕ್ಷಣಿಕ ಮಾನ್ಯತೆ ರದ್ದುಪಡಿಸುವ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಪಾಲಕರು ಮತ್ತು ವಿದ್ಯಾರ್ಥಿಗಳು ಪ್ರವೇಶ ಪಡೆಯುವ ಮೊದಲು ಸಂಬಂಧಿತ ಪಿಯು ಕಾಲೇಜಿನ ಅನುಮೋದಿತ ವಿಳಾಸ, ಮಂಜೂರಾದ ವಿಭಾಗಗಳು, ಕಾಂಬಿನೇಶನ್‌ಗಳು ಹಾಗೂ ಪ್ರವೇಶ ಸಾಮರ್ಥ್ಯ (ಇಂಟೇಕ್) ಕುರಿತು ಇಲಾಖೆಯ ಅಧಿಕೃತ ಜಾಲತಾಣದಲ್ಲಿ ಪರಿಶೀಲಿಸಿ ಖಚಿತಪಡಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ತರಗತಿಗಳನ್ನು ಬೇರೆ ಸ್ಥಳಕ್ಕೆ ಸ್ಥಳಾಂತರಿಸಲಾಗುತ್ತದೆ ಎಂಬ ಮೌಖಿಕ ಭರವಸೆಗಳನ್ನು ನೀಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಇಂತಹ ಭರವಸೆಗಳು ಅಥವಾ ತಪ್ಪು ಮಾಹಿತಿಗಳನ್ನು ನಂಬಬಾರದು ಎಂದು ಪಾಲಕರಿಗೆ ಇಲಾಖೆ ಸಲಹೆ ನೀಡಿದೆ.

ಕಿರುಸುದ್ದಿ

ವಕೀಲರ ಧರಣಿಗೆ ಕೆ.ಎಸ್. ಈಶ್ವರಪ್ಪ ಬೆಂಬಲ

• **ಶಿವಮೊಗ್ಗ:** ವಕೀಲರು ಧರಣಿ ಮಾಡುತ್ತಿದ್ದಾರೆ ಎಂದರೆ ಅದು ರಾಜ್ಯಕ್ಕೆ ಅಪಮಾನ. ಕೂಡಲೇ ರಾಜ್ಯ ಸರ್ಕಾರ ಈ ಕಡೆ ಗಮನ ಹರಿಸಬೇಕು ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ರಾಷ್ಟ್ರಭಕ್ತರ ಬಳಗದ ಸಂಚಾಲಕ ಕೆ.ಎಸ್. ಈಶ್ವರಪ್ಪ ಒತ್ತಾಯಿಸಿದ್ದಾರೆ. ವಕೀಲರ ಭವನದ ಆವರಣದಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಒತ್ತಾಯಿಸಿ ವಕೀಲರ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಹೋರಾಟ ಸ್ಥಳಕ್ಕೆ ರಾಷ್ಟ್ರಭಕ್ತರ ಬಳಗದ ಬೆಂಬಲಿಗರೊಂದಿಗೆ ತೆರಳಿ ಪ್ರತಿಭಟನೆಯಲ್ಲಿ ಭಾಗವಹಿಸಿ ಮಾತನಾಡಿದರು. ನ್ಯಾಯಯುತ ಬೇಡಿಕೆಗಳನ್ನು ಈಡೇರಿಕೆಗೆ ವಕೀಲರು ಕಳೆದ ಹಲವು ದಿನಗಳಿಂದ ಪ್ರತಿಭಟನೆ ಮಾಡುತ್ತಿದ್ದಾರೆ. ಶಿವಮೊಗ್ಗ ಕೇಂದ್ರವಾಗಿರಿಸಿ ಹೈಕೋರ್ಟ್ ಸಂಚಾರಿ ಪೀಠ ಬೇಕು ಎನ್ನುವ ಅವರ ಬೇಡಿಕೆಗೆ ರಾಷ್ಟ್ರಭಕ್ತರ ಬಳಗದ ಸಂಪೂರ್ಣ ಬೆಂಬಲವಿದೆ. ಕೊನೆಯವರೆಗೂ ನಾವು ಅವರೊಂದಿಗೆ ಇರುತ್ತೇವೆ ಎಂದು ಘೋಷಿಸಿದರು.

ಸಾಲಬಾಧೆ: ರೈತ ಆತ್ಮಹತ್ಯೆ

• **ಮೈಸೂರು:** ಸಾಲ ಬಾಧೆ ತಾಳದೆ ರೈತರೊಬ್ಬರು ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಜಿಲ್ಲೆಯ ಹುಣಸೂರು ತಾಲೂಕಿನ ಮಂಟಿಕೊಪ್ಪಲು ಗ್ರಾಮದಲ್ಲಿ ನಡೆದಿದೆ. ಗ್ರಾಮದ ನಿವಾಸಿ ದೇವರಾಜ್ (60) ಆತ್ಮಹತ್ಯೆ ಮಾಡಿಕೊಂಡವರು. ಇವರಿಗೆ ತಂದೆ–ತಾಯಿ, ಪತ್ನಿ, ಇಬ್ಬರು ಪುತ್ರರಿದ್ದಾರೆ. ದೇವರಾಜ್‌ಗೆ ಗ್ರಾಮದಲ್ಲಿ 4.5 ಎಕರೆ ಜಮೀನಿದ್ದು, ಡಬಲ್ ಬ್ಯಾರನ್ ಹೊಂದಿದ್ದಾರೆ. ತಂಬಾಕು ಮತ್ತು ಶುಂಠಿ ಬೆಳೆಗಾಗಿ ಹುಣಸೂರಿನ ಯೂನಿಯನ್ ಬ್ಯಾಂಕ್‌ನಲ್ಲಿ ಹಾಗೂ ಟ್ರ್ಯಾಕ್ಟರ್ ಖರೀದಿಗಾಗಿ ಖಾಸಗಿ ಫೈನಾನ್ಸ್‌ನಲ್ಲಿ ಲಕ್ಷಾಂತರ ರೂ. ಸಾಲ ಪಡೆದಿದ್ದರು. ಗ್ರಾಮದಲ್ಲಿ ಕೈಸಾಲವನ್ನು ಕೂಡ ಮಾಡಿದ್ದರು. ಬ್ಯಾಂಕಿನಿಂದ ಹಲವಾರು ಬಾರಿ ನೋಟಿಸ್ ಬಂದಿತ್ತಲ್ಲದೆ, ಸಾಲದ ಸಂಬಂಧ ನ್ಯಾಯಾಲಯದಲ್ಲೂ ಪ್ರಕರಣ ನಡೆದಿತ್ತು. ಈ ವರ್ಷ ತಂಬಾಕು, ಶುಂಠಿ ಸಾಲ ಬೆಳೆ ಕೈಕೊಟ್ಟಿದ್ದರಿಂದ ತೀರಿಸಲಾಗದೆ ಪರಿತಪಿಸುತ್ತಿದ್ದ ತಂದೆ ದೇವರಾಜ್ ಮನೆಯಲ್ಲಿದ್ದ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪುತ್ರ ಪ್ರದೀಪ್ ಕುಮಾರ್ ಹುಣಸೂರು ನಗರ ಠಾಣೆ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಟಿ-20 ಕ್ರಿಕೆಟ್ ಬೆಟ್ಟಿಂಗ್: 23 ಮಂದಿ ಬಂಧನ

• **ಬೆಂಗಳೂರು:** ಟಾಟಾ ಐಪಿಎಲ್ ಟಿ–20 ಕ್ರಿಕೆಟ್ ಪಂದ್ಯಗಳ ಸಂದರ್ಭದಲ್ಲಿ ಅಕ್ರಮವಾಗಿ ಜೂಜಾಟ ನಡೆಸುತ್ತಿದ್ದ ಜಾಲದ ಮೇಲೆ ಸಿಸಿಬಿ ಪೊಲೀಸರು ನಗರದಾದ್ಯಂತ ಕಾರ್ಯಾಚರಣೆ ನಡೆಸಿ, ಕ್ರಿಕೆಟ್ ಬೆಟ್ಟಿಂಗ್‌ನಲ್ಲಿ ತೊಡಗಿದ್ದ 23 ಆರೋಪಿಗಳನ್ನು ಬಂಧಿಸಿ, ಅವರಿಂದ 13.39 ಕೋಟಿ ರೂ. ಮೌಲ್ಯದ ಡಿಜಿಟಲ್ ಚಿಪ್ಸ್ ಹಾಗೂ ನಗದನ್ನು ವಶಪಡಿಸಿಕೊಂಡಿದ್ದಾರೆ. ನಗರದ ವಿವಿಧ ಠಾಣಾ ವ್ಯಾಪ್ತಿಗಳಲ್ಲಿ ಐಪಿಎಲ್ ಪಂದ್ಯಗಳ ಮೇಲೆ ದೊಡ್ಡಮಟ್ಟದ ಬೆಟ್ಟಿಂಗ್ ನಡೆಯುತ್ತಿರುವ ಬಗ್ಗೆ ಸಿಸಿಬಿಯ ವಿಶೇಷ ವಿಚಾರಣಾ ದಳಕ್ಕೆ ಖಚಿತ ಮಾಹಿತಿ ಲಭ್ಯವಾಗಿತ್ತು. ಇದರ ಆಧಾರದ ಮೇಲೆ ತೀವ್ರ ನಿಗಾ ವಹಿಸಿದ್ದ ವಿಶೇಷ ತಂಡವು ನಗರದ ಬೇರೆ ಬೇರೆ ಕಡೆಗಳಲ್ಲಿ ದಾಳಿ ನಡೆಸಿ ಒಟ್ಟು 17 ಕ್ರಿಕೆಟ್ ಬೆಟ್ಟಿಂಗ್ ಪ್ರಕರಣಗಳನ್ನು ದಾಖಲಿಸಿಕೊಂಡಿದೆ. ಈ ಪೈಕಿ ಸಿಸಿಬಿ ಠಾಣೆಯೊಂದರಲ್ಲೇ 9 ಪ್ರಕರಣಗಳು ದಾಖಲಾಗಿವೆ. ದಾಳಿಯ ವೇಳೆ ಸಿಸಿಬಿ ಠಾಣೆಯಲ್ಲಿ ದಾಖಲಾದ ಪ್ರಮುಖ 4 ಪ್ರಕರಣಗಳಿಗೆ ಸಂಬಂಧಿಸಿದಂತೆ ಐದು ಮಂದಿ ಪ್ರಮುಖ ಆರೋಪಿಗಳನ್ನು ಬಂಧಿಸಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಅರಣ್ಯ ಸಚಿವ ಈಶ್ವರ ಖಂಡ್ರೆ ಹೇಳಿಕೆ

ದಿಲ್ಲಿಯಲ್ಲಿ ಚುನಾವಣೆ ಚರ್ಚೆ

• **ಸುಬ್ರಹ್ಮಣ್ಯ:** ಮುಂಬರುವ ರಾಜ್ಯಸಭಾ ಚುನಾವಣೆಯ ಕುರಿತು ವರಿಷ್ಠರೊಂದಿಗೆ ಚರ್ಚಿಸಲು ಮುಖ್ಯಮಂತ್ರಿಗಳು ಮತ್ತು ನಾಯಕರು ದೆಹಲಿಗೆ ಹೋಗಿದ್ದಾರೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ. ಖಂಡ್ರೆ ತಿಳಿಸಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ದೇವರ ದರ್ಶನ ಮಾಡಿದ ತರುವಾಯ ಸುದ್ದಿಗಾರರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಸಂಪುಟ ವಿಸ್ತರಣೆ ಮುಖ್ಯಮಂತ್ರಿಗಳ ಪರಮಾಧಿಕಾರವಾಗಿದ್ದು, ಊಹಾತ್ಮಕ ಪ್ರಶ್ನೆಗಳಿಗೆ ಉತ್ತರಿಸುವುದಿಲ್ಲ ಎಂದರು.

ಕುಕ್ಕೆಯಲ್ಲಿ ಏಕಬಳಕೆ ಪ್ಲಾಸ್ಟಿಕ್ ತಪಾಸಣೆ: ಶ್ರೀಕ್ಷೇತ್ರ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬರಲು ಇರುವ ನಾಲ್ಕು ಪ್ರವೇಶ ರಸ್ತೆಗಳಲ್ಲಿ ಏಕಬಳಕೆ ಪ್ಲಾಸ್ಟಿಕ್ ತಪಾಸಣೆಗಾಗಿ ಚೆಕ್‌ಪೋಸ್ಟ್ ಸ್ಥಾಪಿಸಲು ಆದೇಶ ನೀಡಲಾಗಿದೆ. ಇಂದು ದೇವಾಲಯಕ್ಕೆ ಬರುವಾಗ ರಸ್ತೆಯ ಬದಿಯಲ್ಲಿ ಪ್ಲಾಸ್ಟಿಕ್ ಬಾಟಲಿ, ತಟ್ಟೆ ಇತ್ಯಾದಿ ಬಿದ್ದಿರುವುದನ್ನು ನೋಡಿ ಆತಂಕವಾಯಿತು. ಕೂಡಲೇ ಅಧಿಕಾರಿಗಳ ಸಭೆ ನಡೆಸಿ ಚೆಕ್‌ಪೋಸ್ಟ್ ಸ್ಥಾಪಿಸಿ 2 ಹಂತದ ತಪಾಸಣೆ ಮಾಡಲು ಸೂಚನೆ ನೀಡಲಾಗಿದೆ ಎಂದು ಸಚಿವರು ತಿಳಿಸಿದರು.

ಕಂದಾಯ ಇಲಾಖೆಯಲ್ಲಿ ಮೋಜಣಿದಾರರು ಕೆಲ ತಿಂಗಳಿಂದ ಮುಷ್ಕರ ನಡೆಸುತ್ತಿದ್ದಾರೆ. ಜತೆಗೆ ಸರ್ವೆಯರ್‌ಗಳ ಕೊರತೆ ಇರುವುದಾಗಿ ಉಡುಪಿ ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ. ಅರಣ್ಯ ಜಂಟಿ ಸರ್ವೆಗಾಗಿಯೇ ವಿಶೇಷವಾಗಿ ಸಿಬ್ಬಂದಿ ನಿಯೋಜಿಸಲು ತಿಳಿಸಿದ್ದು ಈ ಬಗ್ಗೆ ಕಂದಾಯ ಸಚಿವರೊಂದಿಗೆ ಸಮಾಲೋಚಿಸುವುದಾಗಿ ಈಶ್ವರ್ ಖಂಡ್ರೆ ತಿಳಿಸಿದರು. ಮಾನವನ ಜೀವ ಅತ್ಯಮೂಲ್ಯವಾಗಿದ್ದು ಒಂದೇ ಒಂದು ಪ್ರಾಣ ಹಾನಿಯೂ ಆಗಬಾರದು. ಈ ನಿಟ್ಟಿನಲ್ಲಿ ಕ್ರಮ ವಹಿಸಲು ಅರಣ್ಯಾಧಿಕಾರಿಗಳಿಗೆ ತಿಳಿಸಲಾಗಿದೆ ಎಂದರು.



> ವನ್ಯಜೀವಿಗಳ ಸಂಚಾರದ ಬಗ್ಗೆ ನಿಗಾ ಇಡಲು ಡ್ರೋನ್ ಸೇರಿದಂತೆ ಅತ್ಯಾಧುನಿಕ ಉಪಕರಣಗಳನ್ನು ಬಳಸಲಾಗುತ್ತಿದೆ. ಅಲ್ಲದೆ, ಕಮಾಂಡ್ ಸೆಂಟರ್ ತೆರೆಯಲಾಗಿದೆ.
>
> ■ **ಈಶ್ವರ ಬಿ. ಖಂಡ್ರೆ,** ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ

ಸಿಎಂ ಬದಲಾವಣೆ ಚರ್ಚೆ ಅನಗತ್ಯ: ಖಂಡ್ರೆ

• **ಹಾಸನ:** ರಾಜಕೀಯ ವಲಯದಲ್ಲಿ ಹರಿದಾಡುತ್ತಿರುವ ಊಹಾಪೋಹ ಅಷ್ಟೆ. ಮುಖ್ಯಮಂತ್ರಿ ಬದಲಾವಣೆ ಕುರಿತ ಚರ್ಚೆ ಅನಗತ್ಯ ಮತ್ತು ಅಪ್ರಸ್ತುತ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ದೆಹಲಿಯಲ್ಲಿ ಪ್ರತ್ಯೇಕವಾಗಿ ಸಭೆ ನಡೆಸಿರುವ ಚರ್ಚೆ ನಾಯಕತ್ವ ಬದಲಾವಣೆಗಲ್ಲ, ರಾಜ್ಯಸಭೆ ಹಾಗೂ ವಿಧಾನ ಪರಿಷತ್ ಚುನಾವಣೆ ಘೋಷಣೆ ಆಗಿರುವ ಹಿನ್ನೆಲೆಯಲ್ಲಿ ಪಕ್ಷದ ಮಟ್ಟದಲ್ಲಿ ಚರ್ಚೆಗಳು ನಡೆಯುತ್ತಿವೆ. ಅದನ್ನೇ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸುವ ಅಗತ್ಯವಿಲ್ಲ ಎಂದು ಹೇಳಿದರು. ಸಿಎಂ ಹಾಗೂ ಡಿಸಿಎಂ ಜೊತೆ ಪ್ರತ್ಯೇಕವಾಗಿ ಸಭೆ ನಡೆಸಿದ್ದರಲ್ಲಿ ವಿಶೇಷವೇನೂ ಇಲ್ಲ, ನಾವು ಎಲ್ಲರೂ ಒಂದೇ ಕುಟುಂಬದವರಂತೆ ಇದ್ದೇವೆ. ಸ್ನೇಹಿತರಾಗಿ ಟೀ ಕುಡಿಯುತ್ತೇವೆ, ಊಟಕ್ಕೆ ಹೋಗುತ್ತೇವೆ, ಪ್ರತ್ಯೇಕವಾಗಿ ಮಾತುಕತೆ ನಡೆಸುತೇವೆ. ಅದರಲ್ಲಿ ತಪ್ಪೇನಿದೆ ಎಂದು ಪ್ರಶ್ನಿಸಿದರು. ಮುಖ್ಯಮಂತ್ರಿ ಬದಲಾವಣೆ ಕುರಿತು ಕೆಲ ಕಾಂಗ್ರೆಸ್ ಶಾಸಕರು ನೀಡುತ್ತಿರುವ ಹೇಳಿಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಅವರು ಆ ಹೇಳಿಕೆ ನೀಡಿದವರನ್ನೇ ಕೇಳಬೇಕು. ನಾನು ಸರ್ಕಾರದ ಭಾಗವಾಗಿ ಹೇಳುವುದೇನೆಂದರೆ, ಸರ್ಕಾರ ಅತ್ಯಂತ ಗಟ್ಟಿಯಾಗಿದ್ದು, ಜನಪರ ಆಡಳಿತ ನೀಡುತ್ತಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಸಚಿವ ಕೆ.ಎನ್.ರಾಜಣ್ಣ ಅವರ ಹೇಳಿಕೆ ಕುರಿತು ಪ್ರಶ್ನಿಸಿದಾಗ, ಅದರ ಬಗ್ಗೆ ಅವರನ್ನೇ ಕೇಳಿ. ನಾನು ಈಗಾಗಲೇ ಹೇಳಿರುವಂತೆ ಈ ಚರ್ಚೆ ಅಪ್ರಸ್ತುತ ಎಂದು ಉತ್ತರಿಸಿದರು. ತಮ್ಮ ದೆಹಲಿ ಭೇಟಿ ಕುರಿತು ಕೇಳಿದ ಪ್ರಶ್ನೆಗೆ ಖಂಡ್ರೆ ನಗೆ ಚಟಾಕಿ ಹಾರಿಸಿ, ನಾನೇಕೆ ದೆಹಲಿಗೆ ಹೋಗಬೇಕು ಎಂದು ಮರು ಪ್ರಶ್ನೆ ಹಾಕಿದರು.

ಮೇಕೆದಾಟು: ಸುಪ್ರೀಂಗೆ ಧನ್ಯವಾದ ಹೇಳಿದ ಡಿಕೆಶಿ

• **ಬೆಂಗಳೂರು:** ಮೇಕೆದಾಟು ಯೋಜನೆ ವಿಚಾರವಾಗಿ ತಮಿಳುನಾಡು ಸಲ್ಲಿಸಿದ್ದ ಪರಿಶೀಲನಾ ಅರ್ಜಿಯನ್ನು ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ವಜಾಗೊಳಿಸಿದೆ. ಇದು ಕರ್ನಾಟಕ ಪಾಲಿಗೆ ಶುಭಸುದ್ದಿ. ಕರ್ನಾಟಕ ರಾಜ್ಯದ ಜನರ ಪರವಾಗಿ ನಾವು ಸುಪ್ರೀಂ ಕೋರ್ಟಿಗೆ ಧನ್ಯವಾದ ಅರ್ಪಿಸುತ್ತೇವೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

> ▸▸ ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆ: ಉಪಮುಖ್ಯಮಂತ್ರಿ



ಜಲ ಸಂಪನ್ಮೂಲ ಸಚಿವರೂ ಆಗಿರುವ ಅವರು ಮಂಗಳವಾರ ಹೊಸದಿಲ್ಲಿಯ ಕರ್ನಾಟಕ ಭವನದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿದರು.

ಸುಪ್ರೀಂ ಕೋರ್ಟ್ ಈ ಹಿಂದಿನ ಆದೇಶದಲ್ಲೇ ನಮಗೆ ಸ್ಪಷ್ಟ ಸೂಚನೆ ನೀಡಿದ್ದು, ತಮಿಳುನಾಡಿನ ಪಾಲಿನ 177 ಟಿಎಂಸಿ ನೀರನ್ನು ಹರಿಸಬೇಕು ಎಂದು ಷರತ್ತು ವಿಧಿಸಿದೆ. ಈಗ ಈ ಯೋಜನೆ ಕುರಿತು ತೀರ್ಮಾನ ಮಾಡಬೇಕಿರುವುದು ಕೇಂದ್ರ ಸರ್ಕಾರ. ನಾವು ಪರಿಷ್ಕೃತ ಡಿಪಿಆರ್ ಸಲ್ಲಿಕೆ ಪ್ರಕ್ರಿಯೆಯಲ್ಲಿದ್ದೇವೆ ಎಂದು ಡಿ.ಕೆ. ಶಿವಕುಮಾರ್ ವಿವರಿಸಿದರು. ಪರಿಷ್ಕೃತ ಡಿಪಿಆರ್ ಸಲ್ಲಿಕೆ ಕುರಿತಾಗಿ ಡಿ.ಕೆ.ಶಿವಕುಮಾರ್ ಅವರ ಹೇಳಿಕೆಗೆ ತಮಿಳುನಾಡಿನಲ್ಲಿ ವಿರೋಧ ವ್ಯಕ್ತವಾಗಿದೆ.

ಮೇಕೆದಾಟು ಯೋಜನೆ: ಅನುಮತಿ ನೀಡದಂತೆ ಪ್ರಧಾನಿ ಮೋದಿಗೆ ವಿಜಯ್ ಪತ್ರ

• **ಹೊಸದಿಲ್ಲಿ:** ಮೇಕೆದಾಟು ಅಣೆಕಟ್ಟು ನಿರ್ಮಿಸಲು ಕರ್ನಾಟಕ ಸರ್ಕಾರಕ್ಕೆ ಅನುಮತಿ ನೀಡಬಾರದೆಂದು ಕೋರಿ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಕಾವೇರಿ ನದಿಗೆ ಮೇಕೆದಾಟು ಅಣೆಕಟ್ಟು ಕಟ್ಟುವುದಾಗಿ ಕಾಂಗ್ರೆಸ್ ಸರ್ಕಾರ ಪ್ರಸ್ತಾವಿಸಿದ ದಿನಗಳ ಬಳಿಕ ವಿಜಯ್ ಪ್ರಧಾನಿಗೆ ಪತ್ರ ಬರೆದಿದ್ದಾರೆ. ಕರ್ನಾಟಕ ಸರ್ಕಾರದ ಮೇಕೆದಾಟು ಯೋಜನೆಯು ಸುಪ್ರೀಂ ಕೋರ್ಟ್ ತೀರ್ಪಿನ ಸ್ಪಷ್ಟ ಉಲ್ಲಂಘನೆ. ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಹೇಳಿಕೆ ಅತೀವ ಆತಂಕವನ್ನು ಸೃಷ್ಟಿಸಿದೆ ಎಂದು ತಮ್ಮ ಪತ್ರದಲ್ಲಿ ವಿಜಯ್ ಬರೆದಿದ್ದಾರೆ. ಕಾನೂನು ಸಲಹೆಗಳನ್ನು ಪಡೆದ ತಮಿಳುನಾಡು ಮುಖ್ಯಮಂತ್ರಿ ವಿಜಯ್ ಸಭೆಯೊಂದರ ಬಳಿಕ ಮುಂದಿನ ಕಾನೂನು ಹೋರಾಟಕ್ಕೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

ಜಿಕೆವಿಕೆಯಲ್ಲಿ ಅಗ್ರಿ ಸ್ಟಾರ್ಟ್‌ಅಪ್ ಕ್ಲಾನ್ ಕೇವ್ 2.0 ಉದ್ಘಾಟನೆ

ಹೊಸ ಆಲೋಚನೆಗಳಿಗೆ ದಾರಿ ತೋರಲಿ

• **ಬೆಂಗಳೂರು:** ಇಂದು ಕೃಷಿ ಕ್ಷೇತ್ರ ಎದುರಿಸುತ್ತಿರುವ ಅನೇಕ ಸವಾಲುಗಳಿಗೆ ಉತ್ತರಿಸುವ ಶಕ್ತಿ ಇಂದಿನ ತಂತ್ರಜ್ಞಾನ ಮತ್ತು ಕೃಷಿ ಸ್ಟಾರ್ಟ್‌ಅಪ್‌ಗಳಲ್ಲಿದೆ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅಭಿಪ್ರಾಯಪಟ್ಟರು.

ಜಿಕೆವಿಕೆಯಲ್ಲಿ ನಡೆದ ಅಗ್ರಿ ಸ್ಟಾರ್ಟ್‌ಅಪ್ ಕ್ಲಾನ್ ಕೇವ್ 2.0 ಕಾರ್ಯಕ್ರಮ ಉದ್ಘಾಟಿಸಿದ ಅವರು, ನಮ್ಮ ಸರ್ಕಾರ ಕೃಷಿಯನ್ನು ಕೇವಲ ಬದುಕಿನ ಮಾರ್ಗವಾಗಿ ನೋಡುವುದಿಲ್ಲ, ಅದನ್ನು ಲಾಭದಾಯಕ ಉದ್ಯಮವನ್ನಾಗಿ ರೂಪಿಸುವ ಗುರಿಯೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಡಿಜಿಟಲ್ ಕೃಷಿ, ಡ್ರೋನ್ ತಂತ್ರಜ್ಞಾನ, ಡೇಟಾ ಆಧಾರಿತ ಬೆಳೆ ನಿರ್ವಹಣೆ, ಮೌಲ್ಯವರ್ಧನೆ, ನೇರ ಮಾರುಕಟ್ಟೆ ವ್ಯವಸ್ಥೆಗಳಿಗೆ ನಮ್ಮ ಸರ್ಕಾರ ಹೆಚ್ಚಿನ ಪ್ರೋತ್ಸಾಹ ನೀಡುತ್ತಿದೆ ಎಂದು ಹೇಳಿದರು. ಇಂದು ದೇಶದಲ್ಲಿ ಸಾವಿರಾರು ಅಗ್ರಿ ಸ್ಟಾರ್ಟ್ ಅಪ್ ಹುಟ್ಟಿಕೊಂಡಿವೆ. ಅದರಲ್ಲೂ ಬೆಂಗಳೂರು ಸ್ಟಾರ್ಟ್‌ಅಪ್‌ಗಳ ಹಬ್ ಆಗಿ ಮುಂಚೂಣಿಯಲ್ಲಿದೆ. ಯುವಕರು ಉದ್ಯೋಗ ಹುಡುಕುವವರಾಗದೆ, ಉದ್ಯೋಗ ಸೃಷ್ಟಿಸುವವರಾಗಬೇಕು. ಆ ನಿಟ್ಟಿನಲ್ಲಿ ಇಂದಿನ ಯುವಕರು ಕಾರ್ಯಪ್ರವೃತ್ತರಾಗಬೇಕು ಎಂದು ಕರೆ ನೀಡಿದರು.

ರೈತ ಉತ್ಪಾದಕರ ಸಂಘಗಳು, ಕೃಷಿ ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಯುವ ಉದ್ಯಮಿಗಳು ಒಟ್ಟಾಗಿ ಕೆಲಸ ಮಾಡಿದಾಗ ಮಾತ್ರ ಗ್ರಾಮೀಣ ಆರ್ಥಿಕತೆಯಲ್ಲಿ ದೊಡ್ಡ ಬದಲಾವಣೆ ಸಾಧ್ಯ. ಈ ಅಗ್ರಿ ಸ್ಟಾರ್ಟ್ ಅಪ್ 2.0 ಹೊಸ ಆಲೋಚನೆಗಳಿಗೆ ದಾರಿ ತೋರಲಿ, ಯುವಕರಿಗೆ ಪ್ರೇರಣೆ ನೀಡಲಿ ಹಾಗೂ ರೈತರ ಬದುಕಿನಲ್ಲಿ ನಿಜವಾದ ಪರಿವರ್ತನೆ ತರಲಿ ಎಂದು ಆಶಿಸುತ್ತೇನೆ ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ತಿಳಿಸಿದರು.



> ಅಗ್ರಿ ಸ್ಟಾರ್ಟ್‌ಅಪ್‌ಗಳು ರೈತರಿಗೆ ಹೊಸ ತಂತ್ರಜ್ಞಾನ, ಹವಾಮಾನ ಆಧಾರಿತ ಕೃಷಿ ಸಲಹೆ, ಡಿಜಿಟಲ್ ಮಾರುಕಟ್ಟೆ, ನಿಖರ ಕೃಷಿ, ಡ್ರೋನ್ ತಂತ್ರಜ್ಞಾನ, ಸಾವಯವ ಕೃಷಿ ಹಾಗೂ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಸುಲಭಗೊಳಿಸುತ್ತಿವೆ. ಇದರಿಂದ ಕೃಷಿ ವೆಚ್ಚ ಕಡಿಮೆಯಾಗುವುದರ ಜೊತೆಗೆ ಉತ್ಪಾದಕತೆ ಮತ್ತು ಲಾಭದಾಯಕತೆ ಹೆಚ್ಚಾಗುತ್ತಿದೆ.
>
> ■ **ಡಾ. ಎಸ್.ವಿ. ಸುರೇಶ,** ಜಿಕೆವಿಕೆ ಕುಲಪತಿ

50ಕ್ಕೂ ಹೆಚ್ಚು ಮಳಿಗೆಗಳ ಪ್ರದರ್ಶನ: ಈ ಕಾರ್ಯಕ್ರಮದಲ್ಲಿ ಸುಮಾರು 50ಕ್ಕೂ ಹೆಚ್ಚು ಮಳಿಗೆಗಳು ಪ್ರದರ್ಶಿಸಲಾಯಿತು. ಅಗ್ರಿ ಸ್ಟಾರ್ಟ್‌ಅಪ್‌ಗಳು, ಉದ್ಯಮಿಗಳು, ಸಂಶೋಧಕರು, ಹೂಡಿಕೆದಾರರು, ವಿದ್ಯಾರ್ಥಿಗಳು, ಕೈಗಾರಿಕೆಗಳು ಹಾಗೂ ರೈತ ಉತ್ಪಾದಕರ ಸಂಘಟನೆಗಳನ್ನು ಒಂದೇ ವೇದಿಕೆಯಲ್ಲಿ ಒಗ್ಗೂಡಿಸಲಾಯಿತು.

ಕಲಾವಿದರಿಗೆ ಸಿಗಲಿದೆ ಜಾಗತಿಕ ಮನ್ನಣೆ

• **ಬೆಂಗಳೂರು:** ಕೇಂದ್ರ ವಿದೇಶಾಂಗ ಮಂತ್ರಾಲಯದ ಅಧೀನದಲ್ಲಿರುವ ಸಾಂಸ್ಕೃತಿಕ ರಾಜತಾಂತ್ರಿಕ ಸಂಸ್ಥೆಯಾದ ಐಸಿಸಿಆರ್ ಹಾಗೂ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಒಪ್ಪಂದಕ್ಕೆ ಐಸಿಸಿಆರ್ ಪರವಾಗಿ ಜಂಟಿ ಕಾರ್ಯದರ್ಶಿ ಮನಿಷಾ ಸ್ವಾಮಿ ಮತ್ತು ಕರ್ನಾಟಕ ಸರ್ಕಾರದ ಪರವಾಗಿ ಇಲಾಖೆಯ ಕಾರ್ಯದರ್ಶಿ ಜೆ.ಮಂಜುನಾಥ್ ಸಹಿ ಹಾಕಿದರು. ಈ ಒಡಂಬಡಿಕೆಯ ಮೂಲಕ ಕರ್ನಾಟಕದ ಕಲಾವಿದರು, ಸಾಂಸ್ಕೃತಿಕ ತಂಡಗಳು ಹಾಗೂ ಯುವ ಪ್ರತಿಭೆಗಳಿಗೆ ದೇಶ–ವಿದೇಶಗಳಲ್ಲಿ ಹೆಚ್ಚಿನ ಅವಕಾಶಗಳು ಲಭ್ಯವಾಗಲಿವೆ. ಸಂಗೀತ, ನೃತ್ಯ, ಸಾಹಿತ್ಯ, ಕರಕುಶಲ, ಪಾಕಪದ್ಧತಿ ಮತ್ತು ವಾಸ್ತುಶಿಲ್ಪ ಕ್ಷೇತ್ರಗಳಲ್ಲಿ ಪ್ರತಿಭೆಗಳನ್ನು ಗುರುತಿಸಿ ಉತ್ತೇಜಿಸಲು ಯೋಜನೆ ರೂಪಿಸಲಾಗಿದೆ.

ವಿದೇಶಗಳಲ್ಲಿ ನಡೆಯುವ ಅಂತಾರಾಷ್ಟ್ರೀಯ ಉತ್ಸವಗಳಲ್ಲಿ ಕರ್ನಾಟಕದ ಕಲಾವಿದರು ಭಾಗವಹಿಸಲು ಐಸಿಸಿಆರ್ ನೆರವು ನೀಡಲಿದೆ. ವಿಮಾನ ಪ್ರಯಾಣ, ವೀಸಾ ಹಾಗೂ ಪ್ರದರ್ಶನ ವೆಚ್ಚಗಳನ್ನು ಭರಿಸಲು ಸಿದ್ಧತೆ ವ್ಯಕ್ತಪಡಿಸಿದೆ. ಈ ಮೂಲಕ ಕರ್ನಾಟಕದ ಸಾಂಸ್ಕೃತಿಕ ಪರಂಪರೆಗೆ ಜಾಗತಿಕ ಮಟ್ಟದಲ್ಲಿ ಮತ್ತಷ್ಟು ಗುರುತಿನ ಅವಕಾಶ ಲಭಿಸಲಿದೆ.



> ಕೇಂದ್ರ ಸರ್ಕಾರದ ಐಸಿಸಿಆರ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಡುವೆ ಐತಿಹಾಸಿಕ ಒಡಂಬಡಿಕೆಗೆ ಸಹಿ ಮಾಡಲಾಗಿದೆ. ರಾಜ್ಯದ ಸಂಸ್ಕೃತಿ ಪ್ರವಾಸೋದ್ಯಮ, ಆರ್ಥಿಕತೆ ಹೆಚ್ಚಿಸಲು ಸಾಧ್ಯವಾಗುತ್ತದೆ. ದೇಶ, ವಿದೇಶಗಳಲ್ಲಿ ಸಾಂಸ್ಕೃತಿಕ ರಾಜತಾಂತ್ರಿಕತೆ ಬಲಪಡಿಸುವ ನಿಟ್ಟಿನಲ್ಲಿ ಈ ಒಡಂಬಡಿಕೆಯು ಮಹತ್ವಪೂರ್ಣವಾಗಿದೆ.
>
> ■ **ಶಿವರಾಜ ಎಸ್.ತಂಗಡಗಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ

ಎಸ್‌ಐಆರ್: ವಿವಿಧ ಜಿಲ್ಲೆಗಳಿಗೆ ಕೈನಿಂದ ವೀಕ್ಷಕರ ನೇಮಕ

• **ಬೆಂಗಳೂರು:** ರಾಜ್ಯದಲ್ಲಿ ಮುಂದಿನ ತಿಂಗಳು ಮತದಾರರ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ನಡೆಯಲಿದೆ. ಈ ಹಿನ್ನೆಲೆಯಲ್ಲಿ ವಿವಿಧ ಜಿಲ್ಲೆಗಳಿಗೆ ಕಾಂಗ್ರೆಸ್‌ನಿಂದ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಪ್ರತಿ ಜಿಲ್ಲೆಗೆ ಇಬ್ಬರಂತೆ ಪಕ್ಷದ ಪ್ರಮುಖರನ್ನು ಕೆಪಿಸಿಸಿ ಉಪಾಧ್ಯಕ್ಷ ವಿ.ಆರ್ ಸುದರ್ಶನ್ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಆದೇಶದ ಮೇರೆಗೆ ನೇಮಕ ಮಾಡಲಾಗಿದೆ. ಸೋಮವಾರ ಬೆಂಗಳೂರಿನ ಹೊರವಲಯ ದೇವನಹಳ್ಳಿ ಬಳಿ ಕೆಪಿಸಿಸಿ ವತಿಯಿಂದ ಆಯೋಜಿಸಲಾಗಿದ್ದ ಸಭೆಯಲ್ಲಿ ಎಸ್‌ಐಆರ್ ಸಾಧಕ–ಬಾಧಕಗಳ ಬಗ್ಗೆ ಕಾಂಗ್ರೆಸ್ ಚರ್ಚೆ ನಡೆಸಿದೆ.

ಬಹುಕೋಟಿ ವಂಚನೆ ಪ್ರಕರಣ । ಬೆಂಗಳೂರಿನಿಂದ ಬೆಳಗಾವಿಗೆ ಆರೋಪಿ ಶಿಫ್ಟ್

ಸಿಐಡಿಯಿಂದ ಶಿವಾನಂದ ನೀಲಣ್ಣವರ ವಿಚಾರಣೆ

• **ಬೆಳಗಾವಿ:** ಬಹುಕೋಟಿ ವಂಚನೆ ಆರೋಪಿ ಶಿವಂ ಅಸೋಸಿಯೇಟ್ಸ್ ಸಂಸ್ಥೆಯ ಮುಖ್ಯಸ್ಥ ಶಿವಾನಂದ ನೀಲಣ್ಣವರ ಅವರನ್ನು ಸಿಐಡಿ ಅಧಿಕಾರಿಗಳು ಸೋಮವಾರ ತಡರಾತ್ರಿ, ಬೆಂಗಳೂರಿನಿಂದ ಬೆಳಗಾವಿಗೆ ಕರೆ ತಂದಿದ್ದಾರೆ.

ನೀಲಣ್ಣವರ ಮಾಳಮಾರುತಿ ಪೊಲೀಸ್ ಠಾಣೆಗೆ ಕರೆ ತಂದು ವಿಚಾರಣೆ ನಡೆಸಲಾಗುತ್ತಿದ್ದು, ನ್ಯಾಯಾಲಯವು ನೀಡಿದ್ದ 10 ದಿನಗಳ ಸಿಐಡಿ ಕಸ್ಟಡಿ ಅವಧಿ ಮೇ 27ರಂದು ಅಂತ್ಯಗೊಳ್ಳಲಿರುವ ಹಿನ್ನೆಲೆಯಲ್ಲಿ ಒಂದು ದಿನ ಮುಂಚಿತವಾಗಿಯೇ ಅಂದರೆ ಬುಧವಾರ ನ್ಯಾಯಾಲಯಕ್ಕೆ ರಜೆ ಇರುವ ಕಾರಣ ಮಂಗಳವಾರವೇ ನ್ಯಾಯಾಧೀಶರ ಮುಂದೆ ಸಿಐಡಿ ಅಧಿಕಾರಿಗಳು ಆರೋಪಿಯನ್ನು ಹಾಜರುಪಡಿಸಿದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನೀಲಣ್ಣವರ ಪತ್ನಿ, ಕನ್ನಡ ಸಂಘಟನೆಯ ಜಿಲ್ಲಾ ಅಧ್ಯಕ್ಷ ಆರ್. ಅಭಿಲಾಷ್ ಹಾಗೂ ವ್ಯವಹಾರ ಪಾಲುದಾರ ಸುಭಾಷ್ ಅವರಿಗೆ ಸಿಐಡಿ ನೋಟಿಸ್ ಜಾರಿಗೊಳಿಸಿ ತನಿಖೆಗೆ ಹಾಜರಾಗುವಂತೆ ಸೂಚನೆ ನೀಡಲಾಗಿದೆ ಎಂದು ಮಾಹಿತಿ ಲಭ್ಯವಾಗಿದೆ.

ಇದರಿಂದಾಗಿ ಮೂವರೂ ಮಂಗಳವಾರ ಮಾಳಮಾರುತಿ ಠಾಣೆಯಲ್ಲಿ ಸಿಐಡಿ ಅಧಿಕಾರಿಗಳ ಮುಂದೆ ಹಾಜರಾಗಿ ಅವರಿಂದಲೂ ಮಹತ್ವದ ಮಾಹಿತಿ ಸಂಗ್ರಹಿಸಲಾಗಿದೆ ಎಂದು



ಪೊಲೀಸ್ ಮಾಹಿತಿಯಿಂದ ತಿಳಿದು ಬಂದಿದೆ.

ಪ್ರಕರಣದ ತನಿಖೆಯನ್ನು ಮತ್ತಷ್ಟು ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಹೂಡಿಕೆದಾರರ ಹಣ ಬಳಸಿ ಖರೀದಿಸಲಾಗಿದೆ ಎನ್ನಲಾದ ಐಷಾರಾಮಿ ವಾಹನಗಳನ್ನು ಜಪ್ತಿ ಮಾಡಲಾಗಿದ್ದು, ಕೋಟ್ಯಂತರ ರೂಪಾಯಿ ಮೌಲ್ಯದ ಡಿಫೆಂಡರ್, ಮರ್ಸಿಡಿಸ್ ಬೆಂಝ್ ಹಾಗೂ ವೆಲ್ಫೇರ್ ಕಾರುಗಳನ್ನು ಸಿಐಡಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಬಹುಕೋಟಿ ವಂಚನೆ ಪ್ರಕರಣದಲ್ಲಿ ಸಿಐಡಿ ತನಿಖೆ ನಿರ್ಣಾಯಕ ಹಂತ ತಲುಪಿದ್ದು, ಮುಂದಿನ ಬೆಳವಣಿಗೆಗಳತ್ತ ಹೂಡಿಕೆದಾರರು ಹಾಗೂ ಸಾರ್ವಜನಿಕರು ಲಕ್ಷಾಂತರ ರೂ. ಹೂಡಿಕೆ ಮಾಡಿರುವುದಕ್ಕೆ ಮರಳಿ ಪಡೆದುಕೊಳ್ಳುವುದಕ್ಕೆ ಸಿದ್ಧರಾಗಿದ್ದಾರೆ ಮಾಹಿತಿಗಳು ಲಭ್ಯವಾಗಿವೆ.

ಆರೋಪಿ ನೀಲಣ್ಣವರಗೆ ವೈದ್ಯಕೀಯ ಪರೀಕ್ಷೆ

• **ಬೆಳಗಾವಿ:** ಬಹುಕೋಟಿ ವಂಚನೆ ಆರೋಪದ ಮೇಲೆ ಸಿಐಡಿ ವಶದಲ್ಲಿರುವ ಶಿವಾನಂದ ನೀಲಣ್ಣನವರ ಅವರನ್ನು ಮಂಗಳವಾರ ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಯಿತು. ಬಿಐಎಂಎಸ್ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆ ನಡೆಸಿದ ಬೆಳಗಾವಿ ವೈದ್ಯಕೀಯ ವಿಜ್ಞಾನ ಸಂಸ್ಥೆಯ ವೈದ್ಯರ ತಂಡವು ಸಂಪೂರ್ಣ ಆರೋಗ್ಯ ತಪಾಸಣೆ ನಡೆಸಿತು. ಸಿಐಡಿ ಅಧಿಕಾರಿಗಳು ಒದಗಿಸಿದ ಬಿಗಿ ಭದ್ರತೆಯಲ್ಲಿ ನೀಲಣ್ಣನವರ ಅವರನ್ನು ಆಸ್ಪತ್ರೆಗೆ ಕರೆ ತರಲಾಯಿತು. ಅಗತ್ಯವಿರುವ ವೈದ್ಯಕೀಯ ಪರೀಕ್ಷೆಗಳನ್ನು ಪೂರ್ಣಗೊಳಿಸಿದ ನಂತರ, ಅವರನ್ನು ಮತ್ತೆ ಮಾಳಮಾರುತಿ ಪೊಲೀಸ್ ಠಾಣೆಗೆ ಕರೆದೊಯ್ಯಲಾಯಿತು. ಸಿಐಡಿ ಅಧಿಕಾರಿಗಳು ನೀಲಣ್ಣನವರ ಅವರನ್ನು ವಿಚಾರಣೆ ನಡೆಸಲಾಗುತ್ತಿದ್ದು, ಹಗರಣ ಮತ್ತು ಅದರ ವ್ಯಾಪಕ ಪರಿಣಾಮಗಳ ಬಗ್ಗೆ ಆಳವಾಗಿ ತನಿಖೆ ನಡೆಸುವ ನಿರೀಕ್ಷೆಯಿದೆ.

ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿ ಪ್ರಾರ್ಥಿಸಿದ ಬಾಲಿವುಡ್ ನಟ ರಣವೀರ್ ಸಿಂಗ್

ಚಾಮುಂಡೇಶ್ವರಿ ತಾಯೇ ನನ್ನನ್ನು ಕ್ಷಮಿಸು

• **ಮೈಸೂರು:** ಬಾಲಿವುಡ್‌ನ ಖ್ಯಾತನಟ ರಣವೀರ್‌ಸಿಂಗ್ ಕಾಂತಾರ ಚಿತ್ರದ ದೈವಕ್ಕೆ ಅಪಹಾಸ್ಯ ಮಾಡಿದ ತಪ್ಪಿಗೆ ಕ್ಷಮೆಯಾಚಿಸಲು ಮಂಗಳವಾರ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಭೇಟಿ ನೀಡಿದರು.

ನಾಡದೇವತೆ ತಾಯಿ ಚಾಮುಂಡೇಶ್ವರಿಗೆ ವಿಶೇಷ ಪೂಜೆ ಸಲ್ಲಿಸಿದರು. ತಾನು ಮಾಡಿದ ತಪ್ಪಿಗೆ ಪಶ್ಚಾತ್ತಾಪ ವ್ಯಕ್ತಪಡಿಸಿ, ತನ್ನನ್ನು ಕ್ಷಮಿಸಿ ತಾಯಿ ಎಂದು ಅಂಗಲಾಚಿದರು.



2025ರ ನ.28ರಂದು ಗೋವಾದಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ್ದ ನಟ ರಣವೀರ್ ಸಿಂಗ್, ಕಾಂತಾರ ಚಲನಚಿತ್ರದಲ್ಲಿ ಚಿತ್ರಿಸಲಾದ ಪವಿತ್ರ ದೈವ (ದೈವಕೋಲ) ಸಂಪ್ರದಾಯವನ್ನು ಬಹಿರಂಗವಾಗಿ ಅಪಹಾಸ್ಯ ಮಾಡಿದ್ದರು. ಲಕ್ಷಾಂತರ ಅನುಯಾಯಿಗಳನ್ನು ಹೊಂದಿರುವ ನಟರೊಬ್ಬರು ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಇಂಥ ವ್ಯಂಗ್ಯ ಪ್ರದರ್ಶಿಸುವ ಮೂಲಕ ಕಾಂತಾರ ಚಲನಚಿತ್ರ ಮಾತ್ರವಲ್ಲದೇ, ತುಳು ಸಂಪ್ರದಾಯದಲ್ಲಿ ಆಳವಾಗಿ ಬೇರೂರಿರುವ ಆಧ್ಯಾತ್ಮಿಕ ನಂಬಿಕೆಗಳನ್ನು ಅಪಹಾಸ್ಯ ಮಾಡಿದ್ದಾರೆ. ಇದು ಸಾರ್ವಜನಿಕ ಶಾಂತಿ ಭಂಗಗೊಳಿಸುವ ಮತ್ತು ಸಮುದಾಯಗಳ ನಡುವೆ ದ್ವೇಷ ಉತ್ತೇಜಿಸಬಹುದು ಎಂದು ಆರೋಪಿಸಿ ದೂರು ನೀಡಲಾಗಿತ್ತು.

ದೂರಿನ ಸಂಬಂಧ ರಣವೀರ್ ಸಿಂಗ್ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಕಲಂಗಳ ಅಡಿಯಲ್ಲಿ ಬೆಂಗಳೂರಿನ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿತ್ತು. ಈ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ರಣವೀರ್ ಸಿಂಗ್ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಬಳಿಕ ಬೇಷರತ್ ಕ್ಷಮೆಯಾಚಿಸಿರುವ ಪ್ರಮಾಣ ಪತ್ರವನ್ನು ಕೋರ್ಟ್‌ಗೆ ಸಲ್ಲಿಸಿದ್ದರು. ಚಾಮುಂಡಿ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಲಿದ್ದಾರೆ ಎಂದು ರಣವೀರ್ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದ್ದರು. ಒಂದು ತಿಂಗಳಲ್ಲಿ ದೇವಸ್ಥಾನಕ್ಕೆ ಭೇಟಿ ನೀಡಬೇಕೆಂದು ಹೈಕೋರ್ಟ್ ನಿರ್ದೇಶನ ನೀಡಿ, ಅವರ ವಿರುದ್ಧದ ಪ್ರಕರಣ ಇತ್ಯರ್ಥಪಡಿಸಿತ್ತು.

ಈ ಹಿನ್ನೆಲೆಯಲ್ಲಿ ಬೆಳಗ್ಗೆ 7.30 ವೇಳೆಯಲ್ಲಿ ಚಾಮುಂಡಿ ಬೆಟ್ಟಕ್ಕೆ ಆಗಮಿಸಿದ ರಣವೀರ್ ಸಿಂಗ್, ಯಾವುದೇ ಸೆಲೆಬ್ರಿಟಿ ಹಮ್ಮಿಲ್ಲದೆ ತೀರಾ ಸಾಮಾನ್ಯರಂತೆ ದೇವಸ್ಥಾನದಲ್ಲಿ ದೇವಿ ಉತ್ಸವ ಮೂರ್ತಿಗೆ ವಿಶೇಷ ಪೂಜೆ ಸಲ್ಲಿಸಿದರು. ತಮ್ಮ ಹಳೆ ಹೇಳಿಕೆಗೆ ದೇವಿಯ ಸನ್ನಿಧಿಯಲ್ಲಿ ಪಶ್ಚಾತ್ತಾಪ ವ್ಯಕ್ತಪಡಿಸಿ, ಕ್ಷಮೆಯಾಚಿಸಿದರು.

JCK INFRASTRUCTURE DEVELOPMENT LIMITED

CIN:L70102KA1979PLC003590
Regd Office: Door No. 309, 1st Floor, Westminster 13, Cunningham Road, Bangalore - 560 052 | Telephone: 080-22203423
E-mail: investors@jckgroup.in | Website: www.jckgroup.in

STATEMENT OF AUDITED STANDALONE AND CONSOLIDATED FINANCIALS RESULTS FOR THE QUARTER AND FINANCIAL YEAR ENDED 31ST MARCH, 2026

The Standalone and Consolidated financials results for the quarter and financial year ended 31st March, 2026 of JCK Infrastructure Development Limited ("the Company") have been reviewed and recommended by the Audit Committee and approved by the Board of Directors at their meetings held on May 26, 2026.

The Standalone and Consolidated financials results of the Company along with limited review report of Statutory auditors are available on the website of Metropolitan Stock Exchange of India Limited (URL: www.msei.in) and on the Company's website (URL: www.jckgroup.in) and can be accessed by scanning the Quick response Code (QR Code) provided below:

For and on behalf of the Board of Directors

Sd/-
Krishan Kapur
Managing Director

Date: 26.05.2026
Place: Bengaluru

PUBLIC NOTICE

This is to inform the General Public that my client NIRMALA N.R., aged about 48 Years, Wife of RAJESH N.P. Residing at NO. 61, 1ST FLOOR, 1ST CROSS, S.K.GARDEN MAIN ROAD, WAHAB GARDEN, BENGALURU NORTH, BENSON TOWN, BENGALURU-560046, KARNATAKA, MOBILE : 9740435588, email :- rajeshnandipaati@gmail.com, my Client is the Absolute Owner of the Schedule Property and my Client have lost the Mother Deed of the said Schedule Property i.e. DEED OF SALE vide document Number : MYN-1-24547-2010-11, in Book-1, Stored in C.D. No. MYND271, Registered on 30/03/2011 before the Sub-Registrar, Mysuru North, executed by Sri. KAVERAPPA K.C. son of Late Sri. Chengappa in favour of M/s.ESVEEGEE REALTY (Gujarat) Private Limited, and subsequently my Client have lodged / filed have filed complaint before the Karnataka State Police, Bengaluru City Unit in vide Lost Report No. 2203044/2026 of Serial Number : 2203044, dated : 14/05/2026. If any person/s find the said original document shall handover to the undersigned Advocate or any person/s, institution/s, establishment/s having any right, title, interest, claim and ownership over Schedule Property, the same may be informed to the undersigned Advocate, in person, along with the documentary proof, within 15 days from the date of this publication, failing which, it is presumed that my client is at liberty to deal with the same in any manner as she deems fit and for her future transactions / dealings in respect of the Schedule Property, the Certified Copy of the above said document shall be considered as absolute title deed. Any claim made after the stipulated period, will not be valid, not binding on my client what-so-ever-in-any-manner and the finder will be suitable rewarded on return of the original documents.

SCHEDULE
(DESCRIPTION OF PROPERTY)

All that piece and parcel of the Immovable Property bearing Site No. 73, in Residentially Converted Land bearing Survey Number : 58 & 61, measuring 12-ACRES 12-GUNTAS (Alienated vide Order bearing No. ALN(3)CR.129/2007-08, dated : 11/11/2008 passed by the Deputy Commissioner, Mysore), situated at DADADAHALLI VILLAGE, JAYAPURA HOBLI, MYSORE TALUK, MYSORE, as per Sindhuvalli Grama Panchayath Form No.9 and 11A records Property Number is : 477/73, Unique PID No. 152200420116020998 measuring to the EAST TO WEST : 23.07 METERS (75.71 FEET) and NORTH TO SOUTH : 12.04 METERS (39.50 FEET) in total measuring 277.80 SQUARE METERS or 2991 SQUARE FEET bounded on

EAST BY : SURVEY NO. 59, WEST BY : ROAD,
NORTH BY : SITE NO. 74, SOUTH BY : SITE NO. 72.

SD/- MEER HASSAN, Advocate & Notary,
Govt Of India, No. 96, 11TH Cross, Someshwara Nagar, Jayanagar 1st Block, Bengaluru-560011. Mobile : 9343476675

ಕರ್ನಾಟಕ ಸರ್ಕಾರ

ಹಾರಗದ್ದೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಜಿಗಣಿ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ-560105

ಸಂಖ್ಯೆ: ಹಾ.ಗ್ರಾ.ಪಂ. ಸಮಖ್ಯೆ: ಇ-ಟೆ/2026-27 ದಿನಾಂಕ: 26.05.2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(kppp.karnataka.gov.in ಮೂಲಕ ಮಾತ್ರ)

ಹಾರಗದ್ದೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಸಾಮಗ್ರಿಗಳಿಗಾಗಿ ವಾರ್ಷಿಕ ದರ ಒಪ್ಪಂದ ಟೆಂಡರ್ ಮತ್ತು ಜೆಸಿಬಿ ಮತ್ತು ಟ್ರ್ಯಾಕ್ಟರ್ ಸೇವೆಯ ವಾರ್ಷಿಕ ನೇಮಕಾತಿಗಾಗಿ ಆಸಕ್ತ ಸಂಸ್ಥೆಗಳು / ಏಜೆನ್ಸಿಗಳಿಂದ kppp.karnataka.gov.in ವೆಬ್‌ಸೈಟ್‌ನಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತ ಸಂಸ್ಥೆಗಳು/ ಏಜೆನ್ಸಿಗಳು ಕೆಳಗಿನ ಟೆಂಡರ್ ಇಂಡೆಂಟ್ ಸಂಖ್ಯೆಯನ್ನು ಡೌನ್‌ಲೋಡ್ ಮಾಡಿಕೊಂಡು ದಿನಾಂಕ: **03.05.2026** ರಂದು **ಸಂಜೆ 5:00** ರೊಳಗೆ ಇ-ಟೆಂಡರ್‌ನಲ್ಲಿ ಭಾಗವಹಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೇಲಿನ ಕಚೇರಿ ವಿಳಾಸವನ್ನು ಕಚೇರಿ ಸಮಯದಲ್ಲಿ ಸಂಪರ್ಕಿಸಬಹುದು.

ಟೆಂಡರ್ ಇಂಡೆಂಟ್ ಸಂಖ್ಯೆ: RDPR/2026-27/IND14176, 14177, 14178, 14179, 14180 ಮತ್ತು RDPR/2026-27/SE3952

ಸಹಿ/-
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಹಾರಗದ್ದೆ ಗ್ರಾಮ ಪಂಚಾಯಿತಿ.

ವಾಆಸಂ/ವಾಪ್ರ/827/ಕಿರು ಸಾಯ/2026-27

:: ಓದುಗರ ಗಮನಕ್ಕೆ ::
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್

ನೋಂದಣಿ ಕಛೇರಿ: ಗ್ರೇಪ್ ಗಾರ್ಡನ್, ನಂ. 27, 3ನೇ "ಎ" ಕ್ರಾಸ್, 18ನೇ ಮುಖ್ಯ, ಕೋರಮಂಗಲ 6ನೇ ಬ್ಲಾಕ್, ಕೋರಮಂಗಲ, ಬೆಂಗಳೂರು-560095, ಕರ್ನಾಟಕ

ಸಾರ್ವಜನಿಕ ನೋಟಿಸ್

ಚಿನ್ನದ ಹರಾಜು ಮತ್ತು ಬಿಡ್ ಆಹ್ವಾನ ನೋಟಿಸ್

[illegible] ದಿನಾಂಕ: 29.06.2026ರಂದು ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.30ರ ಒಳಗೆ ಮಾರಾಟ ಮಾಡಲಾಗುತ್ತದೆ. [illegible]

[illegible] ಶಾಖೆ: ನಂ. 260/24, [illegible], ಕರ್ನಾಟಕ- 562160

ಕ್ರ.ಸಂ	[illegible]	[illegible]	[illegible]	[illegible]	[illegible]
1	[illegible]	[illegible]	[illegible]	8.76	ರೂ. 1,65,257/-

[illegible] ಶಾಖೆ: ನಂ. 307, [illegible], ಬೆಂಗಳೂರು [illegible] ಕರ್ನಾಟಕ - 560070

ಕ್ರ.ಸಂ	[illegible]	[illegible]	[illegible]	[illegible]	[illegible]
2	[illegible]	1122-[illegible]	[illegible]	10.70	ರೂ. 1,35,811/-

[illegible]

ದಿನಾಂಕ: 27.05.2026, ಸಹಿ/-ಅಧಿಕೃತ ಅಧಿಕಾರಿ, ಉಜ್ಜೀವನ್ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್

ನಗರಸಭಾ ಕಾರ್ಯಾಲಯ, ಸಾಗರ – 577401

Web: www.sagaracity.mrc.gov.in Phone: 08183-226021
Email: ka.sagar.cmc@gmail.com

ನಂ.ನಸಸಾ:ಎಇಇ:ಕಾಮಗಾರಿ:04/2026-27 ದಿನಾಂಕ: 21.05.2026

-ಟೆಂಡರ್ ಪ್ರಕಟಣೆ:- (ಇ-ಪ್ರಕ್ಯೂರ್‌ಮೆಂಟ್ ಮುಖಾಂತರ)

ಎಸ್.ಎಫ್.ಸಿ ವಿಶೇಷ ಅನುದಾನದಡಿಯಲ್ಲಿ ಸಾಗರ ನಗರದಲ್ಲಿ ತಾಲ್ಲೂಕು ರಂಗ ಮಂದಿರ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸಲು KW4 ನಿಯಮಗಳನ್ವಯ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆಯಲ್ಲಿ ಗುತ್ತಿಗೆ ಪರವಾನಿಗೆ ಪಡೆದುಕೊಂಡಿರುವ ಗುತ್ತಿಗೆದಾರರು, ತಮ್ಮ ಕನಿಷ್ಠ ದರವನ್ನು ನಮೂದಿಸಿ ನಿಗದಿಪಡಿಸಿದ ಇಎಂಡಿಯೊಂದಿಗೆ ತಮ್ಮ ಕನಿಷ್ಠ ದರವನ್ನು http://www.kppp.karnataka.gov.in portal ನಲ್ಲಿ ಟೆಂಡರ್ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳನ್ನು ವೆಬ್ ಸೈಟ್ http://www.kppp.karnataka.gov.in ಪಡೆಯಬಹುದಾಗಿದೆ. (1) ಪೂರ್ವ ಬಾವಿ ಬಿಡ್ ಸಭೆ ದಿನಾಂಕ: 25.05.2026ರಂದು ಬೆಳಗ್ಗೆ 10.30 ಘಂಟೆಗೆ ಆಸಕ್ತ ಗುತ್ತಿಗೆದಾರರು ಭಾಗವಹಿಸತಕ್ಕದ್ದು. (2) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 29.06.2026 ಸಂಜೆ 5.30 ಘಂಟೆಯವರೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ:01.07.2026 ಸಂಜೆ 5.30 ಘಂಟೆಯವರೆಗೆ, (4) ಆರ್ಥಿಕ ಬಿಡ್ ಟೆಂಡರ್ ತೆರೆಯುವ ದಿನಾಂಕ 02.07.2026 ಸಂಜೆ 5.30 ಘಂಟೆಗೆ ಅನಿವಾರ್ಯ ಕಾರಣದಿಂದ ಸಾಧ್ಯವಾಗದೇ ಇದ್ದಲ್ಲಿ ಮುಂದಿನ ಕಛೇರಿ ವೇಳೆಯಲ್ಲಿ ತೆರೆಯಲಾಗುವುದು.

ಕ್ರ.ಸಂ. 1. ಇಂಡೆಂಟ್ ನಂ: DMA/2025-26/BD/WORK_INDENT 56660 **ಇ.ಎಂ.ಡಿ ಮೊತ್ತ ರೂ.ಲಕ್ಷಗಳಲ್ಲಿ:** 6.10 **ಅಂದಾಜು ಮೊತ್ತ (ಲಕ್ಷಗಳಲ್ಲಿ):** 480.00

ಷರತ್ತುಗಳು: 1. ಟೆಂಡರ್‌ಗೆ ಸಂಬಂಧಪಟ್ಟಂತೆ ಯಾವುದೇ ತಿದ್ದುಪಡಿ ಹಾಗೂ ಬದಲಾವಣೆಗಳು ಇದ್ದಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್‌ನಲ್ಲಿ ಪ್ರಚುರ ಪಡಿಸಲಾಗುವುದು. 2. ಸರ್ಕಾರದ ನಿಯಮಾವಳಿಯಂತೆ ಜಿ.ಎಸ್.ಟಿಯನ್ನು ಪಾವತಿಸಲಾಗುವುದು. 3. ಹೆಚ್ಚಿನ ವಿವರಗಳನ್ನು ನಗರಸಭೆಯ ವೆಬ್ ಸೈಟ್ http://www.sagaracity.gov.in ನಲ್ಲಿ ಹಾಗೂ ಕಛೇರಿಯ ವೇಳೆಯಲ್ಲಿ ತಾಂತ್ರಿಕ ವಿಭಾಗದಲ್ಲಿ ತಿಳಿದುಕೊಳ್ಳಬಹುದು.

ಸಹಿ/- ಪೌರಾಯುಕ್ತರು ನಗರಸಭೆ ಸಾಗರ

ವಾ.ಸಾ.ಸಂ.ಇ/ಶಿವ[illegible]/26-27/110/05/180

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಮುಖ್ಯ ಅಭಿಯಂತರರವರ ಕಾರ್ಯಾಲಯ,
ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ-580001
ಕಛೇರಿ : 0836-2447090, ಇ-ಮೇಲ್ : kwbcen@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ KPP ಪೋರ್ಟಲ್ ಮುಖಾಂತರ ಮಾತ್ರ)

ಈ ಕೆಳಗಿನ ಕಾಮಗಾರಿಗಳಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಅರ್ಹರಿರುವ ಸಂಸ್ಥೆ/ಗುತ್ತಿಗೆದಾರರಿಂದ KPP ಪೋರ್ಟಲ್ (https://kppp.karnataka.gov.in) ಮೂಲಕ (ದ್ವಿ-ಟೆಂಡರ್ ದಾಖಲೆ ಪದ್ಧತಿಯಲ್ಲಿ) ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:194 ದಿನಾಂಕ : 26-05-2026. 1) DBOT ಮಾದರಿ ಅಡಿಯಲ್ಲಿ ಶಿಗ್ಗಾಂವ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ನಾಗನೂರ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ನೆಗೋಸಿಯೇಷನ್ ಇರುವುದಿಲ್ಲ). INDENT No.KUWSDB/2026-27/WS/WORK_INDENT511.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:195 ದಿನಾಂಕ : 26-05-2026. 2) DBOT ಮಾದರಿ ಅಡಿಯಲ್ಲಿ ಸವಣೂರು ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಮೋತಿ ತಲಾಬ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ನೆಗೋಸಿಯೇಷನ್ ಇರುವುದಿಲ್ಲ). INDENT No.KUWSDB/2026-27/WS/WORK_INDENT512.

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ:196 ದಿನಾಂಕ : 26-05-2026. 3) DBOT ಮಾದರಿ ಅಡಿಯಲ್ಲಿ ಬಂಕಾಪುರ ಪಟ್ಟಣಕ್ಕೆ ಕುಡಿಯುವ ನೀರು ಸರಬರಾಜು ವ್ಯವಸ್ಥೆಗಾಗಿ ಶಿವರಮಲ್ಲಹಳ್ಳಿ ಕೆರೆ ಸುಧಾರಣೆ ಹಾಗೂ ಇತರೆ ಕಾಮಗಾರಿಗಳು. (ಇಡುಗಂಟು ಟೆಂಡರ್-ನೆಗೋಸಿಯೇಷನ್ ಇರುವುದಿಲ್ಲ). INDENT No.KUWSDB/2026-27/WS/WORK_INDENT513. ಹೆಚ್ಚಿನ ವಿವರಗಳಿಗಾಗಿ KPP ಪೋರ್ಟಲ್‌ನಲ್ಲಿ ನೋಡುವುದು ಅಥವಾ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ಸಂಪರ್ಕಿಸಬಹುದು.

ಸಹಿ/- ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ

ವಾ.ಇ.ಸಂ.ಇ/ಧಾರವಾಡ/ಕೆಎಸ್‌ಎಂಸಿಎ/230/2026-27

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಪುಲಕೇಶಿನಗರ ವಿಭಾಗ, ರಾಬರ್ಟ್ಸನ್ ರಸ್ತೆ ಬೆಂಗಳೂರು.

ಸಂಖ್ಯೆ: ಬೆಂಉನಪಾ/ಪುನವಿ/ಟೆಂಡರ್/ಪಿಆರ್/08/2026-27 ದಿನಾಂಕ: 26-05-2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಏಕ ಲಕೋಟೆ ಪದ್ಧತಿ)
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)
ವೆಬ್‌ಸೈಟ್ https://kppp.karnataka.gov.in

ಕಾರ್ಯಪಾಲಕ ಅಭಿಯಂತರರು, ಪುಲಕೇಶಿನಗರ ವಿಭಾಗ, ಬೆಂಉನಪಾ, ಬೆಂಗಳೂರು ಬಿಬಿಎಂಪಿ / ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೆಸ್ / ಎಂಇಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗೆ ಐಟಂ ದರದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ.ಸಂ.	ಕೆಲಸದ ಹೆಸರು / ವರ್ಗ
1.	ಕಾವಲ್ ಬೈರಸಂದ್ರ ಉಪ ವಿಭಾಗದಲ್ಲಿ 2026ರ ಮಾನ್ಸೂನ್ ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿ ಸ್ಥಾಪನೆ (2 ನೇ ಕರೆ). (ಪರಿಶಿಷ್ಟ ಜಾತಿ ವರ್ಗದ ಕಾಮಗಾರಿ). ಅಂದಾಜು ವೆಚ್ಚ (ಲಕ್ಷ ರೂಗಳಲ್ಲಿ): 10.00, ಇಎಂಡಿ (ರೂಗಳಲ್ಲಿ): 12,500/-

ಟೆಂಡರ್‌ನ ಕಾರ್ಯಸೂಚಿ: 1. ಟೆಂಡರ್ ದಾಖಲೆಗಳನ್ನು ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡುವ **ದಿನಾಂಕ: 27-05-2026 ರಿಂದ.** 2. ಪೂರ್ವ ಬಿಡ್ ಸಭೆಯ **ದಿನಾಂಕ: 30-05-2026 ರ ಮಧ್ಯಾಹ್ನ 3:00 ಗಂಟೆಗೆ** ನಡೆಸಲಾಗುವುದು. 3. ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 03-06-2026ರ ಸಂಜೆ 4:00 ಗಂಟೆಯವರೆಗೆ.** 4. ಆರ್ಥಿಕ ಬಿಡ್ ತೆರೆಯುವ **ದಿನಾಂಕ: 04-06-2026 ರ ಸಂಜೆ 4.30 ಗಂಟೆಯ ನಂತರ.**

ಸಹಿ/- ಕಾರ್ಯಪಾಲಕ ಅಭಿಯಂತರರು, ಪುಲಕೇಶಿನಗರ ವಿಭಾಗ, ಬೆಂಉನಪಾ.

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಇಂಜನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇಮಂ.ವಿ.ಟಿ.ಎಸ್.ಡಿ(09ಇ):2026-27:ಟೆ-1 ದಿನಾಂಕ: 25.05.2026

ಟೆಂಡರ್ ಪ್ರಕಟಣೆ / ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)

ಲೆಕ್ಕಶೀರ್ಷಿಕೆ 5054-80-190-0-01-132 ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ – ಬಂಡವಾಳ ವೆಚ್ಚದಡಿ ಇಂಡೆಂಟ್ ನಂ: 36106 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 02.06.2026, ಮತ್ತು ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ** ಇಂಡೆಂಟ್ ನಂ: 36124 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 09.06.2026 ಹಾಗೂ ಲೆಕ್ಕಶೀರ್ಷಿಕೆ: 5054-04-337-0-01-154 ಜಿಲ್ಲಾ ಮುಖ್ಯ ರಸ್ತೆ ಸುಧಾರಣೆಯಡಿ** ಇಂಡೆಂಟ್ ನಂ: 35435 ಕಾಮಗಾರಿಗೆ ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 24.06.2026** ಆಗಿದ್ದು, ಈ ಕಾಮಗಾರಿಗಳಿಗೆ ಈ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ) ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಮೊತ್ತ ರೂ.100.00 ಮತ್ತು ಅಂದಾಜು ಮೊತ್ತ ಗರಿಷ್ಠ ಮೊತ್ತ ರೂ.300.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ KW-3 & KW-4 ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ತಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ (www.kppp.karnataka.gov.in) ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824-2423169.

ಸಹಿ/- ಕಾರ್ಯನಿರ್ವಾಹಕ ಇಂಜಿನಿಯರ್

DIPR/DK/KSMCA/277/26-27 dt.26.05.2026

ಕರ್ನಾಟಕ ಸರಕಾರ

ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ, ಬೆಳಗಾವಿ ವಿಭಾಗ, ಬೆಳಗಾವಿ.

ಸಂಖ್ಯೆ: ಲೋ.ಇ./ಬೆವಿ/ತಾಂಶಾ/ಗುತ್ತಿಗೆ/2026-27/1198 ದಿನಾಂಕ:26.05.2026

-:ಟೆಂಡರ ಅಧಿಸೂಚನೆ (ಕೆ.ಪಿ.ಪಿ.ಪಿ.ನಲ್ಲಿ):-

ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ- 1,2,3 & 4 ರಲ್ಲಿ ಲೆಕ್ಕ ಶೀರ್ಷಿಕೆ: 2025-26 ನೇ ಸಾಲಿನ 5054-ಜಿಲ್ಲಾ ಮುಖ್ಯ ರಸ್ತೆಗಳ ಸುಧಾರಣೆ, 2059-ವಿವಿಧ ಇಲಾಖಾ ಕಟ್ಟಡಗಳ ದುರಸ್ತಿ/ನಿರ್ವಹಣೆ, 5054-ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ ಬಂಡವಾಳ ವೆಚ್ಚ, 3054 ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ, 3054 ರಾಜ್ಯ ಹೆದ್ದಾರಿ ಸೇತುವೆ ನಿರ್ವಹಣೆ, 5054- ರಾಜ್ಯ ಹೆದ್ದಾರಿ ರಸ್ತೆಗಳು ಸುಧಾರಣೆ, 4059-ಮುಖ್ಯ ಮಂತ್ರಿ ಮೂಲಸೌಕರ್ಯ ಬಂಡವಾಳ ವೆಚ್ಚ, 4059-ಎಸ್.ಸಿ/ಟಿ.ಎಸ್.ಪಿ, 4059 ಇಲಾಖಾ ಕಟ್ಟಡಗಳು, 8443-ಠೇವಣಿ ವಂತಿಕೆ ಅಡಿಯಲ್ಲಿ ಸೇರಿ ಒಟ್ಟು 28 ಕಾಮಗಾರಿಗಳಿಗೆ ಗುತ್ತಿಗೆಯನ್ನು ಕರೆಯಲಾಗಿದ್ದು ಕನಿಷ್ಠ ಹಾಗೂ ಗರಿಷ್ಠ ಗುತ್ತಿಗೆಗೆ ಇಟ್ಟ ಅಂದಾಜು ಮೊತ್ತವು ಅನುಕ್ರಮವಾಗಿ ರೂ. 11.66 ಲಕ್ಷಗಳು ಹಾಗೂ ರೂ. 395.48 ಲಕ್ಷಗಳು ಇದ್ದು, ಮುಂಗಡ ಠೇವಣಿ ಮೊತ್ತವು ಕನಿಷ್ಠ ಹಾಗೂ ಗರಿಷ್ಠ ಅನುಕ್ರಮವಾಗಿ ರೂ. 11,700/- ಹಾಗೂ ರೂ. 5,93,300 ಇರುತ್ತದೆ. ಭಾಗ-1:ಟೆಂಡರ ಸ್ವೀಕರಿಸುವ ದಿನಾಂಕ 05.06.2026 ರ ಸಂಜೆ 4.30 ಘಂಟೆಯವರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 06.06.2026 ರ ಸಂಜೆ 4.45 ಘಂಟೆ ನಂತರ ಟೆಂಡರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 08.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ-2:ಟೆಂಡರ ಸ್ವೀಕರಿಸುವ ದಿನಾಂಕ 12.06.2026 ರ ಸಂಜೆ 4.30 ಘಂಟೆಯವರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 15.06.2026 ರ ಸಂಜೆ 4.45 ಘಂಟೆ ನಂತರ, ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 16.06.2026 ಬೆಳಿಗ್ಗೆ 11.00 ಘಂಟೆಗೆ ಭಾಗ-3: ಟೆಂಡರ ಸ್ವೀಕರಿಸುವ ದಿನಾಂಕ 16.06.2026 ರ ಸಂಜೆ 4.30 ಘಂಟೆಯವರೆಗೆ, ಟೆಂಡರ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ 17.06.2026 ರ ಸಂಜೆ 4.45 ಘಂಟೆ ನಂತರ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ 18.06.2026 ಬೆಳಿಗ್ಗೆ 11.00 ಘಂಟೆಗೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಅಂತರ್ ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ದಿನಾಂಕ: 26.05.2026 ರ ನಂತರ ಪಡೆಯಬಹುದು.

ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ ಬೆಳಗಾವಿ ವಿಭಾಗ, ಬೆಳಗಾವಿ.

DIPR/BGM/RO-NO-313/KSMCA/2026-27

pnb Housing Finance Limited — ಘರ್ ಕಿ ಬಾತ್

[illegible]

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
[illegible]	ರೂ. 36,36,986.21 & 10/02/2022	ಭೌತಿಕ ಸ್ವಾಧೀನ	[illegible] 572140	ರೂ. 39,46,000/-	ರೂ. 3,94,600.00	29.06.2026	ರೂ. 10,000	12-06-2026 [illegible]	[illegible]	[illegible]

[illegible] www.pnbhousing.com [illegible] info@bankauctions.in [illegible] 7428193765/9900296507/7022522855/7676930309, [illegible] 18001208800. auction@pnbhousing.com [illegible] www.auction@pnbhousing.com [illegible]

ಸ್ಥಳ: [illegible], ದಿನಾಂಕ: 27.05.2026 ಸಹಿ/-ಅಧಿಕೃತ ಅಧಿಕಾರಿ, ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

pnb Housing Finance Limited — ಘರ್ ಕಿ ಬಾತ್

[illegible]

[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]	[illegible]
[illegible]	ರೂ. 97,87,356 & 07/08/2024	ಭೌತಿಕ ಸ್ವಾಧೀನ	[illegible] 560092 [illegible]	ರೂ. 71,34,000/-	ರೂ. 7,13,400.00	30.06.2026	ರೂ. 20,000	02-06-2026 [illegible]	[illegible]	[illegible]

[illegible] info@bankauctions.in [illegible] 7428193765/9900296507/7022522855/7676930309, [illegible] 18001208800. auction@pnbhousing.com [illegible] www.auction@pnbhousing.com [illegible]

ಸ್ಥಳ: [illegible], ದಿನಾಂಕ: 27.05.2026 ಸಹಿ/-ಅಧಿಕೃತ ಅಧಿಕಾರಿ, ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಸ್ಥಾಪನೆ : 1907
ಆಡಳಿತ ಕಛೇರಿ, ನಂ. 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ : 26678572 : 26600512 : 26609066 : 57765582

ಈ-ಹರಾಜು ಮುಖಾಂತರ ಸ್ಥಿರಾಸ್ತಿ ಸ್ವತ್ತುಗಳ ಮಾರಾಟದ ಸೂಚನೆ

ಸೆಕ್ಯೂರಿಟೈಜೇಷನ್ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ನಿಯಮ 8(6) ನಿಬಂಧನೆಗಳನ್ನು ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಸಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟ ಸೂಚನೆ (ಈ-ಹರಾಜು)

ಸಾರ್ವಜನಿಕರಿಗೆ ಸಾರ್ವಜನಿಕವಾಗಿ ಸೂಚನೆ ಮತ್ತು ನಿರ್ದಿಷ್ಟವಾಗಿ ಸಾಲಗಾರರು(ರು)ಗೆ ಮತ್ತು ಜಾಮೀನುದಾರರು(ರು)ಗೆ ಈ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತು ಭದ್ರತಾ ಸಾಲಗಾರರಿಗೆ ಅಡಮಾನ / ಚಾರ್ಜ್ ಮಾಡಲಾಗಿದೆ. ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯವರಿಂದ ಸಾಂಕೇತಿಕವಾಗಿ/ರಚನಾತ್ಮಕ/ಭೌತಿಕ ಸ್ವಾಧೀನತೆಯನ್ನು ತೆಗೆದುಕೊಳ್ಳಲಾಗಿದೆ. (ವಿವರಗಳನ್ನು ಈ ಕೆಳಗೆ ನೀಡಿರುವ ಕೋಷ್ಟಕದಲ್ಲಿ ತಿಳಿಸಲಾಗಿದೆ.) ಈ ಕೆಳಕಂಡ ಸಾಲಗಳ ವಸೂಲಾತಿಗಾಗಿ ಹಾಗೂ ಮುಂದಿನ ಬಡ್ಡಿ ಮತ್ತು ವೆಚ್ಚಗಳಿಗಾಗಿ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿ ಸ್ವತ್ತು "ಎಲ್ಲಿ ಹೇಗಿದೆಯೋ ಹಾಗೆ", "ಎಲ್ಲಿ ಏನಿದೆಯೋ ಹಾಗೆ", ಮತ್ತು "ಅಲ್ಲಿ ಏನೇ ಇದರ ಹಾಗೆ" ಆಧಾರದ ಮೇಲೆ ದಿನಾಂಕ : 03.07.2026 ರಂದು ಈ ಕೆಳಗೆ ನೀಡಿರುವ ಸಮಯದಲ್ಲಿ ಮಾರಾಟ ಮಾಡಲಾಗುವುದು.

ಮೀಸಲು ಬೆಲೆ ಮತ್ತು ಇಎಂಡಿ ಠೇವಣಿಗಳ ವಿವರಗಳು ಈ ಕೆಳಗಿನಂತಿವೆ : ಇಎಂಡಿ ಡಿಪಾಸಿಟ್ (ಅಂದಾಜು ಸ್ವತ್ತುಗಳಿಗೆ ಅನ್ವಯಿಸುವಂತೆ) ದಿನಾಂಕ: 02.07.2026 ರಂದು ಸಂಜೆ 5:00 ಗಂಟೆಯ ಒಳಗೆ ಆನ್‌ಲೈನ್ ಮೂಲಕ (RTGS/NEFT) ಈ ಕೆಳಗೆ ನಮೂದಿಸಿರುವ ಖಾತೆಯ ಸಂಖ್ಯೆಗೆ ಪಾವತಿಸುವುದು ಅಥವಾ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪರವಾಗಿ DD ಮೂಲಕ ಸಂದಾಯ ಮಾಡಬಹುದಾಗಿದೆ.


ಕ್ರ.ಸ	ಸಾಲಗಾರರ ಹೆಸರು, ವಿಳಾಸ ಮತ್ತು ಶಾಖೆ	ಸ್ಥಿರಾಸ್ತಿಯ ವಿವರಗಳು ಎಲ್ಲೆ ಮತ್ತು ವಿಸ್ತೀರ್ಣ	ಕಾಯ್ದಿಟ್ಟ ಬೆಲೆ	ಇಡಗಂಟು ಠೇವಣಿ ಹಣ (ಇಎಂಡಿ)	ಬ್ಯಾಂಕಿಗೆ ಬರಬೇಕಾದ ಬಾಕಿ ಮೊಬಲಗು	ಹರಾಜು ಸಮಯ ಮತ್ತು ದಿನಾಂಕ
01	ಶ್ರೀ. ನಜೀಬುಲ್ಲಾ ನಂ.10, 8ನೇ ಮುಖ್ಯರಸ್ತೆ, ಪಾದರಾಯನಪುರ, ಬೆಂಗಳೂರು-26. ಶಾಖೆ : ವಿಜಯನಗರ	ಹೊಸ ಪುರಸಭೆ ಸಂಖ್ಯೆ 28/I-3, (ಕೇಂದ್ರ ಭಾಗ ಉತ್ತರ ಸೈಡ್), ಹಿಂದೆ ಪುರಸಭೆ ಸಂಖ್ಯೆ 28/I, ಹಳೆಯ ಸಂಖ್ಯೆ 28, (ಪೂರ್ವ ಭಾಗ), 8ನೇ ಮೈನ್, ಪಾದರಾಯನಪುರ, ಮೈಸೂರು ರಸ್ತೆ, ಬಿಬಿಎಂಪಿ ವಾರ್ಡ್ ಸಂಖ್ಯೆ 44 ಮತ್ತು ಹೊಸ ವಾರ್ಡ್ ಸಂಖ್ಯೆ 137 ರಾಯಪುರಂ, ಪಿಐಡಿ ಸಂಖ್ಯೆ 44-3-28/I-3, ಬೆಂಗಳೂರು. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 15 ಅಡಿ & ಉತ್ತರದಿಂದ ದಕ್ಷಿಣಕ್ಕೆ: 18.3 ಅಡಿ** **ಪೂರ್ವಕ್ಕೆ** : ಶ್ರೀಮತಿ ಹೇಮಾ ಅವರ ಆಸ್ತಿ, **ಪಶ್ಚಿಮಕ್ಕೆ**: 2.6 x 80 ಅಡಿ ಸಾಮಾನ್ಯ ಮಾರ್ಗ, ನಂತರ ಮೊಹಮ್ಮದ್, ಶಫಿವುಲ್ಲಾ ಮತ್ತು ಎ. ಅನ್ವರ್ ಅವರ ಆಸ್ತಿ ಸಂಖ್ಯೆ 28, **ಉತ್ತರಕ್ಕೆ** : ಶ್ರೀ ಮೊಹಮ್ಮದ್ ಆಸಿಫ್ ಅವರಿಗೆ ಸೇರಿದ ಆಸ್ತಿ, **ದಕ್ಷಿಣಕ್ಕೆ**: ಆಸ್ತಿ ಶ್ರೀಮತಿ ವಹೀದಾ ಅವರಿಗೆ ಸೇರಿದ್ದು.	ರೂ. 12,08,000/- (ಪದಗಳಲ್ಲಿ ಹನ್ನೆರಡು ಲಕ್ಷದ ಎಂಟು ಸಾವಿರ ಮಾತ್ರ)	ರೂ. 1,20,800/- (ಪದಗಳಲ್ಲಿ ಒಂದು ಲಕ್ಷದ ಇಪ್ಪತ್ತು ಸಾವಿರದ ಎಂಟುನೂರು ಮಾತ್ರ)	21.05.2026ಕ್ಕೆ ರೂ. 9,13,924/- ಸೂಚನೆ ದಿನಾಂಕ 22.05.2026	03.07.2026 ಬೆಳಗ್ಗೆ 10:00 ರಿಂದ ಬೆಳಗ್ಗೆ 11:00
02	ಶ್ರೀ. ಮೊಹಮ್ಮದ್ ಆಸಿಫ್ ನಂ.10,8ನೇ ಮುಖ್ಯರಸ್ತೆ, ಪಾದರಾಯನಪುರ, ಬೆಂಗಳೂರು-26. ಶಾಖೆ : ವಿಜಯನಗರ	ಹೊಸ ಪುರಸಭೆ ಸಂಖ್ಯೆ 28/I-4, (ಉತ್ತರ ಭಾಗ), ಹಿಂದೆ ಪುರಸಭೆ ಸಂಖ್ಯೆ 28/I, ಹಳೆಯ ಸಂಖ್ಯೆ 28, (ಪೂರ್ವ ಭಾಗ), 8ನೇ ಮುಖ್ಯರಸ್ತೆಯಲ್ಲಿದೆ, ಪಾದರಾಯನಪುರ, ಮೈಸೂರು ರಸ್ತೆ, ಬಿಬಿಎಂಪಿ ವಾರ್ಡ್ ಸಂಖ್ಯೆ 44 ಮತ್ತು ಹೊಸ ವಾರ್ಡ್ ಸಂಖ್ಯೆ 137 ರಾಯಪುರಂ, ಪಿಐಡಿ ನಂ.44-3-28/I-4, ಬೆಂಗಳೂರು. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 15 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 18.3 ಅಡಿ.** **ಪೂರ್ವಕ್ಕೆ** : ಶ್ರೀಮತಿ ಹೇಮಾ ಅವರ ಆಸ್ತಿ, **ಪಶ್ಚಿಮಕ್ಕೆ**: 2.6 x 80 ಅಡಿ ಸಾಮಾನ್ಯ ಮಾರ್ಗ, ನಂತರ ಮೊಹಮ್ಮದ್ ಶಫಿವುಲ್ಲಾ ಮತ್ತು ಎ. ಅನ್ವರ್ ಅವರ ಆಸ್ತಿ ಸಂಖ್ಯೆ 28, **ಉತ್ತರಕ್ಕೆ**: ಕನ್ಸರ್ವೆನ್ಸಿ ಗಲ್ಲಿ, **ದಕ್ಷಿಣಕ್ಕೆ** : ಶ್ರೀ ನಜೀಬುಲ್ಲಾ ಅವರಿಗೆ ಸೇರಿದ ಆಸ್ತಿ.	ರೂ. 12,08,000/- (ಪದಗಳಲ್ಲಿ ಹನ್ನೆರಡು ಲಕ್ಷ ಎಂಟು ಸಾವಿರ ಮಾತ್ರ)	ರೂ. 1,20,800/- (ಪದಗಳಲ್ಲಿ ಒಂದು ಲಕ್ಷ ಇಪ್ಪತ್ತು ಸಾವಿರದ ಎಂಟುನೂರು ಮಾತ್ರ)	21.05.2026 ಕ್ಕೆ ರೂ. 8,46,298/- ಸೂಚನೆ ದಿನಾಂಕ : 22.05.2026	03.07.2026 ಬೆಳಗ್ಗೆ 10:00 ರಿಂದ ಬೆಳಗ್ಗೆ 11:00
03	ಶ್ರೀ. ಮೊಹಮ್ಮದ್ ಅಲ್ತಾಫ್ ಪಾಷಾ ನಂ.10, 8ನೇ ಮುಖ್ಯರಸ್ತೆ, ಪಾದರಾಯನಪುರ, ಬೆಂಗಳೂರು-26. ಶಾಖೆ : ವಿಜಯನಗರ	ಹೊಸ ಪುರಸಭೆ ಸಂಖ್ಯೆ 28/I, ಹಳೆಯ ಸಂಖ್ಯೆ 28, (ಪೂರ್ವ ಭಾಗ), ಮೈಸೂರು ರಸ್ತೆಯ ಪಾದರಾಯನಪುರದ 8ನೇ ಮುಖ್ಯ ರಸ್ತೆಯಲ್ಲಿದ್ದು, ಪ್ರಸ್ತುತ ಇದರ ಅಡಿಯಲ್ಲಿ ಬರುತ್ತಿದೆ. ಬಿಬಿಎಂಪಿ ವಾರ್ಡ್ ಸಂಖ್ಯೆ 44 ಮತ್ತು ರಾಯಪುರಂನ ಹೊಸ ವಾರ್ಡ್ ಸಂಖ್ಯೆ 137 ರ ವ್ಯಾಪ್ತಿ, ಪಿಐಡಿ ಸಂಖ್ಯೆ 44-3-28/I, ಬೆಂಗಳೂರು. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 15 ಅಡಿ & ಉತ್ತರದಿಂದ ದಕ್ಷಿಣಕ್ಕೆ: 25 ಅಡಿ** **ಪೂರ್ವಕ್ಕೆ** : ಆಸ್ತಿ ಶ್ರೀಮತಿ ಹೇಮಾ ಅವರಿಗೆ ಸೇರಿದ್ದು, **ಪಶ್ಚಿಮಕ್ಕೆ**: 2.6 x 80 ಅಡಿ ಸಾಮಾನ್ಯ ಮಾರ್ಗ, ನಂತರ ಆಸ್ತಿ ಬೇರಿಂಗ್ ಸಂಖ್ಯೆ 28, ಮೊಹಮ್ಮದ್ ಶಫಿವುಲ್ಲಾ ಮತ್ತು ಎ. ಅನ್ವರ್ ಅವರಿಗೆ ಸೇರಿದೆ, **ಉತ್ತರಕ್ಕೆ** : ಆಸ್ತಿ ಶ್ರೀಮತಿ ಸಮೀನಾ ಬೇಗಂ ಅವರಿಗೆ ಸೇರಿದ್ದು, **ದಕ್ಷಿಣಕ್ಕೆ**: ಮುಖ್ಯ ರಸ್ತೆ.	ರೂ. 17,42,000/- (ಪದಗಳಲ್ಲಿ ಹದಿನೇಳು ಲಕ್ಷದ ನಲವತ್ತೆರಡು ಸಾವಿರ ಮಾತ್ರ)	ರೂ. 1,74,200/- (ಪದಗಳಲ್ಲಿ ಒಂದು ಲಕ್ಷದ ಎಪ್ಪತ್ತನಾಲ್ಕು ಸಾವಿರದ ಇನ್ನೂರು ಮಾತ್ರ)	21.05.2026 ಕ್ಕೆ ರೂ.9,00,500 ಸೂಚನೆ ದಿನಾಂಕ 22.05.2026	03.07.2026 ಬೆಳಗ್ಗೆ 10:00 ರಿಂದ ಬೆಳಗ್ಗೆ 11:00
04	ಶ್ರೀ. ಗೋವಿಂದರಾಜು. ಕೆ ವಿಳಾಸ: ನಂ.200/ಎ, 2ನೇ ಮುಖ್ಯ ರಸ್ತೆ 6ನೇ ಅಡ್ಡರಸ್ತೆ, ಎಚ್‌ಎಎಲ್ 3ನೇ ಹಂತ, ನ್ಯೂ ತಿಪ್ಪಸಂದ್ರ, ಬೆಂಗಳೂರು-75. ಶಾಖೆ : ಕೋರಮಂಗಲ	ನಂ.618, ಬಿನ್ನಮಂಗಲ ವಿಸ್ತರಣೆ, 2ನೇ ಮುಖ್ಯರಸ್ತೆ, ಇಂದಿರಾನಗರ, 1ನೇ ಹಂತ, ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಗೆ ಒಳಪಟ್ಟಿದೆ. ಹೊಯ್ಸಳ ನಗರದ ವಾರ್ಡ್ ಸಂಖ್ಯೆ 82, ಪಿಐಡಿ ಸಂಖ್ಯೆ 82-1-618, ಬೆಂಗಳೂರು **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ : ಉತ್ತರ ಭಾಗ : 40 ಅಡಿ ದಕ್ಷಿಣ ಭಾಗ : 35+5 ಅಡಿ & ಉತ್ತರದಿಂದ ದಕ್ಷಿಣಕ್ಕೆ : ಪೂರ್ವ ಭಾಗ : 60.6 ಅಡಿ, ಪಶ್ಚಿಮ ಭಾಗ : 26.6+40 ಅಡಿ ಒಟ್ಟು ಅಳತೆ: 1020 ಚದರ ಅಡಿ.** **ಪೂರ್ವಕ್ಕೆ** : ಆಸ್ತಿ ಸಂಖ್ಯೆ 617, **ಪಶ್ಚಿಮಕ್ಕೆ** : ಆಸ್ತಿ ಸಂಖ್ಯೆ 619, **ಉತ್ತರಕ್ಕೆ** : ಆಸ್ತಿ ಸಂಖ್ಯೆ 637, **ದಕ್ಷಿಣಕ್ಕೆ**: ಭಾಗಶಃ ರಸ್ತೆ ಮತ್ತು ಭಾಗಶಃ ಆಸ್ತಿ ಸಂಖ್ಯೆ 618/I.	ರೂ. 1,69,80,000/- (ಪದಗಳಲ್ಲಿ ಒಂದು ಕೋಟಿ ಅರವತ್ತೊಂಭತ್ತು ಲಕ್ಷದ ಎಂಭತ್ತು ಸಾವಿರ ಮಾತ್ರ)	ರೂ. 16,98,000/- (ಪದಗಳಲ್ಲಿ ಹದಿನಾರು ಲಕ್ಷದ ತೊಂಭತ್ತೆಂಟು ಸಾವಿರ ಮಾತ್ರ)	20.05.2026 ಕ್ಕೆ ರೂ. 1,47,98,313/- ಸೂಚನೆ ದಿನಾಂಕ 22.05.2026	03.07.2026 ಬೆಳಗ್ಗೆ 10:00 ರಿಂದ ಬೆಳಗ್ಗೆ 11:00
05	ಶ್ರೀ ಟಿಪ್ಪು ಅನೀಸ್ ನಂ.29, ನರೋಹನ ರಸ್ತೆ, ಎದುರು. ರಸೆಲ್ ಮಾರುಕಟ್ಟೆ, ಶಿವಾಜಿನಗರ, ಬೆಂಗಳೂರು-51. ಶಾಖೆ : ಆರ್.ಟಿ. ನಗರ	ನಂ. 29, ಹಳೆಯ ನಂ. 73, ನ್ಯೂ ಮಾರ್ಕೆಟ್ ರಸ್ತೆಯಲ್ಲಿದೆ, (ಎಂಎಫ್) ನರೋಹ್ನ ರಸ್ತೆ), ಸಿವಿಲ್ ಸ್ಟೇಷನ್, ಪ್ರಸ್ತುತ ಬೆಂಗಳೂರಿನ ವಸಂತನಗರದ ಬಿಬಿಎಂಪಿ ವಾರ್ಡ್ ಸಂಖ್ಯೆ 78, ಪಿಐಡಿ ಸಂಖ್ಯೆ 78-5-29 ರ ವ್ಯಾಪ್ತಿಗೆ ಬರುತ್ತದೆ. **ಅಳತೆ: ಪೂರ್ವದಿಂದ ಪಶ್ಚಿಮಕ್ಕೆ: 44 ಅಡಿ & ಉತ್ತರದಿಂದ ದಕ್ಷಿಣಕ್ಕೆ: 21 ಅಡಿ** **ಪೂರ್ವಕ್ಕೆ**: ಹೊಸ ಮಾರುಕಟ್ಟೆ ರಸ್ತೆ, **ಪಶ್ಚಿಮಕ್ಕೆ** : ಆಸ್ತಿ ಸಂಖ್ಯೆ 03 (ಹಿಂದೆ ಹಾಜಿ ಲಾಲಿಯಾ ಅವರ ಆಸ್ತಿ) ಹೊಂದಿರುವ ಭಾಗ, **ಉತ್ತರಕ್ಕೆ**: ಶಿವರಾಮಯ್ಯನ ಅಂಗಡಿ, **ದಕ್ಷಿಣಕ್ಕೆ**: ಎಸ್ ಅಬ್ದುಲ್ ಅಜೀಜ್ ಸಾಹೇಬ್ ಅವರ ಆಸ್ತಿ.	ರೂ. 87,00,000/- (ಪದಗಳಲ್ಲಿ ಎಂಭತ್ತೇಳು ಲಕ್ಷ ಮಾತ್ರ)	ರೂ. 8,70,000/- (ಪದಗಳಲ್ಲಿ ಎಂಟು ಲಕ್ಷದ ಎಪ್ಪತ್ತು ಸಾವಿರ ಮಾತ್ರ)	21.05.2026 ಕ್ಕೆ ರೂ. 95,06,542/- ಸೂಚನೆ ದಿನಾಂಕ 22.05.2026	03.07.2026 ಬೆಳಗ್ಗೆ 10:00 ಗೆ ಬೆಳಗ್ಗೆ 11:00
06	ಶ್ರೀಮತಿ ರಶ್ಮಿ. ಎಸ್ ನಂ.4, 1ನೇ ಕ್ರಾಸ್, ಸರ್ವೀಸ್ ಕಾಲೋನಿ, ಚೋಳನಾಯಕನಹಳ್ಳಿ, ಆರ್‌ಟಿ ನಗರ, ಬೆಂಗಳೂರು-32. ಶಾಖೆ : ಆರ್.ಟಿ. ನಗರ	ಹೊಸ ಪುರಸಭೆ ನಂ.66/7, ಇ-ಪಿಐಡಿ ನಂ. 7403305968, ಹಳೆ ಪಿಐಡಿ ನಂ.96-239-66/7, ಖಾನೇಶುಮಾರಿ ನಂ.73/173/2, ಪ್ರಸ್ತುತ ಸಂಖ್ಯೆ 73/66-7, ಚೋಳನಾಯಕನಹಳ್ಳಿ, ಆರ್‌ಟಿ ನಗರ ಉತ್ತರ, ಜಂಬುಲಿಂಗೇಶ್ವರ ಟಿ.ಸಿ.ಗಣ ಪೋಸ್ಟ್, ಬೆಂಗಳೂರು ಬಿಬಿಎಂಪಿ ವಾರ್ಡ್ ಲಾಯ್‌ಲೌಟ್‌ನಲ್ಲಿ ನೆಲೆಗೊಂಡಿದೆ. ನಂ. 21 ಹೆಬ್ಬಾಳ, ಬೆಂಗಳೂರು-32. **ಪೂರ್ವದಿಂದ ಪಶ್ಚಿಮಕ್ಕೆ: 17 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 75 ಅಡಿ.** **ಪೂರ್ವಕ್ಕೆ** : ಆಸ್ತಿ ಬಾಬು ಎಂ ಅವರಿಗೆ ಸೇರಿದೆ, **ಪಶ್ಚಿಮಕ್ಕೆ** : ಆಸ್ತಿ ನಾರಾಯಣಸ್ವಾಮಿ ಅವರಿಗೆ ಸೇರಿದ್ದು, **ಉತ್ತರಕ್ಕೆ**: ವಿ.ಪಿ. ರಸ್ತೆ, **ದಕ್ಷಿಣಕ್ಕೆ** : ಆಸ್ತಿ ಗೋಪ್ಪಪ್ಪ ಅವರಿಗೆ ಸೇರಿದ್ದು.	ರೂ. 85,00,000/- (ಪದಗಳಲ್ಲಿ ಎಂಬತ್ತೈದು ಲಕ್ಷ ಮಾತ್ರ)	ರೂ. 8,50,000/- (ಪದಗಳಲ್ಲಿ ಎಂಟು ಲಕ್ಷ ಐವತ್ತು ಸಾವಿರ ಮಾತ್ರ)	21.05.2026 ಕ್ಕೆ ರೂ. 67,14,837/- ಸೂಚನೆ ದಿನಾಂಕ 22.05.2026	03.07.2026 ಬೆಳಗ್ಗೆ 10:00 ರಿಂದ ಬೆಳಗ್ಗೆ 11:00

ತಪಾಸಣೆಯ ದಿನಾಂಕ ಮತ್ತು ಸಮಯ : 01.07.2026 – ಬೆಳಗ್ಗೆ 10:00 ರಿಂದ ಸಂಜೆ 5:00 ರವರೆಗೆ.	ಬ್ಯಾಂಕಿನ ಹೆಸರು ಮತ್ತು ಖಾತೆಯ ವಿವರಗಳು (ಇಎಂಡಿ ಪಾವತಿಗಾಗಿ) ಬ್ಯಾಂಕಿನ ಹೆಸರು: ಇಂಡಸ್‌ಇಂಡ್ ಬ್ಯಾಂಕ್
ಇಎಂಡಿ ಠೇವಣಿ ಪಾವತಿಯ ಕೊನೆಯ ದಿನಾಂಕ : 02.07.2026, ಸಂಜೆ 5:00 ರ ವರೆಗೆ	ಶಾಖೆ ಹೆಸರು : ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಬಿಡ್ ಗುಣಾಂಕ : ರೂ. 50,000/-	ಪ್ರಧಾನ ಕಛೇರಿ ಖಾತೆ ಸಂಖ್ಯೆ : 000220105013061, IFSC ಕೋಡ್ : INDB0BCCB02

ಸಾಲಗಾರರು/ ಅಡಮಾನದಾರರ ಗಮನಕ್ಕೆ ನಿಬಂಧನೆಗಳ ಉಪ-ವಿಭಾಗ (8) ರ ಸೆಕ್ಷನ್ 13ರ ಕಾಯಿದೆಯಲ್ಲಿ ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ ಭದ್ರತಾ ಸ್ವತ್ತುಗಳನ್ನು ಬಿಡಿಸಿಕೊಳ್ಳಲು ತಿಳಿಸಲಾಗಿದೆ. (ಈ ಪ್ರಕಟಣೆಯನ್ನು ನಿಯಮ (8) ಉಪನಿಯಮ (6) ಸೆಕ್ಯೂರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ನಿಯಮ 2002ರಡಿಯಲ್ಲಿ ಸಾಲಗಾರರಿಗೆ ನೀಡುವ ಪ್ರಕಟಣೆ ಎಂದು ಪರಿಗಣಿಸತಕ್ಕದ್ದು) ಮಾರಾಟದ ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ, ದಯವಿಟ್ಟು ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ವೆಬ್‌ಸೈಟ್ ನಲ್ಲಿನ ಲಿಂಕನ್ನು ನೋಡಿ ಅಂದರೆ, " **ಅಡಮಾನ ಸ್ವತ್ತುಗಳ ಮಾರಾಟ** " ಶೀರ್ಷಿಕೆಯ ಅಡಿಯಲ್ಲಿ www.bccbl.co.in, ಅನ್ನು ನೋಡಿ. ಈ- ಹರಾಜನ್ನು 05 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ **ದಿನಾಂಕ: 03.07.2026 ರಂದು ಬೆಳಗ್ಗೆ : 10.00 ರಿಂದ 11.00 ರವರೆಗೆ** https://bankauctions.in ಪೋರ್ಟಲ್ ಮೂಲಕ ನಡೆಸಲಾಗುವುದು. ಉದ್ದೇಶಿತ ಬಿಡ್‌ದಾರರು ತಮ್ಮ ಹೆಸರನ್ನು https://bankauctions.in ನಲ್ಲಿ ನೋಂದಾಯಿಸಿಕೊಂಡು ಯೂಸರ್ ಐಡಿ ಮತ್ತು ಪಾಸ್‌ವರ್ಡನ್ನು ಉಚಿತವಾಗಿ ಪಡೆಯಬಹುದು ಮತ್ತು **E-auction (tentatively on 02.07.2026) from M/s 4 Closure, Mr. Prakash Reddy ,Varun. B, No.22, 5th Cross, Gurumahal Extension, Opp. Indian Hotel, K.G. Halli, Jalahalli (West), Bengaluru-560015, Mobile No: 8142000064,8142000809, E-mail: prakash@bankauctions.in & karnataka@bankauctions.in** ಹೆಚ್ಚಿನ ಮಾಹಿತಿಗಾಗಿ : **recovery@bccbl.co.in Mobile Number : 080-26600512, 26609066.**

ದಿನಾಂಕ: 26.05.2026
ಸ್ಥಳ: ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ- ಆಪರೇಟಿವ್ ಬ್ಯಾಂಕ್ ಲಿಮಿಟೆಡ್





ನಮ್ಮೆಲ್ಲರನ್ನೂ ಪ್ರೀತಿಯಿಂದ ತಿದ್ದಿ ತೀಡಿ ಬೆಳೆಸಿದ, ತಮ್ಮ ಬದುಕಿನ ಉಜ್ವಲ ಉದಾಹರಣೆಯಿಂದ ನಮಗೆ ಆದರ್ಶವಾಗಿದ್ದ ಶ್ರೇಷ್ಠ ವಿದ್ವಾಂಸ, ಸಂಘಟಕ, ಲೇಖಕ, ಬೌದ್ಧಿಕ ಮಹಾಮೇರು, ಸಂವೇದನೆಯ ಉನ್ನತ ಮಾದರಿ ಮಾನ್ಯ ಹೊ. ವೆ. ಶೇಷಾದ್ರಿಗಳ ದಿವ್ಯ ಸ್ಮೃತಿಗೆ ಅವರ ಜನ್ಮ ಶತಾಬ್ದಿಯಂದು ಶ್ರದ್ಧಾಭಕ್ತಿಗಳ ಸಹಿತ ಶತ ಶತ ನಮನಗಳು. ಅವರ ದಯಾಮಯ ಕೃಪೆ ನನ್ನ ಮೇಲಿರಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

■ **ದತ್ತಾತ್ರೇಯ ಹೊಸಬಾಳೆ,** ಸರಕಾರ್ಯವಾಹ
ರಾಷ್ಟ್ರೀಯ ಸ್ವಯಂಸೇವಕ ಸಂಘ



ನನಗೆ ಹೊ.ವೆ. ಶೇಷಾದ್ರಿ ಅವರ ಬಗ್ಗೆ ಗೌರವ, ಅಭಿಮಾನ ಇರುವುದು ಶೋಷಿತ ವರ್ಗಗಳ ಬಗ್ಗೆ ಅವರಿಗಿದ್ದ ಕಳಕಳಿಗಾಗಿ. ಈ ವರ್ಗಗಳ ಉನ್ನತಿಯ ಬಗ್ಗೆ ಎಲ್ಲಾ ಮಗ್ಗಲುಗಳಿಂದ ಅವರು ಚಿಂತನೆ ಮಾಡಿದ್ದರು. ಆರ್ಥಿಕ ಅಭಿವೃದ್ಧಿಯ ಜೊತೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಉನ್ನತಿಯ ಮಹತ್ವವನ್ನು ತುಂಬಾ ಚೆನ್ನಾಗಿ ತಿಳಿದು ಕೊಂಡಿದ್ದರು. ಅದನ್ನೇ ಅವರು ಪ್ರತಿಪಾದಿಸುತ್ತಿದ್ದರು. ಅವರು ಭಾರತೀಯ ಸಂಸ್ಕೃತಿಯ ಉದಾರವಾದಿ ಹಾಗೂ ಮಾನವತಾವಾದಿ ಚಿಂತನೆಗಳ ಪ್ರತಿರೂಪವಾಗಿದ್ದರು. ನಮ್ಮ ಸಂಸ್ಕೃತಿಯಲ್ಲಿರುವ ಉದಾರವಾದಿ ಚಿಂತನೆಗಳನ್ನು ಪುನರುಜ್ಜೀವನಗೊಳಿಸುವುದೇ ಶೋಷಿತ ವರ್ಗದವರಿಗೆ ನೀಡುವ ಒಂದು ದೊಡ್ಡ ಶಕ್ತಿಯಾಗಿದೆ. ಈ ವಿಶಿಷ್ಟ ಚಿಂತನೆಯನ್ನು ನಾನು ಕಲಿತಿದ್ದು ಶೇಷಾದ್ರಿಯವರಿಂದ. ಅವರ ನೆನಪು ಎಂದೆಂದೂ ಹಸಿರಾಗಿರಲಿ, ಅವರ ವಿಚಾರಗಳು ಸದಾ ಬೆಳಕಾಗಿರಲಿ.

■ **ಡಾ. ಸಿದ್ಧಲಿಂಗಯ್ಯ,** ಸಾಹಿತಿ (ಶೇಷಾದ್ರಿ ಅವರ ಜೀವನದರ್ಶನ ಕೃತಿ ಧ್ಯೇಯಯಾತ್ರಿ ಪುಸ್ತಕದ ಬೆನ್ನುಡಿಯಿಂದ)

ರಾಷ್ಟ್ರೀಯ ಸ್ವಯಂಸೇವಕ ಸಂಘ(ಸಂಘ)ದ ಜ್ಯೇಷ್ಠ ಪ್ರಚಾರಕ, ಅಪ್ರತಿಮ ಸಂಘಟಕ, ಮೇರು ಚಿಂತಕ, ಸಿದ್ಧಹಸ್ತ ಲೇಖಕ ಹೊ. ವೆ. ಶೇಷಾದ್ರಿ ಅವರ ಜನ್ಮ ಶತಾಬ್ದಿ. ಸೃಜನಶೀಲ, ಸಂವೇದನಾಶೀಲ, ಸ್ಥಿತಪ್ರಜ್ಞ ವ್ಯಕ್ತಿತ್ವದ ಶೇಷಾದ್ರಿ ಅವರು ವಿದ್ವಾಂಸರದೂ ಹೌದು. ಅವರ ಜನ್ಮ ಶತಮಾನೋತ್ಸವ ಸಂದರ್ಭದಲ್ಲಿ ಅವರ ಕುರಿತಾದ ಸ್ಮರಣೆ ಇಲ್ಲಿದೆ.



ಜ್ಯೇಷ್ಠ ಪ್ರಚಾರಕ ಹೊ.ವೆ.ಶೇಷಾದ್ರಿ ಶತಸಂಭ್ರಮ



ಭಾರತೀಯ ವೈಚಾರಿಕ ಪ್ರಜ್ಞೆಯ ಅಸಾಮಾನ್ಯ ಅಧ್ವರ್ಯು

▸ **ಮಂಜುನಾಥ ಅಜ್ಜಂಪುರ, ಅಂಕಣಕಾರರು**



ಕಳೆದ ಒಂದೆರಡು ಶತಮಾನಗಳ ಅಂಧಕಾರದ ಕಾಲಘಟ್ಟದಲ್ಲಿ, ಬ್ರಿಟಿಷರು – ಮೆಕಾಲೆವಾದಿಗಳು – ಜಿಹಾದಿಗಳು – ಮಿಷನರಿಗಳು, ಭಾರತದ ಅಸ್ಮಿತೆ – ಆತ್ಮಾಭಿಮಾನಗಳನ್ನೇ ನಾಶ ಮಾಡಿಬಿಟ್ಟರು. ಭಾರತೀಯ ಕೃಷಿ, ಉದ್ಯಮ ಮತ್ತು ಶಿಕ್ಷಣ ವ್ಯವಸ್ಥೆಯನ್ನು ಬ್ರಿಟಿಷರು ಅಷ್ಟರಲ್ಲಿಯೇ ಬುಡಮೇಲು ಮಾಡಿದ್ದರು. ಅನೇಕ ದೇಶಗಳಿಂದ ವಿದ್ಯಾರ್ಥಿಗಳು ಇಲ್ಲಿನ ವಿಶ್ವವಿದ್ಯಾಲಯಗಳಿಗೆ ವಿದ್ಯಾರ್ಜನೆಗಾಗಿ ಬರುತ್ತಿದ್ದ ಕಾಲ ಹೋಗಿ, ಎಲ್ಲ ಭಾರತೀಯರೂ ನಿರಕ್ಷರಕುಕ್ಷಿಗಳಾಗಿಬಿಟ್ಟರು. ಉದ್ಯಮ, ತಂತ್ರಜ್ಞಾನಗಳನ್ನು ಇಲ್ಲಿಂದ ವಿದೇಶೀಯರು ಕೊಂಡೊಯ್ಯುತ್ತಿದ್ದ ಕಾಲ ಹೋಗಿ, ನಮ್ಮ ಜನರೇ ಅವಿವೇಕಿ ದಿಕ್ಕುಗೇಡಿಗಳಾಗಿಹೋದರು. ವಿದೇಶೀಯರಿಗೂ ಉಚಿತ ಅನ್ನ – ವಿದ್ಯೆ ನೀಡುತ್ತಿದ್ದ ಈ ದೇಶವು ಭಿಕ್ಷುಕರ, ದರಿದ್ರರ, ರೋಗಿಷ್ಠರ ನಾಡಾಗಿಹೋಯಿತು. ಇಷ್ಟು ಸಾಲದೆಂದು ಬ್ರಿಟಿಷರು ಮತ್ತು ಅವರ ದುಷ್ಟವಾರಸಿಕೆಯವರು, ತಮ್ಮ ಪಠ್ಯಪುಸ್ತಕಗಳ ಮೂಲಕ ನಮ್ಮದೊಂದು ದೇಶವೇ ಅಲ್ಲ, ನಮ್ಮದು ಒಂದು ಸಂಸ್ಕೃತಿಯೂ ಅಲ್ಲ ಎನ್ನುವ ಪ್ರಥೆಯನ್ನೇ ನಮ್ಮ ತಲೆಗೆ ತುಂಬಿದರು.

ಡಾ. ಕೇಶವ ಬಲಿರಾಮ್ ಹೆಡಗೆವಾರ್ ಅವರು 1925ರಲ್ಲಿ ಹಿಂದು ಸಂಘಟನೆಗಾಗಿ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಪ್ರಾರಂಭಿಸಿದ ಪರ್ವಕಾಲದಲ್ಲಿ ಧರ್ಮ ಮತ್ತು ಹಿಂದು ಪದಗಳ ವ್ಯಾಖ್ಯಾನವು ಸಹ ಒಂದು ಸವಾಲೇ ಆಗಿತ್ತು. ಈ ವ್ಯಾಖ್ಯಾನವು ಇಂದಿಗೂ ಒಂದು ಸಮಸ್ಯೆಯೇ ಆಗಿದೆ, ಸವಾಲಾಗಿಯೇ ಉಳಿದಿದೆ. ಅನಂತರದ ಮುಖ್ಯಸ್ಥರಾದ ಗುರೂಜಿ ಮಾಧವ ಸದಾಶಿವ ಗೋಲ್ವಲ್ಕರ್ ಅವರು ಬಹಳ ದೊಡ್ಡ ವಿದ್ವಾಂಸರು. ಭಾರತೀಯ ಗುರುಕುಲಗಳು ನಾಶವಾಗಿ, 19 ಮತ್ತು 20ನೆಯ ಶತಮಾನಗಳಲ್ಲಿ ಪ್ರಕಟವಾದ ಅಪ–ವ್ಯಾಖ್ಯಾನದ ಇಂಗ್ಲಿಷ್ ಗ್ರಂಥಗಳನ್ನು ಸೋಸಿ, ಭಾರತೀಯತೆಯ ಸತ್ವದ ಬಂಗಾರವನ್ನು ತೆಗೆಯಬೇಕಿತ್ತು. ಕಾಲದ ಅಗತ್ಯವಾಗಿ, ಅಪಾರ ಚಿಂತನ – ಮಂಥನಗಳಿಂದ ಸೂಕ್ತ ವ್ಯಾಖ್ಯಾನ–ನವನೀತದ ಸೃಷ್ಟಿಯಾಗಬೇಕಿತ್ತು.

ನಿಜ. ಸನಾತನ ಧರ್ಮ ಮತ್ತು ಹಿಂದು ಸಮಾಜಗಳನ್ನು ಉಳಿಸಲು ಬೆಳೆಸಲು ಚಿಂತನೆಯ ಒಂದು ಅಧಿಕೃತ ಅಧಿಕರಣವು ಅವಶ್ಯಕವೂ ಆಗಿತ್ತು. ಗುರೂಜಿ ಅವರ ಹಿಂದೀ ಭಾಷೆಯ ಉಪನ್ಯಾಸಗಳೂ ಸೇರಿದಂತೆ, ಅವರ ಅಮೂಲ್ಯ ಚಿಂತನೆಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸಿ ಅತಿಮಹತ್ವದ Bunch of Thoughts ಗ್ರಂಥವನ್ನು 1966ರಲ್ಲಿ ಹೊರತರಲಾಯಿತು. ಈ ಸಾಗರೋಪಮ ಸಾಹಿತ್ಯ–ಸಾಹಸದ ಹಿಂದೆ ಜ್ಞಾನಿ, ವಿದ್ವಾಂಸ, ಲೇಖಕ, ಅಂಕಣಕಾರ, ಚಿಂತಕ ಹೊ.ವೆ.ಶೇಷಾದ್ರಿ ಅವರ ಕಠಿಣತಮ ಪರಿಶ್ರಮವಿತ್ತು. ಮುಂದೆ ಈ ಗ್ರಂಥವನ್ನು ಕನ್ನಡಕ್ಕೆ ತಂದಾಗಲೂ (ಚಿಂತನಗಂಗಾ) ಅವರದ್ದೇ ಪರಿಶ್ರಮ–ಪರಿಪಾಕ. ಹತ್ತಾರು ಸಹಸ್ರ ವರ್ಷಗಳ ಅತ್ಯದ್ಭುತ ಧಾರ್ಮಿಕ ಪರಂಪರೆಯನ್ನು ಮತ್ತು ಅದನ್ನು ಉಳಿಸಿ ಬೆಳೆಸುವ ಚಿಂತನೆಗಳನ್ನು ಗ್ರಂಥವೊಂದರಲ್ಲಿ ಹಿಡಿದಿಡುವುದು ಸಾಮಾನ್ಯ ಕೆಲಸವಲ್ಲ.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಸರಕಾರ್ಯವಾಹ ಸ್ಥಾನದವರೆಗಿನ ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಿ, ಜೊತೆಜೊತೆಯಲ್ಲಿಯೇ ತಮ್ಮ ಬರೆಹಗಳಿಂದ, ಉಪನ್ಯಾಸಗಳಿಂದ ಹಿಂದು ಸಮಾಜಕ್ಕೆ ಮಾರ್ಗದರ್ಶನ ನೀಡಿದ ಶೇಷಾದ್ರಿ ಅವರದ್ದು ಅನುಪಮ ಸಾಧನೆ. ಆರು ದಶಕಗಳ ಹಿಂದಿನಿಂದಲೇ ಅವರ ಅಂಕಣಗಳನ್ನು, ಬರೆಹಗಳನ್ನು ಓದುತ್ತ ಬೆಳೆದ ನನಗೆ ಅವರೊಂದು ವಿಸ್ಮಯ. ಅವರ ಹರಿತವಾದ ಭಾಷೆ, ವ್ಯಂಗ್ಯ, ಅವರು ನೀಡುತ್ತಿದ್ದ ಉದಾಹರಣೆಗಳು, ಅವರ ಉಲ್ಲೇಖಗಳು ಬಹಳ ಪರಿಣಾಮಕಾರಿಯಾಗಿರುತ್ತಿದ್ದವು. ಅವರ ಅಧ್ಯಯನ ವೈಶಾಲ್ಯವೂ ವಿಸ್ತೃತ ಆಯಾಮದ್ದು.

ಅಷ್ಟು ಹಿಂದೆಯೇ, ಅಂಕಣಗಳಿಗೆ ಅವರಂತೆ ಶೀರ್ಷಿಕೆಗಳನ್ನು ಕೊಟ್ಟವರೂ, ಅವರಂತೆ ಭಾಷೆಯನ್ನು ಬಳಸಿದವರೂ ಯಾರೂ ಇಲ್ಲ, ಅವರೇ ಮೊದಲಿಗರು:

''ಶ್ರದ್ಧಾಂಜಲಿಯೋ, ತಿಲಾಂಜಲಿಯೋ ''
''ಬರಲಿನ್ನು ಸಾಮಾನ್ಯರ ಯುಗ''
''ಅಮ್ಮಾ, ಬಾಗಿಲು ತೆಗಿ''
''ಈ ಪರಿಯ ಮಹಿಮೆ ಇನ್ನಾವ ಶಬ್ದದೊಳು ಕಾಣೆ''
''ಅಗ್ಗದ ಆಸೆಗೆ ಗೊಬ್ಬರ ಕೊಂಡರು''

ಅದು 1960ರ ದಶಕ ಎಂಬುದನ್ನು ಕಣ್ಮುಂದೆ ತಂದುಕೊಂಡಾಗ ಶೇಷಾದ್ರಿಗಳ ಕಥನ–ವೈಶಿಷ್ಟ್ಯದ ಅನುಭೂತಿ ನಮ್ಮದಾಗುತ್ತದೆ. ದೇಶವಿಭಜನೆಯ ನಿಜ–ಇತಿಹಾಸವೇ ಅಪರಿಚಿತವಾಗಿ ಹೋಗಿದ್ದಾಗ ಅವರು ಬರೆದ ಆ ಕಾಳರಾತ್ರಿಯ ಪ್ರಶ್ನೆ ಮತ್ತು ದೇಶವಿಭಜನೆಯ ದುರಂತ ಕಥೆ, ಇಂಗ್ಲಿಷಿನಲ್ಲಿ ಬರೆದ The Tragic Story of Partition ಗ್ರಂಥಗಳು ಸಾಹಿತ್ಯ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ತಲ್ಲಣವನ್ನೇ ಹುಟ್ಟಿಸಿದವು. ಬಹಳ ದೊಡ್ಡ ಲೇಖಕರಾದ ಸೀತಾರಾಮ ಗೋಯಲ್, ಅರುಣ್ ಶೌರಿ ಮುಂತಾದವರು ಸಹ ಈ ಮಹತ್ಕೃತಿಗಳ ಉಲ್ಲೇಖವನ್ನು ಮಾಡಿದ್ದಾರೆ.

1975ರ ಕರಾಳ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ, ಅನ್ಯಾಯಗಳ ಬಗೆಗೆ ಅವರು ಸಂಪಾದಿಸಿದ ಭುಗಿಲು (ಪ್ರಕಟಣೆ 1977) ಅಪರೂಪದ ಸಾಕ್ಷ್ಯಾಧಾರಗಳ ದಾಖಲೆಯ ಕೃತಿಯೇ ಆಗಿದೆ. ಇಂಗ್ಲಿಷ್, ಹಿಂದೀ ಮತ್ತಿತರ ಭಾಷೆಗಳಲ್ಲಿ ತುರ್ತುಪರಿಸ್ಥಿತಿಯ ಅತಿರೇಕಗಳ ಬಗೆಗೆ ಅಕ್ಷರಶಃ ನೂರಾರು ಗ್ರಂಥಗಳು ಪ್ರಕಟವಾದವು. ಭುಗಿಲು ಕರ್ನಾಟಕದಲ್ಲಿ, ಕನ್ನಡದಲ್ಲಿ ಕಾರಣಾಂತರದಿಂದ ಏಕಮೇವ ಆಗಿಹೋಯಿತು.

ಅಸ್ಸಾಂ ಎಲ್ಲಿದೆ ಎಂಬುದೇ ಬಹಳ ಜನರಿಗೆ ಗೊತ್ತಿರಲಿಲ್ಲ, ಎನ್ನುವ ಕಾಲಘಟ್ಟದಲ್ಲಿ ಶೇಷಾದ್ರಿ ಅವರ ಅಸ್ಸಾಮಿನ ಆರ್ತಸ್ವರ (1980) ಅಲ್ಲಿನ ಬಹು–ಆಯಾಮದ ಸಮಸ್ಯೆಗಳ ಚಿತ್ರಣ ನೀಡಿತು. ಮತಾಂತರವೆಂದರೆ ರಾಷ್ಟ್ರಾಂತರ ಎಂದು ಎಚ್ಚರಿಸಿದ ಅವರ ಮೀನಾಕ್ಷಿಪುರಂ, ಒಂದು ಎಚ್ಚರಿಕೆ (1981) ಆ ಕುರಿತ ಒಂದು ಸಾಮಾಜಿಕ – ಚಾರಿತ್ರಿಕ ಪುರಾವೆಯೂ ಆಗಿದೆ.

ಶೇಷಾದ್ರಿಗಳ ನಿಧನಾನಂತರ ಅವರ ಜೀವನದರ್ಶನ ಕೃತಿ ಧ್ಯೇಯಯಾತ್ರಿ



ರಚಿಸುವಾಗ ನನಗೆ ಅಚ್ಚರಿಯ ಅಪೂರ್ವಾನುಭವ. ಅಂತಹ ಧ್ಯೇಯಸಮರ್ಪಿತ ಮಹಾಚೇತನಗಳ ಜೀವನದಲ್ಲಿ ಸಾಮಾನ್ಯರ ಜೀವನದಲ್ಲಿ ನಾವು ಕಾಣುವ ಸಾಮಾನ್ಯ ಅನುಭವಗಳೇ ಇರುವುದಿಲ್ಲ, ಎಲ್ಲವೂ ಸಂಘ, ಹಿಂದು ಸಮಾಜ, ಸನಾತನ ಧರ್ಮ, ರಾಷ್ಟ್ರಜೀವನ, ಇತ್ಯಾದಿ ಧ್ಯೇಯಗಳ ಪರಿಧಿಯಲ್ಲಿಯೇ ಇರುತ್ತವೆ (ಎಷ್ಟೆಂದರೆ, ನನ್ನ ಕಿಡಿಗೇಡಿ ಬಾಲ್ಯಸ್ನೇಹಿತರು ಧ್ಯೇಯಯಾತ್ರಿ ಕೃತಿಯಲ್ಲಿ ಶೇಷಾದ್ರಿ ಅವರ ವಿಷಯವನ್ನೇ ಏಕೆ ಬರೆದಿಲ್ಲ ಎಂದು ಹಾಸ್ಯ ಮಾಡುತ್ತಿದ್ದರು).

* * * * * *

ಸುಮಾರು ಮೂರು ದಶಕಗಳ ಹಿಂದೆ ಶೇಷಾದ್ರಿ ಅವರು ಶಿವಮೊಗ್ಗಕ್ಕೆ ಬಂದಿದ್ದರು. ವೃತ್ತಿನಿಮಿತ್ತ ನಾನಾಗ ಶಿವಮೊಗ್ಗದಲ್ಲಿದ್ದೆ ಮತ್ತು ಸಂಘದ ಸಂಪರ್ಕ ತುಂಬಾ ಕಡಿಮೆಯಾಗಿಹೋಗಿತ್ತು. 1974ರ ದಾಂಡೇಲಿಯ ಸಂಘ ಶಿಕ್ಷಾ ವರ್ಗದ ಅನಂತರ ಅವರೊಂದಿಗೆ ವಿಸ್ತೃತವಾದ ಚರ್ಚೆ ಸಾಧ್ಯವಾಗಿರಲಿಲ್ಲ, ಆದರೂ, ಶಿವಮೊಗ್ಗದಲ್ಲಿ ಅವರೊಂದಿಗೆ ಒಂದಿಷ್ಟು ಮಾತನಾಡುವ ಮತ್ತು ಪ್ರಶ್ನೆ ಕೇಳುವ ಅವಕಾಶ ಸಿಕ್ಕಿತ್ತು.

ಜಾತಿ, ಉಪಜಾತಿ, ಜಾತೀಯತೆ, ಜಾತಿವಿನಾಶ ಆಂದೋಲನ, ಮತಾಂತರ, ಮರಳಿ ಮಾತೃಧರ್ಮಕ್ಕೆ ಅಭಿಯಾನ, ಮತೀಯ ಆಕ್ರಮಣಕಾರೀ ದುಃಶಕ್ತಿಗಳು ದೇಶಗಳ ಜನಸಂಖ್ಯಾ ಸಮತೋಲನವನ್ನೇ (Demographic Imbalance) ತಮ್ಮ ಜನಸಂಖ್ಯಾಸ್ಫೋಟದಿಂದ ನಾಶಮಾಡಿಬಿಡುವುದು, ಮುಸ್ಲಿಮರಾಗಲೀ – ಕ್ರೈಸ್ತರಾಗಲೀ ಮರಳಿ ಮಾತೃಧರ್ಮಕ್ಕೆ ಬಂದಾಗ ಯಾವ ಸಮುದಾಯಕ್ಕೆ ಸೇರಬೇಕಾಗುತ್ತದೆ, ಅವರದ್ದೇ ಪ್ರತ್ಯೇಕ ಸಮುದಾಯವಾಗಬೇಕೇ...... ಸಮಸ್ಯೆಗಳು – ಪ್ರಶ್ನೆಗಳು..... ಒಂದೇ ಎರಡೇ.... ಸಿಕ್ಕ ಅವಕಾಶದಲ್ಲಿಯೇ ಪ್ರಶ್ನಿಸಿದೆ. ಅವರ ಉತ್ತರಗಳು ದಶಕಗಳಿಂದ ಎದೆಯಲ್ಲಿ – ತಲೆಯಲ್ಲಿ ಅನುರಣಿಸುತ್ತಿವೆ.

''... ನೋಡಪ್ಪಾ, ಮಂಜೂ. ನಮ್ಮ ಹಿಂದು ಸಮಾಜದಲ್ಲಿ ಜಾತಿಗಳು ವಾಸ್ತವ. ಜಾತಿಗಳು ಹೋಗುವುದಿಲ್ಲ, ನಮಗೆ ಬೇಕಾದುದು ಜಾತಿಜಾತಿಗಳ ನಡುವಿನ ಸಾಮರಸ್ಯ. ಸಾಮರಸ್ಯಕ್ಕೇ ಸಂಘವೂ ಒತ್ತು ಕೊಡುತ್ತಿದೆ. ಸಾಮರಸ್ಯವೇ ಪರಿಹಾರ ಕಣಪ್ಪಾ.

ಹಿಂದಿನ ಅನೇಕ ಶತಮಾನಗಳಲ್ಲಿ, ದೇಶಾದ್ಯಂತ ತುಂಬ ತುಂಬ ಮತಾಂತರ ಆಗಿದೆ. ಬಹುತೇಕ ಸಮುದಾಯಗಳು (ಕ್ರೈಸ್ತರಾದರೂ ಮುಸ್ಲಿಮರಾದರೂ) ಅಲ್ಲಿಯೂ ಉಪ–ಸಮುದಾಯಗಳಾಗಿಯೇ ಮುಂದುವರಿದಿವೆ. ಮಾತೃಧರ್ಮಕ್ಕೆ ಮರಳಿದ ಮೇಲೆ ಆಯಾ ಸಮುದಾಯಗಳು ಹಿಂದು ಸಮಾಜದ ಅದೇ ಜಾತಿಗೇ ಸೇರಬೇಕಾಗುತ್ತದೆ. ಬೇರೆ ಪರಿಹಾರ, ಇಲ್ಲಪ್ಪಾ....'' ಎಂದರು.

ಅವರ ಮಾತುಗಳನ್ನು ಅರ್ಥ ಮಾಡಿಕೊಳ್ಳಲು, ಜೀರ್ಣಿಸಿಕೊಳ್ಳಲು, ಒಪ್ಪಿಕೊಳ್ಳಲು ಸಾಕಷ್ಟು ಕಾಲವೇ ಬೇಕಾಯಿತು. ಇಡೀ ದೇಶದಲ್ಲಿ ಜಾತಿ, ಉಪಜಾತಿ, ಕೋಮುಗಳ ನಡುವಿನ ನಿಲ್ಲದ ರಾಜಕೀಯವು ಅನೇಕ ದಶಕಗಳಿಂದ ದೊಡ್ಡ ಸಮಸ್ಯೆಯೇ ಆಗಿದೆ. ಮೀಸಲಾತಿಯು ಇದಕ್ಕೆ ಇನ್ನೊಂದೇ ಆಯಾಮ ನೀಡಿದೆ. ಅನೇಕ ಚಿಂತನಧಾರೆಗಳ ಪ್ರಭೃತಿಗಳು ದೊಡ್ಡ ದೊಡ್ಡ ಮಾತುಗಳನ್ನು ಆಡಿದರೂ, ವಾಸ್ತವದಲ್ಲಿ ಸಾಮರಸ್ಯದ ಪರಿಕಲ್ಪನೆಗೆ ಒತ್ತು ಕೊಡುವ ಮಾತೇ ಆಡುವುದಿಲ್ಲ.

ವಾಸ್ತವವಾಗಿ, ಶೇಷಾದ್ರಿ ಅವರು ಹೇಳಿದ ಪರಿಹಾರಕ್ಕಿಂತ ಉತ್ತಮವಾದುದು ಈವರೆಗೆ ಯಾವುದೂ ಕಾಣಲಿಲ್ಲ. ಈ ದಿಸೆಯಲ್ಲಿ ಜಾತಿ – ಉಪಜಾತಿ – ಉಪಉಪಜಾತಿಗಳಲ್ಲಿ ಮುಳುಗಿಹೋಗಿರುವ ನಮ್ಮ ಮಠಾಧೀಶರು, ಸ್ವಾಮಿಗಳು ಈಗಲಾದರೂ ಎಚ್ಚೆತ್ತುಕೊಂಡು ಇಸ್ಲಾಂ ಮತ್ತು ಕ್ರೈಸ್ತ ಮತಗಳಿಗೆ ಹೋಗಿರುವ ಸಮುದಾಯಗಳನ್ನು ಮರಳಿ ಮಾತೃಧರ್ಮಕ್ಕೆ ಕರೆದುಕೊಂಡು ಬರುವ ಮೂಲಕ ಅರ್ಥಪೂರ್ಣವಾದ ಸೇವೆ ಮಾಡಬಹುದು. ನನ್ನ ಅನೇಕ ಬರೆಹಗಳಲ್ಲಿ ಮತ್ತು ಮಾತುಗಳಲ್ಲಿ ಈ ಸೈದ್ಧಾಂತಿಕ ಅಂಶವನ್ನೇ ಪ್ರತಿಪಾದಿಸಿದ್ದೇನೆ.

ಹಿಂದು ಧರ್ಮ, ಹಿಂದು ಸಂಘಟನೆ, ಹಿಂದು ಸಮಾಜಗಳಿಗಾಗಿಯೇ ಸಮರ್ಪಿತರಾಗಿದ್ದ ಶೇಷಾದ್ರಿ ಅವರು ನಮ್ಮ ದೇಶ ಕಂಡ ಬಹಳ ದೊಡ್ಡ ಚಿಂತಕರು, ಬರೆಹಗಾರರು. ಕಮ್ಯೂನಿಸಂ, ಇಸ್ಲಾಂ ಮತ್ತು ಕ್ರೈಸ್ತ ಮತಗಳ ಸಾಮ್ರಾಜ್ಯಶಾಹಿ ಆಕ್ರಮಣ ಮತ್ತು ಅಪಾಯಗಳ ಬಗೆಗೆ ಬಹುಮೂಲ್ಯ ಚಿಂತನೆಗಳನ್ನು ಅವರು ನೀಡಿದ್ದಾರೆ. ಕನ್ನಡ, ಇಂಗ್ಲಿಷ್ ಮತ್ತು ಇತರ ಭಾಷೆಗಳಲ್ಲೂ ಲಭ್ಯವಿರುವ ಅವರ ಕೃತಿಗಳು ಭಾರತವನ್ನು ಮತ್ತು ಸನಾತನ ಧರ್ಮವನ್ನು ಉಳಿಸುವೆಡೆಗೆ ಅಪೂರ್ವ ಕೊಡುಗೆಗಳಾಗಿವೆ. ಅವರ ಚಿಂತನೆಗಳ ಅಧ್ಯಯನ ಮತ್ತು ಅನುಷ್ಠಾನಗಳು ಅವರಿಗೆ ನಾವು ನೀಡಬಹುದಾದ ನೈಜ ಶ್ರದ್ಧಾಂಜಲಿ, ಸ್ಮರಣಾಂಜಲಿ.

ವಿಶೇಷವೆಂದರೆ, ಯಾವ ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಮರ್ಪಿತ ಪ್ರಚಾರಕರಾಗಿ ಶೇಷಾದ್ರಿ ಅವರು ತಮ್ಮ ಪೂರ್ಣ ಜೀವನವನ್ನು ಹಿಂದು ಸಮಾಜಕ್ಕಾಗಿ ಮುಡುಪಿಟ್ಟರೋ, ಈಗ ಆ ಸಂಘದ ಶತಮಾನೋತ್ಸವವೂ ಹೌದು. ಶೇಷಾದ್ರಿ ಅವರು ಹುಟ್ಟಿದ್ದು 26ನೆಯ ಮೇ 1926ರಂದು. ಇದೀಗ ಅವರ ಶತಮಾನೋತ್ಸವ ವರ್ಷ ಪೂರ್ಣಗೊಂಡಿದೆ.



ಶೇಷಾದ್ರಿ ಅವರ ಪುಸ್ತಕಗಳು

1. ಯುಗಾವತಾರ (1967)
2. ತಾಯಿ ಕಾದಿಹಳು (1969)
3. ಕ್ರಾಂತಿಯಲ್ಲ ಭ್ರಾಂತಿ (1970)
4. ಅಮ್ಮಾ ಬಾಗಿಲು ತೆಗಿ (1970)
5. ಶಿವಾಜಿ (1972)
6. ಕೋರಿಕೆ (1973)
7. ಗುರು ಗೋವಿಂದ ಸಿಂಹ (1974)
8. ಭುಗಿಲು (1977)
9. ಅಸ್ಸಾಮಿನ ಆರ್ತಸ್ವರ (1980)
10. ಮೀನಾಕ್ಷಿಪುರಂ – ಒಂದು ಎಚ್ಚರಿಕೆ (1981)
11. ತೋರ್ ಬೆರಳು (1981)
12. ಆ ಕಾಳರಾತ್ರಿಯ ಪ್ರಶ್ನೆ (1981)
13. ಆಧುನಿಕ ಮಾನವ ಜೀವನದ ಕುರುಕ್ಷೇತ್ರದಲ್ಲಿ ಪಾರ್ಥಸಾರಥಿ ಯಾರು? (1982)
14. ಮೃಗಜಲ, ನಿಜಜಲ (1983)
15. ಭಾರತದಲ್ಲಿ ಕ್ರೈಸ್ತ ಚಟುವಟಿಕೆಗಳು (1985)
16. ಪರಿಪ್ರಶ್ನ (1986)
17. ಕೃತಿರೂಪ ಸಂಘದರ್ಶನ (1990)
18. ಇದೊಂದೇ ದಾರಿ (1995)
19. ವಿಕೃತಿಯಿಂದ ಸಂಸ್ಕೃತಿಯೆಡೆಗೆ (1995)
20. ದೇಶ ವಿಭಜನೆಯ ದುರಂತಕಥೆ (1995)
21. ನವನಿರ್ಮಾಣದ ಒಳಪದರಗಳು (1996)
22. ಚರೈವೇತಿ (1996)
23. ಕೈದೀವಿಗೆ (1996)
24. ದಿಶಾಬೋಧ (1998)
25. ನ್ಯಾಯಿಕ ಆಯೋಗಗಳ ಕಣ್ಣಲ್ಲಿ ಮತಾಂತರ (1999)
26. ಸಮರಸತೆಯ ಸವಾಲು (1999)
27. ಸಮಾಜಯೋಗ (2001)
28. ಹಿಂದು ಸಮಾಜಕ್ಕೆ ಸವಾಲುಗಳು– ಪರಿಹಾರಗಳು (2002)
29. ಜಾಗೃತಾತ್ಮರಿಗಾಗಿ (2004)
30. ಶ್ರೀ ಗುರೂಜಿ (2005)
31. Dr Hegdewar - Epoch Maker (1981)
32. Christian Missions in the eyes of Gandhiji (1981)
33. Warning of Meenakshipuram (1981)
34. The Tragic Story of Partition (1982)
35. RSS - A Vision in Action (1988)
36. Hindus abroad - The Dilemma: Dollar or Dharma (1990)
37. Universal Spirit of Hindu Nationalism (1991)
38. The Way (1991)
39. Implications of Christian Conversions (1999)
40. Yoga - A Science Imperative (2000)
41. Sri Guruji (2005)



ವೈಶ್ವಿಕ ವಿಚಾರಗಳ ಪ್ರತಿಪಾದಕ

▸ **ರಾಜೇಶ್ ಪದ್ಮಾರ್, ಪ್ರಚಾರ ಪ್ರಮುಖ್, ರಾಷ್ಟ್ರೀಯ ಸ್ವಯಂಸೇವಕ ಸಂಘ ದಕ್ಷಿಣ ಪ್ರಾಂತ**



ರಾಷ್ಟ್ರೀಯ ಸ್ವಯಂಸೇವಕ ಸಂಘ(ಸಂಘ)ದ ಜ್ಯೇಷ್ಠ ಪ್ರಚಾರಕ, ಅಪ್ರತಿಮ ಸಂಘಟಕ, ಮೇರು ಚಿಂತಕ, ಸಿದ್ಧಹಸ್ತ ಲೇಖಕ ಹೊ.ವೆ. ಶೇಷಾದ್ರಿ ಅವರ ನೂರನೆಯ ಜಯಂತಿಯ (26.5.1926–14.8.2005) ವರ್ಷ.

1926 ರ ಮೇ 26ರಂದು ಬೆಂಗಳೂರಿನಲ್ಲಿ ಜನಿಸಿದ ಹೊ. ವೆ. ಶೇಷಾದ್ರಿ ಅವರು 1942ರಲ್ಲಿ ಸಂಘದ ಸಂಪರ್ಕಕ್ಕೆ ಬಂದರು. ತಮ್ಮ ಎಂ.ಎಸ್ಸಿ ರಸಾಯನಶಾಸ್ತ್ರ ಸ್ನಾತಕೋತ್ತರ ಶಿಕ್ಷಣದ ಬಳಿಕ 1946ರಲ್ಲಿ ಸಂಘದ ಪ್ರಚಾರಕರಾದರು. ಕರ್ನಾಟಕದ ಮೊದಲ ತಂಡದ ಮೂವರು ಪ್ರಚಾರಕರಾದ ಕೃ. ಸೂರ್ಯನಾರಾಯಣ ರಾವ್, ಚಂಪಕನಾಥ್ ಜೊತೆಗೆ ಪ್ರಚಾರಕರಾದರು.

1947ರಲ್ಲಿ ಕೋಲಾರ ಜಿಲ್ಲಾ ಪ್ರಚಾರಕ್, 1948ರಲ್ಲಿ ಸಂಘದ ಮೇಲಿನ ನಿಷೇಧದ ವೇಳೆ ಬಂಧನ, 1953ರಲ್ಲಿ ಪ್ರಾಂತಕಾರ್ಯವಾಹ, 1953–1956 ಮಂಗಳೂರು ವಿಭಾಗ ಪ್ರಚಾರಕ್ ಆಗಿ ಹೆಚ್ಚುವರಿ ಹೊಣೆಗಾರಿಕೆ, 1960ರಲ್ಲಿ ಕರ್ನಾಟಕ ಪ್ರಾಂತ ಪ್ರಚಾರಕ್, 1980ರಲ್ಲಿ ಸಹಕ್ಷೇತ್ರ ಪ್ರಚಾರಕ್, 1981ರಲ್ಲಿ ದಕ್ಷಿಣ ಕ್ಷೇತ್ರ ಪ್ರಚಾರಕ್, 1983ರಲ್ಲಿ ಅಖಿಲ ಭಾರತೀಯ ಪ್ರಚಾರಕ ಪ್ರಮುಖ್, 1984ರಲ್ಲಿ ಸಹಸರಕಾರ್ಯವಾಹ, 1987–2000ರವರೆಗೆ ಸರಕಾರ್ಯವಾಹ, 2000ರಲ್ಲಿ ಸಹಸರಕಾರ್ಯವಾಹ, 2003ರಲ್ಲಿ ಅಖಿಲ ಭಾರತೀಯ ಪ್ರಚಾರಕ ಪ್ರಮುಖ್ ಜವಾಬ್ದಾರಿ ನಿರ್ವಹಿಸಿದರು.

2005ರ ಆಗಸ್ಟ್ 14 ರಂದು ಸಂಜೆ 6.57 ಕ್ಕೆ ಇಹಲೋಕದ ಯಾತ್ರೆ ಮುಗಿಸಿದರು. ''ಶೇಷಾದ್ರಿ ಅವರದು ಸೃಜನಶೀಲ, ಸಂವೇದನಾಶೀಲ, ಸ್ಥಿತಪ್ರಜ್ಞ ವ್ಯಕ್ತಿತ್ವ, ಅವರು ವೈಶ್ವಿಕ ವಿಚಾರಗಳ ಪ್ರತಿಪಾದಕ'' ಎಂದಿದ್ದರು ಐದನೇ ಸರಸಂಘಚಾಲಕರಾಗಿದ್ದ ಕು.ಸೀ. ಸುದರ್ಶನ್ ಜೀ. ಕನ್ನಡದಲ್ಲಿ 30, ಇಂಗ್ಲಿಷ್‌ನಲ್ಲಿ 11 ಸೇರಿ ಒಟ್ಟು 41 ಪುಸ್ತಕಗಳ ಕರ್ತೃ. ಉತ್ಥಾನ, ವಿಕ್ರಮ, ಆರ್ಗನೈಸರ್ ಸೇರಿದಂತೆ ವಿವಿಧ ಪತ್ರಿಕೆಗಳಲ್ಲಿ ನೂರಾರು ಲೇಖನಗಳು, ಅಂಕಣ ಬರಹಗಳು, ಪ್ರೇರಣಾದಾಯಿ ಪತ್ರಸಂದೇಶಗಳ ಮೂಲಕ ನಿರಂತರ ಬರವಣಿಗೆಯ ಕಾರ್ಯ ಹೊ.ವೆ. ಶೇಷಾದ್ರಿ ಅವರದು.

1982ರಲ್ಲಿ ಹೊ.ವೆ. ಶೇಷಾದ್ರಿ ಅವರ ತೋರ್ ಬೆರಳ್ ಕೃತಿಗೆ ಕರ್ನಾಟಕ ಸರ್ಕಾರದ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪುರಸ್ಕಾರ ಲಭಿಸಿತು. ವೈಚಾರಿಕ ವಲಯದಲ್ಲಿ ಬಹುಪ್ರಶಂಸೆಗೊಳಗಾದ ಪುಸ್ತಕಗಳ ಪೈಕಿ ಒಂದು. ತಮ್ಮ ಬಿಡುವಿಲ್ಲದ ಪ್ರವಾಸದ ಮಧ್ಯೆಯೂ ಅವಿರತ ಬರವಣಿಗೆಯ ಮೂಲಕ ಸ್ವಯಂಸೇವಕರ ವೈಚಾರಿಕ ಹಂದರವನ್ನು ವಿಸ್ತರಿಸಿ, ಗಟ್ಟಿಗೊಳಿಸಿದವರು. ಸಮಾಜದೊಂದಿಗೆ ಸಂಘದ ಆಶಯಗಳನ್ನು ಹಂಚಿದವರು.





ಸಂಪಾದಕೀಯ

ಜನಸಂಖ್ಯಾ ಸಮತೋಲನದತ್ತ ಕೇಂದ್ರ ಸರ್ಕಾರದ ಗಂಭೀರ ಹೆಜ್ಜೆ

ದೇಶದ ಭದ್ರತೆ, ಸಾಮಾಜಿಕ ಸಮತೋಲನ ಮತ್ತು ಭವಿಷ್ಯದ ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಕೇಂದ್ರ ಸರ್ಕಾರ ಕೈಗೊಂಡಿರುವ ಜನಸಂಖ್ಯಾ ಬದಲಾವಣೆ ಕುರಿತ ಉನ್ನತ ಮಟ್ಟದ ಸಮಿತಿ ರಚನೆಯ ನಿರ್ಧಾರವು ಮಹತ್ವದ ಮತ್ತು ದೂರದೃಷ್ಟಿಯ ಹೆಜ್ಜೆಯಾಗಿದೆ. ಅಕ್ರಮ ವಲಸೆ, ಅಸ್ವಾಭಾವಿಕ ಜನಸಂಖ್ಯಾ ಏರಿಳಿತ ಹಾಗೂ ಅದರ ಪರಿಣಾಮಗಳ ಕುರಿತು ಸಮಗ್ರವಾಗಿ ಅಧ್ಯಯನ ನಡೆಸಲು ಸರ್ಕಾರ ಮುಂದಾಗಿರುವುದು ಸಮಸ್ಯೆಯನ್ನು ಕೇವಲ ರಾಜಕೀಯ ದೃಷ್ಟಿಯಿಂದ ಅಲ್ಲ, ರಾಷ್ಟ್ರಹಿತದ ದೃಷ್ಟಿಯಿಂದ ನೋಡುತ್ತಿರುವುದಕ್ಕೆ ಸಾಕ್ಷಿಯಾಗಿದೆ.



ಭಾರತದಂತಹ ವಿಶಾಲ ಮತ್ತು ವೈವಿಧ್ಯಮಯ ದೇಶದಲ್ಲಿ ಜನಸಂಖ್ಯೆಯ ರಚನೆಗೆ ಸಂಬಂಧಿಸಿದ ಬದಲಾವಣೆಗಳು ಕೇವಲ ಅಂಕಿಅಂಶಗಳ ವಿಚಾರವಲ್ಲ, ಅವು ಆರ್ಥಿಕ ವ್ಯವಸ್ಥೆ, ಉದ್ಯೋಗ, ಶಿಕ್ಷಣ, ಆರೋಗ್ಯ, ಗಡಿ ಭದ್ರತೆ, ಸ್ಥಳೀಯ ಸಂಸ್ಕೃತಿ ಮತ್ತು ಸಾಮಾಜಿಕ ಸಾಮರಸ್ಯದ ಮೇಲೂ ಪರಿಣಾಮ ಬೀರುತ್ತವೆ. ವಿಶೇಷವಾಗಿ ಗಡಿ ರಾಜ್ಯಗಳಲ್ಲಿ ಅಕ್ರಮ ವಲಸೆ ಹಾಗೂ ಅಸಹಜ ನೆಲೆಸುವಿಕೆಯ ಪ್ರಶ್ನೆಗಳು ದೀರ್ಘಕಾಲದಿಂದಲೇ ಚರ್ಚೆಯ ವಿಷಯವಾಗಿವೆ. ಈ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಪ್ರಕಾಶ್ ಪ್ರಭಾಕರ್ ನಾವ್ಲೇಕರ್ ನೇತೃತ್ವದ ಸಮಿತಿಗೆ ತಜ್ಞರು, ಜನಗಣತಿ ಆಯುಕ್ತರು ಹಾಗೂ ಆಡಳಿತ ಮತ್ತು ಭದ್ರತಾ ಕ್ಷೇತ್ರದ ಅನುಭವಿಗಳನ್ನು ಸೇರಿಸಿರುವುದು ಸಮಿತಿಯ ಗಂಭೀರತೆಯನ್ನು ತೋರಿಸುತ್ತದೆ.

ಈ ಸಮಿತಿಯ ಪ್ರಮುಖ ಅಂಶವೆಂದರೆ, ಇದು ಕೇವಲ ಸಮಸ್ಯೆ ಗುರುತಿಸುವುದರಲ್ಲಿ ಅಲ್ಲದೇ, ವೈಜ್ಞಾನಿಕ ಮೌಲ್ಯಮಾಪನದ ಆಧಾರದ ಮೇಲೆ ನೀತಿ, ಕಾನೂನು ಹಾಗೂ ಆಡಳಿತಾತ್ಮಕ ಪರಿಹಾರಗಳನ್ನು ಸೂಚಿಸಲಿದೆ. ಗಡಿ ನಿರ್ವಹಣೆ ಬಲಪಡಿಸುವುದು, ಅಕ್ರಮ ವಲಸಿಗರನ್ನು ಗುರುತಿಸುವುದು, ಕೇಂದ್ರ-ರಾಜ್ಯಗಳ ಸಮನ್ವಯ ವೃದ್ಧಿಸುವುದು ಹಾಗೂ ನಿರಂತರ ಮೇಲ್ವಿಚಾರಣಾ ವ್ಯವಸ್ಥೆ ರೂಪಿಸುವಂತಹ ಅಂಶಗಳನ್ನು ಒಳಗೊಂಡಿರುವುದು ಶ್ಲಾಘನೀಯ. ದೇಶದ ಸಾರ್ವಭೌಮತ್ವ ಮತ್ತು ಸಾಮಾಜಿಕ ಸ್ಥಿರತೆ ಎರಡನ್ನೂ ಕಾಯುವ ದೃಷ್ಟಿಯಿಂದ ಇಂತಹ ಚೌಕಟ್ಟು ಅನಿವಾರ್ಯವಾಗಿದೆ.

ಈ ವಿಷಯವನ್ನು ಸಂವೇದನಾಶೀಲವಾಗಿ ಮತ್ತು ಸಮತೋಲನದಿಂದ ನಿರ್ವಹಿಸುವ ಜವಾಬ್ದಾರಿ ಸರ್ಕಾರದ ಮೇಲಿದೆ. ಯಾವುದೇ ಸಮುದಾಯದ ವಿರುದ್ಧದ ಪೂರ್ವಾಗ್ರಹ ಅಥವಾ ರಾಜಕೀಯ ಆರೋಪ-ಪ್ರತ್ಯಾರೋಪಗಳ ರೂಪಕ್ಕೆ ಇದು ತಿರುಗಬಾರದು. ಬದಲಿಗೆ, ರಾಷ್ಟ್ರದ ದೀರ್ಘಕಾಲೀನ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಅಂಕಿಅಂಶ, ಕಾನೂನು ಮತ್ತು ವಾಸ್ತವಾಧಾರಿತ ಕ್ರಮಗಳಿಗೆ ಆದ್ಯತೆ ನೀಡಬೇಕು. ಇದೇ ವೇಳೆ, ಕಾನೂನುಬದ್ಧ ವಲಸೆ ಮತ್ತು ಅಕ್ರಮ ನುಸುಳುವಿಕೆಯ ನಡುವಿನ ವ್ಯತ್ಯಾಸವನ್ನು ಸ್ಪಷ್ಟವಾಗಿ ನಿರ್ವಹಿಸುವ ಅಗತ್ಯವೂ ಇದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಘೋಷಿಸಿದ್ದ 'ಉನ್ನತಾಧಿಕಾರದ ಜನಸಂಖ್ಯಾ ಮಿಷನ್' ಈಗ ಕಾರ್ಯರೂಪಕ್ಕೆ ಬರುತ್ತಿರುವುದು ಗಮನಾರ್ಹ ಬೆಳವಣಿಗೆ. ದೇಶ ಎದುರಿಸುತ್ತಿರುವ ಭವಿಷ್ಯದ ಸವಾಲುಗಳನ್ನು ಮುಂಚಿತವಾಗಿ ಅಂದಾಜಿಸಿ, ಅವುಗಳಿಗೆ ಸೂಕ್ತ ನೀತಿ ರೂಪಿಸಲು ಕೇಂದ್ರ ಸರ್ಕಾರ ಮುಂದಾಗಿರುವುದು ಆಡಳಿತದ ಜವಾಬ್ದಾರಿತನವನ್ನು ಪ್ರತಿಬಿಂಬಿಸುತ್ತದೆ. ಸಮಿತಿಯ ಶಿಫಾರಸುಗಳು ಸಮತೋಲಿತ, ಪಾರದರ್ಶಕ ಹಾಗೂ ರಾಷ್ಟ್ರ ಹಿತದ ಪರವಾಗಿದ್ದರೆ, ಭಾರತದಲ್ಲಿ ದೀರ್ಘಕಾಲಿಕ ಜನಸಂಖ್ಯಾ ನಿರ್ವಹಣೆಗೆ ಇದು ಹೊಸ ದಿಕ್ಕು ತೋರಬಲ್ಲದು.

ಭಾರತದ ಅಭಿವೃದ್ಧಿಯ ಪಯಣ

ಸಿ. ಪಿ. ರಾಧಾಕೃಷ್ಣನ್



ನಾನು ಬಾಲ್ಯದಲ್ಲಿ, ತಿರುಪ್ಪೂರಿನ ಶಾಲೆಯೊಂದರಲ್ಲಿ ಕಲಿಯುತ್ತಿದ್ದಾಗ, ನಮ್ಮ ದೇಶದ ಬಗ್ಗೆ ಅನೇಕ ಕನಸುಗಳನ್ನು ಹೊಂದಿದ್ದೆ. ನನ್ನೊಳಗೆ ನಿರಂತರವಾಗಿ ಪ್ರಶ್ನೆಗಳು ಮೂಡುತ್ತಿದ್ದವು: ಭಾರತವು ತನ್ನ ಹಿರಿಮೆಯನ್ನು ಯಾವಾಗ ಮರಳಿ ಪಡೆಯುತ್ತದೆ? ಜಾಗತಿಕ ಮಟ್ಟದಲ್ಲಿ ಅದು ಯಾವಾಗ ಒಂದು ಶಕ್ತಿಯುತ ರಾಷ್ಟ್ರವಾಗಿ ಉದಯಿಸುತ್ತದೆ? ನಮ್ಮ ಬಡ ಮತ್ತು ವಂಚಿತ ಸಹೋದರ, ಸಹೋದರಿಯರಿಗೆ ಗೌರವಾನ್ವಿತ ಜೀವನ ಯಾವಾಗ ಸಿಗುತ್ತದೆ? ನನ್ನ ಹದಿಹರೆಯದ ದಿನಗಳಲ್ಲಿ ನನಗಿದ್ದ ಆಲೋಚನೆಗಳು ಇಂದು ನನಸಾಗುತ್ತಿರುವುದನ್ನು ಕಂಡು ನನಗೆ ಸಂತೋಷವಾಗುತ್ತಿದೆ.

ನಾನು ಆಗಾಗ್ಗೆ ಸ್ವಾಮಿ ವಿವೇಕಾನಂದರ ''ಏಳಿ, ಎದ್ದೇಳಿ ಮತ್ತು ಗುರಿ ಮುಟ್ಟುವ ತನಕ ನಿಲ್ಲದಿರಿ'' ಮಾತುಗಳನ್ನು ನೆನಪಿಸಿಕೊಳ್ಳುತ್ತೇನೆ. ತಮಿಳುನಾಡಿನ ಮಣ್ಣಿನಿಂದ ಸ್ವಾಮೀಜಿಯವರು ಘೋಷಿಸಿದ ಈ ಮಾತುಗಳು, ಪ್ರತಿಯೊಬ್ಬ ವ್ಯಕ್ತಿಯಲ್ಲೂ ದೇಶಭಕ್ತಿ ಮತ್ತು ಬದ್ಧತೆಯನ್ನು ಜಾಗೃತಗೊಳಿಸುವ ಅಪಾರ ಶಕ್ತಿಯನ್ನು ಹೊಂದಿವೆ.



ಭಾರತದ ಸಂಪೂರ್ಣ ಸಾಮರ್ಥ್ಯ ಅನಾವರಣಗೊಂಡಾಗ, ಅದು ಇಡೀ ಜಗತ್ತಿಗೆ ಮಾರ್ಗದರ್ಶನ ನೀಡುವ ಸಾಮರ್ಥ್ಯವಿರುವ ರಾಷ್ಟ್ರವಾಗಿ ಹೊರಹೊಮ್ಮುತ್ತದೆ ಎಂದು ನಾನು ಯಾವಾಗಲೂ ನಂಬಿದ್ದೆ. ಕಳೆದ ಒಂದು ದಶಕದಲ್ಲಿ, ನಮ್ಮ ದೇಶವು ಅತ್ಯಂತ ಉತ್ಸಾಹ ಮತ್ತು ದೃಢಸಂಕಲ್ಪದೊಂದಿಗೆ ಕಾರ್ಯನಿರ್ವಹಿಸುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.

ಜಾಗತಿಕವಾಗಿ ಆರ್ಥಿಕ ಮಂದಗತಿ ಮತ್ತು ಅನಿಶ್ಚಿತತೆಗಳ ಈ ಸಮಯದಲ್ಲಿ, ಭಾರತದ ಆರ್ಥಿಕತೆಯು ಬಲವಾಗಿ ಮತ್ತು ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಪ್ರಗತಿಗೆ ಸರ್ಕಾರ ಮತ್ತು ಸಾರ್ವಜನಿಕರು ಈ ಅವಧಿಯನ್ನು ನಿರಂತರ ಅಭಿವೃದ್ಧಿಯ ಯುಗವನ್ನಾಗಿ ಮಾಡಲು ತೋರುತ್ತಿರುವ ಉತ್ಸಾಹವೇ ಕಾರಣವಾಗಿದೆ. ದುರ್ಬಲ ಆರ್ಥಿಕತೆಯ ಸ್ಥಿತಿಯಿಂದ ಇಂದು ನಮ್ಮ ದೇಶವು ವಿಶ್ವದ ನಾಲ್ಕನೇ ಅತಿ ದೊಡ್ಡ ಆರ್ಥಿಕತೆಯಾಗಿ ಹೊರಹೊಮ್ಮಿದೆ ಮತ್ತು ಶೀಘ್ರದಲ್ಲೇ ವಿಶ್ವದ 3ನೇ ಅತಿ ದೊಡ್ಡ ಆರ್ಥಿಕತೆಯಾಗುವ ಹಾದಿಯಲ್ಲಿದೆ. ಇದಕ್ಕಿಂತಲೂ ಅತ್ಯಂತ ಮಹತ್ವದ ವಿಷಯವೆಂದರೆ, ನಮ್ಮ ಆರ್ಥಿಕ ಅಭಿವೃದ್ಧಿಯು ಒಳಗೊಳ್ಳುವಿಕೆಯಿಂದ ಕೂಡಿದೆ.

ಹಳ್ಳಿಗಾಡಿನ ಜನರ ಅನುಕೂಲಕ್ಕಾಗಿ ಇಂದು ದೇಶವು ಪ್ರತಿಯೊಬ್ಬರಿಗೂ ಆರೋಗ್ಯ ಸೌಲಭ್ಯಗಳು ಲಭ್ಯವಾಗುವಂತೆ ಮಾಡುವ ಬದ್ಧತೆಯೊಂದಿಗೆ ಆಯುಷ್ಮಾನ್ ಭಾರತ್ ಯೋಜನೆಯನ್ನು ಜಾರಿಗೊಳಿಸುತ್ತಿದೆ. ಇದರ ಪರಿಣಾಮವಾಗಿ, 44 ಕೋಟಿಗೂ ಹೆಚ್ಚು ಜನರು ಈಗ ಪ್ರಧಾನಮಂತ್ರಿ-ಆಯುಷ್ಮಾನ್ ಭಾರತ್ ಯೋಜನೆ ಅಡಿಯಲ್ಲಿ 5 ಲಕ್ಷ ರೂಪಾಯಿಗಳ ವಿಮಾ ರಕ್ಷಣೆಯನ್ನು ಹೊಂದಿದ್ದಾರೆ. ಕಳೆದ ವರ್ಷವೊಂದರಲ್ಲೇ ಈ ಯೋಜನೆಯಡಿ 2.5 ಕೋಟಿ ಜನರು ಉಚಿತ ವೈದ್ಯಕೀಯ ಚಿಕಿತ್ಸೆ ಪಡೆದಿದ್ದಾರೆ.

ನಮ್ಮ ರೈತರು ತಮ್ಮ ಕಠಿಣ ಪರಿಶ್ರಮದ ಮೂಲಕ 350 ಮಿಲಿಯನ್ ಟನ್ ಆಹಾರ ಧಾನ್ಯಗಳನ್ನು ಉತ್ಪಾದಿಸಿದ್ದು, ಭಾರತವನ್ನು ವಿಶ್ವದ ಎರಡನೇ ಅತಿ ದೊಡ್ಡ ಆಹಾರ ಉತ್ಪಾದಕ ರಾಷ್ಟ್ರದ ಸ್ಥಾನಕ್ಕೆ ಏರಿಸಿದ್ದಾರೆ. ಪಿಎಂ ಕಿಸಾನ್ ಸಮ್ಮಾನ್ ನಿಧಿ ಅಡಿಯಲ್ಲಿ, ಇದುವರೆಗೆ 4 ಲಕ್ಷ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಹಣವನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗಿದೆ.

ನಮ್ಮ ನಾರಿ ಶಕ್ತಿಯು ದೇಶದ ಅಭಿವೃದ್ಧಿಗೆ ಸಂಪೂರ್ಣ ಕೊಡುಗೆ ನೀಡಲು ಈಗ ಅವಕಾಶಗಳು ಮುಕ್ತವಾಗಿವೆ. 3 ಕೋಟಿಗೂ ಹೆಚ್ಚು ಮಹಿಳೆಯರು ಲಕ್ಷಾಧಿಪತಿ ದೀದಿಯರು ಮತ್ತು ನಮೋ ಡ್ರೋನ್ ದೀದಿಯರು ಆಗಿದ್ದಾರೆ. ಮಹಿಳೆಯರು ಈಗ ಸಶಸ್ತ್ರ ಪಡೆಗಳಲ್ಲಿ ಕಾಯಂ ಹುದ್ದೆ ಪಡೆಯುತ್ತಿದ್ದಾರೆ ಮತ್ತು ಯುದ್ಧದ ಪಾತ್ರಗಳಲ್ಲೂ ಭಾಗವಹಿಸುತ್ತಿದ್ದಾರೆ. ನಾರಿ ಶಕ್ತಿ ವಂದನ ಅಧಿನಿಯಮವು ಸಂಸತ್ತು ಮತ್ತು ರಾಜ್ಯ ಶಾಸನಸಭೆಗಳಲ್ಲಿ ಅವರ ಭಾಗವಹಿಸುವಿಕೆಯನ್ನು ಮತ್ತಷ್ಟು ಹೆಚ್ಚಿಸಲಿದೆ.

ಮಹಿಳೆಯರ ದೈನಂದಿನ ಜೀವನವನ್ನು ಸುಲಭಗೊಳಿಸಲು ಮತ್ತು ಅವರ ಆರೋಗ್ಯದ ಮೇಲಿನ ಕಾಳಜಿಯಿಂದಾಗಿ, ದೇಶಾದ್ಯಂತ ಸುಮಾರು 2 ಕೋಟಿ ಹೊಸ ಎಲ್‌ಪಿಜಿ ಅನಿಲ ಸಂಪರ್ಕಗಳನ್ನು ಒದಗಿಸಲಾಗಿದೆ.

ಯುವಜನರಿಗಾಗಿ, ಕಳೆದ ಹತ್ತು ವರ್ಷಗಳಲ್ಲಿಯೇ 13 ಹೊಸ ಐಐಟಿಗಳನ್ನು ಸ್ಥಾಪಿಸಲಾಗಿದ್ದು, ಒಟ್ಟು ಐಐಟಿಗಳ ಸಂಖ್ಯೆ 23ಕ್ಕೆ ಏರಿದೆ. ಐಐಎಂಗಳ ಸಂಖ್ಯೆಯೂ 13 ರಿಂದ 21 ಕ್ಕೆ ಹೆಚ್ಚಾಗಿದೆ. ಏಮ್ಸ್ ಸಂಖ್ಯೆಯು 7 ರಿಂದ 23 ಕ್ಕೆ ಅಂದರೆ ಮೂರು ಪಟ್ಟು ಹೆಚ್ಚಾಗಿದೆ ಮತ್ತು ವೈದ್ಯಕೀಯ ಕಾಲೇಜುಗಳ ಸಂಖ್ಯೆ 387 ರಿಂದ 823 ಕ್ಕೆ ದುಪ್ಪಟ್ಟಾಗಿದೆ. ವೈದ್ಯಕೀಯ ಸೀಟುಗಳ ಸಂಖ್ಯೆ 51,348 ರಿಂದ 1,29,603 ಕ್ಕೆ ಹೆಚ್ಚಿರುವುದು ಹೆಮ್ಮೆಯ ವಿಷಯವಾಗಿದೆ.

ನಾವು ಮೂಲಸೌಕರ್ಯ ಸೌಲಭ್ಯಗಳಲ್ಲಿ ವಿಶ್ವದರ್ಜೆಯ ಮಾನದಂಡಗಳತ್ತ ಮುನ್ನಡೆಯುತ್ತಿದ್ದೇವೆ. ರೈಲ್ವೆಯನ್ನು ಸುಮಾರು ಶೇ. 99 ರಷ್ಟು ವಿದ್ಯುದ್ದೀಕರಿಸಲಾಗಿದೆ. ದೇಶಾದ್ಯಂತ, 164 ವಂದೇ ಭಾರತ್ ಎಕ್ಸ್‌ಪ್ರೆಸ್ ರೈಲುಗಳು ಹೊಸ ಯುಗಕ್ಕೆ ನಾಂದಿ ಹಾಡಿವೆ. ವಿಮಾನ ನಿಲ್ದಾಣಗಳ ಸಂಖ್ಯೆಯೂ 74 ರಿಂದ 163 ಕ್ಕೆ ದ್ವಿಗುಣಗೊಂಡಿದೆ ಮತ್ತು ಉಡಾನ್ ಅಡಿಯಲ್ಲಿ ಸಾಮಾನ್ಯ ಜನರಿಗೂ ವಿಮಾನ ಪ್ರಯಾಣವು ಕೈಗೆಟುಕುವಂತಾಗಿದೆ.

ಒಂದು ದಶಕದ ಹಿಂದೆ ತಮಿಳುನಾಡಿಗೆ ಸುಮಾರು 880 ಕೋಟಿ ರೂ.ಗಳಷ್ಟಿದ್ದ ರೈಲ್ವೆ ಬಜೆಟ್ ಹಂಚಿಕೆಯು 2026-27ರಲ್ಲಿ 7,600 ಕೋಟಿ ರೂ.ಗೆ ಹೆಚ್ಚಾಗಿದೆ. ತಮಿಳುನಾಡಿನಲ್ಲಿ, ರಾಮೇಶ್ವರಂ ಮತ್ತು ಪಂಬನ್ ನಡುವೆ ಹೊಸ ಪಂಬನ್ ಸೇತುವೆಯನ್ನು ನಿರ್ಮಿಸಿರುವುದು ಸಂತೋಷದ ವಿಷಯವಾಗಿದ್ದು, ಇದು ಭಾರತದ ಮೊದಲ ವರ್ಟಿಕಲ್ ಲಿಫ್ಟ್ (ಲಂಬವಾಗಿ ಮೇಲಕ್ಕೇರುವ) ಸೇತುವೆಯಾಗಿದೆ. ಇದು ಆಧ್ಯಾತ್ಮಿಕ ಪ್ರವಾಸೋದ್ಯಮ ಮತ್ತು ಆರ್ಥಿಕ ಅಭಿವೃದ್ಧಿಗೆ ಉತ್ತಮ ಅವಕಾಶವಾಗಿ ಕಾರ್ಯನಿರ್ವಹಿಸುತ್ತದೆ. ಜಮ್ಮು-ಕಾಶ್ಮೀರದ ಚೆನಾಬ್ ಸೇತುವೆ ಇರಲಿ ಅಥವಾ ಅಸ್ಸಾಂನ ಬೋಗಿಬೀಲ್ ಸೇತುವೆ ಇರಲಿ, ಭಾರತವು ಇಂದು ಹೊಸ ಯುಗದ ಮೂಲಸೌಕರ್ಯಗಳಲ್ಲಿ ಅದ್ಭುತಗಳನ್ನು ಸೃಷ್ಟಿಸುತ್ತಿದೆ.

ಅಭಿವೃದ್ಧಿಯು ಕೇವಲ ಸಾಮಾಜಿಕ ಗುಂಪುಗಳನ್ನು ಮಾತ್ರವಲ್ಲದೆ, ಎಲ್ಲಾ ಪ್ರದೇಶಗಳನ್ನೂ ಒಳಗೊಳ್ಳಬೇಕು ಎಂದು ನಾನು ಯಾವಾಗಲೂ ನಂಬಿದ್ದೇನೆ. ಒಂದು ಕಾಲದಲ್ಲಿ ಭಾರತದ ಕೊನೆಯ ಹಳ್ಳಿಗಳೆಂದು ಪರಿಗಣಿಸಲ್ಪಟ್ಟಿದ್ದ ಗಡಿ ಗ್ರಾಮಗಳು, ಈಗ ಮೊದಲ ಗ್ರಾಮಗಳಾಗಿವೆ ಮತ್ತು ವೈಬ್ರಂಟ್ ವಿಲೇಜಸ್ ಯೋಜನೆಯ ಮೂಲಕ ಅವುಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಚಂದ್ರಯಾನ 3 ರ ಯಶಸ್ವಿ ಉಡಾವಣೆಯು ಭಾರತವನ್ನು ಸುಧಾರಿತ ಬಾಹ್ಯಾಕಾಶ ಪರಿಶೋಧನೆಯ ಯುಗಕ್ಕೆ ಕೊಂಡೊಯ್ದಿದೆ. ಕೃತಕ ಬುದ್ಧಿಮತ್ತೆ ಕ್ಷೇತ್ರದಲ್ಲಿ, ಜಾಗತಿಕ ಕಂಪನಿಗಳು ಭಾರತವನ್ನು ತಮ್ಮ ಕೇಂದ್ರವನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಿವೆ, ಇದರ ಪರಿಣಾಮವಾಗಿ ಹೂಡಿಕೆಗಳು ಹಲವು ಪಟ್ಟು ಹೆಚ್ಚಾಗುತ್ತಿವೆ. ಸೆಮಿಕಂಡಕ್ಟರ್ ತಯಾರಿಕೆಯಲ್ಲಿ ಭಾರತವು ಈಗ ಜಗತ್ತಿಗೆ ಮಾದರಿಯಾಗಿ ಹೊರಹೊಮ್ಮುತ್ತಿದೆ.

ಮೊಬೈಲ್ ಫೋನ್ ತಯಾರಿಕೆಯಲ್ಲಿ ನಾವು ಜಾಗತಿಕವಾಗಿ ಎರಡನೇ ಸ್ಥಾನವನ್ನು ಪಡೆದುಕೊಂಡಿದ್ದೇವೆ. ಒಂದು ಕಾಲದಲ್ಲಿ ಮೊಬೈಲ್ ಫೋನ್‌ಗಳನ್ನು ಆಮದು ಮಾಡಿಕೊಳ್ಳುತ್ತಿದ್ದ ನಾವು, ಇಂದು 300 ಕೋಟಿ ಯುಎಸ್ ಡಾಲರ್ ಮೌಲ್ಯದ ಮೊಬೈಲ್ ಫೋನ್‌ಗಳನ್ನು ರಫ್ತು ಮಾಡುವ ದೇಶವಾಗಿ ಬೆಳೆದಿದ್ದೇವೆ.

2047ರ ವೇಳೆಗೆ, ಅಂದರೆ ಸ್ವಾತಂತ್ರ್ಯದ ಶತಮಾನೋತ್ಸವದೊಳಗೆ, ಭಾರತವು ಜಾಗತಿಕವಾಗಿ ಮುಂಚೂಣಿಯಲ್ಲಿರುವ ಮಹಾಶಕ್ತಿಯಾಗಬೇಕು ಮತ್ತು ಜಗತ್ತಿಗೆ ಮಾರ್ಗದರ್ಶನ ನೀಡುವ ಸ್ಥಾನವನ್ನು ತಲುಪಬೇಕು ಎಂಬ ಗುರಿಯನ್ನು ನಾವು ಹೊಂದಿದ್ದೇವೆ. ಈ ಕಠಿಣ ಪರಿಶ್ರಮದ ಅವಧಿಯೇ 'ಅಮೃತ ಕಾಲ'. ಸ್ವಾತಂತ್ರ್ಯದ ಹಂಬಲವು ಪ್ರತಿಯೊಬ್ಬ ಸ್ವಾತಂತ್ರ್ಯ ಹೋರಾಟಗಾರನ ಹೃದಯದಲ್ಲಿ ಹೇಗೆ ಇತ್ತೋ, ಹಾಗೆ ದೇಶದ ಅಭಿವೃದ್ಧಿಯ ಆಲೋಚನೆಯು ಇಂದಿನ ಯುವಜನರ ಮನಸ್ಸಿನಲ್ಲಿ ಬೆಳೆಯಬೇಕು. ಈ ಅಮೃತ ಕಾಲದಲ್ಲಿ, ಇಂದಿನ ಯುವ ಪೀಳಿಗೆಯ ಆಲೋಚನೆಗಳು ಮತ್ತು ಪ್ರಯತ್ನಗಳು ದೇಶಭಕ್ತಿಯಿಂದ ಮೇಳೈಸಬೇಕು; ಅವರು ಶ್ರೇಷ್ಠ ಆದರ್ಶ ಹಾಗೂ ಸಚ್ಚಾರಿತ್ರ್ಯವುಳ್ಳವರಾಗಿ ಹೊರಹೊಮ್ಮಬೇಕು. ಆಗ ಮಾತ್ರ ನಾವು 2047 ರಲ್ಲಿ 'ವಿಕಸಿತ ಭಾರತ'ವನ್ನು ಕಾಣಲು ಸಾಧ್ಯವಾಗುತ್ತದೆ.

''ನನ್ನ ಸಹೋದರರೇ, ನಾವೆಲ್ಲರೂ ಕಷ್ಟಪಟ್ಟು ಕೆಲಸ ಮಾಡೋಣ. ಇದು ಮಲಗುವ ಸಮಯವಲ್ಲ, ಭಾರತದ ಭವಿಷ್ಯವು ನಮ್ಮ ಪ್ರಯತ್ನಗಳ ಮೇಲೆ ಅವಲಂಬಿತವಾಗಿದೆ'' ಎಂಬ ಸ್ವಾಮಿ ವಿವೇಕಾನಂದರ ಮಾತುಗಳು ನಮಗೆ ಪ್ರೇರಣೆ ಮತ್ತು ನಿರ್ದೇಶನ ಎರಡನ್ನೂ ನೀಡುತ್ತವೆ. ನಮ್ಮ ಕಠಿಣ ಪರಿಶ್ರಮದ ಮೂಲಕ ವಿಕಸಿತ ಭಾರತವನ್ನು ನಿರ್ಮಿಸಲು ನಾವೆಲ್ಲರೂ ಜೊತೆಯಾಗಿ ಶ್ರಮಿಸೋಣ.

(ಲೇಖಕರು, ಭಾರತದ ಉಪರಾಷ್ಟ್ರಪತಿ)

ದುಃಖಮಯ ಆನಂದಮಯ

ಅಜ್ಞಸ್ಯ ದುಃಖೌಘಮಯಂ ಜ್ಞಸ್ಯಾನಂದಮಯಂ ಜಗತ್ ।
ಅಂಧಂ ಭುವನಮಂಧಸ್ಯ ಪ್ರಕಾಶಂ ತು ಸುಚಕ್ಷುಷಃ ॥

ಅಜ್ಞಾನಿಗೆ ಜಗತ್ತು ದುಃಖಮಯ. ಜ್ಞಾನಿಗೆ ಅದು ಆನಂದಮಯ. ಕುರುಡನಿಗೆ ಜಗತ್ತು ಕುರುಡು. ಕಣ್ಣುಳ್ಳವನಿಗೆ ಅದು ಪ್ರಕಾಶಮಯ - ಎಂಬುದು ಶ್ಲೋಕಾರ್ಥ.

'ಯಥಾದೃಷ್ಟಿಸ್ತಥಾಸೃಷ್ಟಿ' ಎಂಬ ಸೂಕ್ತಿಯಿದೆ. ನಮ್ಮ ನೋಟಕ್ಕನುಗುಣವಾಗಿ ಲೋಕವು ಒದಗಿ ಬರುತ್ತದೆ ಎಂದರ್ಥ. ದೃಷ್ಟಿ ಬದಲಾದರೆ ಸೃಷ್ಟಿಯೂ ಬದಲಾಗುತ್ತದೆ.

ನಮ್ಮೆದುರು ಭಗವಂತನು ಸೃಷ್ಟಿಸಿದ ಸುಂದರವಾದ ಜಗತ್ತಿದೆ. ಇಲ್ಲಿ ಚಿತ್ರ-ವಿಚಿತ್ರಗಳಿವೆ. ಕಣ್ಣಿಗೆ ಹಬ್ಬವನ್ನುಂಟು ಮಾಡುವ ಸನ್ನಿವೇಶಗಳಿವೆ. ಬೇಸರ ತರಿಸುವ ಸಂಗತಿಯೂ ಇದೆ. ಬದುಕಿಗೆ ಬೇಕಾದ ಪ್ರೇರಣೆ ಪ್ರಕೃತಿಯಲ್ಲಿದೆ. ಬದುಕನ್ನು ಸಮೃದ್ಧಗೊಳಿಸುವ ಸಂದೇಶಗಳು ಇವೆ. ಇನ್ನು ಕೆಲವರಿಗೆ ಇವೆಲ್ಲವೂ ನೀರಸವೆನಿಸಬಹುದು. ದುಃಖಮಯ ಅನ್ನಿಸಬಹುದು. ಒಟ್ಟಿನಲ್ಲಿ ನಮ್ಮ ದೃಷ್ಟಿ, ನಾವು ಪಡೆದ ಸಂಸ್ಕಾರ ಇವುಗಳ ಆಧಾರದ ಮೇಲೆ ನಮಗೆ ಪೂರಕವಾಗಿಯೂ, ವಿರುದ್ಧವಾಗಿಯೂ ಒದಗಿ ಬರುತ್ತದೆ.



ಸಂಪನ್ನವಾದ ಜಗತ್ತು ಅಜ್ಞಾನಿಗೆ ದುಃಖಮಯವೆಂದು ತೋರಬಹುದು. ನೀರಸವೆಂದು ಕಾಣಬಹುದು. ಇದಕ್ಕೆಲ್ಲ ಕಾರಣ ಅವನಿಗಿರುವ ಅಜ್ಞಾನ. ಅಜ್ಞಾನಿಗೆ ಒಳಿತು- ಕೆಡುಕುಗಳನ್ನು ಗುರುತಿಸುವ ಸಾಮರ್ಥ್ಯ ಕಡಿಮೆ. ಆದ್ದರಿಂದ ಜಗತ್ತೇ ಅವನಿಗೆ ದುಃಖಮಯವಾಗಿ ತೋರುತ್ತದೆ. ಇದಕ್ಕೆ ಕಾರಣ ಒಳ್ಳೆಯದನ್ನು ಕಂಡುಕೊಳ್ಳುವ ಜ್ಞಾನವಿಲ್ಲದಿರುವುದು. ಆದ್ದರಿಂದ ಎಲ್ಲವೂ ದುಃಖಮಯ ಎಂದೆನಿಸಿದರೆ ಆಕ್ಷೇಪಿಸುವಂತಿಲ್ಲ, ಅವನ ಅಲ್ಪತಿಳುವಳಿಕೆಯ ಹಿನ್ನೆಲೆಯಲ್ಲಿ ಹಾಗೆ ತೋರುತ್ತದೆ.

ಎಲ್ಲರಿಗೂ ಇದು ಅನ್ವಯವಾಗುವುದಿಲ್ಲ, ಜ್ಞಾನಿಯಾದವನಿಗೆ ಈ ಜಗತ್ತು ಆನಂದಮಯವಾಗಿ ತೋರುತ್ತದೆ. ಜಗತ್ತಿನಲ್ಲಿರುವ ಪ್ರತಿಯೊಂದು ವಸ್ತುವನ್ನು ನೋಡಿ ಧನಾತ್ಮಕವಾಗಿ ಚಿಂತಿಸಿ ಅವುಗಳಲ್ಲಿರುವ ವಿಶೇಷತೆಯನ್ನು ಗುರುತಿಸಿ ಆನಂದವನ್ನು ಕಂಡುಕೊಳ್ಳುತ್ತಾನೆ. ಪಂಚಮದ ಇಂಚರದಲ್ಲಿ ಹಾಡುವ ಕೋಗಿಲೆ, ಮೋಡವನ್ನು ನೋಡಿ ನಲಿಯುವ ನವಿಲು ಇವೆಲ್ಲವೂ ಈ ಬಗೆಯ ವಿಶೇಷತೆಯನ್ನು ಯಾವ ಶಾಲೆಗೆ ಹೋಗಿಯೂ, ಗ್ರಂಥಗಳನ್ನು ಓದಿಯೋ ಇನ್ನೊಬ್ಬರ ಉಪದೇಶವನ್ನು ಕೇಳಿಯೋ ಕಲಿತುಕೊಂಡಿಲ್ಲ, ಪ್ರಕೃತಿಯ ಒಡಲೊಳಗಿದ್ದು ಕಲಿತುಕೊಂಡಿವೆ. ಇವುಗಳನ್ನು ನೋಡಿದ ಜ್ಞಾನಿಗೆ ಆನಂದವಾಗುವುದು ಸಹಜ. ವೈವಿಧ್ಯವನ್ನು ನೋಡಿ ಅದನ್ನು ಮಾಡಿದ ಭಗವಂತನ ವಿಶೇಷ ಸಾಮರ್ಥ್ಯವನ್ನು ನೆನೆದು ಆನಂದವನ್ನು ಅನುಭವಿಸುತ್ತಾನೆ. ಅಂಧ ಎಂದರೆ ಕುರುಡ. ಕಣ್ಣಿಲ್ಲದ ಅವನಿಗೆ ಎಲ್ಲವೂ ಕತ್ತಲೆಯಾಗಿ, ಕಪ್ಪಾಗಿ ತೋರುತ್ತದೆ. ಅವನ ಪಾಲಿಗೆ ಜಗತ್ತೇ ಕತ್ತಲೆ. ಜೀವನದಲ್ಲಿ ಬೆಳಕನ್ನೇ ಕಾಣದ ಅವನಿಗೆ ಎಲ್ಲವೂ ಕತ್ತಲೆಯೆನಿಸಿದರೆ ಆಶ್ಚರ್ಯವಿಲ್ಲ, ಜಗತ್ತೇ ಕತ್ತಲೆಯ ಕೂಪ ಎಂದೆನಿಸುವುದರಲ್ಲಿ ವಿಶೇಷತೆಯಿಲ್ಲ, ಇದಕ್ಕೆ ಬದಲಾಗಿ ಕಣ್ಣಿದ್ದವನಿಗೆ ಜಗತ್ತು ಪ್ರಕಾಶಮಯವಾಗಿ ತೋರುತ್ತದೆ. ಎಲ್ಲದರಲ್ಲಿಯೂ ಒಂದೊಂದು ಬಗೆಯ ಆಶ್ಚರ್ಯದ ಅಂಶವನ್ನು ಗುರುತಿಸಿ, ಸುಖಿಸುತ್ತಾನೆ. ಜನರು ಅವರು ಪಡೆದ ಸಂಸ್ಕಾರ, ಅವರಿಗಿರುವ ಅನುಕೂಲ ವ್ಯವಸ್ಥೆ, ಜ್ಞಾನದ ಹಿನ್ನೆಲೆಯಲ್ಲಿ ಜಗತ್ತನ್ನು ನೋಡುತ್ತಾರೆ. ಜಗತ್ತಿನ ಕುರಿತು ವ್ಯಾಖ್ಯಾನಿಸುತ್ತಾರೆ ಇದು ಲೋಕ ಸ್ವಭಾವ.

ಅಂತ್ಯೇಷ್ಟಿಯ ಕ್ರಿಯಾಕಲಾಪಗಳು ಮತ್ತು ಅವುಗಳ ಉದ್ದೇಶ

ಮರಣೋನ್ಮುಖನಾದ ಜೀವನ ಕಿವಿಯಲ್ಲಿ ಕರ್ಣಸೂಕ್ತವನ್ನು ಜಪಿಸುವುದರ ಹಿಂದೆ ಆತನ ಮನಸ್ಸಿನಲ್ಲಿ ಒಳ್ಳೆಯ ವೃತ್ತಿಗಳು ಉಂಟಾಗಬೇಕೆಂಬ ಉದ್ದೇಶವಿದೆ.

ಪದಸಂಚಲನ

• ಡಾ. ವಿಶ್ವನಾಥ ಸುಂಕಸಾಳ

sunkasalvishwa@gmail.com



ಜೀವನು ಪ್ರಕೃತಶರೀರವನ್ನು ಬಿಟ್ಟು ಹೊರಟ ಮೇಲೆ ದೇಹವನ್ನು ಶವವೆಂದು ಕರೆಯಲಾಗುತ್ತದೆ. ದೀರ್ಘಕಾಲದವರೆಗೆ ಭೋಗ, ಧರ್ಮಾಚರಣೆ ಮತ್ತು ಆಧ್ಯಾತ್ಮಸಾಧನೆಗೆ ಆಶ್ರಯವಾದ ಸ್ಥೂಲದೇಹಕ್ಕೆ ಮತ್ತು ಮರಣ ಹೊಂದಿದ ಜೀವನ ಮುಂದಿನ ಪ್ರಯಾಣಕ್ಕೆ ಸಹಕಾರಿಯಾಗಿ ಮಾಡಲಾಗುವ ಸಂಸ್ಕಾರಕ್ಕೆ ಅಂತ್ಯಸಂಸ್ಕಾರವೆಂದು ಕರೆಯಲಾಗುತ್ತದೆ. ಈ ಸಂದರ್ಭದಲ್ಲಿ ಮಾಡಲಾಗುವ ಶವದಹನವನ್ನು ಒಂದು ಯಜ್ಞವನ್ನಾಗಿಯೇ ಪರಿಗಣಿಸಲಾಗಿದೆ. ಹಾಗಾಗಿಯೇ ಇದನ್ನು ಅಂತ್ಯೇಷ್ಟಿ ಎಂದು ಕರೆಯಲಾಗುತ್ತದೆ. ಇದರಲ್ಲಿ ಯಮನೆಂಬ ದೇವತೆಯನ್ನುದ್ದೇಶಿಸಿ, ಮೃತನ ಶರೀರವನ್ನೇ ಆಹುತಿಯನ್ನಾಗಿ ಸಮರ್ಪಿಸಲಾಗುತ್ತದೆ. ಹಾಗಾಗಿಯೇ ಸಂಕಲ್ಪದಲ್ಲಿ 'ಯಮೋ ದೇವತಾ, ಶವಃ ಹವಿಃ' ಎಂಬುದಾಗಿ ಉಚ್ಚರಿಸಲಾಗುತ್ತದೆ.

ವ್ಯಕ್ತಿಯೊಬ್ಬ ಮರಣವನ್ನು ಹೊಂದುವ ಸಮಯದಲ್ಲಿ ಆತನ ದೊಡ್ಡ ಉಸಿರು ಹೊರಡುವ ಸಂದರ್ಭದಲ್ಲಿ ಕರ್ಣಸೂಕ್ತವನ್ನು ಪಠಿಸಬೇಕು. ಊರ್ಧ್ವಶ್ವಾಸೀ ಎಂಬುದಾಗಿ ಉಪನಿಷತ್ತು ಆತನನ್ನು ಕರೆಯುತ್ತದೆ. ಮರಣಹೊಂದುವ ಸಮಯದಲ್ಲಿ ವಾಕ್ಕು ಮನಸ್ಸಿನಲ್ಲಿ ತನ್ನ ವ್ಯಾಪಾರಗಳನ್ನು ಲಯಗೊಳಿಸುತ್ತದೆ. ಮನಸ್ಸು ಪ್ರಾಣದಲ್ಲಿಯೂ, ಪ್ರಾಣವು ತೇಜಸ್ಸಿನಲ್ಲಿಯೂ, ತೇಜಸ್ಸು ಪರದೇವತೆಯಲ್ಲಿಯೂ ಲೀನವಾಗಿ ಜೀವನು ಮುಂದಿನ ಶರೀರಾರಂಭಕ್ಕೆ ಬೇಕಾದ ಎಲ್ಲ ಸಾಮಗ್ರಿಗಳೊಂದಿಗೆ ಈ ಶರೀರವನ್ನು ತ್ಯಜಿಸುತ್ತಾನೆ ಎಂಬುದನ್ನು ನಾವು ಈ ಹಿಂದೆ ತಿಳಿದುಕೊಂಡಿದ್ದೇವೆ. ಅದಕ್ಕೆ ಉಪನಿಷತ್ತು ಎತ್ತಿನಬಂಡಿಯ ಉದಾಹರಣೆಯನ್ನೂ ಕೊಟ್ಟಿದೆ. ಹೇಗೆ ಬಂಡಿಯಲ್ಲಿ ಸಕಲ ಸಾಮಗ್ರಿಗಳನ್ನು ತುಂಬಿಕೊಂಡು ಹೋಗುವಾಗ ಆ ಬಂಡಿಯು ಶಬ್ದವನ್ನು ಮಾಡುತ್ತದೆಯೋ, ಜೀವನ ಉತ್ಕ್ರಮಣದ ಸಮಯದಲ್ಲಿ ಮರ್ಮಸ್ಥಾನಗಳನ್ನು ಕತ್ತರಿಸಿಕೊಂಡು ಹೋಗುವಾಗ ಜೀವನೂ ಸಶಬ್ದವಾಗಿ ಈ ದೇಹವನ್ನು ತ್ಯಜಿಸುತ್ತಾನೆ ಎಂಬುದಾಗಿ ಶಾಸ್ತ್ರಗಳು ತಿಳಿಸುತ್ತವೆ.

ಮರಣೋನ್ಮುಖನಾದ ಜೀವನ ಕಿವಿಯಲ್ಲಿ ಕರ್ಣಸೂಕ್ತವನ್ನು ಜಪಿಸುವುದರ ಹಿಂದೆ ಆತನ ಮನಸ್ಸಿನಲ್ಲಿ ಒಳ್ಳೆಯ ವೃತ್ತಿಗಳು ಉಂಟಾಗಬೇಕೆಂಬ ಉದ್ದೇಶವಿದೆ. ಮರಣದ ಸಮಯದಲ್ಲಿ ಯಾವ ರೀತಿಯ ಮನೋವೃತ್ತಿಗಳು ಆತನ ಮನಸ್ಸಿನಲ್ಲಿ ಉಂಟಾಗುತ್ತವೆಯೋ ಅವನು ಮುಂದಿನ ಜನ್ಮವನ್ನು ನಿರ್ಧರಿಸುತ್ತವೆ. ಹಾಗಾಗಿ ಹೆಚ್ಚೆಚ್ಚು ದೇವತಾ ನಾಮಸಂಕೀರ್ತನೆ, ವಿಷ್ಣುಸಹಸ್ರನಾಮ, ಭಗವದ್ಗೀತೆ ಮೊದಲಾದವುಗಳ ಪಠಣ ಇವುಗಳು ಅತ್ಯಂತ ಮುಖ್ಯವಾದುವು. ದೇವತಾ ನಾಮಸಂಕೀರ್ತನೆಯಿಂದ ಭಗವದ್ವಿಷಯಕವಾದ ಚಿಂತನೆಗಳು ಮೂಡಲಿ ಎಂಬುದು ಆಶಯ. ಜೀವನು ಇಡೀ ಜೀವನದಲ್ಲಿ ಯಾವ ರೀತಿಯ ಚಿಂತನೆಯನ್ನು ಹೆಚ್ಚು ಮಾಡಿದ್ದಾನೋ ಅದೇ ಚಿಂತನೆಯೇ ಆತನ ಮನಸ್ಸಿನಲ್ಲಿ ಮೂಡುತ್ತದೆ. ಹಾಗಾಗಿ **'ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಕಲೇವರಮ್। ತಂ ತಮೇವೈತಿ ಕೌಂತೇಯ ಸದಾ ತದ್ಭಾವಭಾವಿತಃ॥'** ಎಂಬ ಮೂಲಕ ಭಗವಂತನು ಗೀತೆಯಲ್ಲಿ ಇದನ್ನೇ ತಿಳಿಸಿದ್ದಾನೆ. ಇಲ್ಲಿ 'ಸದಾ ತದ್ಭಾವಭಾವಿತಃ' ಎಂಬುದು ಬಹಳ ಮುಖ್ಯವಾದುದು. ಸಾವಿನ ಸಂದರ್ಭದಲ್ಲಿ ಭಗವಚ್ಚಿಂತನೆ ಮಾಡಿದರೆ ಸಾಕಲ್ಲ, ಇಡೀ ಜೀವನದಲ್ಲಿ ಯಾಕೆ ಅಂಥ ಸಚ್ಚಿಂತನೆಯನ್ನು ಮಾಡಬೇಕು ಎಂದು ಕೆಲವರಿಗೆ ಅನಿಸಬಹುದು. ಆದರೆ ಹಾಗಲ್ಲ, ಮರಣದಂಥ ತೀವ್ರ ಸಂಕಟದ ಸಮಯದಲ್ಲಿ ಆತ ಜೀವನವಿಡೀ ಯಾವ ರೀತಿಯ ಆಲೋಚನೆಗಳನ್ನು ಮಾಡಿಕೊಂಡು ಬಂದಿದ್ದಾನೋ ಅಂಥ ಆಲೋಚನೆಗಳೇ ಬರುತ್ತವೆಯೇ ಹೊರತು, ಸ್ವತಂತ್ರವಾಗಿ ತನಗೆ ಬೇಕಾದ ವಿಷಯವನ್ನು ಚಿಂತಿಸುವ ಸಾಮರ್ಥ್ಯ ಆತನಿಗಿರುವುದಿಲ್ಲ, ಹಾಗಾಗಿಯೇ ಸದಾ ತದ್ಭಾವಭಾವಿತಃ ಎಂದು ಗೀತೆಯಲ್ಲಿ ಹೇಳಲಾಗಿದೆ.

ಅದೇ ಸಂದರ್ಭದಲ್ಲಿ ಮರಣತ್ರಾಸದ ನಿವಾರಣೆಗಾಗಿ ಗೋದಾನವನ್ನು ಮಾಡಲಾಗುತ್ತದೆ. ಇದು ಯಾಕೆ ಅಂದರೆ, ಜೀವನು ತನ್ನ ಮರಣದವರೆಗೂ ಈ ದೇಹವನ್ನೇ ತಾನೆಂಬ ಅಭಿಮಾನದಿಂದ ಜೀವಿಸಿದ್ದ. ಅದನ್ನು ಈಗ ಬಿಟ್ಟು ಹೋಗುವಾಗ, ಅದರ ಜೊತೆಗೆ, ತನ್ನದು ಎಂದು ಅಭಿಮಾನಿಸಿದ್ದ ಎಲ್ಲವನ್ನೂ ಬಿಟ್ಟು ಹೊರಡಬೇಕಾಗುತ್ತದೆ. ಅಷ್ಟೇ ಅಲ್ಲ, ಜೀವೋತ್ಕ್ರಮಣದ ಸಂದರ್ಭದಲ್ಲಿ ಆಗುವ ಅನೂಹ್ಯ ನೋವು ಸಹಿಸಲಸಾಧ್ಯವಾಗಿರುತ್ತದೆ. ಹಾಗಾಗಿ ತೀವ್ರವಾದ ಆ ಸಂಕಟವು ಕಡಿಮೆಯಾಗಿ, ಆತನ ಉತ್ಕ್ರಮಣವು ಸುಖಕರವಾಗಿರಲೆಂಬ ಸಂಕಲ್ಪದಿಂದ ಇದನ್ನು ನಡೆಸಲಾಗುತ್ತದೆ. ಹಾಗೆಯೇ ಪಾಪನಿವಾರಣೆಯನ್ನು ಪ್ರಾರ್ಥಿಸಿ ತಿಲಪಾತ್ರದಾನವನ್ನು ನಡೆಸಲಾಗುತ್ತದೆ. ಇದಲ್ಲದೇ ದಶದಾನವೆಂದು ಪ್ರಸಿದ್ಧವಾದ ದಾನಕರ್ಮವನ್ನೂ ಪಾಪದ ನಾಶದ ಉದ್ದೇಶದಿಂದಲೇ ನಡೆಸಲಾಗುತ್ತದೆ.

ದಶದಾನಗಳೆಂದರೆ ಹತ್ತು ವಿಧದ ದಾನಗಳು. ದಾನಕ್ಕೆ ನಮ್ಮ ಪಾಪವನ್ನು ಕಳೆದುಹಾಕುವ ಸಾಮರ್ಥ್ಯವಿರುತ್ತದೆ. ಸಾತ್ತ್ವಿಕವಾದ ದಾನವು ಎಲ್ಲಕ್ಕಿಂತ ಪ್ರಶಸ್ತವಾದುದು. ಆದರೆ ಇಲ್ಲಿ ಈ ದಾನಗಳನ್ನು ಮರಣೋನ್ಮುಖನು ಸ್ವತಃ ಕೊಡುತ್ತಿಲ್ಲ, ಬದಲಿಗೆ ಅವನ ಪ್ರತಿನಿಧಿಯಾಗಿ ಪುತ್ರನು ಕೊಡುತ್ತಾನೆ. ದಶವಿಧದಾನಗಳೆಂದರೆ, ಗೋದಾನ, ಭೂದಾನ, ತಿಲದಾನ, ಹಿರಣ್ಯದಾನ, ಆಜ್ಯದಾನ, ಬಟ್ಟೆ, ಧಾನ್ಯ, ಗುಡ, ಬೆಳ್ಳಿ, ಉಪ್ಪು ಹೀಗೆ ಹತ್ತು ವಿಧದ ದ್ರವ್ಯಗಳನ್ನು ಕೊಡುವ ದಾನವೇ ದಶದಾನವಾಗಿದೆ. ಇದರಿಂದ ಕಲಿಯುಗದಲ್ಲಿರುವ ದಾನದ ಮಹತ್ತ್ವ ವ್ಯಕ್ತವಾಗುತ್ತದೆ. ಜ್ಞಾನ, ತಪಸ್ಸು ಮತ್ತು ಯಜ್ಞಗಳು ಉಳಿದ ಯುಗಗಳಲ್ಲಿ ಮುಖ್ಯವಾದವುಗಳಾದರೆ, ಕಲಿಯುಗದಲ್ಲಿ ದಾನಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಇದರಿಂದ ಪುಣ್ಯವೂ ದೊರೆಯುತ್ತದೆ ಮತ್ತು ಪಾಪವೂ ಕ್ಷೀಣಿಸುತ್ತದೆ. ದಾನದ ಪರಿಮಾಣ, ದಾನದ ರೀತಿ ಮೊದಲಾದವುಗಳಿಗೆ ಅನುಗುಣವಾಗಿ ಆಯಾ ಪಾಪಗಳ ಕ್ಷಯವುಂಟಾಗುತ್ತದೆ ಎಂದರ್ಥ. ಯಾಕೆಂದರೆ ಕರ್ಮದಲ್ಲಿಯೂ ದೃಢ, ಮಧ್ಯಮ, ಅದೃಢ ಎಂಬ ವಿಭಾಗಗಳಿವೆ.

ತಂದೆಯ ಅಂತಿಮಕ್ರಿಯೆಯನ್ನು ಆರಂಭಿಸುವಾಗ ಮಗನು ಕೃಚ್ಛ್ರಾಚರಣೆಯನ್ನು ಮಾಡಿಕೊಳ್ಳುತ್ತಾನೆ. ತಾನು ಮಾಡಿದ ಪಾಪದ ನಾಶವಾಗಿ, ತನ್ನ ಶುದ್ಧಿಯೊದಗಿ, ಕರ್ಮಾನುಷ್ಠಾನಕ್ಕೆ ಯೋಗ್ಯತೆ ದೊರಕಲಿ ಎಂಬುದು ಇದರ ಆಶಯ. ಇಲ್ಲಿಯೂ ದಾನವನ್ನು ಮಾಡಲಾಗುತ್ತದೆ. ಅನಂತರ ಮುಂಡನವನ್ನು ಮಾಡಲಾಗುತ್ತದೆ.

ಮೇರುಮಂದರತುಲ್ಯಾನಿ ಪಾಪಾನಿ ವಿವಿಧಾನಿ ಚ ।
ಕೇಶಾನಾಶ್ರಿತ್ಯ ತಿಷ್ಠಂತಿ ತಸ್ಮಾತ್ ಕೇಶಾನ್ ವಪಾಮ್ಯಹಮ್ ॥ ಎಂಬುದು ಈ ಸಂದರ್ಭದಲ್ಲಿ ಹೇಳಲಾಗುವ ಮಂತ್ರ. ಅರ್ಥಾತ್ ದೇಹದಲ್ಲಿರುವ ಕೂದಲುಗಳಲ್ಲಿ ಪಾಪವು ಆಶ್ರಿತವಾಗಿರುತ್ತದೆ. ಜೊತೆಗೆ ಇವು ಮಲವೂ ಕೂಡ ಹೌದು. ಕೂದಲು, ಉಗುರುಗಳು ಮೊದಲಾದ ರೂಪದಲ್ಲಿ ದೇಹದಲ್ಲಿರುವ ಮಲವು ಹೊರತೋರಿಕೊಳ್ಳುತ್ತದೆ. ಕೆಲವಷ್ಟು ನಿತ್ಯವೂ ಹೊರಹೋಗುವುದಾದರೂ, ಇನ್ನು ಕೆಲವಷ್ಟು ಕೇಶಾದಿಗಳ ಮೂಲಕ ಹೊರಬರುತ್ತವೆ. ಇಂಥ ಕೇಶಗಳನ್ನು ಕತ್ತರಿಸುವುದೆಂದರೆ, ಅದರಲ್ಲಿ ಆಶ್ರಿತವಾಗಿರುವ ಪಾಪಗಳನ್ನು ಕತ್ತರಿಸಿಕೊಂಡಂತೆ. ಹಾಗೆಂಬುದಾಗಿ ಈ ಮಂತ್ರವೇ ಹೇಳುತ್ತಿದೆ. ಒಟ್ಟಿನಲ್ಲಿ ಪ್ರತಿಯೊಂದು ಕರ್ಮಕ್ಕೂ ಅದರದ್ದೇ ಆದ ಉದ್ದೇಶ ಹಾಗೂ ಪ್ರಯೋಜನಗಳಿವೆ. ಇಷ್ಟಾದ ಮೇಲೆ ತಂದೆಯ ವಿಚ್ಛಿನ್ನವಾದ ಔಪಾಸನಾಗ್ನಿಯ ಪುನಸ್ಸಂಧಾನವನ್ನು ಮಾಡಲಾಗುತ್ತದೆ. ಅರ್ಥಾತ್ ಅಗ್ನಿಯ ಉಪಾಸನೆಯನ್ನು ನಿತ್ಯವೂ ಮಾಡಬೇಕಾದದ್ದು, ಅದು ವಿಚ್ಛಿನ್ನವಾದಲ್ಲಿ ಅದರ ಪ್ರಾಯಶ್ಚಿತ್ತದೊಂದಿಗೆ ಮತ್ತೆ ಸಂಧಾನವನ್ನು ಮಾಡಿಕೊಳ್ಳಬೇಕಾಗುತ್ತದೆ. ಜೀವಿತದ ಅವಧಿಯಲ್ಲಾದರೆ ಅದೇ ವ್ಯಕ್ತಿಯೇ ಅದನ್ನು ಮಾಡಿಕೊಳ್ಳಬೇಕು. ತೀರಿಕೊಂಡಾಗ ಮಾತ್ರ ಆ ವ್ಯಕ್ತಿಯು ಉಪಾಸಿಸುತ್ತಿದ್ದ ಅಗ್ನಿಯ ಸಂಧಾನವನ್ನು ಆತನ ಮಗನು ಮಾಡಬಹುದಾಗಿದೆ. ಆ ಅಗ್ನಿಯಲ್ಲಿಯೇ ಆತನ ದೇಹವನ್ನು ಸುಡಲಾಗುತ್ತದೆ. ಒಟ್ಟಿನಲ್ಲಿ ಇಡೀ ಜೀವನದಲ್ಲಿ ಜೊತೆಗಿದ್ದ ಅಗ್ನಿಗೆ ತನ್ನ ದೇಹವನ್ನೇ ಆಹುತಿಯಾಗಿಸಿಕೊಳ್ಳುವ ಮೂಲಕ ವ್ಯಕ್ತಿಯ ಈ ಶರೀರದಲ್ಲಿನ ಜೀವನವು ಪೂರ್ಣಗೊಳ್ಳುತ್ತದೆ. ಭಾರತೀಯ ಸಂಸ್ಕೃತಿಯಲ್ಲಿ ಇಂಥ ಎಲ್ಲ ಆಚರಣೆಗಳು ಎಷ್ಟು ಅರ್ಥಪೂರ್ಣ ಎಂಬುದು ಇದರಿಂದ ತಿಳಿಯುತ್ತದೆ.

ಇಷ್ಟೆಲ್ಲ ಆದ ಮೇಲೆ ಶವದ ಸ್ನಾನವನ್ನು ಮಾಡಲಾಗುತ್ತದೆ. ಶವವು ಈಗ ಅಂತ್ಯೇಷ್ಟಿಯ ದ್ರವ್ಯವಾಗಿರುವುದರಿಂದ, ದ್ರವ್ಯದ ಶುದ್ಧಿಗಾಗಿ ಮಾಡಲಾಗುವ ಪ್ರೋಕ್ಷಣಾದಿಗಳಂತೆ ಇದೂ ಒಂದು ಸಂಸ್ಕಾರವಾಗಿದೆ. ಈ ಸ್ನಾನವನ್ನು ಓಷಧಿದ್ರವ್ಯಗಳಿಂದ ಕೂಡಿದ ನೀರಿನಿಂದ ಮಾಡಲಾಗುತ್ತದೆ. ಏತನ್ಮಧ್ಯೆ ಶವಕ್ಕೆ ಹಳೆಯ ಬಟ್ಟೆಯನ್ನು ತೆಗೆದು, ಹೊಸಬಟ್ಟೆಯನ್ನು ಆಚ್ಛಾದಿಸುವುದೇ ಮೊದಲಾದ ಕ್ರಿಯೆಗಳಿದ್ದೇ ಇವೆ. ಒಟ್ಟಿನಲ್ಲಿ ಮರಣವು ಬದುಕಿರುವ ಪ್ರತಿಯೊಬ್ಬನಿಗೂ ವೈರಾಗ್ಯವನ್ನುಂಟುಮಾಡುವ ಸಂದರ್ಭ. ಹುಟ್ಟಿದ ಪ್ರತಿಯೊಬ್ಬನಿಗೂ ಮರಣವಿದೆ ಎಂಬುದು ನೆನಪಾದಾಗ ಆದಷ್ಟು ಶೀಘ್ರವಾಗಿ ಧರ್ಮವನ್ನು ಸಂಪಾದಿಸಿಕೊಳ್ಳಬೇಕೆಂಬ ಬುದ್ಧಿ ಉಂಟಾಗುತ್ತದೆ. ಐಹಿಕ ಸುಖಭೋಗಗಳೆಲ್ಲವೂ ಅನಿತ್ಯ. ಕೇವಲ ಧರ್ಮ ಮಾತ್ರವೇ ನಮ್ಮ ಜೊತೆ ಬರುವಂಥದ್ದೆಂಬ ಜ್ಞಾನೋದಯವುಂಟಾಗಬೇಕೆಂಬುದೇ ಈ ಎಲ್ಲ ಕ್ರಿಯಾಕಲಾಪಗಳ ಮುಖ್ಯ ಉದ್ದೇಶ. ಹಾಗಾಗಿಯೇ ಗರುಡ ಪುರಾಣಾದಿಗಳಲ್ಲಿಯೂ ಕೂಡ ನರಕಾದಿಗಳ ವರ್ಣನೆಯನ್ನು ಮಾಡಲಾಗಿದೆ.

ವ್ಯಕ್ತಿಯ ಪ್ರಾಣೋತ್ಕ್ರಮಣದ ಅನಂತರ ಮಾಡಲಾಗುವ ವಿಧಿ-ವಿಧಾನಗಳ ಮುಂದುವರಿದ ಚರ್ಚೆಯನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

ತೀಸ್ತಾ ನದಿ ನೀರು ಹಂಚಿಕೆ: ಚೀನಾದ ಮಧ್ಯಸ್ಥಿಕೆ ಕೋರುತ್ತಿರುವ ಬಾಂಗ್ಲಾ

ಕೆ.ಆರ್. ಕಾಮತ್

ಬಾಂಗ್ಲಾ ದೇಶದಲ್ಲಿ ಚುನಾವಣೆ ನಡೆದು ತಾರಿಕ್ ರೆಹಮಾನ್ ಪ್ರಧಾನಿಯಾದ ಬಳಿಕ ಭಾರತದೊಂದಿಗಿನ ಸಂಬಂಧ ಸುಧಾರಿಸಬಹುದೆಂದು ಭಾವಿಸಲಾಗಿತ್ತು. ಆದರೆ ತಾರಿಕ್ ರೆಹಮಾನ್ ಅವರು ಚೀನಾದೆಡೆಗೆ ಹೆಚ್ಚು ವಾಲುತ್ತಿದ್ದು, ಭಾರತದ ಜತೆಗಿನ ಸಂಬಂಧಕ್ಕೆ ಹೆಚ್ಚು ಮಹತ್ವ ನೀಡದಿರುವಂತೆ ತೋರಿಬರುತ್ತಿದೆ. ಅದೂ ಸಾಲದೆಂಬಂತೆ ಅವರು ಭಾರತ ಮತ್ತು ಬಾಂಗ್ಲಾದೇಶದ ನಡುವಿನ ತೀಸ್ತಾ ನದಿ ಜಲ ಹಂಚಿಕೆ ಮಾತುಕತೆಯಲ್ಲಿ ಚೀನಾ ಕೂಡಾ ಪಾಲ್ಗೊಳ್ಳಬೇಕು ಎಂದು ಹೇಳುವ ಮೂಲಕ ಚೀನಾದ ಬೆಂಬಲವನ್ನು ವಿದ್ಯುಕ್ತವಾಗಿ ಕೋರಿದ್ದಾರೆ. ತಾರಿಕ್ ರೆಹಮಾನ್ ಅವರ ಈ ನಡೆಯು ಭಾರತ ಮತ್ತು ಬಾಂಗ್ಲಾದೇಶ ನಡುವಿನ ಸಂಬಂಧಗಳ ಮೇಲೆ ಮತ್ತೆ ಕರಿಛಾಯೆ ಹರಡುವುದು ನಿಶ್ಚಿತವಾಗಿದೆ.

ತೀಸ್ತಾ ನದಿ ಜಲ ಸಮಗ್ರ ನಿರ್ವಹಣೆ ಯೋಜನೆ (TRCM-RP) ಕುರಿತು ಬಾಂಗ್ಲಾದೇಶದ ವಿದೇಶಾಂಗ ಸಚಿವ ಕವಿ ಉರ್ ರೆಹಮಾನ್ ಮತ್ತು ಚೀನಾ ವಿದೇಶಾಂಗ ಸಚಿವ ವಾಂಗ್ ಯೀ ಸೇರಿಕೊಂಡು ಬೀಜಿಂಗ್‌ನಲ್ಲಿ ಮಾತುಕತೆ ನಡೆಸಿದ್ದಾರೆಂದೂ ಬಾಂಗ್ಲಾದೇಶದ ಸುದ್ದಿ ಸಂಸ್ಥೆ ವರದಿ ಮಾಡಿದೆ. ಇದು ಭಾರತದ ಆಂತರಿಕ ವ್ಯವಹಾರದಲ್ಲಿ ಚೀನಾದ ಹಸ್ತಕ್ಷೇಪವೇ ಸರಿ.

ಇದಕ್ಕೆ ಪ್ರತಿಕ್ರಿಯಿಸಿರುವ ಭಾರತದ ವಿದೇಶಾಂಗ ಇಲಾಖೆಯ ವಕ್ತಾರ ರಣಧೀರ್ ಜೈಸ್ವಾಲ್‌ರವರು ''ಭಾರತ ಮತ್ತು ಬಾಂಗ್ಲಾ ದೇಶಗಳ ನಡುವೆ 54 ನದಿಗಳು ಹರಿಯುತ್ತಿವೆ. ಜಲ ಸಂಬಂಧಿತ ಎಲ್ಲಾ ವಿಷಯಗಳನ್ನು ಚರ್ಚಿಸಲು ನಾವು ಈಗಾಗಲೇ ದ್ವಿಪಕ್ಷೀಯ ಸಮಿತಿಯನ್ನು ನಿರ್ಮಿಸಿದ್ದೇವೆ. ಈ ದ್ವಿಪಕ್ಷೀಯ ಸಮಿತಿಯು ಆಗಾಗ ಸೇರಿ ಮಾತುಕತೆ ನಡೆಸುವುದನ್ನು ಮುಂದುವರಿಸುತ್ತದೆ'' ಎಂದು ಹೇಳಿ ಚೀನಾದ ಮಧ್ಯಸ್ಥಿಕೆಯ ಪಾತ್ರವನ್ನು ತಳ್ಳಿಹಾಕಿದ್ದಾರೆ.

ಭಾರತ ಮತ್ತು ಬಾಂಗ್ಲಾದೇಶದ ನಡುವೆ 1996ರಲ್ಲಿ ಗಂಗಾ ನದಿ ಜಲ ಒಪ್ಪಂದ ಏರ್ಪಟ್ಟಿತ್ತು. 30 ವರ್ಷಗಳ ಈ ಒಪ್ಪಂದವು ಡಿಸೆಂಬರ್ 2026ಕ್ಕೆ ಅಂತ್ಯಗೊಳ್ಳುತ್ತದೆ. ಈ ಒಪ್ಪಂದ ನವೀಕರಣ ಆಗಬೇಕಾಗಿದೆ. ಇದರ ಜತೆಗೇ 2024ರಲ್ಲಿ ಉಭಯ ದೇಶಗಳ ಮಧ್ಯೆ ತೀಸ್ತಾ ನದಿ ಜಲ ಒಪ್ಪಂದ ರೂಪುಗೊಂಡಿತ್ತು. ಈ ಒಪ್ಪಂದದ ಪ್ರಕಾರ ಭಾರತಕ್ಕೆ ಶೇಕಡ 42.5 ರಷ್ಟು ನೀರು ಹಂಚಿಕೆಯಾದರೆ ಬಾಂಗ್ಲಾದೇಶಕ್ಕೆ ಶೇಕಡ 37.5 ರಷ್ಟು ನೀರು ಹಂಚಿಕೆಯಾಗಬೇಕು. ಆದರೆ ಪಶ್ಚಿಮ ಬಂಗಾಳ ಸರ್ಕಾರವು ಈ ಒಪ್ಪಂದವನ್ನು ವಿರೋಧಿಸಿದ್ದರಿಂದ ಒಪ್ಪಂದವು ಜಾರಿಗೆ ಬರಲೇ ಇಲ್ಲ. ಹೀಗಾಗಿ ಒಪ್ಪಂದ ಪತ್ರಗಳ ಮೇಲೆ ಎರಡು ದೇಶಗಳ ಸಹಿ ಬೀಳಲೇ ಇಲ್ಲ. ಹೀಗಾಗಿ ತೀಸ್ತಾ ನದಿ ನೀರಿನ ಹಂಚಿಕೆ ಬಗೆಹರಿಯದೆ ಹಾಗೇ ಉಳಿದಿದೆ.

ಪಶ್ಚಿಮ ಬಂಗಾಳದ ಮಮತಾ ಸರ್ಕಾರ ಒಪ್ಪಂದವನ್ನು ವಿರೋಧಿಸಿದ್ದು ತನ್ನ ಪಾಲಿನ ಹೆಚ್ಚಿನ ನೀರಿಗಾಗಿ ಅಲ್ಲ, ಇಲ್ಲಿಯೂ ಓಲೈಕೆಯ ರಾಜಕಾರಣ ಕೆಲಸ ಮಾಡಿತ್ತು. ಭಾರತ ಸರ್ಕಾರವು ಇತ್ತೀಚೆಗೆ ಸಿಂಧೂ ನದಿ ಜಲ ಒಪ್ಪಂದವನ್ನು ರದ್ದುಗೊಳಿಸುವ ತನಕ ಸಿಂಧೂ ನದಿ ಮತ್ತು ಅದರ ಉಪನದಿಗಳಲ್ಲಿನ ಹೆಚ್ಚಿನ ನೀರು ಪಾಕಿಸ್ತಾನಕ್ಕೆ ಹರಿದು ಹೋದ ರೀತಿಯಲ್ಲೇ, ತೀಸ್ತಾ ನದಿಯಲ್ಲಿನ ಹೆಚ್ಚಿನ ಪ್ರಮಾಣದ ನೀರು ಬಾಂಗ್ಲಾದೇಶಕ್ಕೆ ಹರಿದು ಹೋಗುತ್ತಲೇ ಇದೆ. ಬಹುಶಃ ಪಶ್ಚಿಮ ಬಂಗಾಳ ಸರ್ಕಾರ ಇದನ್ನೇ ಬಯಸಿದ್ದಿರಬಹುದು! ಒಪ್ಪಂದ ಏರ್ಪಟ್ಟರೆ ಭಾರತವು ಹೆಚ್ಚು ನೀರನ್ನು ತನಗೆ ಬಳಸಿಕೊಳ್ಳಬಹುದಾಗಿದೆ.

ಬಾಂಗ್ಲಾದೇಶವು 85 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ. ಇದು ಅದರ ಒಟ್ಟು ಭೂವೈಶಾಲ್ಯದಲ್ಲಿ ಶೇ. 50ರಷ್ಟು ಆಗಿದೆ. ಭತ್ತ ಮತ್ತು ಆಲೂಗಡ್ಡೆ ಮುಖ್ಯ ಬೆಳೆಗಳಾಗಿವೆ. ಹೇರಳ ನೀರು ಸಿಗುತ್ತಿರುವುದರಿಂದ ವರ್ಷಕ್ಕೆ ಮೂರು ಬಾರಿ ಭತ್ತ ಬೆಳೆಯಲಾಗುತ್ತದೆ. ಇದಕ್ಕೆ ಹೋಲಿಸಿದರೆ ಪಶ್ಚಿಮ ಬಂಗಾಳವು 52 ಲಕ್ಷ ಹೆಕ್ಟೇರ್ ಕೃಷಿ ಭೂಮಿ ಹೊಂದಿದೆ.

ತೀಸ್ತಾ ನದಿಯು ಸಿಕ್ಕಿಂನ ಪೂರ್ವ ಹಿಮಾಲಯ ಪರ್ವತ ಶ್ರೇಣಿಯಲ್ಲಿ ತೀಸ್ತಾ ಗಾಂಗ್ಸೆ ಎಂಬಲ್ಲಿ 17,770 ಅಡಿ ಎತ್ತರದಲ್ಲಿ ಹುಟ್ಟಿ ಸಿಕ್ಕಿಂ ಆದ ಮೇಲೆ ಪಶ್ಚಿಮ ಬಂಗಾಳದ ಮೂಲಕ ಹರಿದು ನಂತರ ಬಾಂಗ್ಲಾದೇಶ ಪ್ರವೇಶಿಸುತ್ತದೆ. ತೀಸ್ತಾ ನದಿಯ ಒಟ್ಟು ಉದ್ದ 414 ಕಿ.ಮೀ. ಈ ಪೈಕಿ 315 ಕಿ.ಮೀ. ಭಾರತದಲ್ಲಿ ಹರಿದರೆ 109 ಕಿ.ಮೀ. ಬಾಂಗ್ಲಾ ದೇಶದಲ್ಲಿ ಹರಿಯುತ್ತದೆ. ಇದರ ಜಲಾನಯನ ಪ್ರದೇಶ 12,540 ಕಿಮೀ. ಗಂಗೆಯ ನಂತರ ತೀಸ್ತಾ ನದಿಯು ಪಶ್ಚಿಮ ಬಂಗಾಳದ ಎರಡನೇ ಅತಿ ದೊಡ್ಡ ನದಿಯಾಗಿದೆ. ಪಶ್ಚಿಮ ಬಂಗಾಳ ಮತ್ತು ಬಾಂಗಾದೇಶ ಎರಡಕ್ಕೂ ತೀಸ್ತಾ ನದಿಯು ಅತ್ಯಂತ ಪ್ರಮುಖ ನದಿಯಾಗಿದೆ.

ತೀಸ್ತಾ ನದಿಯು ಭಾರತದಲ್ಲಿ ಮಂಗಾನ್, ಸಾಂಗ್ಟಕ್, ಪಾಕ್ ಯೊಂಗ್, ಕಾಲಿಮ್ ಪೊಂಗ್, ಡಾರ್ಜಿಲಿಂಗ್, ಜಲಪಾಯಿಗುರಿ, ಕೂಚ್ ಬಿಹಾರ್, ರಗ್ಪೊ ಮತ್ತು ಮೆಕ್ಲಿಗಂಜ್ ಮುಂತಾದ ಜಿಲ್ಲೆಗಳ ಮೂಲಕ ಹರಿದು ಭಾರತದಲ್ಲಿ ತನ್ನ ಪ್ರಯಾಣವನ್ನು ಮುಗಿಸಿ ಬಾಂಗ್ಲಾದೇಶವನ್ನು ಪ್ರವೇಶಿಸುತ್ತದೆ.

ಭಾರತದಲ್ಲಿ ತೀಸ್ತಾ ನದಿಯ ಮೇಲೆ ಹಲವಾರು ಸೇತುವೆಗಳನ್ನು ನಿರ್ಮಿಸಲಾಗಿದೆ. ಸಿಲಿಗುರಿ ಬಳಿ ನಿರ್ಮಿಸಲಾದ ಸೆವೋಕ್ ರೈಲ್ವೆ ಸೇತುವೆಯು ಪಶ್ಚಿಮ ಬಂಗಾಳ ರಾಜ್ಯಕ್ಕೆ ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಅದೇ ವಿಧವಾಗಿ ಜಲಪಾಯಿಗುರಿ ಬಳಿ ನಿರ್ಮಿಸಲಾದ ಜಲಪಾಯ್ ಗುರಿ ಸೇತುವೆ ಕೂಡಾ ಈಶಾನ್ಯ ರಾಜ್ಯಗಳೊಂದಿಗೆ ಸಂಪರ್ಕ ಕಲ್ಪಿಸುತ್ತದೆ. ಕೂಚ್‌ಬಿಹಾರ್ ಜಿಲ್ಲೆಯ ಹಲ್ದಿಬಾರಿಯಲ್ಲಿ ನಿರ್ಮಿಸಲಾದ 3.8 ಕಿ.ಮೀ. ಉದ್ದದ ಸೇತುವೆಯು ಪಶ್ಚಿಮ ಬಂಗಾಳದ ಅತ್ಯಂತ ಉದ್ದದ ಸೇತುವೆಯಾಗಿದೆ.

ಪಶ್ಚಿಮ ಬಂಗಾಳ ಮತ್ತು ಬಾಂಗ್ಲಾದೇಶಗಳ ನಡುವೆ ಸುಮಾರು 54 ನದಿಗಳು ಹರಿಯುತ್ತಿವೆ. ಅವುಗಳಲ್ಲಿ ತೀಸ್ತಾ ನದಿಯನ್ನು ಬಿಟ್ಟು ಉಳಿದೆಲ್ಲ ನದಿಗಳು ಬಹಳ ಸಣ್ಣವು. ರಾಣಿಕೋಲಾ ನದಿಯು ತೀಸ್ತಾದ ದೊಡ್ಡ ಉಪನದಿಯಾದರೆ ರಂಗ್ಪೊ ತೀಸ್ತಾದ ಎರಡನೆ ದೊಡ್ಡ ಉಪನದಿ. ಇವಲ್ಲದೆ ಒಂದು ಡಜನ್‌ಗಳಷ್ಟು ನದಿಗಳು ತೀಸ್ತಾದಲ್ಲಿ ವಿಲೀನಗೊಂಡು ಅದರ ರಭಸ ಹೆಚ್ಚಿಸುತ್ತವೆ.

ಬಾಂಗ್ಲಾದೇಶವು ತೀಸ್ತಾ ನದಿಯಿಂದ ಹೆಚ್ಚಿನ ಪಾಲು ಅಪೇಕ್ಷಿಸುತ್ತಿದೆ. ಭಾರತದ ಜತೆ ಸರಿಸಮಾನವಾಗಿ ಅಂದರೆ ಶೇ. 50-50 ನೀರು ಹಂಚಿಕೆಯಾಗಬೇಕೆಂದು ಹಠ ಮಾಡುತ್ತಿದೆ. ಆದರೆ ತೀಸ್ತಾ ನದಿಯ ಶೇ. 65 ಭಾಗ ಭಾರತದಲ್ಲಿ ಹರಿದರೆ ಶೇ. 35ರಷ್ಟು ಮಾತ್ರ ಬಾಂಗ್ಲಾದೇಶದಲ್ಲಿ ಹರಿಯುತ್ತದೆ. ಹಾಗಿದ್ದರೂ ಬಾಂಗ್ಲಾದೇಶವು ಅರ್ಧದಷ್ಟು ನೀರಿನ ಪಾಲು ಕೇಳುವುದು ವಿಪರ್ಯಾಸ.

ಅದೂ ಸಾಲದೆಂಬಂತೆ ಈಗ ಈ ವಿಚಾರದಲ್ಲಿ ಚೀನಾದ ನೆರವು ಕೋರಲು ಹೊರಟಿದೆ. ಚೀನಾವು ಮಧ್ಯಸ್ಥಿಕೆ ವಹಿಸಬೇಕೆಂದು ಬಯಸುತ್ತಿದೆ. ದ್ವಿಪಕ್ಷೀಯ ವಿಚಾರದಲ್ಲಿ ಮೂರನೇ ಪಕ್ಷದ ನುಸುಳುವಿಕೆಯನ್ನು ಭಾರತವಂತೂ ಸಹಿಸಲಾರದು. ಇದು ಉಭಯದೇಶಗಳ ಮಧ್ಯೆ ಉದ್ವಿಗ್ನತೆ ಹೆಚ್ಚಿಸಬಹುದು.

ಕಿರುಸುದ್ದಿ

ಧರ್ಮರಾಯಸ್ವಾಮಿ ಕರಗ ಮಹೋತ್ಸವ



• **ತಾವರೆಕೆರೆ:** ನಂದಗುಡಿ ಹೋಬಳಿ ತಾವರೆಕೆರೆ ಗ್ರಾಮದಲ್ಲಿ ಶ್ರೀ ಧರ್ಮರಾಯ ಸ್ವಾಮಿ, ಶ್ರೀ ದ್ರೌಪದಾಂಭಾದೇವಿ 75ನೇ ವರ್ಷದ ಕರಗ ಮಹೋತ್ಸವ ಕಾರ್ಯ ಕ್ರಮದಲ್ಲಿ ಪರಮ ಪೂಜ್ಯ ಜಗದ್ಗುರು ಶ್ರೀ ಪ್ರಣವನಂದಾ ಸ್ವಾಮೀಜಿ , ಶ್ರೀ ಆದಿಶಕ್ತಿ ಮಹಾಸಂಸ್ಥಾಪನ ಮಠ ಇವರ ದಿವ್ಯಸಾನಿಧ್ಯದಲ್ಲಿ, ಮೇ 28ರ ಗುರುವಾರ ಹಸಿಕರಗ, ಮೇ 31ರಂದು ಭಾನುವಾರ ಹೂವಿನ ಕರಗ ನಡೆಯಲಿದೆ. ಕರಗದ ಪೂಜಾರಿ ಮುನಿರಾಜು ಅವರು ಕರಗವನ್ನು ಹೊರಲಿದ್ದಾರೆ. ಇದರ ಜತೆಗೆ 25 ದೇವರು ಪಲ್ಲಕ್ಕಿ ಉತ್ಸವಕಾರ್ಯಕ್ರಮ ಇರುತ್ತದೆಂದು ವಹ್ನಿಕುಲ ಗೌಡರು ಯಾಜಮಾನರು ಕೋಲುಕಾರ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೋಟಿಸ್‌ನಲ್ಲಿ ತನಿಖೆ ಕುರಿತು ಉಲ್ಲೇಖವಿಲ್ಲ: ಹೈ ತರಾಟೆ

• **ಬೆಂಗಳೂರು:** ಪೊಲೀಸ್ ನೋಟಿಸ್‌ನಲ್ಲಿ ಯಾವ ಅಪರಾಧ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆಗೆ ಹಾಜರಾಗಲು ಸೂಚಿಸಲಾಗುತ್ತಿದೆ ಎಂಬುದನ್ನು ಉಲ್ಲೇಖಿಸದಿರುವುದಕ್ಕೆ ಮತ್ತು ಅದರಲ್ಲಿ ಸಂಬಂಧಿತ ಅಧಿಕಾರಿಯ ಹೆಸರು ಮತ್ತು ಪದ ನಾಮ ಕೈಬಿಟ್ಟಿರುವುದಕ್ಕೆ ಪೊಲೀಸರ ವಿರುದ್ಧ ಹೈಕೋರ್ಟ್ ಕಿಡಿಕಾರಿದೆ. ಬೆಂಗಳೂರಿನ ವರುಣ್ ಜುವೆಲ್ಲರ್ಸ್‌ನ ಸ್ಥಾಪಕರಾದ ನರೇಶ್ ಕುಮಾರ್ ಸಿಯಾಲ್ ಮತ್ತು ಪ್ರಕಾಶ್ ಚಾಂದ್ ಸಿಯಾಲ್ ಅವರು ಅತ್ತಿಬೆಲೆ ಠಾಣೆ ಪೊಲೀಸರು ಸಹಿ ಮತ್ತು ನಿರ್ದಿಷ್ಟ ಸೆಕ್ಷನ್ ಉಲ್ಲೇಖಿಸದೇ ತನಿಖೆಗೆ ಹಾಜರಾಗುವಂತೆ ಸೂಚಿಸಿದ್ದ ನೋಟಿಸ್ ಪ್ರಶ್ನಿಸಿದ್ದ ಅರ್ಜಿಯನ್ನು ನ್ಯಾ.ಕೆ.ವಿ.ಅರವಿಂದ್ ಅವರ ಏಕಸದಸ್ಯ ಪೀಠ ವಿಚಾರಣೆ ನಡೆಸಿತು. ಆಕ್ಷೇಪಾರ್ಹವಾದ ನೋಟಿಸ್‌ಗಳನ್ನು ಯಾವ ಸೆಕ್ಷನ್ ಅಡಿ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ಮಾಡಲಾಗಿದೆ ಮತ್ತು ಅದನ್ನು ನೀಡಿರುವ ಅಧಿಕಾರಿಯ ಪದನಾಮ ಮತ್ತು ಹೆಸರನ್ನು ಏಕೆ ಉಲ್ಲೇಖಿಸಿಲ್ಲ ಎಂಬುದಕ್ಕೆ ಸಂಬಂಧಿಸಿದಂತೆ ಎರಡು ವಾರದಲ್ಲಿ ಅಫಿಡವಿಟ್ ಸಲ್ಲಿಸಬೇಕು ಎಂದು ನ್ಯಾಯಾಲಯ ಪೊಲೀಸರಿಗೆ ನಿರ್ದೇಶಿಸಿದೆ. ನೋಟಿಸ್‌ನಲ್ಲಿ ಯಾವ ಅಪರಾಧಕ್ಕೆ ನೋಟಿಸ್ ನೀಡಲಾಗುತ್ತಿದೆ ಎಂಬುದಕ್ಕೆ ಏಕೆ ಉಲ್ಲೇಖಿಸಿಲ್ಲ? ಅಧಿಕಾರಿಯ ಹೆಸರು ಮತ್ತು ಪದನಾಮವೂ ಇಲ್ಲ, ಯಾವ ನಿಬಂಧನೆಯಡಿ ಈ ನೋಟಿಸ್‌ಗಳನ್ನು ಜಾರಿ ಮಾಡಲಾಗಿದೆ. ಕಾನೂನಿನ ಅಡಿ ಮಾತ್ರ ಅಧಿಕಾರ ಚಲಾಯಿಸಬಹುದು. ಕಾನೂನಿನಲ್ಲಿ ಅವಕಾಶವಿಲ್ಲ ಎಂದಾದರೆ ಜನರನ್ನು ಪೊಲೀಸರು ಠಾಣೆಗೆ ಕರೆಯಲಾಗದು. ಯಾವ ಅಪರಾಧ ಕೃತ್ಯದ ಆರೋಪದ ಮೇಲೆ ತಮ್ಮನ್ನು ತನಿಖೆಗೆ ಕರೆಯಲಾಗುತ್ತದೆ ಎಂಬುದನ್ನು ಪೊಲೀಸರು ವಿವರಿಸಬೇಕು. ಇ–ಆಫೀಸ್ ಇರಬೇಕಲ್ಲವೇ. ಡಿಜಿಟಲ್ ಸಹಿ ಹೊಂದಿರುವ ನೋಟಿಸ್ ಅನ್ನು ಏಕೆ ನೀಡಲಾಗಿಲ್ಲ ಎಂದು ಪೀಠ ಪ್ರಶ್ನಿಸಿತು. ಇದಕ್ಕೆ ಸರ್ಕಾರದ ಪರ ವಕೀಲೆಯು ಮಾಹಿತಿ ಪಡೆದು ತಿಳಿಸಲಾಗುವುದು ಎಂದರು. ಆಕ್ಷೇಪಾರ್ಹ ನೋಟಿಸ್‌ಗಳನ್ನು ಯಾವ ಸೆಕ್ಷನ್ ಅಡಿಯಲ್ಲಿ ನೀಡಲಾಗಿದೆ ಎಂಬುದರ ಕುರಿತು ಯಾವುದೇ ಮಾಹಿತಿ ಇಲ್ಲ ಮತ್ತು ಅದನ್ನು ನೀಡುವ ಪ್ರಾಧಿಕಾರದ ಹೆಸರು ಮತ್ತು ಪದನಾಮವು ಸ್ಪಷ್ಟವಾಗಿ ಕಾಣೆಯಾಗಿದೆ. ಇದು ನೋಟಿಸ್‌ಗಳನ್ನು ನೀಡುವ ಸತ್ಯಾಸತ್ಯತೆ ಮತ್ತು ನೈಜತೆಯನ್ನು ಅನುಮಾನಿಸುತ್ತದೆ ಎಂದು ಪೀಠ ಹೇಳಿದೆ.

ಜೈಲಿನಲ್ಲಿರುವ ವ್ಯಕ್ತಿಗೆ ಜಾಮೀನು: ಆಕ್ಷೇಪಣೆ ಪರಿಗಣಿಸಿದ ಕೋರ್ಟ್

• **ಬೆಂಗಳೂರು:** ಸೊಸೆಗೆ ಪದೇಪದೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಜೈಲು ಪಾಲಾಗಿದ್ದ 75 ವರ್ಷ ಪ್ರಾಯದ ವ್ಯಕ್ತಿಗೆ ಹೈಕೋರ್ಟ್ ಜಾಮೀನು ಮಂಜೂರು ಮಾಡಿದೆ. ಜಾಮೀನು ಮಂಜೂರು ಮಾಡುವುದಕ್ಕೆ ಯಾವುದೇ ಆಕ್ಷೇಪವಿಲ್ಲ ಎಂದು ಸೊಸೆ ಹೇಳಿರುವುದನ್ನು ನ್ಯಾಯಾಲಯ ಪರಿಗಣಿಸಿದೆ. ನ್ಯಾಯಮೂರ್ತಿ ಎಂ.ಜಿ.ಎಸ್.ಕಮಲ್ ಅವರ ಏಕಸದಸ್ಯ ಪೀಠವು ಸಂಧಾನದ ಮೂಲಕ ವಿವಾದವನ್ನು ಬಗೆಹರಿಸಿಕೊಳ್ಳಲಾಗಿದೆ ಎಂದು ಸೊಸೆ ಹೇಳಿರುವುದನ್ನು ದಾಖಲಿಸಿಕೊಂಡಿತು. ಪದೇಪದೆ ಲೈಂಗಿಕ ಕಿರುಕುಳ, ಮಾನಸಿಕ ಹಿಂಸೆ ನೀಡಿದ ಆರೋಪದ ಮೇಲೆ ಬೆಂಗಳೂರಿನ ಪೂರ್ವ ಮಹಿಳಾ ಠಾಣೆಯಲ್ಲಿ ಬಿಎನ್‌ಎಸ್‌ನ ವಿವಿಧ ಸೆಕ್ಷನ್‌ಗಳಡಿ ಪ್ರಕರಣ ದಾಖಲಾಗಿತ್ತು. ಈ ಪ್ರಕರಣದಲ್ಲಿ ಮಾವ ಜಾಮೀನು ಕೋರಿದ್ದರು. ಮಗ ಮತ್ತು ಸೊಸೆಯ ನಡುವಿನ ಕಲಹದಲ್ಲಿ ತಮ್ಮನ್ನು ತಪ್ಪಾಗಿ ಪ್ರಕರಣದಲ್ಲಿ ಸಿಲುಕಿಸಲಾಗಿದೆ. ಯಾವಾಗ ಲೈಂಗಿಕ ಕಿರುಕುಳ ನೀಡಲಾಗಿದೆ, ಸಮಯ ಅಥವಾ ಸಾಕ್ಷಿಯನ್ನು ನೀಡಲಿ ಎಂದು ವಾದಿಸಿದ್ದರು. ಇದನ್ನು ಆಲಿಸಿದ ಪೀಠವು ಅರ್ಜಿದಾರರು ಎಂಟು ತಿಂಗಳಿಂದ ಜೈಲಿನಲ್ಲಿದ್ದು, ಹಿರಿಯ ನಾಗರಿಕರಾಗಿದ್ದಾರೆ. ವೈಯಕ್ತಿಕವಾಗಿ ನ್ಯಾಯಾಲಯದ ಮುಂದೆ ಹಾಜರಾದ ಸೊಸೆಯು, ಜಾಮೀನು ನೀಡುವುದಕ್ಕೆ ತಮ್ಮ ವಿರೋಧವಿಲ್ಲ ಎಂದು ಹೇಳಿದ್ದಾರೆ ಎಂದು ನ್ಯಾಯಾಲಯ ದಾಖಲಿಸಿದೆ. ಈ ಹಿನ್ನೆಲೆಯಲ್ಲಿ ಒಂದು ಲಕ್ಷ ರೂ. ವೈಯಕ್ತಿಕ ಬಾಂಡ್, ಇಬ್ಬರ ಭದ್ರತೆ, ವಿಚಾರಣಾಧೀನ ನ್ಯಾಯಾಲಯದ ಮುಂದೆ ನಿರಂತರವಾಗಿ ಹಾಜರಾಗಬೇಕು. ಪ್ರಾಸಿಕ್ಯೂಷನ್ ಸಾಕ್ಷಿಗಳಿಗೆ ಬೆದರಿಕೆ ಹಾಕಬಾರದು ಎಂಬ ಷರತ್ತುಗಳನ್ನು ವಿಧಿಸಿ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

ಕಾಮಗಾರಿಗೆ ಶಾಸಕ ಮುನಿರಾಜು ಗುದ್ದಲಿಪೂಜೆ



• **ದಾಸರಹಳ್ಳಿ:** ದಾಸರಹಳ್ಳಿಯ ಮಲ್ಲಸಂದ್ರ ವಾರ್ಡ್ ವ್ಯಾಪ್ತಿಯ ಬಾಬಣ್ಣ ಬಡಾವಣೆಯ ಹತ್ತಿರವಿರುವ ಹಟ್ಟಿ ಲಕ್ಕಮ್ಮ ಬಡಾವಣೆಯ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಬಳಿ, ಕಾಂಕ್ರೀಟ್ ರಸ್ತೆ ಕಾಮಗಾರಿಗೆ ದಾಸರಹಳ್ಳಿ ಶಾಸಕ ಎಸ್.ಮುನಿರಾಜು ಗುದ್ದಲಿ ಪೂಜೆ ನಡೆಸಿದರು. ಬಳಿಕ ಮಾತನಾಡಿದ ಅವರು, ಶಾಸಕರ ಪ್ರದೇಶಾಭಿವೃದ್ಧಿ ನಿಧಿಯ ಅಡಿಯಲ್ಲಿ ಕಾಮಗಾರಿ ನಡೆಯುತ್ತಿರುವುದರಿಂದ ಆದಷ್ಟು ಬೇಗ ಕಾಮಗಾರಿ ಕೆಲಸ ಮುಗಿಸಿ ಮಳೆ ಆರಂಭವಾದರೆ ತೊಂದರೆ ಆಗಬಹುದು ಅಷ್ಟರೊಳಗೆ ರಸ್ತೆಯಲ್ಲಿ ಜನ ಓಡಾಡಲು ಅನುಕೂಲ ಮಾಡಿ ಎಂದು ಟೆಂಡರ್ ಪಡೆದ ಗುತ್ತಿಗೆದಾರರಿಗೆ ಸೂಚನೆ ಕೊಟ್ಟರು. ಬಡಾವಣೆಯ ನಿವಾಸಿಗಳೊಂದಿಗೆ ಸಂವಾದ ನಡೆಸಿ ಸ್ಥಳೀಯ ಸಮಸ್ಯೆಗಳನ್ನು ಆಲಿಸಿ ಹಾಜರಿದ್ದ ಅಧಿಕಾರಿಗಳ ಗಮನಕ್ಕೆ ತಂದು ಸರಿಪಡಿಸಲು ಸೂಚನೆ ಕೊಟ್ಟರು. ಬಿಜೆಪಿ ಮಂಡಲ ಅಧ್ಯಕ್ಷ ಸೋಮಶೇಖರ್, ಮುಖಂಡರಾದ ಟಿ.ಶಿವಕುಮಾರ್, ಎಂ.ಆರ್‌ಶ್ರೀನಿವಾಸ್, ಟಿ.ಆರ್. ಜಯಕೃಷ್ಣ ಮುಂತಾದವರಿದ್ದರು.

ತಾವರೆಕೆರೆಗೆ ಭೇಟಿ ನೀಡದ ಅಧಿಕಾರಿಗಳ ವಿರುದ್ಧ ಕಿಡಿ | ಕೂಲಿಗೆ ಹೋಗುವುದನ್ನು ಬಿಟ್ಟು ಬಿಸಿಲಲ್ಲಿ ನಿಂತ ಜನ

ಪಡಿತರ ವಿತರಣೆಗೂ ಸರ್ವರ್ ಸಮಸ್ಯೆ

• **ತಾವರೆಕೆರೆ:** ಸರ್ವರ್ ಸಮಸ್ಯೆಯಿಂದಾಗಿ ಕಳೆದ ಮೂರು ದಿನದಿಂದಲೂ ಪಡಿತರಕ್ಕಾಗಿ ಸಾಲು ನಿಂತ ಕೂಲಿ ಕಾರ್ಮಿಕರು ಬಿಸಿಲಲ್ಲಿ ಬಸವಳಿದಿದ್ದಾರೆ.

ಹೊಸಕೋಟೆತಾಲೂಕುನಂದಗುಡಿಹೋಬಳಿಯತಾವರೆಕೆರೆ ಗ್ರಾಮದಲ್ಲಿ ಕಳೆದ ಮೂರು ದಿನದಿಂದಲೂ ನ್ಯಾಯಬೆಲೆಯ ಅಂಗಡಿ ಮುಂದೆ ಜನ ಸಾಲು ನಿಂತಿದ್ದಾರೆ. ಇದುವರೆಗೂ ಸರಿಪಡಿಸಲು ಯಾವುದೇ ಅಧಿಕಾರಿಗಳು ಭೇಟಿ ನೀಡಿರುವುದಿಲ್ಲ ಎಂದು ಇಲ್ಲಿನ ಪಡಿತರದಾರರ ಆಕ್ರೋಶವಾಗಿದೆ. ಗ್ರಾಮದಲ್ಲಿ ಸುಮಾರು 700ಕ್ಕೂ ಅಧಿಕ ಪಡಿತರ ಚೀಟಿಗಳಿವೆ.ಅನೇಕರು ಇಲ್ಲಿ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಇವರಿಗೆ ಸೂಕ್ತಕಾಲದಲ್ಲಿ ಪಡಿತರ ದೊರಕದೆ ಹೋದಲ್ಲಿ ಜೀವನ ನಡೆಸುವುದು ಕಷ್ಟಕರವಾಗುತ್ತದೆಂಬ ಅಭಿಪ್ರಾಯ ಇದೆ. ಆದರೆ, ಶಿವನಾಪುರ ವಿವಿಧೋದ್ದೇಶ ಪ್ರಾಥಮಿಕ ಗ್ರಾಮೀಣ ಕೃಷಿ ಸಹಕಾರ ಸಂಘದ ಅಧೀನದಲ್ಲಿರುವ ತಾವರೆಕೆರೆ ಪಡಿತರ ಕೇಂದ್ರದಲ್ಲಿ ಪಡಿತರ ಪಡೆಯಲು ಕಾರ್ಡುದಾರರು ಕಾಯುವ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಪ್ರತಿದಿನವೂ ಪಡಿತರಕ್ಕಾಗಿ ಸಾಲು ನಿಲ್ಲುವ ದೃಶ್ಯ ಸಾಮಾನ್ಯವಾಗಿದೆ. ಬೆಳಗ್ಗೆ 6ರಿಂದ 8 ಗಂಟೆವರೆಗೆ ಸರ್ವರ್ ಬರುತ್ತದೆ. ಒಮ್ಮೊಮ್ಮೆ ಅದು ಸಂಪರ್ಕ ಕಳೆದುಕೊಳ್ಳುವುದು. ನಂತರ ಮತ್ತೆ ಸಂಪರ್ಕ ಪಡೆದುಕೊಳ್ಳುವುದು.ಈರೀತಿಯಕಣ್ಣಾಮುಚ್ಚಾಲೆಯಾಟದಲ್ಲಿ ಬಡವರು ತೀವ್ರತೊಂದರೆಗೆ ಸಿಲುಕಿದ್ದಾರೆ.

ಸಮಯ ವ್ಯರ್ಥ: ಪ್ರತಿದಿನವೂ ಕೂಡ ಪಡಿತರಕ್ಕಾಗಿ ಸಾಲು ನಿಲ್ಲುವ ಜನ ನಿರಾಸೆಯಿಂದ ಪಡಿತರ ಸಿಗದೆ ಹಿಂತಿರುಗುವರು. ಇಲ್ಲ ನಂತರ ಗಂಟೆಗಳು ಕಳೆದರೂ ಸರ್ವರ್ ಬರುವುದಿಲ್ಲ, ಪ್ರತಿಯೊಂದು ಕಾರ್ಡ್‌ದಾರರ ಸಂಖ್ಯೆ ಅಪ್ಲೋಡ್ ಮಾಡಲು ಸುಮಾರು ಸಮಯ ತೆಗದುಕೊಂಡು ಸಮಯ ವ್ಯರ್ಥವಾಗುವುದು. ನ್ಯಾಯಬೆಲೆ ಅಂಗಡಿ ಮುಂದೆ ಸಾಲು ನಿಂತವರು ನಿಂತಲ್ಲೇ ನಿಲ್ಲಬೇಕಾಗಿದೆ. ಒಂದು ಬಾರಿ ಅಪ್ಲೋಡ್ ಮಾಡಲು ಸಾಕಷ್ಟು ಸಮಯ ತೆಗೆದುಕೊಳ್ಳುವುದರಿಂದ ದಿನಪೂರ್ತಿ ಕೇವಲ ಹತ್ತು ಜನರಿಗೆ ಮಾತ್ರ ಪಡಿತರ ವಿತರಿಸಲು ಸಾಧ್ಯವಾಗಲಿದೆ. ಒಂದು ದಿನಕ್ಕೆ 50 ಕುಟುಂಬಗಳು ಪಡಿತರ ಮಾಡುವುದಕ್ಕೆ ಹರಸಾಹಸ ಪಡಬೇಕಾಗುತ್ತದೆ. ಗಂಟೆಗಟ್ಟಲೆ ಕಾದರು ಪ್ರಯೋಜನವಾಗದೆ ಮನೆಗಳಿಗೆ ವಾಪಸ್ ಹೋಗಬೇಕಾದ ಅನಿವಾರ್ಯವಾಗಿದೆ. ರೇಷನ್‌ಕಾರ್ಡ್‌ಆನ್ ಲೈನ್‌ನಲ್ಲಿ ಹಾಕಲು ಸರ್ವರ್ ಸಮಸ್ಯೆತೀವ್ರವಾಗಿರುವುದರಿಂದ ಸಂಬಂಧ ಪಟ್ಟ ಅಧಿಕಾರಿಗಳು ಸರ್ವರ್ ಸಮಸ್ಯೆ ಬಗ್ಗೆ ಗಮನ ಹರಿಸಿ ಪಡಿತರ ವಿತರಕರಿಗೆ ಅನುಕೂಲ ಮಾಡಿಕೊಡಬೇಕು.



ಕೂಲಿ ಇಲ್ಲದೆ ತೊಂದರೆ

ನಾವು ಮನೆಯಲ್ಲಿನ ಕೆಲಸ, ಕೂಲಿ ಕೆಲಸವನ್ನು ಬಿಟ್ಟು ಬಡವರಾದ ನಾವು ಬಿಸಿಲೆನ್ನದೆ ಪಡಿತರಕ್ಕಾಗಿ ಸಾಲು ನಿಂತಿದ್ದೇವೆ. ಬಿಸಿಲಿನಲ್ಲಿ ಕಾಯುತ್ತಿದ್ದರೂ ಸರ್ವರ್ ಸಮಸ್ಯೆ ಬಗೆಹರಿಯುತ್ತಿಲ್ಲ, ಇದರಿಂದ ಬಡವರಿಗೆ ಹೆಚ್ಚು ಸಮಯ ವ್ಯರ್ಥವಾಗುತ್ತಿದೆ. ಕೂಲಿ ಇಲ್ಲದೆ ಜೀವನೋಪಾಯಕ್ಕೆ ತೊಂದರೆಯಾಗಿದೆಂದು ಗ್ರಾಮದ ನಿವಾಸಿ ಮೀನಾ ಹೇಳಿದರು.

ಪ್ರತಿಭಟನೆ ಅನಿವಾರ್ಯ

ಬಡವರಿಗೆ ಸೇವೆ ದೊರೆಯದೆ ಇರುವುದು ಬೇಸರದ ಸಂಗತಿ. ಸರ್ಕಾರ ನೀಡುವ ಸೇವೆಯನ್ನು ಸಂಬಂಧ ಪಟ್ಟ ಅಧಿಕಾರಿಗಳು ತ್ವರಿತಗೊಳಿಸಬೇಕು. ಜನರನ್ನು ದಿನ ಗಟ್ಟಲೆ ಕಾಯಿಸಿ ಮನೆಗೆ ಕಳಿಸುತ್ತಿರುವುದು ಸರಿಯಲ್ಲ. ಮುಂದಿನ ದಿನದಲ್ಲಿ ಇದೇ ರೀತಿಯಾದರೆ ಪಡಿತರ ಅಂಗಡಿ ಮುಂದೆ ಮುತ್ತಿಗೆ ಮಾಡಲಾಗುವುದೆಂದು ಗ್ರಾಮದ ಜನ ಎಚ್ಚರಿಕೆ ನೀಡಿದ್ದಾರೆ.

ಹೊಸಕೋಟೆ ಸರಕಾರಿ ಕಾಲೇಜು ನೂತನ ಕಟ್ಟಡ ಉದ್ಘಾಟನೆ

ಗುಣಮಟ್ಟದ ಶಿಕ್ಷಣಕ್ಕೆ ಪ್ರಥಮ ಆದ್ಯತೆ



• **ಹೊಸಕೋಟೆ:** ಇನ್ನುಂದೆ ಯಾವುದೇ ವಿದ್ಯಾರ್ಥಿ ಪದವಿ ವ್ಯಾಸಂಗ ಮುಗಿಸಿದ ತಕ್ಷಣವೇ ಉದ್ಯೋಗ ಸಿಗಬೇಕು ಎಂಬ ಆಶಯದಿಂದ ಪ್ರತಿ ಕಾಲೇಜಿನ ವಿದ್ಯಾರ್ಥಿಗೂ ವೃತ್ತಿಪರ ಶಿಕ್ಷಣ ನೀಡಲಾಗುತ್ತಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಹೇಳಿದರು.

ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ನೂತನ ಕಟ್ಟಡಗಳ ಉದ್ಘಾಟನೆ ಮತ್ತು ಕಾಲೇಜು ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಏಷ್ಯನ್ ಡೆವಲಪ್ಮೆಂಟ್ ಬ್ಯಾಂಕಿನಿಂದ 1750 ಕೋಟಿ ರೂ. ಸಾಲ ಹಾಗೂ 750 ಕೋಟಿ ರೂ. ರಾಜ್ಯ ಸರ್ಕಾರದ ಅನುದಾನದಲ್ಲಿ ಈ ವರ್ಷದ ಡಿಸೆಂಬರ್ ವೇಳೆಗೆ ಲ್ಯಾಬ್ ಆರಂಭಿಸುವ ಗುರಿ ಹೊಂದಲಾಗಿದೆ ಎಂದರು. ಪದವಿ ಹಂತದ ವಿದ್ಯಾರ್ಥಿಗಳಿಗೆ ಇನ್ನುಂದೆ ಹಾಜರಾತಿ ಕಡ್ಡಾಯ ಆದರೆ ಬಯೋಮೆಟ್ರಿಕ್ ಇರಬೇಕಾ ಅಥವಾ ಬೇಡವಾ ಎಂಬುದರ ಕುರಿತು ಇಲಾಖಾ ಹಂತದಲ್ಲಿ ಚರ್ಚೆಯಲ್ಲಿದ್ದು ಮುಂದಿನ ದಿನದಲ್ಲಿ ಅದನ್ನು ಪರಿಶೀಲಿಸಲಾಗುವುದು ಎಂದರು.

ಸಾರ್ವಜನಿಕ ವಲಯದಿಂದ ಸಂಯೋಜಿತ ಕೋರ್ಸ್ ಆರಂಭಿಸುವಂತೆ ಕೂಗು ಕೇಳಿಬ ರುತ್ತಿರುವ ಕಾರಣ ಸದ್ಯ 50 ಕಾಲೇಜುಗಳಲ್ಲಿ ಪ್ರಾಯೋಗಿಕವಾಗಿ ಜಾರಿ ಗೊಂಡಿರುವುದನ್ನು ಮುಂದಿನ ದಿನದಲ್ಲಿ ಮತಷ್ಟು ಕಾಲೇಜುಗಳಿಗೆ ವಿಸ್ತರಿಸಲಾಗುವುದು ಎಂದು ತಿಳಿಸಿದರು. ಹೊಸಕೋಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಘಟಕ ಕಾಲೇಜನ್ನಾಗಿ ಉನ್ನತೀಕರಿಸಲಾಗಿದೆ. ಕಾಲೇಜಿನ ಹೆಣ್ಣು ಮಕ್ಕಳಿಗೆ ಪಿಂಕ್ ಶೌಚಾಲಯ ನಿರ್ಮಾಣಕ್ಕೆ ಒಂದು ಕೋಟಿ ಬಿಡುಗಡೆ ಮಾಡಲಾಗಿದೆ. ಹೊಸ ಡೆಸ್ಕ್ ಬೇಡಿಕೆಗೆ ಪಟ್ಟಿಯನ್ನು ಸಲ್ಲಿಸಿ ಎಂದು ಪ್ರಾಂಶುಪಾಲರಿಗೆ ಸೂಚಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರಾದ ರಾಮಲಿಂಗಪ್ಪ ಟಿ. ಬೇಗೂರು, ಪ್ರಾಧ್ಯಾಪಕರಾದ ಡಾ. ಈರಣ್ಣ, ವಿಶ್ವೇಶ್ವರಯ್ಯ, ವೀರಭದ್ರಯ್ಯ, ಗಾಯಿತ್ರಿ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯ ಸುರೇಶ್ ವೆಂಕಟರಾಮಣಪ್ಪ, ಗೌತಮ್ ಸುಭಾಷ್ ಗೌಡ, ಜಿ.ಎನ್.ಸೋಮಶೇಖರ್ ಗೌಡ, ಸೌಮ್ಯಮಧು, ಮುನೇಗೌಡ ಹಾಗೂ ಕಾಲೇಜಿನ ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ತಾವರೆಕೆರೆ ಬಸವ ಜಯಂತ್ಯುತ್ಸವ: ಮೆರವಣಿಗೆ

ಜೀವನಕ್ಕೆ ವಚನಗಳು ದಾರಿದೀಪ



• **ತಾವರೆಕೆರೆ:** ಹೊಸಕೋಟೆ ತಾಲೂಕಿನ ನಂದಗುಡಿ ಹೋಬಳಿಯ ತಾವರೆಕೆರೆ ಗ್ರಾಮದ ಇತಿಹಾಸ ಪ್ರಸಿದ್ಧ ಶ್ರೀ ಬಸವೇಶ್ವರ ಸ್ವಾಮೀ ಜಯಂತ್ಯುತ್ಸವವನ್ನು ಎರಡು ದಿನಗಳ ಕಾಲ ವಿಶೇಷ ಪೂಜೆಗಳ ಮೂಲಕ ಕಾರ್ಯಕ್ರಮ ನೆರವೇರಿತು.

ಗ್ರಾಮದ ಶ್ರೀಬಸವೇಶ್ವರ ಸ್ವಾಮಿ ದೇವರಿಗೆ ರುದ್ರಾಭಿಷೇಕ ನೆರವೇರಿಸಿ 101ಮುತ್ತೈದೆಯರೊಂದಿಗೆ ಕಳಶ ಹೊತ್ತು ವಿಜಯಪುರ ಶ್ರೀ ಬಸವಕಲ್ಯಾಣ ಮಠದ ಪೀಠಾಧಿಪತಿಗಳಾದ ಮಹದೇವಸ್ವಾಮಿ ಹಾಗೂ ನಾಗಲಾಪುರ ಸಂಸ್ಥಾನ ಮಠದ ಪೀಠಾಧಿಪತಿಯಾದ ಶ್ರೀ ತೇಜೇಶಲಿಂಗ ಶಿವಾಚಾರ್ಯ ಸ್ವಾಮಿಯನ್ನು ಬರಮಾಡಿಕೊಂಡು ಗ್ರಾಮದ ರಾಜಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು. ಶನಿವಾರದಿಂದ ಭಾನುವಾರದವರೆಗೂ ನಿರಂತರ ಅನ್ನದಾಸೋಹ ವ್ಯವಸ್ಥೆ ನಡೆಸಿ ವಿಶೇಷ ಪಲ್ಲಕ್ಕಿಯೊಂದಿಗೆ ಬಸವೇಶ್ವರ ಸ್ವಾಮಿ ಉತ್ಸವ ನೆರವೇರಿತು. ಸುಪ್ರಸಿದ್ಧ ವೀರಗಾಸೆ ಕಲಾ ತಂಡದವರಿಂದ ಹಾಗೂ ವಿಶೇಷ ವಾದ್ಯದೊಂದಿಗೆ ಗ್ರಾಮದ ಪ್ರಮುಖ ಬೀದಿಯಲ್ಲಿ ವೀರಗಾಸೆ ಕುಣಿತ ನೆರವೇರಿಸಲಾಯಿತು. ಭಾನುವಾರ ಸೂರ್ಯೋದಯದ ಸಮಯದಲ್ಲಿ ಅಗ್ನಿಕೊಂಡ ಪ್ರವೇಶಿಸಿ ವೀರಶೈವ–ಲಿಂಗಾಯತ ಸಮುದಾಯದವರಿಂದ ದೀಪಾರತಿಯೊಂದಿಗೆ ಕಾರ್ಯಕ್ರಮಕ್ಕೆ ತೆರೆ ಎಳೆಯಲಾಯಿತು. ದೇವಾಲಯದ ಪ್ರಧಾನ ಅರ್ಚಕರಾದ ಬಸವ ಆರಾಧ್ಯ ಸ್ವಾಮಿ ಮಾತನಾಡಿ, ನಮ್ಮ ಪೂರ್ವಜರ ಕಾಲದಿಂದಲೂ ಗ್ರಾಮದಲ್ಲಿ ನಿರಂತರವಾಗಿ ಬಸವ ಜಯಂತಿ ಆಚರಣೆ ನಡೆಯುತ್ತಾ ಬಂದಿದೆ. ಅದೇರೀತಿ ಈ ವರ್ಷವೂ ಸಹ ವಿವಿಧ ರೀತಿಯ ಪೂಜಾ ಕಾರ್ಯಕ್ರಮಗಳೊಂದಿಗೆ ಗ್ರಾಮ ಉದ್ದಕ್ಕೂ ವಿಶೇಷರೀತಿಯ ದೀಪಾಲಂಕಾರ ಏರ್ಪಡಿಸಲಾಗಿತ್ತು. ಜಗಜ್ಯೋತಿ ಬಸವೇಶ್ವರರು ಸಮಾಜಕ್ಕೆ ಸಮಾನತೆ, ಸತ್ಯ, ಶ್ರಮ ಹಾಗೂ ಮಾನವೀಯತೆ ಸಂದೇಶವನ್ನು ನೀಡಿದ ಮಹಾನ್ ಸಂತರು. ಬಸವಣ್ಣನವರ ವಚನ ಇಂದಿಗೂ ಪ್ರತಿಯೊಬ್ಬರ ಜೀವನಕ್ಕೆ ದಾರಿದೀಪವಾಗಿದೆ. ಯುವ ಪೀಳಿಗೆ ಅವರ ಆದರ್ಶವನ್ನು ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು. ಬಸವಣ್ಣನವರು ಕಾಯಕವೇ ಕೈಲಾಸ ಎಂಬ ತತ್ವದ ಮೂಲಕ ದುಡಿಯುವ ಪ್ರತಿಯೊಬ್ಬನಿಗೂ ಗೌರವ ಸಿಗಬೇಕು ಎಂಬ ಸಂದೇಶವನ್ನು ಜಗತ್ತಿಗೆ ಸಾರಿದರು. ಸಮಾಜದಲ್ಲಿ ಜಾತಿ, ಮತ, ಭೇದಭಾವಗಳಿಲ್ಲದೆ ಎಲ್ಲರೂ ಒಂದಾಗಿ ಬದುಕುವ ಸಂಸ್ಕೃತಿಯನ್ನು ಬೆಳೆಸಬೇಕು ಎಂದು ತಿಳಿಸಿದರು.

ಪೂಜಾ ಕಾರ್ಯಕ್ರಮದಲ್ಲಿ ತಾವರೆಕೆರೆ ಬಸವ ಸೇವಾ ಸಮಿತಿ ಪದಾಧಿಕಾರಿಗಳು ಗ್ರಾಮಸ್ಥರು ಹಾಗೂ ವೀರಶೈವ–ಲಿಂಗಾಯತ ಸಮುದಾಯದ ಕುಟುಂಬಸ್ಥರು ಸಾವಿರಾರು ಸಂಖ್ಯೆಯಲ್ಲಿದ್ದರು.

ಜೆಡಿಎಸ್ ಹಿರಿಯ ಮುಖಂಡ ಹುಸ್ಕೂರು ಆನಂದ್ ಸ್ಪಷ್ಟನೆ

ಪಕ್ಷಕ್ಕೆ ನಾನು ಎಂದು ದ್ರೋಹ ಮಾಡಿಲ್ಲ



• **ದೊಡ್ಡಬಳ್ಳಾಪುರ:** ನಾನು ಪಕ್ಷ ದ್ರೋಹ ಮಾಡಿಲ್ಲ, ಯಾವತ್ತು ಮಾಡೋದು ಇಲ್ಲ, ನಾನೊಬ್ಬ ಕಾರ್ಯಕರ್ತನಾಗಿ ಕಾರ್ಯಕರ್ತರ ಜತೆ ಇರುತ್ತೇನೆ ಎಂದು ಜೆಡಿಎಸ್ ಹಿರಿಯ ಮುಖಂಡರಾದ ಹುಸ್ಕೂರು ಆನಂದ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ನೂತನವಾಗಿ ದೊಡ್ಡಬಳ್ಳಾಪುರ ತಾಲೂಕು ಅಧ್ಯಕ್ಷರಾಗಿರುವ ಹರೀಶ್ ಗೌಡ ಅವರು ಜೆಡಿಎಸ್ ಬಿಟ್ಟು ಹೋಗಿರುವ ಕಾರ್ಯಕರ್ತರು, ಮುಖಂಡರನ್ನು ಮತ್ತೆ ವಾಪಸ್ ಪಕ್ಷಕ್ಕೆ ಕರೆ ತಂದಿದ್ದಿಲ್ಲ ಎಂದರು. ಯಾರೂ ಅಧ್ಯಕ್ಷರಾಗಲು ಮುಂದೆ ಹೋಗದ ಕಾರಣ ಹರೀಶ್ ಗೌಡರಿಗೆ ಅಧ್ಯಕ್ಷ ಸ್ಥಾನ ಕೊಟ್ಟಿದ್ದಾರೆ ಅಷ್ಟೇ, ಅದನ್ನು ಅವರು ಜವಾಬ್ದಾರಿಯುತವಾಗಿ ಉಳಿಸಿಕೊಂಡು ಹೋಗಬೇಕು. ಇತ್ತೀಚೆಗೆ ಯಾರೋ ನನ್ನ ತಾಯಿ ಬಗ್ಗೆ ಕೆಟ್ಟದಾಗಿ ಮಾತನಾಡಿದ್ದಾರೆ. ನಾನು ಅಂತಾ ಪಾಪ ಏನು ಮಾಡಿದ್ದೀನಿ. ನನಗೆ ತುಂಬಾ ನೋವಾಗಿದೆ. ನಾನು ಪಕ್ಷ ದ್ರೋಹ ಮಾಡಲ್ಲ, ಮಾಡೋದು ಇಲ್ಲ, ನಾನೊಬ್ಬ ಕಾರ್ಯಕರ್ತನಾಗಿ ಕಾರ್ಯಕರ್ತರ ಜತೆ ಇರುತ್ತೇನೆ. ಅವರು ನನ್ನನ್ನು ಪಕ್ಷದಿಂದ ಹೊರಹಾಕಿದರೂ ನಾನು ಜೆಡಿಎಸ್ ನಲ್ಲೇ ಇರುತ್ತೇನೆ. ನಾನು ಜೆಡಿಎಸ್‌ನಲ್ಲೇ ಹುಟ್ಟಿ ಬೆಳೆದಿದ್ದೇನೆಂದು ಹೇಳಿದರು. 2028ಕ್ಕೆ ತಾಲೂಕಿನಲ್ಲಿ ಜೆಡಿಎಸ್ ನಿಂದ ಎಂಎಲ್ಎ ನೋಡುವ ಆಸೆ ಇದೆ. ಈ ಕನಸು ನನಸಾಗಲು ನಿಷ್ಠಾವಂತ ಕಾರ್ಯಕರ್ತರ ಸಹಕಾರ ಬೇಕಾಗಿದೆ. ಪಕ್ಷದಲ್ಲಿ ಎಂಎಲ್ಎ ಅಭ್ಯರ್ಥಿ ಯಾರೂ ಇಲ್ಲ ಅಂದುಕೊಳ್ಳಬೇಡಿ, ಒಬ್ಬ ಹೆಣ್ಣುಮಗಳಿದ್ದಾರೆ. ಅವರು ಎಂಎಲ್ಎ ಆಗುವ ಅರ್ಹತೆ ಹೊಂದಿದ್ದಾರೆ. ಅಕೆಯನ್ನು ಎಂಎಲ್ಎ ಆಗಿ ಮಾಡಲು ನಿಷ್ಠಾವಂತ ಕಾರ್ಯಕರ್ತರು ಕೈಜೋಡಿಸಬೇಕು ಎಂದು ಮನವಿ ಮಾಡಿದರು. ಈ ವೇಳೆ ಮುಖಂಡರಾದ ಪುಟ್ಟರಾಜು, ಸತೀಶ್, ಶ್ರೀನಿವಾಸ ಅನೇಕರು ಹಾಜರಿದ್ದರು.

ಪಠ್ಯದ ಜತೆ ಮಕ್ಕಳ ವ್ಯಕ್ತಿತ್ವ ವಿಕಾಸ



• **ಬೆಂಗಳೂರು:** ಪಠ್ಯದೊಂದಿಗೆ ವ್ಯಕ್ತಿತ್ವ ವಿಕಾಸದ ಮೂಲಕ ಶೈಕ್ಷಣಿಕ ಜೀವನದ ಗುರಿ ಸಾಧನೆಗೆ ಭದ್ರ ಅಡಿಪಾಯ ರೂಪಿಸಿಕೊಳ್ಳುವಂತೆ ವಿವಿ ಕುಲಪತಿ ಪ್ರೊ.ಬಿ.ರಮೇಶ್ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಏರ್ಪಡಿಸಲಾಗಿದ್ದ ಉದ್ಯೋಗ ಮಹಾಮೇಳಕ್ಕೆ ಚಾಲನೆ ನೀಡಿದ ಅವರು, ಪಠ್ಯಕ್ರಮದ ಅಧ್ಯಯನದ ಜೊತೆಗೆ ಸೃಜನಶೀಲತೆ, ವಿಮರ್ಶಾತ್ಮಕ ಚಿಂತನೆ ಮತ್ತು ವ್ಯಕ್ತಿತ್ವ ವಿಕಾಸದ ಮೂಲಕ ಶೈಕ್ಷಣಿಕ ಜೀವನದ ಗುರಿ ಸಾಧನೆಗೆ ಭದ್ರ ಅಡಿಪಾಯ ರೂಪಿಸಿಕೊಳ್ಳಬೇಕು ಎಂದರು. ಶಿಕ್ಷಣದ ಗುಣಮಟ್ಟ ಮತ್ತು ಬೋಧನಾ ವಿಧಾನಗಳ ಸುಧಾರಣೆಗೆ ವಿಶೇಷ ಗಮನಹರಿಸಬೇಕು. ವಿದ್ಯಾರ್ಥಿಗಳಿಗೆಉದ್ಯೋಗಕೌಶಲ ತರಬೇತಿ ಮತ್ತು ಮಾರ್ಗದರ್ಶನ ಹಾಗೂ ಉದ್ಯಮ ಸಹಭಾಗಿತ್ವಯೋಜನೆಯಮೂಲಕಡಾ.ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ರಾಜ್ಯದ ಇತರೆ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿದೆ ಎಂದು ಶ್ಲಾಘಿಸಿದರು. ಈ ವೇಳೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಉಪಾಧ್ಯಕ್ಷ ಪ್ರೊ.ಎಸ್.ಆರ್.ನಿರಂಜನ, ಕುಲಸಚಿವ ಎ.ನವೀನ್ ಜೋಸೆಫ್, ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ.ಬಿ.ಕುಡೇನಟ್ಟಿ, ಕೇಂದ್ರ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಪ್ರಾದೇಶಿಕ ನಿರ್ದೇಶಕಿ ಲಕ್ಷ್ಮಿಪ್ರಸಾದ್ ಕೆ. ಮುಂತಾದವರು ಉಪಸ್ಥಿತರಿದ್ದರು.

ಶ್ರೀ ಕಾಡುಮಲ್ಲೇಶ್ವರ ಸ್ವಾಮಿಗೆ ವಿಶೇಷ ಪೂಜೆ



• **ನೆಲಮಂಗಲ:** ಪುರಾಣ ಪ್ರಸಿದ್ಧ ಶ್ರೀ ಕಾಡುಮಲ್ಲೇಶ್ವರ ಸ್ವಾಮಿ ಮಂಡಲ ಪೂಜೆಯ ಹಿನ್ನೆಲೆಯಲ್ಲಿ ವಿಶೇಷ ಅಲಂಕಾರ ಮಾಡಲಾಗಿತ್ತು. ತಾಲೂಕಿನ ಬೈರಸಂದ್ರ ಜೋಗಿಪಾಳ್ಯದ ಕಾಡುಮಲ್ಲೇಶ್ವರ ಸ್ವಾಮಿಗೆ ಹೊಸಪಾಳ್ಯ ಗ್ರಾಮಸ್ಥರು ಅಭಿಷೇಕ ಹಾಗೂ ವಿಶೇಷ ಅಲಂಕಾರ ಮಾಡಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಿದರು.

ಶಿಥಿಲವಾಗಿದ್ದ ಕಾಡುಮಲ್ಲೇಶ್ವರ ದೇವಸ್ಥಾನವನ್ನು ಪುನರ್‌ನಿರ್ಮಾಣ ಮಾಡಲು ನೇತೃತ್ವವಹಿಸಿ ಗ್ರಾಮಸ್ಥರನ್ನು ಒಗ್ಗೂಡಿಸಿಕೊಂಡು ಭವ್ಯ ದೇಗುಲ ನಿರ್ಮಾಣ ಮಾಡಿದ ಎಂಬಿಟಿ ರಾಮಕೃಷ್ಣಪ್ಪನವರಿಗೆ ಹೊಸಪಾಳ್ಯ ಗ್ರಾಮಸ್ಥರು ಅಭಿನಂದನೆ ಸಲ್ಲಿಸಿ ಧನ್ಯವಾದಗಳನ್ನು ತಿಳಿಸಿದರು.

ಕ್ಷುಲ್ಲಕ ಕಾರಣಕ್ಕೆ ಗಲಾಟೆ: ಕೊಲೆ

• **ಬೆಂಗಳೂರು:** ಕ್ಷುಲ್ಲಕ ಕಾರಣಕ್ಕೆ ಆರಂಭವಾದ ಗಲಾಟೆಯೊಂದು ಹತ್ಯೆಯಲ್ಲಿ ಅಂತ್ಯವಾಗಿರುವ ಘಟನೆ ಭಾನುವಾರ ತಡರಾತ್ರಿ ಅಬ್ಬಿಗೆರೆ ಮುಖ್ಯರಸ್ತೆಯಲ್ಲಿ ನಡೆದಿದೆ. ಸಿಗರೇಟ್ ಹೊಗೆ ಬಿಟ್ಟ ವಿಚಾರಕ್ಕೆ ಶುರುವಾದ ಜಗಳದಲ್ಲಿ ಆಟೋ ಚಾಲಕನೋರ್ವನನ್ನು ಡ್ರ್ಯಾಗರ್‌ನಿಂದ ಇರಿದು ಭೀಕರವಾಗಿ ಹತ್ಯೆಗೈಯ್ಯಲಾಗಿದೆ. ಬಾಗಲೂರಿನ ರಾಜಾ ಸಾಬ್ ಪಾಳ್ಯದ ನಿವಾಸಿ ಸೈಯದ್ ಶಫೀ (36) ಹತ್ಯೆಯಾದ ಆಟೋ ಚಾಲಕ. ಘಟನೆಗೆ ಸಂಬಂಧಿಸಿದಂತೆ ಆರೋಪಿ ದರ್ಶನ್ ಎಂಬಾತನನ್ನು ಚಿಕ್ಕಬಾಣಾವರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಪ್ರಕರಣದ ಹಿನ್ನೆಲೆ: ಭಾನುವಾರ ರಾತ್ರಿ 11.30ರ ಸಮಯಕ್ಕೆ ಅಬ್ಬಿಗೆರೆ ಮುಖ್ಯರಸ್ತೆಯ ವೀಣಾ ಬಾರ್ ಬಳಿ ಬಂದಿದ್ದ ಶಫಿ ಮದ್ಯ ಖರೀದಿಸಿದ್ದ. ಬಾರ್ ಮುಚ್ಚುವ ಸಮಯವಾದ್ದರಿಂದ ಮುಂಭಾಗದಲ್ಲೇ ಆಟೋ ನಿಲ್ಲಿಸಿ ಗೆಳೆಯನೊಂದಿಗೆ ಮದ್ಯಪಾನ ಮಾಡುತ್ತಿದ್ದನು.

ಅದೇ ಸಂದರ್ಭದಲ್ಲಿ ಆರೋಪಿ ದರ್ಶನ್ ಸಹ ಆತನ ಸ್ನೇಹಿತರೊಂದಿಗೆ ಬಾರ್‌ನಿಂದ ಹೊರಬಂದಿದ್ದ. ಬಳಿಕ ಶಫೀಯ ಆಟೋ ಪಕ್ಕದಲ್ಲೇ ನಿಂತು ಸಿಗರೇಟ್ ಸೇದುತ್ತ, ಮೂತ್ರ ವಿಸರ್ಜನೆ ಮಾಡುತ್ತಾ ನಿಂತಿದ್ದ. ಸಿಗರೇಟ್ ಹೊಗೆ ತನ್ನತ್ತ ಬಂದಿದ್ದರಿಂದ ಆರೋಪಿಯತ್ತ ತಿರುಗಿ ಗುರಾಯಿಸಿದ್ದ. ಇದರಿಂದ ದರ್ಶನ್ ಹಾಗೂ ಶಫೀ ನಡುವೆ ಮಾತಿಗೆ ಮಾತು ಬೆಳೆದು ಗಲಾಟೆ ತಾರಕಕ್ಕೇರಿದೆ. ಸಿಟ್ಟಿಗೆದ್ದ ದರ್ಶನ್ ತನ್ನ ಬಳಿ ಇದ್ದ ಡ್ರ್ಯಾಗರ್‌ನಿಂದ ಶಫೀಯ ಕುತ್ತಿಗೆಗೆ ಮನಬಂದಂತೆ ಇರಿದಿದ್ದಾನೆ. ತೀವ್ರ ರಕ್ತಸ್ರಾವದಿಂದಾಗಿ ರಸ್ತೆಯಲ್ಲೇ ಸಾವನ್ನಪ್ಪಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿದ ಚಿಕ್ಕಬಾಣಾವರ ಠಾಣೆ ಪೊಲೀಸರು ಆರೋಪಿ ದರ್ಶನ್‌ನನ್ನು ಬಂಧಿಸಿದ್ದಾರೆ. ದರ್ಶನ್ ವಿರುದ್ಧ 2023ರಲ್ಲಿ ಹಲ್ಲೆ ಪ್ರಕರಣವೊಂದು ದಾಖಲಾಗಿರುವುದು ಬೆಳಕಿಗೆ ಬಂದಿದ್ದು, ಪ್ರಕರಣದ ತನಿಖೆ ನಡೆಸಲಾಗುತ್ತಿದೆ ಎಂದು ವಾಯುವ್ಯ ವಿಭಾಗದ ಡಿಸಿಪಿ ನಾಗೇಶ್ ಡಿ.ಎಲ್. ಮಾಹಿತಿ ನೀಡಿದ್ದಾರೆ.

ವಿವಿಧ ಅಪಘಾತ: ಮೂವರ ಸಾವು

• **ಬೆಂಗಳೂರು:** ಕಬ್ಬನ್ ಪಾರ್ಕ್, ಚಿಕ್ಕಜಾಲ ಹಾಗೂ ಯಶವಂತಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದ ಮೂರು ಪ್ರತ್ಯೇಕ ರಸ್ತೆ ಅಪಘಾತಗಳಲ್ಲಿ ಪಾದಚಾರಿ ಸೇರಿದಂತೆ ಒಟ್ಟು ಮೂವರು ಮೃತಪಟ್ಟಿದ್ದಾರೆ.

ಕಬ್ಬನ್ ಪಾರ್ಕ್: ಬೈಕ್ ಸವಾರ ಸಾವು: ಇಲ್ಲಿನ ಕೆ.ಆರ್. ರಸ್ತೆಯ ಸಿಐಡಿ ಕಚೇರಿ ಮುಂಭಾಗ ಭಾನುವಾರ ಮಧ್ಯರಾತ್ರಿ 12.30ರ ಸುಮಾರಿಗೆ ಅಪಘಾತ ಸಂಭವಿಸಿದೆ. ಅತಿವೇಗವಾಗಿ ಹೋಗುತ್ತಿದ್ದ ಬೈಕ್ ಸವಾರ ಆಯತಪ್ಪಿ ಕೆಳಗೆ ಬಿದ್ದ ಪರಿಣಾಮ ಶೇಷಾದ್ರಿಪುರ ನಿವಾಸಿ ವಿಶಾಲ್ (30) ಮೃತಪಟ್ಟಿದ್ದಾರೆ. ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದ ವಿಶಾಲ್, ಕೆಲಸ ಮುಗಿಸಿಕೊಂಡು ಮನೆಗೆ ವಾಪಸ್ ಬರುವಾಗ ಈ ದುರ್ಘಟನೆ ಸಂಭವಿಸಿದೆ. ಕಬ್ಬನ್ ಪಾರ್ಕ್ ಸಂಚಾರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಯಶವಂತಪುರ: ಕಾರು ಡಿಕ್ಕಿಯಾಗಿ ಪಾದಚಾರಿ ಸಾವು: ಯಶವಂತಪುರದ ಗೋವರ್ಧನ್ ಚಿತ್ರಮಂದಿರದ ಬಳಿ ವೇಗವಾಗಿ ಬಂದ ಕಾರೊಂದು ಡಿಕ್ಕಿ ಹೊಡೆದ ಪರಿಣಾಮ 40 ವರ್ಷದ ಪಾದಚಾರಿಯೊಬ್ಬರು ಮೃತಪಟ್ಟಿದ್ದಾರೆ. ಯಶವಂತಪುರ ಸಂಚಾರ ಪೊಲೀಸರು ಕಾರು ಚಾಲಕನನ್ನು ವಶಕ್ಕೆ ಪಡೆದು ತನಿಖೆ ನಡೆಸುತ್ತಿದ್ದಾರೆ.

ಚಿಕ್ಕಜಾಲ: ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ಬೈಕ್ ಡಿಕ್ಕಿ: ಚಿಕ್ಕಜಾಲ ಸಂಚಾರ ಠಾಣೆ ವ್ಯಾಪ್ತಿಯ ಮೀನುಕುಂಟೆ ಬಳಿಯ ರಾಯಲ್ ಓಕ್ ಹತ್ತಿರ ಮತ್ತೊಂದು ದುರಂತ ನಡೆದಿದೆ. ದೇವನಹಳ್ಳಿಯ ರವಿ (35) ಎಂಬವರು ಭಾನುವಾರ ರಾತ್ರಿ 9 ಗಂಟೆಯ ವೇಳೆಗೆ ರಸ್ತೆ ದಾಟುತ್ತಿದ್ದಾಗ, ವೇಗವಾಗಿ ಬಂದ ಬೈಕ್ ಇವರಿಗೆ ಡಿಕ್ಕಿ ಹೊಡೆದಿದೆ. ಪರಿಣಾಮ ರವಿ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಡಿಕ್ಕಿ ಹೊಡೆದ ಬೈಕ್ ಸವಾರನಿಗೂ ಗಾಯಗಳಾಗಿದ್ದು, ಆತನನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ. ಚಿಕ್ಕಜಾಲ ಸಂಚಾರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ನಿರೀಕ್ಷಣಾ ಜಾಮೀನು: ಆರೋಪ ಪಟ್ಟಿ ಸಲ್ಲಿಕೆ ಬಳಿಕವೂ ಮುಂದುವರಿಕೆ

• **ಬೆಂಗಳೂರು:** ಆರೋಪಿಗೆ ಮಂಜೂರಾದ ನಿರೀಕ್ಷಣಾ ಜಾಮೀನು ಆರೋಪ ಪಟ್ಟಿ ಸಲ್ಲಿಕೆಯ ಬಳಿಕವೂ ಮುಂದುವರೆಯಲಿದೆ. ಒಮ್ಮೆ ಮಂಜೂರಾದ ನಿರೀಕ್ಷಣಾ ಜಾಮೀನು ರದ್ದಾಗುವುದಕ್ಕೂ ಮುನ್ನ ನ್ಯಾಯಾಂಗ ಬಂಧನಕ್ಕೆ ಒಳಪಡಿಸುವುದಕ್ಕೆ ಅವಕಾಶವಿಲ್ಲ ಎಂದು ಹೈಕೋರ್ಟ್‌ನ ಧಾರವಾಡ ಪೀಠ ಆದೇಶಿಸಿದೆ. ನಿರೀಕ್ಷಣಾ ಜಾಮೀನಿದ್ದರೂ ಬಂಧನಕ್ಕೆ ಆದೇಶಿಸಿದ್ದ ವಿಚಾರಣಾಧೀನ ನ್ಯಾಯಾಲಯದ ಆದೇಶ ಪ್ರಶ್ನಿಸಿ ಆರೋಪಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾ. ವಿಜಯಕುಮಾರ್ ಎ.ಪಾಟೀಲ್ ಅವರ ಏಕಸದಸ್ಯ ಪೀಠ ನಡೆಸಿತು. ಕ್ರಿಮಿನಲ್ ಪ್ರಕರಣದಲ್ಲಿ ಒಮ್ಮೆ ಮಂಜೂರಾದ ನಿರೀಕ್ಷಣಾ ಜಾಮೀನು, ಪ್ರಕರಣದ ತನಿಖೆ ಮುಗಿದು ಆರೋಪಪಟ್ಟಿ ಸಲ್ಲಿಕೆಯಾದ ಬಳಿಕವೂ ಮುಂದುವರೆಯಲಿದೆ. ನಿರೀಕ್ಷಣಾ ಜಾಮೀನು ಮಂಜೂರಾಗಿದ್ದರೂ ರಾಜ್ಯ ಸರ್ಕಾರ ಇಲ್ಲವೇ, ಸಂತ್ರಸ್ತೆಯ ಪರವಾಗಿ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಅರ್ಜಿ ಸಲ್ಲಿಸದಿದ್ದರೂ, ಆರೋಪಿಯನ್ನು ವಶಕ್ಕೆ ಪಡೆಯುವಂತೆ ನಿರ್ದೇಶಿಸಿರುವ ವಿಚಾರಣಾಧೀನ ನ್ಯಾಯಾಲಯದ ಕ್ರಮ ಕಾನೂನುಬಾಹಿರ ಎಂದು ಪೀಠ ಹೇಳಿದೆ. ಆರೋಪಿಗೆ ಈಗಾಗಲೇ ಷರತ್ತುಬದ್ಧ ನಿರೀಕ್ಷಣಾ ಜಾಮೀನು ಮಂಜೂರಾಗಿದೆ. ಆದರೆ, ಈವರೆಗೂ ಜಾಮೀನಿನ ಷರತ್ತು ಉಲ್ಲಂಘಿಸಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳಿಲ್ಲ, ಅಲ್ಲದೇ, ರಾಜ್ಯ ಸರ್ಕಾರ ಅಥವಾ ಸಂತ್ರಸ್ತೆಯ ಪರವಾಗಿ ಜಾಮೀನು ರದ್ದುಪಡಿಸುವ ಅರ್ಜಿ ಸಲ್ಲಿಕೆಯಾಗಿಲ್ಲ, ಆದ್ದರಿಂದ, ನಿರೀಕ್ಷಣಾ ಜಾಮೀನು ರದ್ದುಗೊಳಿಸದೇ ಆರೋಪಿಯನ್ನು ಬಂಧನಕ್ಕೆ ಕಳುಹಿಸಿರುವುದು ಕಾನೂನುಬಾಹಿರ ಎಂದು ತಿಳಿಸಿದೆ.



ಕಿರುಸುದ್ದಿ

ನಿಷೇಧಿತ ತಂಬಾಕು ಮಾರಾಟ: ವಶ



• **ಆನೇಕಲ್:** ನಿಷೇಧಿತ ತಂಬಾಕು ಉತ್ಪನ್ನಗಳ ದಾಸ್ತಾನಿನ ಮಳಿಗೆ ಮೇಲೆ ದಾಳಿ ನಡೆಸಿರುವ ಆನೇಕಲ್ ಠಾಣಾ ಪೊಲೀಸರು, 40ಸಾವಿರ ರೂ.ಮೌಲ್ಯದ ನಿಷೇಧಿತ ತಂಬಾಕು ಉತ್ಪನ್ನವನ್ನು ವಶಪಡಿಸಿಕೊಳ್ಳಲಾಗಿದೆ.

171 ವಿಧದ ತಂಬಾಕು ಪದಾರ್ಥ: ಹೈ ಲೈಟ್ ಸೂಪರ್ ಮಳಿಗೆಯಲ್ಲಿ 171 ತಂಬಾಕು ಪದಾರ್ಥ ಅಕ್ರಮವಾಗಿ ಇಡಲಾಗಿತ್ತು. 22 ಹುಕ್ಕಾ ಜಾಡಿಗಳು ಹಾಗೂ 7 ಬಾಕ್ಸ್ ಪೋಲೋ ಚಾರ್ಕೋಲ್ ಬಾಕ್ಸ್ ವಶಪಡಿಸಿಕೊಳ್ಳುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಆನೇಕಲ್ ಪಟ್ಟಣದ ಬಸ್ ನಿಲ್ದಾಣ ಬಳಿ ಇರುವ ಕೇರಳ ಮೂಲದ ಹೈ ಲೈಟ್ ಸೂಪರ್ ಮಾರ್ಕೆಟ್ ಮಳಿಗೆಯ ಮೇಲೆ ದಾಳಿ ನಡೆಸಿ, ಆರೋಪಿಗಳಾದ ರಮೇಶ್, ಸೆಜು, ಯೋಗೀಶ್, ಕಿಶೋರ್ ಕುಮಾರ್ ಅವರನ್ನು ಬಂಧಿಸಿ ವಿಚಾರಣೆ ನಡೆಸಲಾಗುತ್ತಿದೆ. ಇನ್ನು ದಾಳಿಯನ್ನು ಆನೇಕಲ್ ಪೊಲೀಸ್ ಠಾಣೆ ಇನ್ ಸ್ಪೆಕ್ಟರ್ ಪ್ರಕಾಶ್ ಅವರ ಮಾರ್ಗದರ್ಶನದಲ್ಲಿ ಸಬ್ ಇನ್ಸ್‌ಪೆಕ್ಟರ್ ಸಿದ್ದನಗೌಡರ ಮತ್ತು ಸಿಬ್ಬಂದಿಗಳು ಯಶಸ್ವಿ ದಾಳಿಯನ್ನು ನಡೆಸಿದ್ದಾರೆ. ಯುವ ಪೀಳಿಗೆಯನ್ನು ದಾರಿ ತಪ್ಪಿಸುವ ಇಂತಹ ನಿಷೇಧಿತ ಹುಕ್ಕಾ ಮತ್ತು ತಂಬಾಕು ಉತ್ಪನ್ನ ಮಾರಾಟಗಾರರ ವಿರುದ್ಧ ಕಠಿಣ ಕ್ರಮ ಕೈಗೊಂಡ ಆನೇಕಲ್ ಪೊಲೀಸರು ಮಾಹಿತಿ ನೀಡಿದ್ದಾರೆ.

ಚಿರತೆ ದಾಳಿ: 50 ಕೋಳಿ ಸಾವು

• **ಮಳವಳ್ಳಿ:** ಕೋಳಿ ಫಾರಂ ಮೇಲೆ ಚಿರತೆಯೊಂದು ದಾಳಿ ನಡೆಸಿ 50ಕ್ಕೂ ಹೆಚ್ಚು ಕೋಳಿಗಳನ್ನು ಕೊಂದು ಹಾಕಿರುವ ಘಟನೆ ತಾಲೂಕಿನ ಕಸಬಾ ಹೋಬಳಿ ಆಲದಹಳ್ಳಿ ಗ್ರಾಮದಲ್ಲಿ ಮಂಗಳವಾರ ಬೆಳಗಿನ ಜಾವ ನಡೆದಿದೆ. ಗ್ರಾಮದ ಎ.ಬಿ.ನಾಗರಾಜು ಎಂಬುವವರು ನಾಟಿ ಕೋಳಿ ಸಾಕಾಣಿಕೆಯನ್ನು ನಡೆಸುತ್ತಿದ್ದರು. ಮಂಗಳವಾರ ಬೆಳಗಿನ ಸುಮಾರು 3ಗಂಟೆ ಸಮಯದಲ್ಲಿ ಚಿರತೆಯೊಂದು ಕೋಳಿ ಫಾರಂ ಮೇಲೆ ದಾಳಿ ನಡೆಸಿ 40ಕ್ಕೂ ಹೆಚ್ಚು ಕೋಳಿಗಳನ್ನು ಕೊಂದು ಹಾಕಿ 10ಕ್ಕೂ ಹೆಚ್ಚು ಕೋಳಿಗಳನ್ನು ಹೊತ್ತೊಯ್ದಿದೆ. ಎಂದಿನಂತೆ ಬೆಳಗ್ಗೆ ರೈತ ಬಂದು ನೋಡಿದ್ದಾಗ ಘಟನೆ ಬೆಳಕಿಗೆ ಬಂದಿದೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಆಟೋ ಪಲ್ಟಿ: ಮಹಿಳೆ ಸಾವು, ಹಲವರಿಗೆ ಗಾಯ

• **ಮಂಡ್ಯ:** ಚಾಲಕನ ನಿಯಂತ್ರಣ ತಪ್ಪಿದ ಗೂಡ್ಸ್ ಆಟೋ (ಟಾಟಾ ಏಸ್) ರಸ್ತೆ ಬದಿಗೆ ಉರುಳಿಬಿದ್ದ ಪರಿಣಾಮ ಮಹಿಳೆಯೊಬ್ಬರು ಮೃತರಾಗಿದ್ದಾರೆ. 19 ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಕೋಡಿಕೊಪ್ಪಲು ಗ್ರಾಮದ ಬಳಿ ನಡೆದಿದೆ. ತಾಲೂಕಿನ ಬಿ. ಹಟ್ನ ಗ್ರಾಮದ ತಾಯಮ್ಮ (55) ಎಂಬುವರೇ ಮೃತಪಟ್ಟ ಮಹಿಳೆಯಾಗಿದ್ದಾರೆ. ನಾಗೇಶ (45), ಜ್ಞಾನಿತಾ (8), ಮಾನಸ (13), ಮಂಜುಳಾ (35), ಪ್ರಭಾ (43), ದಿಶಾಂತ್ (15), ಜೀವನ್ (14), ಶಿಲ್ಪ (11), ನಿರಂಜನ್ (10), ಲಕ್ಷ್ಮೀಕಾಂತ್ (15), ಪ್ರಮೋದ್ (15), ಸಾಕಮ್ಮ (76) ಸೇರಿದಂತೆ 19 ಮಂದಿ ಗಾಯಗೊಂಡಿದ್ದಾರೆ. ತಾಲೂಕಿನ ಬಿ. ಹಟ್ನ ಗ್ರಾಮದಿಂದ ನಾಗಮಂಗಲ ತಾಲೂಕು ಚಿಕ್ಕಯಗಟಿ ಗ್ರಾಮದಲ್ಲಿರುವ ಚಿಕ್ಕಯಗಟಿ ಮಾರಮ್ಮ ದೇವಾಲಯದಲ್ಲಿ ವಿಶೇಷ ಪೂಜೆ ಹಾಗೂ ಹರಿಸೇವೆ ಕಾರ್ಯಕ್ರಮಕ್ಕಾಗಿ ಗೂಡ್ಸ್ ಆಟೋ (ಟಾಟಾ ಏಸ್)ನಲ್ಲಿ ತೆರಳಿದ್ದರು. ಪೂಜೆ ಮುಗಿಸಿಕೊಂಡು ವಾಪಸ್ಸು ಬರುವಾಗ ಬಸರಾಳು ಬಳಿಯ ಕೋಡಿಕೊಪ್ಪಲು ಸಮೀಪ ಚಾಲಕ ನಿಯಂತ್ರಣ ತಪ್ಪಿದ ಗೂಡ್ಸ್ ಆಟೋ ರಸ್ತೆ ಬದಿಗೆ ಉರುಳಿಬಿದ್ದ ಪರಿಣಾಮ ಈ ದುರ್ಘಟನೆ ನಡೆದಿದೆ. ಸುದ್ದಿ ತಿಳಿದ ತಕ್ಷಣ ಸ್ಥಳಕ್ಕೆ ತೆರಳಿದ ಪೊಲೀಸರು ಆ್ಯಂಬುಲೆನ್ಸ್ ಮೂಲಕ ಗಾಯಾಳುಗಳನ್ನು ಆಸ್ಪತ್ರೆಗೆ ದಾಖಲಿಸಿದರು.ಈ ಪೈಕಿ ತೀವ್ರವಾಗಿ ಗಾಯಗೊಂಡಿದ್ದ ತಾಯಮ್ಮ ಅವರು ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾರೆ. ಗಾಯಗೊಂಡಿರುವವರಲ್ಲಿ ಬಹುತೇಕರು ಮಕ್ಕಳೇ ಆಗಿದ್ದಾರೆ. ಈ ಸಂಬಂಧ ಬಸರಾಳು ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಅಕ್ರಮ ತನಿಖೆಗೆ ಗೃಹ ಸಚಿವರ ಸೂಚನೆ | ಮಾಹಿತಿ ಸಂಗ್ರಹಿಸಿಕೊಂಡ ಡಿವೈಎಸ್ಪಿ, ಪುರಸಭೆ ಮುಖ್ಯಾಧಿಕಾರಿ

ಆಶ್ರಯ ನಿವೇಶನ ಹಂಚಿಕೆಯಲ್ಲೂ ಅಕ್ರಮ?

▸ **ಎಸ್.ಕೃಷ್ಣೇಗೌಡ, ಪಾಂಡವಪುರ**

ದಿಗಂತ ವಿಶೇಷ

• **ಪಾಂಡವಪುರ:** ಮಂಡ್ಯ ಜಿಲ್ಲೆಯ ಪಾಂಡವಪುರ ಪಟ್ಟಣದ ವ್ಯಾಪ್ತಿಯಲ್ಲಿ ಪುರಸಭೆ ಮತ್ತು ಆಶ್ರಯ ಸಮಿತಿಯಿಂದ ಈ ಹಿಂದೆ ಹಂಚಿಕೆ ಮಾಡಲಾಗಿದ್ದ ನಿವೇಶನದಲ್ಲಿ ಅಕ್ರಮವಾಗಿರುವ ಬಗ್ಗೆ ಆರೋಪಗಳು ಕೇಳಿಬಂದಿರುವ ಹಿನ್ನೆಲೆಯಲ್ಲಿ ಗೃಹ ಸಚಿವರ ಸೂಚನೆಯಂತೆ ಶ್ರೀರಂಗಪಟ್ಟಣ ಡಿವೈಎಸ್ಪಿ, ಪುರಸಭೆ ಮುಖ್ಯಾಧಿಕಾರಿ ವರದಿ ಪಡೆದುಕೊಂಡಿದ್ದಾರೆ.

ಪಟ್ಟಣದ ಮಹಾತ್ಮಗಾಂಧಿ ನಗರ, ಸುಭಾಷ್ ನಗರ, ಹನುಮಂತನಗರ, ಹೇಮಾವತಿ ಬಡಾವಣೆ, ಸುಬ್ರಹ್ಮಣ್ಯೇಶ್ವರ ದೇವಸ್ಥಾನ ಸೇರಿದಂತೆ ಪಟ್ಟಣದ ಹಲವೆಡೆ 1976 ರಿಂದ ಈಚೆಗೆ ಸಾವಿರಾರು ಸಂಖ್ಯೆಯಲ್ಲಿ ಬಡವರಿಗೆ ನಿವೇಶನ ಹಂಚಿಕೆ ಮಾಡಲಾಗಿತ್ತು. ಆದರೆ ಈ ಪೈಕಿ ರೈತನಾಯಕ, ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಅವರ ಅವಧಿಯಲ್ಲಿ 1994 ರಿಂದ 1999ರ ಅವಧಿಯಲ್ಲಿ ಅತಿ ಹೆಚ್ಚು 1051 ನಿವೇಶನಗಳನ್ನು ಬಡವರು ಮತ್ತು ವಸತಿ ರಹಿತರಿಗೆ ಹಂಚಿಕೆ ಮಾಡಲಾಗಿದೆ.

ಅಂದು ಹಂಚಿಕೆಯಾಗಿದ್ದ ನಿವೇಶನದಲ್ಲಿ ಪ್ರಭಾವಿ ರಾಜಕಾರಣಿಗಳು ಮತ್ತು ಹಿಂದಿನ ಪುರಸಭೆ ಅಧಿಕಾರಿಗಳ ಶಾಮೀಲಿನಿಂದಾಗಿ ಅಕ್ರಮ ನಡೆದಿದೆ ಎಂಬ ಆರೋಪಗಳು ಸಾರ್ವಜನಿಕರಿಂದ ವ್ಯಕ್ತವಾದ ಹಿನ್ನೆಲೆಯಲ್ಲಿ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಗೃಹ ಸಚಿವರಿಗೆ ಪತ್ರ ಬರೆದು ಸೂಕ್ತ ತನಿಖೆ ನಡೆಸುವಂತೆ ಮನವಿ ಮಾಡಿದ್ದರು. ಗೃಹ ಇಲಾಖೆಯ ಸೂಚನೆಯಂತೆ ಶ್ರೀರಂಗಪಟ್ಟಣ ಡಿವೈಎಸ್ಪಿ ಅವರು ಪಾಂಡವಪುರ ಪಟ್ಟಣದಲ್ಲಿ ಹಂಚಿಕೆಯಾಗಿರುವ ನಿವೇಶನಗಳ ಒಟ್ಟಾರೆ ಮಾಹಿತಿ ಮತ್ತು ಅಂದಿನ ಪುರಸಭೆ ಆಡಳಿತ ಮಂಡಳಿ ಮತ್ತು ಅಧಿಕಾರಿಗಳ ವಿವರಗಳನ್ನು ಪಡೆದುಕೊಂಡಿದ್ದಾರೆ.

1998 ಸೆ.27ರಲ್ಲಿ ಅಂದಿನ ವಸತಿ ಸಮಿತಿ ಸಭೆ ನಡೆದು ಅದರ ನಡಾವಳಿಯಂತೆ 853 ಅರ್ಹ ಫಲಾನುಭವಿಗಳಿಗೆ ಮೊದಲು ಹಂತದಲ್ಲಿ ಹಕ್ಕು ಪತ್ರ ನೀಡಲು ನಿರ್ಧರಿಸಲಾಗಿತ್ತು. ಮತ್ತೊಂದು ಸಭೆ ನಡೆದು 198 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿತ್ತು. ಒಟ್ಟಾರೆ 1051 ಫಲಾನುಭವಿಗಳಿಗೆ ಹಕ್ಕು ಪತ್ರ ನೀಡಲು ತೀರ್ಮಾನಿಸಲಾಗಿತ್ತು. ಇದರಲ್ಲಿ ಕೆಲವು ಹಕ್ಕು ಪತ್ರಗಳಿಗೆ ಅಂದಿನ ಪುರಸಭೆ ಮುಖ್ಯಾಧಿಕಾರಿ ಮತ್ತು ಪಾಂಡವಪುರ ತಹಸಿಲ್ದಾರ್ ಅವರು ಸಹಿ ಮಾಡಿದ್ದು, ಮತ್ತೆ ಕೆಲವು ಹಕ್ಕು ಪತ್ರಗಳಿಗೆ ಮುಖ್ಯಾಧಿಕಾರಿಗಳು ಮತ್ತು ಪುರಸಭೆ ಅಧ್ಯಕ್ಷರು ಸಹಿ ಮಾಡಿರುವ ಹಕ್ಕು ಪತ್ರಗಳನ್ನು ವಿತರಿಸಲಾಗಿದೆ. ಹನುಮಂತನಗರದಲ್ಲಿ 20★30 ಅಳತೆಯ 471, ಮಹಾತ್ಮಗಾಂಧಿನಗರದಲ್ಲಿ 368, ಸುಭಾಷ್‌ಚಂದ್ರಭೋಸ್ ನಗರದಲ್ಲಿ 122 ಹಾಗೂ ಹಾರೋಹಳ್ಳಿ ಗ್ರಾಮದಲ್ಲಿ 98 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ.

2004 ಜೂ.6ರಂದು ನಡೆದ ಪುರಸಭೆಯ ಆಡಳಿತ ಮಂಡಳಿ ನಡಾವಳಿಯಂತೆ ಹೇಮಾವತಿ ಬಡಾವಣೆಯ ಹಿಂಭಾಗ 66 ನಿವೇಶನಗಳು ಹಾಗೂ 2006 ಫೆ.14 ರಲ್ಲಿನ ಸಭೆಯಲ್ಲಿ ಪಟ್ಟಣದ ಹೇಮಾವತಿ ಬಡಾವಣೆ ಮತ್ತು ಸುಬ್ರಹ್ಮಣ್ಯ ದೇವಸ್ಥಾನ ಪಕ್ಕ 190 ನಿವೇಶನಗಳಿಗೆ ಹಕ್ಕು ಪತ್ರ ವಿತರಿಸಲಾಗಿದೆ. ಇದಲ್ಲದೆ ಶಾಂತಿನಗರ ಹೇಮಾವತಿ ಕಾಲನಿ ಹಿಂಭಾಗದಲ್ಲಿ 421 ನಿವೇಶನಗಳನ್ನು ಹಂಚಿಕೆ ಮಾಡಲಾಗಿದ್ದು, ಇದರ ಯಾವುದೇ ಮೂಲ ದಾಖಲಾತಿಗಳು ಪುರಸಭೆಯಲ್ಲಿ ಲಭ್ಯವಿಲ್ಲ ಎಂಬ ಮಾಹಿತಿ ತಿಳಿದುಬಂದಿದೆ.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಮಾತನಾಡಿ, ಯಾರೇ ಅಕ್ರಮ ಎಸಗಿದ್ದರೂ ಅದನ್ನು ಸಹಿಸಲು ಸಾಧ್ಯವಿಲ್ಲ, ನಿವೇಶನಗಳು ಅರ್ಹ ಫಲಾನುಭವಿಗಳಿಗೆ ಸಿಗಬೇಕು. ಒಂದು ವೇಳೆ ಅಕ್ರಮ ನಡೆದಿದ್ದರೆ ಸೂಕ್ತ ಕಾನೂನು ಕ್ರಮ ವಹಿಸಲಾಗುವುದೆಂದರು.



ಪಾಂಡವಪುರ ಪಟ್ಟಣದ ಮಹಾತ್ಮಗಾಂಧಿ ನಗರದಲ್ಲಿ ಹಂಚಿಕೆ ಮಾಡಲಾಗಿರುವ ನಿವೇಶನದಲ್ಲಿ ಬಡವರು ಮನೆ ನಿರ್ಮಿಸಿಕೊಂಡಿರುವುದು.





“ಪಾಂಡವಪುರ ಪುರಸಭಾ ವ್ಯಾಪ್ತಿಯಲ್ಲಿರುವ ಸರ್ಕಾರಿ ಜಾಗವನ್ನು ಅಕ್ರಮವಾಗಿ ಇ-ಸ್ವತ್ತಿಗೆ ಸೇರಿಸಿ ನಿವೇಶನವನ್ನು ಅಕ್ರಮವಾಗಿ ಹಂಚಿಕೆ ಮಾಡಿರುವ ವಿಚಾರವಾಗಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಸರ್ಕಾರಕ್ಕೆ ಪತ್ರ ಬರೆದು ತನಿಖೆಗೆ ಮನವಿ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಶ್ರೀರಂಗಪಟ್ಟಣ ಡಿವೈಎಸ್‌ಪಿ ಅವರು ಪತ್ರ ಬರೆದು ಸೂಕ್ತ ದಾಖಲೆಗಳೊಂದಿಗೆ ನಿವೇಶನ ಮಾಹಿತಿ ಕೋರಿದ್ದರು. ಅದರಂತೆ ಲಭ್ಯವಿರುವ ಅಗತ್ಯ ದಾಖಲೆ ಮತ್ತು ಮಾಹಿತಿ ಒದಗಿಸಲಾಗಿದೆ.

■ **ಸತೀಶ್‌ಕುಮಾರ್,** ಪುರಸಭೆ ಮುಖ್ಯಾಧಿಕಾರಿ, ಪಾಂಡವಪುರ.



“ಬಡವರು, ವಸತಿ ರಹಿತರು, ನಿರ್ಗತಿಕರು ಹೀಗೆ ಯಾರಿಗೂ ಅನ್ಯಾಯವಾಗಬಾರದು. ಸೂರಿಲ್ಲದ ಬಡವರಿಗೆ ನಿವೇಶನ ಮಂಜೂರು ಮಾಡಿದರೆ ಅದು ಪ್ರಭಾವಿಗಳ ಪಾಲಾಗಿದೆ ಎಂಬ ದೂರು ಕೇಳಿ ಬಂದ ಹಿನ್ನೆಲೆಯಲ್ಲಿ ಗೃಹ ಸಚಿವರಿಗೆ ಪತ್ರ ಬರೆಯಲಾಗಿತ್ತು.

ದರ್ಶನ್ ಪುಟ್ಟಣ್ಣಯ್ಯ, ಶಾಸಕ, ಮೇಲುಕೋಟೆ ವಿಧಾನಸಭಾ ಕ್ಷೇತ್ರ.

ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವ ಜೇನು ದಿನಾಚರಣೆ

ಸ್ವಯಂ ಉದ್ಯಮ ಜೀವನಕ್ಕೆ ಆಧಾರ

• **ಕೋಲಾರ:** ಜಿಲ್ಲೆಯಲ್ಲಿ ಗ್ರಾಮೀಣ ಕೈಗಾರಿಕೆಗಳ ಅಭಿವೃದ್ಧಿ, ಸ್ವಯಂ ಉದ್ಯೋಗ ಸೃಷ್ಟಿ ಹಾಗೂ ಯುವಜನರಿಗೆ ಕೌಶಲ್ಯ ತರಬೇತಿ ನೀಡುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆಂದು ಖಾದಿ ಮತ್ತು ಗ್ರಾಮ ಉದ್ಯೋಗ ಆಯೋಗ, ಭಾರತ ಸರ್ಕಾರದ ನಿರ್ದೇಶಕ ಡಾ.ಮೋಹನ ರಾವ್ ತಿಳಿಸಿದರು.

ಟಮಕದ ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರದಲ್ಲಿ, ಕೃಷಿ ವಿಜ್ಞಾನ ಕೇಂದ್ರ, ಕೋಲಾರ, ಖಾದಿ ಮತ್ತು ಗ್ರಾಮ ಉದ್ಯೋಗ ಆಯೋಗ, ಭಾರತ ಸರ್ಕಾರ ಹಾಗೂ ಕೃಷಿ ಇಲಾಖೆ, ಕೋಲಾರ ರವರ ಸಹಯೋಗದಲ್ಲಿ ವಿಶ್ವ ಜೇನು ದಿನಾಚರಣೆ-2026 ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿ, ವಿಶೇಷವಾಗಿ ಮಹಿಳೆಯರು ಹಾಗೂ ಯುವಕರಿಗೆ ಹೊಲಿಗೆ, ಕೈಗಾರಿಕಾ ಉತ್ಪನ್ನ ತಯಾರಿ, ಕಾಗದದ ವಸ್ತುಗಳು, ಅಲಂಕಾರಿಕ ವಸ್ತುಗಳು ಹಾಗೂ ಇತರೆ ಸಣ್ಣ ಕೈಗಾರಿಕೆಗಳ ಕುರಿತು ತರಬೇತಿ ನೀಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಗ್ರಾಮೀಣ ಪರಂಪರೆಯ ಕೈಗಾರಿಕೆಗಳು ಹಾಗೂ ಹಸ್ತಕಲೆಗೆ ಉತ್ತೇಜನ ನೀಡುವ ಉದ್ದೇಶದಿಂದ ಸರ್ಕಾರದಿಂದ ತಾಂತ್ರಿಕ ಸಹಾಯ, ಆರ್ಥಿಕ ನೆರವು, ಸಾಲ ಸೌಲಭ್ಯ, ಮಾರುಕಟ್ಟೆ ವ್ಯವಸ್ಥೆ ಹಾಗೂ ಪ್ರದರ್ಶನಗಳ ಅವಕಾಶ ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಕುಮಾರ ಸ್ವಾಮಿ ಮಾತನಾಡಿ, ಟೊಮ್ಯಾಟೊ, ಹಣ್ಣುಗಳು ಹಾಗೂ ಕೃಷಿ ಉತ್ಪನ್ನಗಳ ಪ್ರೊಸೆಸಿಂಗ್ ಘಟಕಗಳ ಸ್ಥಾಪನೆಗೆ ಸಹಾಯಧನ ಮತ್ತು ತರಬೇತಿ ನೀಡಲಾಗುತ್ತದೆ ಎಂದು ತಿಳಿಸಿದರು.

ಐಸಿಎಆರ್-ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥ ಡಾ. ಶಿವಾನಂದ ವಿ. ಹೊಂಗಲರವರು ಮಾತನಾಡಿದರು. ಡಾ.ಗಂಗಾಧರ ನರಬೆಂಚಿ, ಶಿವಕುಮಾರ, ಡಾ. ಅನಿಲ್ ಕುಮಾರ್ ಎಸ್, ವಿಜ್ಞಾನಿ (ಮಣ್ಣು ವಿಜ್ಞಾನ), ಕೃಷಿ ವಿಜ್ಞಾನ ಕೇಂದ್ರ, ಇವರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ರೈತರು, ವಿದ್ಯಾರ್ಥಿಗಳು, ಮಹಿಳಾ ಸ್ವಸಹಾಯ ಸಂಘದ ಸದಸ್ಯರು, ಬ್ಯಾಂಕ್ ಅಧಿಕಾರಿಗಳಿದ್ದರು.



ತಾವರೆಕೆರೆ ಸರಕಾರಿ ಪ್ರೌಢಶಾಲೆ ತರಗತಿ ಆರಂಭ

• **ತಾವರೆಕೆರೆ:** ನಂದಗುಡಿ ಹೋಬಳಿಯ ತಾವರೆಕೆರೆಯ ಸರ್ಕಾರಿ ಪ್ರೌಢಶಾಲೆಯಲ್ಲಿ 2026-27ನೇ ಸಾಲಿನ 8, 9, 10ನೇ ತರಗತಿಗೆ ಕನ್ನಡ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ತರಗತಿ ಪ್ರಾರಂಭವಾಗಿವೆ.

ನಮ್ಮ ಸರ್ಕಾರಿ ಶಾಲೆಯಲ್ಲಿ ದೊರೆಯುವ ಸೌಲಭ್ಯ ಆಕರ್ಷಕವಾಗಿದೆ. ಶಾಲಾ ವಾತಾವರಣ, ಎಲ್ಲಾ ಮಕ್ಕಳಿಗೂ ವಿದ್ಯಾರ್ಥಿ ವೇತನ, 8ನೇ ತರಗತಿ ಮಕ್ಕಳಿಗೆ ಉಚಿತ ಸೈಕಲ್, ಉಚಿತ ಪಠ್ಯ ಪುಸ್ತಕದೊಂದಿಗೆ ಸಮವಸ್ತ್ರ ನೀಡಲಾಗುವುದು.

ಅನುಭವಿ ನುರಿತ ಶಿಕ್ಷಕರಿಂದ ಬೋಧನೆ, ತಂತ್ರಜ್ಞಾನ ಆಧಾರಿತ ಕಲಿಕೆಯಲ್ಲಿ ಸ್ಮಾರ್ಟ್ ಟಿವಿ ಹಾಗು ಪ್ರೊಜೆಕ್ಟರ್ ಬಳಕೆ, ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮಕ್ಕಳಿಗೆ ವಿದ್ಯಾರ್ಥಿ ವೇತನ, ಸುಸಜ್ಜಿತ ಗ್ರಂಥಾಲಯ, ವಾಚನಾಲಯ ಇಲ್ಲಿದೆ. ಪ್ರಯೋಗಾಲಯ ವ್ಯವಸ್ಥೆ ತಿಂಗಳಿಗೊಮ್ಮೆ ಪೋಷಕರ ಸಭೆ ಹಾಗೂ ಮಕ್ಕಳ ಪ್ರಗತಿ ಪರಿಶೀಲನೆ ಅವಕಾಶ ವಿಶಾಲವಾದ ಆಟದ ಮೈದಾನ ಇದೆ. ಸೂಕ್ತ ಕ್ರೀಡಾ ಸಲಕರಣೆಯೊಂದಿಗೆ ಒಳಾಂಗಣ ಮತ್ತು ಹೊರಾಂಗಣ ಕ್ರೀಡೆಗಳ ಆಯೋಜನೆ ಮಾಡಲಾಗುವುದು.

ಬೆಳಗಿನ ಕ್ಷೀರಾ ಭಾಗ್ಯ ಯೋಜನೆ, ಪೌಷ್ಟಿಕಾಂಶಯುಳ್ಳ ರಾಗಿಮಾಲ್ಟ್, ಮಧ್ಯಾಹ್ನ ಬಿಸಿಯೂಟ ಹಾಗೂ ಉಚಿತ ಶೂ ವಿತರಣೆಯನ್ನೂ ಅನೇಕ ಸೌಲಭ್ಯಗಳಿವೆ. 2025-2026ನೇ ಸಾಲಿನ ನೂರರಷ್ಟು ಫಲಿತಾಂಶ ಬಂದಿದೆ. ಆದ್ದರಿಂದ ಪೋಷಕರು ನಿಮ್ಮ ಮಕ್ಕಳಿಗೆ ಗುಣ ಮಟ್ಟದ ವಿದ್ಯಾಭ್ಯಾಸಕ್ಕಾಗಿ ತಾವರೆಕೆರೆ ಸರ್ಕಾರಿ ಪ್ರೌಢಶಾಲೆಗೆ ಸೇರಿಸಬೇಕೆಂದು ಮುಖ್ಯೋಪಾಧ್ಯರಾದ ಗುಲ್ಬಂದನ್‌ತಾರಾ ಮನವಿ ಮಾಡಿಕೊಂಡಿದ್ದಾರೆ.

ವೈದ್ಯರು ರೋಗಿ ಪಾಲಿನ ಪ್ರತ್ಯಕ್ಷ ದೇವರು

• **ಹೊಸಕೋಟೆ:** ವೈದ್ಯ ವೃತ್ತಿ ಸುಂದರವಾದ ವೃತ್ತಿಯಾಗಿದೆ. ಅತಿ ಹೆಚ್ಚು ಜವಾಬ್ದಾರಿಯಿಂದ ನಿಭಾಯಿಸಿ ಎಂದು ಆರೋಗ್ಯ ಮತ್ತು ಸಮಾಜ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡುರಾವ್ ತಿಳಿಸಿದರು.

ನಗರದ ಎಂವಿಜೆ ಮೆಡಿಕಲ್ ಕಾಲೇಜು ಹಾಗೂ ಸಂಶೋಧನಾ ಆಸ್ಪತ್ರೆಯ 25ನೇ ವರ್ಷದ ಬೆಳ್ಳಿ ಹಬ್ಬ ಸಂಭ್ರಮ ಹಾಗೂ ವೈದ್ಯ ಪದವಿ ಪಡೆದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿ, ವೈದ್ಯ ವೃತ್ತಿ ಪಡೆಯಲು ನಿರಂತರ ಪರಿಶ್ರಮದಿಂದ ಪಡೆಯಬಹುದಾಗಿದೆಂದರು.

» **ಎಂವಿಜೆ ಮೆಡಿಕಲ್ ಕಾಲೇಜು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ**

ಇಂದಿನ ಸ್ಪರ್ಧಾತ್ಮಕ ಯುವ ಹಾಗೂ ತಂತ್ರಜ್ಞಾನಕ್ಕೆ ತಮ್ಮ ವೃತ್ತಿಯನ್ನು ಅಳವಡಿಸಿಕೊಂಡು ಪ್ರತಿಯೊಬ್ಬರ ಜೀವಕ್ಕೂ ಬೆಲೆ ಇದೆ. ಕೇವಲ ಒಂದೇ ಸಮುದಾಯಕ್ಕೆ ಸೀಮಿತವಾಗದೆ ಸಮಾಜ ಸೇವೆ ಮಾಡಿ ಎಂದರು. ಎಂವಿಜೆ ಆಸ್ಪತ್ರೆ ಹಾಗೂ ಸಂಶೋಧನಾ ಆಸ್ಪತ್ರೆಯ ಚೇರ್ಮನ್ ಡಾ.ಎಂ.ಜೆ.ಮೋಹನ್ ಮಾತನಾಡಿ, 25 ವರ್ಷದ ಹಿಂದಿನ ವೈದ್ಯಕೀಯ ಪದ್ಧತಿ ಇಂದು ಇಲ್ಲವಾಗಿದೆ. ಇಂದಿನ ಔಷಧ ಬಾರಿ ಪರಿಣಾಮಕಾರಿಯಾಗಿ ಕೆಲಸ ಮಾಡಿ ರೋಗವನ್ನು ಸಂಪೂರ್ಣ ಗುಣಪಡಿಸುವ ಶಕ್ತಿಹೊಂದುವ ರೀತಿ ನಮ್ಮ ವಿಜ್ಞಾನ ಅಭಿವೃದ್ಧಿ ಹೊಂದಿದೆಂದು ಹೇಳಿದರು. ಎಂವಿಜೆ ಮೆಡಿಕಲ್ ಕಾಲೇಜಿನ ಹಾಗೂ ಸಂಶೋಧನಾ ಕೇಂದ್ರದ ಕಾರ್ಯ ನಿರ್ವಹಣಾಧಿಕಾರಿ ಡಾ.ಧರಣಿ, ಪ್ರಾಂಶುಪಾಲ ಡಾ.ರವೀಂದ್ರನ್, ಸೂಪರಿಂಡೆಂಟ್ ಡಾ. ದಯಾನಂದ್, ಡೆಪ್ಯೂಟಿ ಸೂಪರಿಂಡೆಂಟ್ ಡಾ.ಪ್ರಮೋದ್, ಅಂಜನ್ ರೆಡ್ಡಿ, ಸಾರ್ವಜನಿಕ ಆಸ್ಪತ್ರೆ ಮುಖ್ಯ ಆಡಳಿತಾಧಿಕಾರಿ ಡಾ.ಅನ್ನಕುಮಾರ್, ರೋಟರಿ ಜಿಲ್ಲಾ ಸಹಾಯಕ ಪಾಲಕ ಡಿ.ಎಸ್ .ರಾಜ್ ಕುಮಾರ್ ಹಲವು ಪ್ರಮುಖರಿದ್ದರು.



ಬೆಂಗಳೂರು ವಿವಿ 5ನೇ ಸೆಮಿಸ್ಟರ್ ಪರೀಕ್ಷೆ | ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಅಭಿನಂದನೆ

ಬಿಕಾಂ ಪರೀಕ್ಷೆಯಲ್ಲಿ ಶೇ.90 ಫಲಿತಾಂಶ

• **ನೆಲಮಂಗಲ:** ನಮ್ಮ ಕಾಲೇಜಿನ ಹತ್ತು ವಿದ್ಯಾರ್ಥಿಗಳು ಬೆಂಗಳೂರು ವಿಶ್ವವಿದ್ಯಾಲಯದ 5ನೇ ಸೆಮಿಸ್ಟರ್ ಬಿಕಾಂ ಪರೀಕ್ಷೆಯಲ್ಲಿ 100ಕ್ಕೆ 100 ಅಂಕ ಪಡೆದಿದ್ದು ,56 ವಿದ್ಯಾರ್ಥಿಗಳು ಶೇ.90ಕ್ಕಿಂತ ಹೆಚ್ಚು ಅಂಕ ಪಡೆದು ಅದ್ಭುತ ಸಾಧನೆ ಮಾಡಿದ್ದಾರೆಂದು ಸರಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲೆ ಡಾ. ಸುಜಾತಾ ಸಿ.ಎನ್.ತಿಳಿಸಿದರು.

ನಗರದ ಸರಕಾರಿ ಪ್ರಥಮ ದರ್ಜೆಕಾಲೇಜಿನ ಸಭಾಂಗಣದಲ್ಲಿ 2025-26ನೇ ಸಾಲಿನ ಪ್ಲೇಸ್ಮೆಂಟ್ ಸೆಲ್ ಸಮಾರೋಪ ಹಾಗೂ ಸಾಧಕ ವಿದ್ಯಾರ್ಥಿಗಳಿಗೆ ಅಭಿನಂದನಾ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿ, ಗ್ರಾಮೀಣ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ, ನಾಯಕತ್ವ ಗುಣ ಹಾಗೂ ಉದ್ಯೋಗ ಜಾಗೃತಿ ಮೂಡಿಸಲು ಪ್ಲೇಸ್ಮೆಂಟ್ ಸೆಲ್ ಮಹತ್ವದ ಪಾತ್ರ ವಹಿಸಿದೆ ಎಂದರು. ಸರಕಾರಿ ಕಾಲೇಜುಗಳಲ್ಲಿ ಅತಿ ಕಡಿಮೆ ಶುಲ್ಕದಲ್ಲಿ ಗುಣಮಟ್ಟ ಶಿಕ್ಷಣ ನೀಡಲಾಗುತ್ತಿದೆ. ಗ್ರಾಮೀಣ ವಿದ್ಯಾರ್ಥಿಗಳ ಸಾಧನೆಯನ್ನು ನಮ್ಮ ಕಾಲೇಜಿನಲ್ಲಿ ಕಾಣಬಹುದು. 2025-26ರ ಬಿ.ಕಾಂ ವಿದ್ಯಾರ್ಥಿಗಳ ಬ್ಯಾಚ್ ಅತ್ಯುತ್ತಮ ಬ್ಯಾಚ್ ಆಗಿದೆಂದರು.

ಹತ್ತು ವಿದ್ಯಾರ್ಥಿಗಳು 100ಕ್ಕೆ 100 ಅಂಕವನ್ನು ಗಳಿಸಿರುವುದು ಕಾಲೇಜಿಗೆ ಹೆಮ್ಮೆಯ ವಿಚಾರವಾಗಿದೆ. ವಿದ್ಯಾರ್ಥಿಗಳು, ಪೋಷಕರು ಹಾಗೂ ವಾಣಿಜ್ಯ ವಿಭಾಗದ ಉಪನ್ಯಾಸಕರಿಗೆ ಅಭಿನಂದನೆಗಳು ಎಂದು ತಿಳಿಸಿದರು.

ವಿಜೇತರಿಗೆ ಸನ್ಮಾನ: ಪ್ಲೇಸ್ಮೆಂಟ್ ಸೆಲ್ ವತಿಯಿಂದ 2025-26ನೇ ಸಾಲಿನಲ್ಲಿ ಒಟ್ಟಾರೆ 23 ವಿವಿಧ ಚಟುವಟಿಕೆಗಳ ಕಾರ್ಯಕ್ರಮ ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಇಂಟ್ರೊಡ್ಯೂಸ್ ಯುವರ್‌ಸೆಲ್, ಬೆಸ್ಟ್ ಪಬ್ಲಿಕ್‌ಸ್ಪೀಕರ್, ಬಿಜ್ನೆಸ್ ಟೆಸ್ಟ್, ಇನ್ಕಮ್ ಟ್ಯಾಕ್ಸ್ ಟಾಪ್ ಸ್ಕೋರರ್ ಸೇರಿದಂತೆ ನಡೆಸಲಾದ ವಿವಿಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ನೀಡಿ ಅಭಿನಂದನೆ ಸನ್ಮಾನಿಸಲಾಯಿತು ಎಂದು ಪ್ಲೇಸ್ಮೆಂಟ್ ಅಧಿಕಾರಿ ಡಾ.ಪಿ.ನಾಗೇಂದ್ರಸ್ವಾಮಿ ತಿಳಿಸಿದರು.

ಪ್ಲೇಸ್ಮೆಂಟ್ ಅಧಿಕಾರಿ ಡಾ.ಪಿ ನಾಗೇಂದ್ರಸ್ವಾಮಿ, ಐಕ್ಯೂಎಸಿಸಂಯೋಜಕಿ ಮಮತಾ, ಪ್ರಾಧ್ಯಾಪಕರಾದ ಹನುಮಂತರಾಜು, ಡಾ.ನಾಗಭೂಷಣ್, ಡಾ. ವೆಂಕಟೇಶ್, ಡಾ.ಮಂಜುನಾಥ್ ಮತ್ತಿತರರಿದ್ದರು.





ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರಾಗಿ ನೇಮಕಗೊಂಡ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅವರು ಅಧಿಕಾರ ವಹಿಸಿಕೊಂಡರು. ಹಂಗಾಮಿ ಅಧ್ಯಕ್ಷರಾದ ಶ್ಯಾಂ ಭಟ್ ಮೊದಲಾದವರಿದ್ದರು.

ಹಾಲು ಉತ್ಪಾದಕರು, ಡೇರಿ ಸದಸ್ಯರಿಗೆ ಚೆಕ್ ವಿತರಣೆ

ವೈದ್ಯಕೀಯ, ಮರಣ ಪರಿಹಾರ ಹೆಚ್ಚಳಕ್ಕೆ ಆಗ್ರಹ

• **ಹೊಸಕೋಟೆ:** ಡೇರಿ ಸದಸ್ಯರು, ಹೈನುಗಾರರ ಕುಟುಂಬಕ್ಕೆ ನೀಡಲಾಗುವ ವೈದ್ಯಕೀಯ, ಮರಣ ಪರಿಹಾರ ಮೀಸಲಿಡುವ ಹಣ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಬೇಕಾಗಿ ಬಮುಲ್ ನಿರ್ದೇಶಕ ಬಿ.ವಿ.ಸತೀಶ್‌ಗೌಡ ಆಗ್ರಹಿಸಿದರು.

ತಾಲೂಕಿನ ಬೆಂಡಿಗಾನಹಳ್ಳಿಯಲ್ಲಿ ಬಮೂಲ್ ಕಲ್ಯಾಣ ಟ್ರಸ್ಟ್‌ವತಿಯಿಂದ ಹಮ್ಮಿಕೊಂಡಿದ್ದ ಹಾಲು ಉತ್ಪಾದಕ ಸದಸ್ಯರಿಗೆ ವೈದ್ಯಕೀಯ ವೆಚ್ಚ ಪರಿಹಾರ ಹಾಗೂ ಸದಸ್ಯರ ಕುಟುಂಬಗಳಿಗೆ ಮರಣ ಪರಿಹಾರ ಚೆಕ್ ವಿತರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಳೆ ಕಡಿಮೆಯಾಗಿದೆಂದರು. ರಾಸುಗಳಿಗೆ ನೀಡುವ ಹಿಂಡಿ 1650 ರೂ.ಆಗಿದೆ. ರಾಸು ಸಾಕಣೆದಾರರು ಬೆಲೆ ಏರಿಕೆಯಿಂದಾಗಿ ತತ್ತರಿಸಿದ್ದಾರೆ. ರಾಸುಗಳಿಗೆ ಮೇವು ಪೂರೈಕೆ ಮಾಡಲು ಸಾಧ್ಯವಾಗುತ್ತಿಲ್ಲ, ಉತ್ಪಾದನೆ ವೆಚ್ಚ ದುಬಾರಿಯಾಗುತ್ತಿರುವ ಕಾರಣ ಹಾಲಿನ ದರವನ್ನು ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.

ಬಮುಲ್‌ಕಲ್ಯಾಣ ಟ್ರಸ್ಟ್‌ವತಿಯಿಂದ ಹಾಲು ಉತ್ಪಾದಕರ ಸದಸ್ಯರಿಗೆ ವೈದ್ಯಕೀಯ ವೆಚ್ಚ ಪರಿಹಾರ, ಸದಸ್ಯರ ಮರಣ ನಂತರ ಅವರ ಕುಟುಂಬದವರಿಗೆ ನೆರವು ಪರಿಹಾರ ಹಾಗೂ ಸದಸ್ಯರ ಮಕ್ಕಳ ವಿದ್ಯಾಭ್ಯಾಸ ಪ್ರೋತ್ಸಾಹ ಧನ ವಿತರಣೆ ಕಾರ್ಯ ಮಾಡಲಾಗುತ್ತಿದೆಂದರು.2025-26ನೇ ಸಾಲಿನಲ್ಲಿ ಹೊಸಕೋಟೆ ತಾಲೂಕಿನಾ ದ್ಯಂತ ಹಾಲು ಉತ್ಪಾದಕ 60ಸದಸ್ಯರಿಗೆ ವೈದ್ಯಕೀಯ ಪರಿಹಾರವಾಗಿ 11.50 ಲಕ್ಷ, 70 ವರ್ಷ ಮೇಲ್ಪಟ್ಟ 13 ಸದಸ್ಯ ಕುಟುಂಬಗಳಿಗೆ ಮರಣ ಪರಿಹಾರ 3.60 ಲಕ್ಷ, 6 ಜನ ಬಮುಲ್ ಸದಸ್ಯರ ಕುಟುಂಬಗಳಿಗೆ ಮರಣ ಪರಿಹಾರವಾಗಿ ತಲಾ ಒಂದು ಲಕ್ಷದಂತೆ 6 ಲಕ್ಷ, ಕುಡಿಯುವ ನೀರು ಘಟಕ, ಬಸ್ ನಿಲ್ದಾಣ,ವಿದ್ಯುತ್ ದೀಪ ಇತ್ಯಾದಿ ಸಾಮಾಜಿಕ ಕಾರ್ಯಗಳಿಗೆ 15 ಲಕ್ಷ , 298 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವಾಗಿ 11 ಲಕ್ಷ ಪ್ರೋತ್ಸಾಹ ಧನ ವಿತರಣೆ ಮಾಡಲಾಗಿದೆ. ಸದಸ್ಯರ ವೈದ್ಯಕೀಯ, ಮರಣ ಪರಿಹಾರ ಇತ್ಯಾದಿ ಕಾರ್ಯಗಳಿಗೆ ಮೀಸಲಿಡುವ ಹಣವನ್ನು ಒಂದು ಕೋಟಿಗೆ ಏರಿಕೆ ಮಾಡುತ್ತೇವೆಂದರು. ಬಮುಲ್ ನಿರ್ದೇಶಕ ಬಿ.ವಿ ಸತೀಶ್‌ಗೌಡರ ಕೋಟಾದಲ್ಲಿ ಹೊಸಕೋಟೆ ತಾಲೂಕಿನ ವಾಟಸಂದ್ರ, ತಿಮ್ಮಪ್ಪನಹಳ್ಳಿ, ನೆಲವಾಗಿಲು, ಸೋಲೂರು, ಚಿಕ್ಕನಲ್ಲೂರಹಳ್ಳಿ, ಆಲಪ್ಪನ ಹಳ್ಳಿ, ಹೊಸಕೋಟೆ ಮೇಲಿನ ಪೇಟೆ, ಒಳಗೆರೆಪುರ, ಅತ್ತಿಬೆಲೆ, ಬೆಂಡಿಗಾನಹಳ್ಳಿ, ಬೊಮ್ಮನ ಬಂಡೆ ಸೇರಿ ಒಟ್ಟು 12 ಮಂದಿಗೆ ವೈದ್ಯಕೀಯ ಪರಿಹಾರ ಚೆಕ್ ಹಾಗೂ ಯಳಚಹಳ್ಳಿ, ಚಿಕ್ಕನಲ್ಲೂರಹಳ್ಳಿ, ಚಿಕ್ಕಗಟ್ಟಿಗನಬ್ಬೆ ಗ್ರಾಮಗಳ ಮೂವರು ಸಕ್ರಿಯ ಸದಸ್ಯರ ಮರಣ ಪರಿಹಾರ ಚೆಕ್ ವಿತರಣೆ ಮಾಡಲಾಯಿತು. ಉಪವ್ಯವಸ್ಥಾಪಕ ಸಂತೋಷ್, ವಿಸ್ತಾರಣಾಧಿಕಾರಿ ವಿದ್ಯಾ, ಆನಂದ್, ರಮೇಶ್, ರಘುನಾಥ್, ಪವಿತ್ರ, ವಿನಯ್, ಬಮುಲ್ ಟ್ರಸ್ಟ್ ನವೀನ್ ಹಾಜರಿದ್ದರು.



ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಆರೋಪ

ಅಹಿಂದ ಹೆಸರಲ್ಲಿ ಲೂಟಿ: ಜೆಡಿಎಸ್

• **ಮೈಸೂರು:** ಕಾಂಗ್ರೆಸ್ ಸರ್ಕಾರದಲ್ಲಿ ಭ್ರಷ್ಟಾಚಾರ ಮಿತಿ ಮೀರಿದೆ. ಹಿಂದುಳಿದ ವರ್ಗಗಳ ಇಲಾಖೆಯಲ್ಲಿ ಶಾಲೆಗಳಿಗೆ ನೀಡುವ ಒಂದು ಟಿವಿಗೆ ಒಬ್ಬೊಬ್ಬರಿಗೆ ಒಂದೂಕಾಲು ಲಕ್ಷಕ್ಕೂ ಹೆಚ್ಚು ಹಣ ಬಿಲ್ ಮಾಡಲಾಗಿದೆ. ಅಹಿಂದ ಹೆಸರಲ್ಲಿ ಲೂಟಿ ಹೊಡೆಯಲಾಗುತ್ತಿದೆ ಎಂದು ಜೆಡಿಎಸ್ ಕಾರ್ಯಾಧ್ಯಕ್ಷ ಮಾಜಿ ಸಚಿವ ಸಾ.ರಾ.ಮಹೇಶ್ ಆರೋಪಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ರಾಜಕೀಯ ವ್ಯವಸ್ಥೆಯಲ್ಲಿ ನನ್ನನ್ನೂ ಸೇರಿದಂತೆ ಯಾರೂ ಪ್ರಾಮಾಣಿಕರಲ್ಲ, ದುಡ್ಡಿಲ್ಲದೆ ಇಂದು ರಾಜಕಾರಣ ಮಾಡಲು ಸಾಧ್ಯವಿಲ್ಲ, ನಾವೆಲ್ಲರೂ ಗಾಜಿನ ಮನೆಯಲ್ಲಿದ್ದೇವೆ. ವಾಸ್ತವ ಸತ್ಯ ಒಪ್ಪಿಕೊಳ್ಳಬೇಕು ಎಂದರು.

ಕಾಂಗ್ರೆಸ್ ಅಭ್ಯರ್ಥಿಗಳು ಚುನಾವಣೆಗೆ ಹತ್ತಾರು ಕೋಟಿ ಖರ್ಚು ಮಾಡಿದ್ದಾರಲ್ಲ, ಆ ದುಡ್ಡು ಎಲ್ಲಿಂದ ಬಂತು ಜೆಡಿಎಸ್‌ಗಿಂತ ಕಾಂಗ್ರೆಸ್‌ನಲ್ಲೇ ಹೆಚ್ಚು ಭ್ರಷ್ಟರಿದ್ದಾರೆ. ಆದರೆ, ಪರ್ಸೆಂಟೇಜ್ ವ್ಯತ್ಯಾಸವಷ್ಟೆ. ನಿಮ್ಮ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳನ್ನು ಸಾರ್ವಜನಿಕ ವೇದಿಕೆಗೆ ಕರೆಯಿರಿ, ಯಾರದ್ದು ಎಷ್ಟೆಷ್ಟು ಪರ್ಸೆಂಟ್ ಭ್ರಷ್ಟಾಚಾರ ಎಂದು ಮುಖ ನೋಡಿಯೇ ಹೇಳುತ್ತೇನೆ ಎಂದರು.

ಮೈಸೂರು ನಗರ ಪಾಲಿಕೆ ಮತ್ತು ಎಂಡಿಎದಲ್ಲಿ ಇಬ್ಬರನ್ನು ಹೊರತುಪಡಿಸಿ ಉಳಿದೆಲ್ಲ ಅಧಿಕಾರಿಗಳನ್ನು ಸಾಮೂಹಿಕವಾಗಿ ವರ್ಗಾವಣೆ ಮಾಡಲಾಗಿದೆ. ಆದರೆ ಅಲ್ಲಿಗೆ ಇನ್ನು ಹೊಸ ಪೋಸ್ಟಿಂಗ್ ಯಾಕೆ ಮಾಡಿಲ್ಲ, ಇದರ ಹಿಂದಿನ ರಹಸ್ಯವೇನು ಎಂದು ಪ್ರಶ್ನಿಸಿದರು.ಎಚ್.ಡಿ.ಕುಮಾರಸ್ವಾಮಿಯವರ ಕೇತಗಾನಹಳ್ಳಿ ತೋಟದ 50 ಎಕರೆ ಜಮೀನನ್ನು 40 ವರ್ಷದ ಹಿಂದೆಯೇ ಕಾನೂನುಬದ್ಧವಾಗಿ ಖರೀದಿ ಮಾಡಲಾಗಿದೆ. ಅದಕ್ಕೆ ಸ್ಪಷ್ಟ ದಾಖಲೆಗಳಿವೆ. ಯಾರೋ ವ್ಯಕ್ತಿ 14ಎಕರೆ ಒತ್ತುವರಿ ಎಂದು ಸುಳ್ಳು ಹೇಳುತ್ತಿದ್ದಾನೆ. ರಾಜ್ಯದ ಇತಿಹಾಸದಲ್ಲಿ ಎಷ್ಟೋ ರಾಜಕಾರಣಿಗಳ ಭೂ ಒತ್ತುವರಿ ಪ್ರಕರಣಗಳು ಚರ್ಚೆಗೆ ಬಂದಿವೆ. ಇದು ನೂರಕ್ಕೆ ನೂರು ದ್ವೇಷದ ರಾಜಕಾರಣ ಎಂದು ಕಿಡಿಕಾರಿದರು.

ಕೆ.ಆರ್.ನಗರ,ಚಾಮರಾಜ, ನರಸಿಂಹರಾಜ ಸೇರಿದಂತೆ ವಿವಿಧ ಕ್ಷೇತ್ರಗಳ ಮತದಾರರ ಪಟ್ಟಿ ಸಿಗುತ್ತಿಲ್ಲ ಎಂದು ಆಡಳಿತ ಪಕ್ಷದವರೇ ಗಾಬರಿ ಬೀಳುತ್ತಿದ್ದಾರೆ. 2023ರ ಚುನಾವಣೆ ಪಾರದರ್ಶಕವಾಗಿ ನಡೆದಿರಲಿಲ್ಲವೇ. ಕೆ.ಆರ್.ನಗರದಲ್ಲಿ 18800 ಮತದಾರರ ವಿಳಾಸವೇ ಸಿಗುತ್ತಿಲ್ಲ, ಈಗ ಅವರೆಲ್ಲಾ ಎಲ್ಲಿಗೆ ಹೋದರು. ನಮಗೆ ಕಳೆದ ಚುನಾವಣೆ ಸರಿಯಾಗಿ ನಡೆದಿಲ್ಲ ಎಂಬ ಅನುಮಾನ ಕಾಡುತ್ತಿದೆ. ಅಷ್ಟಕ್ಕೂ ಮತದಾರರ ಪಟ್ಟಿ ಪರಿಷ್ಕರಣೆ ಮಾಡುತ್ತಿರುವ ಬಿಎಲ್‌ಒ, ತಹಸೀಲ್ದಾರ್, ಎಸಿ ಸೇರಿದಂತೆ ಎಲ್ಲ ಅಧಿಕಾರಿಗಳು ನಿಮ್ಮದೇ ಸರ್ಕಾರದ ನೌಕರರು. ನಿಮಗೆ ನಿಮ್ಮದೇ ಅಧಿಕಾರಿಗಳ ಮೇಲೆ ನಂಬಿಕೆ ಇಲ್ಲವೇ ಎಂದರು. ಗೋಷ್ಠಿಯಲ್ಲಿ ಎಂಎಲ್ಸಿಗಳಾದ ಸಿ.ಎನ್.ಮಂಜೇಗೌಡ, ಕೆ.ವಿವೇಕಾನಂದ, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ನಗರಾಧ್ಯಕ್ಷ ಎಸ್‌ಬಿಎಂ ಮಂಜು, ಮಾಜಿ ಮೇಯರ್ ಆರ್.ಲಿಂಗಪ್ಪ ಸೇರಿದಂತೆ ಹಲವರಿದ್ದರು.

ಕಿರುಸುದ್ದಿ

ವಾಹನ ಸವಾರರ ಸುರಕ್ಷತೆಗೆ ವಿಶೇಷ ಕಾರ್ಯಾಚರಣೆ

• **ಬೆಂಗಳೂರು:** ದ್ವಿಚಕ್ರ ವಾಹನ ಸವಾರರ ಸುರಕ್ಷತೆಯನ್ನು ಖಚಿತಪಡಿಸಲು ಮತ್ತು ರಸ್ತೆ ಅಪಘಾತಗಳಲ್ಲಿ ಸಂಭವಿಸುವ ಪ್ರಾಣಹಾನಿ ಹಾಗೂ ಗಾಯಗಳ ಪ್ರಮಾಣವನ್ನು ತಗ್ಗಿಸುವ ಸಲುವಾಗಿ ನಗರ ಸಂಚಾರ ಪೊಲೀಸರು ವಿಶೇಷ ಕಾರ್ಯಾಚರಣೆ ಹಮ್ಮಿಕೊಂಡಿದ್ದರು. ಮಂಗಳವಾರ ಬೆಳಗ್ಗೆ 6 ಗಂಟೆಯಿಂದ 9 ಗಂಟೆಯವರೆಗೆ ನಗರದಾದ್ಯಂತ ಏಕಕಾಲದಲ್ಲಿ ಈ ಕಟ್ಟುನಿಟ್ಟಿನ ತಪಾಸಣೆ ನಡೆಸಲಾಗಿದೆ. ಕೇವಲ ಮೂರು ತಾಸು ನಡೆದ ಈ ಕಾರ್ಯಾಚರಣೆಯಲ್ಲಿ ಹೆಲ್ಮೆಟ್ ಧರಿಸದ ಸವಾರರ ವಿರುದ್ಧ ಒಟ್ಟು 4,351 ನಿಯಮ ಉಲ್ಲಂಘನೆ ಪ್ರಕರಣಗಳನ್ನು ದಾಖಲಿಸಿಕೊಳ್ಳಲಾಗಿದೆ. ಇದರಲ್ಲಿ ಹೆಲ್ಮೆಟ್ ಧರಿಸದೆ ಬೇಜವಾಬ್ದಾರಿಯಿಂದ ವಾಹನ ಚಲಾಯಿಸುತ್ತಿದ್ದ 2,920 ದ್ವಿಚಕ್ರ ವಾಹನ ಸವಾರರ ವಿರುದ್ಧ ಪ್ರಕರಣ ದಾಖಲಿಸಿದ್ದರೆ, ಹಿಂಬದಿ ಸವಾರರು ಹೆಲ್ಮೆಟ್ ಧರಿಸದ ಕಾರಣಕ್ಕಾಗಿ 1,430 ಪ್ರಕರಣವನ್ನು ದಾಖಲು ಮಾಡಲಾಗಿದೆ.

ಅಪರಿಚಿತನ ಮೇಲೆ ಹಲ್ಲೆ: ಚಿಕಿತ್ಸೆ ಫಲಿಸದೇ ಸಾವು

• **ಗುಂಡ್ಲುಪೇಟೆ:** ಪಟ್ಟಣದ ಹಳೆ ಆಸ್ಪತ್ರೆ ರಸ್ತೆಯ ಹಾರ್ಡ್‌ವೇರ್ ಅಂಗಡಿ ಮುಂಭಾಗ ನಡೆದ ಹಲ್ಲೆ ಪ್ರಕರಣದಲ್ಲಿ ಅಪರಿಚಿತ ಮಾನಸಿಕ ಅಸ್ವಸ್ಥ ವ್ಯಕ್ತಿಯೊಬ್ಬರು ಮೃತಪಟ್ಟಿರುವ ಘಟನೆ ಸೋಮವಾರ ಸಂಜೆ ನಡೆದಿದೆ. ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದ ವ್ಯಕ್ತಿಯು ಅಂಗಡಿ ಮುಂದೆ ಹಿಂದಿ ಭಾಷೆಯಲ್ಲಿ ಅವಾಚ್ಯ ಶಬ್ದದಿಂದ ನಿಂದಿಸುತ್ತಿದ್ದನೆಂದು ಹೇಳಲಾಗುತ್ತಿದೆ. ಈ ವೇಳೆ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ ಮಹೇಶ್ ಎಂಬಾತ ಆಕ್ರೋಶಗೊಂಡು ಮರದ ಪಟ್ಟಿಯಿಂದ ತಲೆಭಾಗಕ್ಕೆ ಹಲ್ಲೆ ನಡೆಸಿದ್ದಾನೆ ಎನ್ನಲಾಗಿದೆ. ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡ ವ್ಯಕ್ತಿಯನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಘಟನೆಯ ಮಾಹಿತಿ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಆರೋಪಿಯನ್ನು ವಶಕ್ಕೆ ಪಡೆದ ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ಕೈಗೊಂಡಿದ್ದಾರೆ.

ಪೌರಕಾರ್ಮಿಕರ ಸಮಸ್ಯೆಗೆ ಸ್ಪಂದಿಸಿ

• **ಯಳಂದೂರು:** ಪಟ್ಟಣದ ಪಟ್ಟಣ ಪಂಚಾಯಿತಿಕಚೇರಿಗೆಕರ್ನಾಟಕರಾಜ್ಯ ಸಫಾಯಿ ಕರ್ಮಚಾರಿ ಕರ್ಮಚಾರಿಗಳ ಆಯೋಗದ ಸದಸ್ಯ ಶಂಕರ ಅಂಕಶೆಟ್ಟಿಪುರ ಅವರು ಭೇಟಿ ನೀಡಿ ಪೌರಕಾರ್ಮಿಕರ ಸಮಸ್ಯೆ ಆಲಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು ಪೌರಕಾರ್ಮಿಕರು ಕೆಲಸ ಮಾಡುವಾಗ ಸುರಕ್ಷತೆದೃಷ್ಟಿಯಿಂದ ಕೈಗಳಿಗೆ ಗ್ಲೌಸ್‌ಅನ್ನುಧರಿಸಬೇಕು ಮತ್ತು ಕಾಲುಗಳಿಗೆ ಶೂಗಳನ್ನು ಧರಿಸಬೇಕುಇಲ್ಲದಿದ್ದರೆಅನಾರೋಗ್ಯಕಟ್ಟಿಟ್ಟ ಬುತ್ತಿಎಂದು ತಿಳಿಸಿದರು.ತಮ್ಮಆರೋಗ್ಯಕ್ಕೆ ಪೌರಕಾರ್ಮಿಕರು ಹೆಚ್ಚು ಒತ್ತು ನೀಡಬೇಕುಎಂದು ಸಲಹೆ ನೀಡಿದರು.ಗೃಹ ಭಾಗ್ಯಯೋಜನೆಅಡಿಯಲ್ಲಿ ಪೌರಕಾರ್ಮಿಕರಿಗೆ ಮನೆಗಳನ್ನು ಆದಷ್ಟು ಬೇಗ ನಿರ್ಮಿಸಿ ಕೊಡಬೇಕುಎಂದು ಪಟ್ಟಣ ಪಂಚಾಯಿತಿ ಮುಖ್ಯಧಿಕಾರಿಗಳಿಗೆ ತಿಳಿಸಿದರು.ಮುಖ್ಯಧಿಕಾರಿ ಮಹೇಶ್ ಕುಮಾರ್ ಮಾತನಾಡಿ ಈಗಾಗಲೇ ಟೆಂಡರ್ ಪ್ರಕ್ರಿಯೆ ಮಾಡಲು ಅನುಮೋದಿಸಲಾಗಿದ್ದು ಮುಂದಿನ ದಿನಗಳಲ್ಲಿ ಗೃಹ ಭಾಗ್ಯಯೋಜನೆಅಡಿಯಲ್ಲಿ ಪೌರಕಾರ್ಮಿಕರಿಗೆ ಮನೆಗಳನ್ನು ನಿರ್ಮಿಸಿ ಕೊಡಲಾಗುವುದುಎಂದು ತಿಳಿಸಿದರು.

ದೊಡ್ಡಬಳ್ಳಾಪುರ ಗ್ರಾಮಾಂತರ ಸಾರಿಗೆ ಅವ್ಯವಸ್ಥೆ | ಪೊಲೀಸರ ಮಧ್ಯಪ್ರವೇಶ | ವ್ಯವಸ್ಥೆ ಸರಿಪಡಿಸುವ ಭರವಸೆ

ಬಸ್ ತಡೆದು ವಿದ್ಯಾರ್ಥಿಗಳ ಪ್ರತಿಭಟನೆ



• **ದೊಡ್ಡಬಳ್ಳಾಪುರ:** ಶಾಲೆ-ಕಾಲೇಜುಗಳಿಗೆ ತೆರಳಲು ನಿಗದಿತ ಸಮಯಕ್ಕೆ ಕೆಎಸ್‌ಆರ್‌ಟಿಸಿ ಸಾರಿಗೆ ಬಸ್ ಬರುತ್ತಿಲ್ಲವೆಂದು ಆರೋಪಿಸಿರುವ ವಿದ್ಯಾರ್ಥಿಗಳು, ಮಂಗಳವಾರ ಬಸ್ ತಡೆದು ಪ್ರತಿಭಟನೆ ನಡೆಸಿದರು.

ತಾಲೂಕಿನ ಹೊಸಹಳ್ಳಿ ವ್ಯಾಪ್ತಿಯ ಉಜ್ಜನಿ ಗ್ರಾಮದಲ್ಲಿ ಸಾರಿಗೆ ಬಸ್ ತಡೆದಿರುವ ವಿದ್ಯಾರ್ಥಿಗಳು, ಡಿಪೋ ಮ್ಯಾನೇಜರ್ ಸ್ಥಳಕ್ಕೆ ಬರುವವರೆಗೆ ಬಸ್ ಬಿಡುವುದಿಲ್ಲವೆಂದು ಪಟ್ಟು ಹಿಡಿದಿದ್ದರು.

ಪ್ರತಿನಿತ್ಯ ಬೆಳಗ್ಗೆ 8 ಗಂಟೆಗೆ ಬರಬೇಕಾದ ಸಾರಿಗೆ ಬಸ್, ಒಂಬತ್ತು ಗಂಟೆ ಆದರೂ ಬರುವುದಿಲ್ಲ, ಇದರಿಂದಾಗಿ ಪ್ರತಿನಿತ್ಯ ವಿದ್ಯಾರ್ಥಿಗಳಿಗೆ ಒಂದು ಕ್ಲಾಸ್ ವ್ಯರ್ಥವಾಗುತ್ತಿದೆ. ಈ ಕುರಿತಂತೆ ಡಿಪೋ ಮ್ಯಾನೇಜರ್‌ಗೆ ಪದೇ ಪದೆ ಮನವಿ ಮಾಡಿದರೂ ಪ್ರಯೋಜನವಾಗುತ್ತಿಲ್ಲ, ಆದ್ದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿದರು.

ಈ ಕುರಿತಂತೆ ಚಾಲಕ, ನಿರ್ವಾಹಕರನ್ನು ಕೇಳಿದರೆ, ಡಿಪೋದಲ್ಲಿ ಬಸ್ಸನ್ನು ಸಮಯಕ್ಕೆ ಸರಿಯಾಗಿ ಕೊಡುವುದಿಲ್ಲ, ಆದ್ದರಿಂದ ವಿಳಂಬವಾಗುತ್ತದೆ ಎಂದು ಅಳಲು ತೋಡಿಕೊಳ್ಳುವರು. ಈ ಕುರಿತಂತೆ ಯುವಪಡೆ ಲಕ್ಷ್ಮೀ ಕಾಂತ್ ಸೂರ್ಯ ಪ್ರತಿಕ್ರಿಯೆ ನೀಡಿ, ಉಜ್ಜನಿ ಮೂಲಕ ದೊಡ್ಡಬಳ್ಳಾಪುರಕ್ಕೆ ನೂರಾರು ವಿದ್ಯಾರ್ಥಿಗಳು ವ್ಯಾಸಂಗಕ್ಕೆ ತೆರಳುತ್ತಿದ್ದು, ಪ್ರತಿನಿತ್ಯ ಬಸ್ಸಿಗಾಗಿ ಪರದಾಟ ನಡೆಸಬೇಕಿದೆ.

ಶಾಲೆ-ಕಾಲೇಜಿಗೆ ವಿಳಂಬವಾಗಿ ತೆರಳಿದರೆ, ಶಿಕ್ಷಕರು, ಉಪನ್ಯಾಸಕರಿಂದ ಬೈಗುಳದ ಜೊತೆಗೆ ಪಾಠ ಪ್ರವಚನಗಳಿಂದ ವಿದ್ಯಾರ್ಥಿಗಳು ವಂಚಿತರಾಗುತ್ತಿದ್ದಾರೆ. ಈ ಕುರಿತಂತೆ ಡಿಪೋ ಅಧಿಕಾರಿಗಳಿಗೆ ಎಷ್ಟು ಬಾರಿ ಹೇಳಿದರು, ನಾಳೆಯಿಂದ ಸಮಯಕ್ಕೆ ಸರಿಯಾಗಿ ಬರುತ್ತದೆ ಎನ್ನುತ್ತಾರೆ ಆದರೆ, ಮತ್ತೆ ಅದೇ ಸಮಸ್ಯೆ. ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಸುಮಾರು ಎರಡು ಗಂಟೆಗಳ ಕಾಲ ಬಸ್ ತಡೆದು ಪ್ರತಿಭಟನೆ ನಡೆಸಿದ್ದಾರೆ. ಆದಾಗ್ಯೂ ಡಿಪೋ ಅಧಿಕಾರಿಗಳು ಸ್ಥಳಕ್ಕೆ ಬರಲಿಲ್ಲ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಇನ್ನೂ ವಿಷಯ ತಿಳಿದ ಹೊಸಹಳ್ಳಿ ಪೊಲೀಸ್ ಠಾಣೆ ಸಬ್ ಇನ್ಸ್‌ಪೆಕ್ಟರ್ ಖಿರಾರ್ ಹುಸೇನ್ ಹಾಗೂ ಸಿಬ್ಬಂದಿ ಸ್ಥಳಕ್ಕೆ ಬಂದು ವಿದ್ಯಾರ್ಥಿಗಳ ಮನವೊಲಿಸಲು ಯಶಸ್ವಿಯಾದರು. ಡಿಪೋ ಮ್ಯಾನೇಜರ್ ಜತೆ ಮಾತುಕತೆ ನಡೆಸಿ ವ್ಯವಸ್ಥೆ ಸರಿಪಡಿಸುವ ಭರವಸೆ ನೀಡಿದರು.

» ಮಿತಿಮೀರಿದ ಕೆಎಸ್‌ಆರ್‌ಟಿಸಿ ಬಸ್ ಅವ್ಯವಸ್ಥೆ, ಪ್ರಯಾಣಿಕರು, ವಿದ್ಯಾರ್ಥಿಗಳ ಪರದಾಟ

ಕೆಟ್ಟು ನಿಲ್ಲುವ ಬಸ್‌ಗಳು

ಸಾರಿಗೆ ಬಸ್‌ಗಳು ತುಂಬಾ ಹಳೆಯದಾಗಿವೆ. ಅಲ್ಲದೆ, ಕೆಲವು ದುರಸ್ತಿ ಇಲ್ಲದ ಬಸ್‌ಗಳು ನಡುರಸ್ತೆಯಲ್ಲೇ ನಿಲ್ಲುವ ಮೂಲಕ ಪ್ರಯಾಣಿಕರಿಗೆ ಕಿರಿಕಿರಿ ಉಂಟು ಮಾಡುತ್ತಿವೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು, ಉದ್ಯೋಗಿಗಳು, ವೃದ್ಧರು ಹಾಗೂ ತುರ್ತು ಕೆಲಸಗಳಿಗೆ ಹೋಗುವ ಜನರು ಭಾರೀ ತೊಂದರೆ ಅನುಭವಿಸುತ್ತಿದ್ದಾರೆ. ಇದು ಕೇವಲ ವಿಳಂಬದ ಸಮಸ್ಯೆಯಲ್ಲ, ಜನರ ಪ್ರಾಣಕ್ಕೂ ಅಪಾಯ ಉಂಟುಮಾಡುತ್ತಿದೆ ಎಂಬ ಕಳವಳ ವ್ಯಕ್ತವಾಗಿದೆ.

ಸಾರ್ವಜನಿಕರು, ಕಂಪನಿಗಳಲ್ಲೂ ಕಳವು: ವಿವಿಧ ಠಾಣೆಯಲ್ಲಿ ಪ್ರಕರಣ ದಾಖಲು

13 ಮಂದಿ ಬಂಧನ: ಚಿನ್ನಾಭರಣ ವಶ



ದಂಪತಿ ಪೊಲೀಸ್ ಅತಿಥಿ

ರಾಜರಾಜೇಶ್ವರಿ ನಗರದ ಬಿಇಎಂಎಲ್ ಲೇಔಟ್‌ನಲ್ಲಿ ಸ್ನೇಹಿತೆಯ ಮನೆಯಲ್ಲೇ ಎಂಟು ವರ್ಷಗಳಿಂದ ವಾಸವಿದ್ದ ಮಹಿಳೆಯೊಬ್ಬರು, ಬ್ಯಾಂಕ್ ಲಾಕರ್‌ನಿಂದ ತಂದಿದ್ದ ಚಿನ್ನಾಭರಣ ಹಾಗೂ 49.50 ಲಕ್ಷ ರೂ. ನಗದನ್ನು ಅದೇ ಮನೆಯ ಬೀರುವಿನಲ್ಲಿ ಸುರಕ್ಷಿತವಾಗಿ ಇಟ್ಟಿದ್ದರು. ಆದರೆ, ಕಣ್ಣಿಟ್ಟಿದ್ದ ಮನೆಯ ಮಾಲೀಕ ದಂಪತಿ ಬೀರುವಿನ ಕೀ ಕಳವು ಮಾಡಿ ಕಳ್ಳತನ ಎಸಗಿದ್ದರು. ನಂತರ ಬೀಗ ರಿಪೇರಿ ಮಾಡುವವನಿಂದ ಬೀರು ತೆಗೆಸಿ ನೋಡಿದಾಗ ಕಳ್ಳತನ ಬೆಳಕಿಗೆ ಬಂದಿದೆ. ಸ್ನೇಹಿತೆ ಹಾಗೂ ಆಕೆಯ ಪತಿಯನ್ನು ಪ್ರಶ್ನಿಸಿದಾಗ, ತಮ್ಮ ವ್ಯವಹಾರದ ಅಗತ್ಯಕ್ಕೆ ಹಣ ಬಳಸಿಕೊಂಡಿರುವುದಾಗಿ ಮತ್ತು ಚಿನ್ನವನ್ನು ಅಡ ಇಟ್ಟಿರುವುದಾಗಿ ಉಡಾಫೆಯ ಉತ್ತರ ನೀಡಿದ್ದರು. ಈ ಸಂಬಂಧ ಆರ್.ಆರ್. ನಗರ ಪೊಲೀಸರು ತನಿಖೆ ನಡೆಸಿ ಮಾಲೀಕ ದಂಪತಿಯನ್ನು ಬಂಧಿಸಿ, ಹಲಸೂರಿನಲ್ಲಿದ್ದ ಅವರ ಸ್ನೇಹಿತನಿಂದ 35 ಲಕ್ಷ ರೂ. ಮೌಲ್ಯದ 232 ಗ್ರಾಂ ಚಿನ್ನಾಭರಣವನ್ನು ವಶಪಡಿಸಿಕೊಂಡಿದ್ದಾರೆ.

• **ಬೆಂಗಳೂರು:** ಸಾರ್ವಜನಿಕರ ಮತ್ತು ಕಂಪನಿಗಳ ನಂಬಿಕೆದ್ರೋಹ ಎಸಗಿ ಕಳ್ಳತನ ಮಾಡುತ್ತಿದ್ದ ಜಾಲವನ್ನು ಭೇದಿಸುವಲ್ಲಿ ನಗರ ಪೊಲೀಸರು ಯಶಸ್ವಿಯಾಗಿದ್ದಾರೆ. ಬ್ಯಾಡರಹಳ್ಳಿ, ಹಲಸೂರುಗೇಟ್ ಹಾಗೂ ರಾಜರಾಜೇಶ್ವರಿನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಕಳವು ಪ್ರಕರಣಗಳ ತನಿಖೆ ನಡೆಸಿದ ಪೊಲೀಸರು, ಒಟ್ಟು 13 ಮಂದಿ ಆರೋಪಿಗಳನ್ನು ಬಂಧಿಸಿ ದ್ದಾರೆ. ಬಂಧಿತರಿಂದ ಸುಮಾರು 1.88 ಕೋಟಿ ರೂ. ಮೌಲ್ಯದ ಚಿನ್ನದ ಗಟ್ಟಿ, ಬೆಳ್ಳಿ ವಸ್ತುಗಳು ಹಾಗೂ ನಗದು ಹಣವನ್ನು ವಶಪಡಿಸಿಕೊಂಡಿದ್ದಾರೆ.

ಬ್ಯಾಡರಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಲಿಂಗ ಬೀರನಹಳ್ಳಿಯ ಡಿ ಗ್ರೂಪ್ ಲೇಔಟ್ ನಿವಾಸಿಯೊಬ್ಬರು ಮಾರ್ಚ್ ತಿಂಗಳಿನಲ್ಲಿ ತಮ್ಮ ಕುಟುಂಬದೊಂದಿಗೆ ಕಾಶಿ ತೀರ್ಥಯಾತ್ರೆಗೆ ತೆರಳಿದ್ದರು. ಈ ಸಮಯದಲ್ಲಿ ಮನೆಯ ಬಾಗಿಲು ಹಾಗೂ ಕಿಟಕಿಗಳನ್ನು ಮುರಿದು ಒಳಪ್ರವೇಶಿಸಿ ಬೀರುವಿನಲ್ಲಿದ್ದ ಚಿನ್ನ, ಬೆಳ್ಳಿ ಆಭರಣ ಹಾಗೂ ನಗದನ್ನು ದೋಚಿ ಪರಾರಿಯಾಗಿದ್ದರು.

ಈ ಕುರಿತು ದಾಖಲಾದ ಕನ್ನ ಕಳವು ಪ್ರಕರಣದ ತನಿಖೆ ಕೈಗೊಂಡ ಬ್ಯಾಡರಹಳ್ಳಿ ಪೊಲೀಸರು, ತಾಂತ್ರಿಕ ಸುಳಿವುಗಳ ಆಧಾರದ ಮೇಲೆ ಮತ್ತೊಂದು ಪ್ರಕರಣದಲ್ಲಿ ಚಿಕ್ಕಮಗಳೂರು ಜೈಲಿನಲ್ಲಿದ್ದ ಇಬ್ಬರು ಆರೋಪಿಗಳನ್ನು ಬಾಡಿ ವಾರೆಂಟ್ ಮೂಲಕ ಕಸ್ಟಡಿಗೆ ಪಡೆದಿದ್ದಾರೆ. ಆರೋಪಿಗಳ ವಿಚಾರಣೆಯಿಂದ ಮಂಗಳೂರಿನ ಜ್ಯುವೆಲ್ಲರಿ ಅಂಗಡಿ ಹಾಗೂ ಮನೆಯಿಂದ ಒಟ್ಟು 64.73 ಲಕ್ಷ ರೂ. ಮೌಲ್ಯದ 470 ಗ್ರಾಂ ಚಿನ್ನಾಭರಣ, 750 ಗ್ರಾಂ ಬೆಳ್ಳಿಯ ವಸ್ತುಗಳು, 1.43 ಲಕ್ಷ ರೂ. ನಗದು ಹಾಗೂ ಒಂದು ದ್ವಿಚಕ್ರ ವಾಹನವನ್ನು ಜಪ್ತಿ ಮಾಡಲಾಗಿದೆ.

ಹಲಸೂರುಗೇಟ್: 9 ಮಂದಿ ಬಂಧನ: ನಗರತ್‌ಪೇಟೆ ಮುಖ್ಯರಸ್ತೆಯಲ್ಲಿರುವ ಗೋಲ್ಡ್ ಪ್ರೈ.ಲಿ. ಕಂಪನಿಯಲ್ಲಿ ಕಳೆದ ಆರು ತಿಂಗಳಿಂದ ಚಿನ್ನ ಮತ್ತು ಬೆಳ್ಳಿ ಕೆಲಸ ಮಾಡಿಕೊಂಡಿದ್ದ 9 ಮಂದಿ ಕರಕುಶಲ ಕೆಲಸಗಾರರು ಮೇ 11 ರಂದು ಕಂಪನಿಯಲ್ಲಿದ್ದ ಚಿನ್ನದ ಗಟ್ಟಿ ಹಾಗೂ ಆಭರಣಗಳನ್ನು ಕಳವು ಮಾಡಿಕೊಂಡು ತಲೆಮರೆಸಿಕೊಂಡಿದ್ದರು. ಮಾಲೀಕರು ನೀಡಿದ ದೂರಿನನ್ವಯ ಹಲಸೂರುಗೇಟ್ ಪೊಲೀಸರು, ಆರೋಪಿಗಳು ಬೆಂಗಳೂರಿನಿಂದ ವಿಶಾಖಪಟ್ಟಣಂ ಮಾರ್ಗವಾಗಿ ಪಶ್ಚಿಮ ಬಂಗಾಳಕ್ಕೆ ರೈಲಿನಲ್ಲಿ ಪಲಾಯನ ಮಾಡುತ್ತಿರುವ ಖಚಿತ ಮಾಹಿತಿ ಕಲೆಹಾಕಿದ್ದರು. ತಕ್ಷಣವೇ ಆಂಧ್ರಪ್ರದೇಶದ ವಿಶಾಖಪಟ್ಟಣಂ ರೈಲ್ವೆ ನಿಲ್ದಾಣದಲ್ಲಿ ದಾಳಿ ನಡೆಸಿದ ವಿಶೇಷ ತಂಡ ಒಂಬತ್ತೂ ಮಂದಿ ಆರೋಪಿಗಳನ್ನು ಕದ್ದ ಮಾಲಿನೊಂದಿಗೆ ವಶಕ್ಕೆ ಪಡೆದಿದೆ.

ಸಂಬಳಸರಿಯಾಗಿನೀಡದಕಾರಣಸುಲಭವಾಗಿಹಣಗಳಿಸಲು ಈ ಕೃತ್ಯ ಎಸಗಿರುವುದಾಗಿ ಒಪ್ಪಿಕೊಂಡಿರುವ ಬಂಧಿತರಿಂದ 89 ಲಕ್ಷ ರೂ. ಮೌಲ್ಯದ 618 ಗ್ರಾಂ ತೂಕದ ಚಿನ್ನದ ಗಟ್ಟಿ ಹಾಗೂ ಚಿನ್ನಾಭರಣಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಕೊಮಾರನಪುರ ಸಿ.ಸ್ವಾಮಿ ನಿಧನ

• **ಯಳಂದೂರು:** ತಾಲೂಕಿನ ಕೊಮಾರನಪುರ ಗ್ರಾಮದ ಗೌಡರ ದಿ.ಚೆನ್ನಬಸಪ್ಪನವರ ದ್ವಿತೀಯ ಪುತ್ರ ಸಿ.ಸ್ವಾಮಿರವರು(62) ಹೃದಯಘಾತದಿಂದ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಮೂವರು ಪುತ್ರಿಯರು, ಓರ್ವ ಪುತ್ರ ಹಾಗೂ ನಾಲ್ವರು ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಸ್ವಾಮಿಯವರು ಅಂತ್ಯಕ್ರಿಯೆ ಅವರ ಸ್ವಂತ ಜಮೀನಿನಲ್ಲಿ ನೆರವೇರಿತು. ಶಾಸಕರಾದ ಎ.ಆರ್.ಕೃಷ್ಣ ಮೂರ್ತಿ, ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಸರ್ ಸಿ.ವಿ.ರಾಮನ್ ಆಸ್ಪತ್ರೆಯಲ್ಲಿ ವಯಸ್ಕರ ಲಸಿಕೆಗೆ ಚಾಲನೆ

ಉತ್ತಮ ಆರೋಗ್ಯ ಸೇವೆಗೆ ಆದ್ಯತೆ



• **ಬೆಂಗಳೂರು:** ಸರ್ಕಾರಿ ಆಸ್ಪತ್ರೆಗಳಲ್ಲಿ ಸಾರ್ವಜನಿಕರಿಗೆ ಅತ್ಯುತ್ತಮ ಆರೋಗ್ಯ ಸೌಲಭ್ಯವನ್ನು ಒದಗಿಸುವುದು ರಾಜ್ಯ ಸರ್ಕಾರದ ಆದ್ಯತೆಯಾಗಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ನಗರದ ಸರ್ ಸಿ.ವಿ. ರಾಮನ್ ಸಾರ್ವಜನಿಕ ಆಸ್ಪತ್ರೆಯಲ್ಲಿ ವಯಸ್ಕರ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಸ್ಪೆಷಲ್ ಹಾಗೂ ಸೆಮಿ ಸ್ಪೆಷಲ್ ವಾರ್ಡ್‌ಗಳನ್ನು ಅವರು ಉದ್ಘಾಟಿಸಿ ಮಾತನಾಡಿ, ಒಳರೋಗಿಗಳ ಸಂಖ್ಯೆ ಹೆಚ್ಚಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರ ಬೇಡಿಕೆಯಂತೆಆಸ್ಪತ್ರೆಯಲ್ಲಿ5ಸ್ಪೆಷಲ್‌ಹಾಗೂ7ಸೆಮಿಸ್ಪೆಷಲ್‌ವಾರ್ಡ್‌ಗಳ ಸೌಲಭ್ಯ ಕಲ್ಪಿಸಲಾಗಿದೆ. ಸರ್ಕಾರಿ ಆಸ್ಪತ್ರೆ ಗಳಲ್ಲಿಯೂ ಖಾಸಗಿ ಆಸ್ಪತ್ರೆಗಳ ಮಟ್ಟದ ಚಿಕಿತ್ಸೆ ಮತ್ತು ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಹೇಳಿದರು.

ಟೈಪ್-2 ಮಧುಮೇಹ ಹೊಂದಿರುವವರಲ್ಲಿ ಹೃದಯ, ಕಿಡ್ನಿ ಹಾಗೂ ರೆಟಿನಾ ಸಂಬಂಧಿತ ಸಮಸ್ಯೆಗಳು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತವೆ. ಆದರೆ, ಇದರ ಕುರಿತು ಅನೇಕ ರೋಗಿಗಳಿಗೆ ಸಮರ್ಪಕ ಅರಿವು ಇಲ್ಲ ಎಂದು ಸಚಿವರು ಹೇಳಿದರು. ಫಿನೆರಿನೋನ್ ಮಾತ್ರೆಯನ್ನು ಬಳಸುವುದರಿಂದ ಹೃದಯ ಸಂಬಂಧಿತ ಮರಣ ಹಾಗೂ ಕಿಡ್ನಿ ಸಮಸ್ಯೆಗಳನ್ನು ನಿಯಂತ್ರಿಸಲು ಸಾಧ್ಯವಾಗುತ್ತದೆ. ಸರ್ಕಾರ ಈ ಔಷಧಿಯನ್ನು ಉಚಿತವಾಗಿ ನೀಡುತ್ತಿದ್ದು, ಟೈಪ್-2 ಮಧುಮೇಹ ರೋಗಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಸೋಂಕುಜನ್ಯ ರೋಗಗಳನ್ನು ತಡೆಗಟ್ಟಲು ಸಹಕಾರಿ: 65 ವರ್ಷ ಮೇಲ್ಪಟ್ಟವರು ನ್ಯುಮೋಕೋಕಲ್ ಲಸಿಕೆ ಪಡೆಯುವುದು ಅಗತ್ಯವಾಗಿದ್ದು, ಇದು ಸೋಂಕುಜನ್ಯ ರೋಗಗಳನ್ನು ತಡೆಗಟ್ಟಲು ಸಹಕಾರಿಯಾಗಿದೆ. ಹೃದಯ ಸಂಬಂಧಿತ ಕಾಯಿಲೆ ಹೊಂದಿರುವವರು ಹಾಗೂ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಿಗೆ ಈ ಲಸಿಕೆ ಹೆಚ್ಚು ಉಪಯುಕ್ತವಾಗಲಿದೆ ಎಂದರು. ಫ್ಲೂ ಲಸಿಕೆಯನ್ನು 6 ತಿಂಗಳ ವಯಸ್ಸಿನಿಂದ 65 ವರ್ಷದವರೆಗಿನವರು ಪಡೆದುಕೊಳ್ಳಬಹುದಾಗಿದೆ. ಇದು 18 ವಿಧದ ಸೋಂಕುಗಳಿಂದ ರಕ್ಷಣೆ ನೀಡುತ್ತದೆ. ಮುಂಗಾರು ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಈ ಲಸಿಕೆ ಪಡೆಯುವುದರಿಂದ ಹಲವು ಶ್ವಾಸಕೋಶ ಹಾಗೂ ಸೋಂಕುಜನ್ಯ ರೋಗಗಳಿಂದ ರಕ್ಷಣೆ ಪಡೆಯಬಹುದಾಗಿದೆ ಎಂದು ಹೇಳಿದರು.

ಇದೇ ವೇಳೆ ಸಚಿವರು ಆಸ್ಪತ್ರೆಯ ವಿವಿಧ ವಿಭಾಗಗಳಿಗೆ ಭೇಟಿ ನೀಡಿ, ರೋಗಿಗಳು ಹಾಗೂ ಅವರ ಸಂಬಂಧಿಗಳೊಂದಿಗೆ ಚಿಕಿತ್ಸೆ ಮತ್ತು ಸೌಲಭ್ಯಗಳ ಕುರಿತು ಸಮಾಲೋಚನೆ ನಡೆಸಿದರು.

ವಿಟಿಯು ನಿವೃತ್ತ ಕುಲಪತಿ ಡಾ.ಕೆ.ಬಾಲವೀರ ರೆಡ್ಡಿ ಆಗ್ರಹ

ಒಂದು ರಾಷ್ಟ್ರ-ಪ್ರವೇಶ ಪರೀಕ್ಷೆ ಜಾರಿಯಾಗಲಿ



• **ಬೆಂಗಳೂರು:** ದೇಶದಲ್ಲಿ ಇಂಜಿನಿಯರಿಂಗ್, ವೈದ್ಯಕೀಯ, ದಂತವೈದ್ಯಶಾಸ್ತ್ರ, ಫಾರ್ಮಸಿ, ಕೃಷಿ ಹಾಗೂ ಸಂಬಂಧಿತ ಆರೋಗ್ಯ ವಿಜ್ಞಾನ ಕೋರ್ಸ್‌ಗಳಿಗೆ ಒಂದು ರಾಷ್ಟ್ರ - ಒಂದು ಪ್ರವೇಶ ಪರೀಕ್ಷೆ ವ್ಯವಸ್ಥೆಯನ್ನು ಜಾರಿಗೆ ತರಬೇಕೆಂಬ ಅಗತ್ಯತೆಯನ್ನು ವಿಟಿಯು ನಿವೃತ್ತ ಕುಲಪತಿ ಡಾ.ಕೆ.ಬಾಲವೀರ ರೆಡ್ಡಿ ಒತ್ತಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿಮಾತನಾಡಿ,ಪ್ರಸ್ತುತದೇಶದಲ್ಲಿರಾಷ್ಟ್ರೀಯ,ರಾಜ್ಯ,ವಿಶ್ವವಿದ್ಯಾಲಯಹಾಗೂ ಖಾಸಗಿ ಸಂಸ್ಥೆಗಳ ಮಟ್ಟದಲ್ಲಿ ಅನೇಕ ಪ್ರವೇಶ ಪರೀಕ್ಷೆಗಳು ನಡೆಯುತ್ತಿದ್ದು, ವಿದ್ಯಾರ್ಥಿಗಳು ಒಂದೇ ಶೈಕ್ಷಣಿಕ ವರ್ಷದಲ್ಲಿ 5 ರಿಂದ 15 ಪ್ರವೇಶ ಪರೀಕ್ಷೆಗಳನ್ನು ಬರೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ತಿಳಿಸಿದರು.

ವೈದ್ಯಕೀಯ ಕೋರ್ಸ್‌ಗಳಿಗೆ ನೀಟ್-ಯುಜಿ, ಇಂಜಿನಿಯರಿಂಗ್‌ಗೆಜೆಇಇ ಮೇನ್ ಮತ್ತು ಜೆಇಇ ಅಡ್ವಾನ್ಸ್, ಕೇಂದ್ರ ವಿಶ್ವವಿದ್ಯಾಲಯಗಳಿಗೆ ಸಿಯುಇಟಿ, ವಾಸ್ತುಶಿಲ್ಪಕ್ಕೆ ನಾಟಾ ಸೇರಿದಂತೆ ಅನೇಕ ಪರೀಕ್ಷೆಗಳು ನಡೆಯುತ್ತಿವೆ. ಜೊತೆಗೆ ವಿವಿಧ ಖಾಸಗಿ ವಿಶ್ವವಿದ್ಯಾಲಯಗಳು ಹಾಗೂ ರಾಜ್ಯ ಸರ್ಕಾರಗಳು ತಮ್ಮದೇ ಪ್ರತ್ಯೇಕ ಪ್ರವೇಶ ಪರೀಕ್ಷೆಗಳನ್ನು ನಡೆಸುತ್ತಿರುವುದರಿಂದ ವಿದ್ಯಾರ್ಥಿಗಳು ಮತ್ತು ಪೋಷಕರ ಮೇಲೆ ಆರ್ಥಿಕ ಹಾಗೂ ಮಾನಸಿಕ ಒತ್ತಡ ಹೆಚ್ಚಾಗಿದೆ ಎಂದು ಅಭಿಪ್ರಾಯಪಟ್ಟರು.

ಇತ್ತೀಚಿನ ವರ್ಷಗಳಲ್ಲಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಗಳು ಹೆಚ್ಚುತ್ತಿರುವುದು ಪ್ರವೇಶ ಪರೀಕ್ಷೆಗಳ ವಿಶ್ವಾಸಾರ್ಹತೆಗೆ ಧಕ್ಕೆ ತಂದಿದೆ. ವಿಶೇಷವಾಗಿ ನೀಟ್-ಯುಜಿ ಪರೀಕ್ಷೆಗಳ ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಅಕ್ರಮಗಳ ಕುರಿತು ದೇಶಾದ್ಯಂತ ಚರ್ಚೆಗಳು ನಡೆದಿರುವುದನ್ನು ಉಲ್ಲೇಖಿಸಿದ ಅವರು, ಸುರಕ್ಷಿತ ಹಾಗೂ ಪಾರದರ್ಶಕ ಪರೀಕ್ಷಾ ವ್ಯವಸ್ಥೆಯ ಅಗತ್ಯತೆ ಹೆಚ್ಚಾಗಿದೆ. ಈ ಹಿನ್ನೆಲೆಯಲ್ಲಿ ಒಂದು ರಾಷ್ಟ್ರ - ಒಂದು ಪ್ರವೇಶ ಪರೀಕ್ಷೆ ವ್ಯವಸ್ಥೆ ಅಡಿಯಲ್ಲಿ ರಾಷ್ಟ್ರೀಯ ಮಟ್ಟದ ಏಕೀಕೃತ ಪರೀಕ್ಷೆಯನ್ನು ಜಾರಿಗೆ ತರಬೇಕು ಎಂದು ಸಲಹೆ ನೀಡಿದರು.

ಸ್ಮಾರ್ಟ್ ಇನ್‌ಸ್ಟಾ ಟೆಸ್ಟ್-ಎಐ(ಎಸ್‌ಐಟಿಎಐ) ಎಂಬ ಎಐ ಆಧಾರಿತ ಪರೀಕ್ಷಾ ಮಾದರಿಯನ್ನು ಪ್ರಸ್ತಾಪಿಸಿದ್ದು, ಪ್ರತಿ ವಿದ್ಯಾರ್ಥಿಗೆ ವಿಭಿನ್ನ ಪ್ರಶ್ನೆ ಪತ್ರಿಕೆ, ಬಯೋಮೆಟ್ರಿಕ್ ಪರಿಶೀಲನೆ, ಡಿಜಿಟಲ್ ಸುರಕ್ಷತಾ ವ್ಯವಸ್ಥೆ, ಎಐ ಆಧಾರಿತ ಮೇಲ್ವಿಚಾರಣೆ, ತ್ವರಿತ ಮೌಲ್ಯಮಾಪನ ಹಾಗೂ ಕಾರ್ಯಕ್ಷಮತೆ ವಿಶ್ಲೇಷಣೆ ಮುಂತಾದ ವೈಶಿಷ್ಟ್ಯಗಳನ್ನು ಒಳಗೊಂಡಿರುತ್ತದೆ ಎಂದು ವಿವರಿಸಿದರು.

ಇಂಡೋ–ಪೆಸಿಫಿಕ್ ಮುಕ್ತ ಬದ್ಧತೆ ಪುನರುಚ್ಚಾರ

ಪಹಲ್ಗಾಮ್, ಬೋಂಡಿ ದಾಳಿ ಖಂಡಿಸಿ ಕ್ವಾಡ್ ಜಂಟಿ ಹೇಳಿಕೆ



• ಹೊಸದಿಲ್ಲಿ: ಕಳೆದ ವರ್ಷ ನಡೆದ ಪಹಲ್ಗಾಮ್ ಮತ್ತು ಬೋಂಡಿ ಬೀಚ್ ಭಯೋತ್ಪಾದಕ ದಾಳಿಗಳನ್ನು ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರು ಮಂಗಳವಾರ ಜಂಟಿಯಾಗಿ ಖಂಡಿಸಿದ್ದಾರೆ. ರಾಷ್ಟ್ರ ರಾಜಧಾನಿಯಲ್ಲಿ ನಡೆದ ಕ್ವಾಡ್ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆಯಲ್ಲಿ ಜಂಟಿ ಹೇಳಿಕೆಯೊಂದನ್ನು ಬಿಡುಗಡೆ ಮಾಡಲಾಯಿತು.

ಉಗ್ರವಾದ ವಿರುದ್ಧದ ಹೋರಾಟ ಮತ್ತು ಇಂಡೋ-ಪೆಸಿಫಿಕ್ ಪ್ರದೇಶವನ್ನು ಉಗ್ರವಾದದಿಂದ ಸಂಪೂರ್ಣ ಮುಕ್ತಗೊಳಿಸುವ ತಮ್ಮ ಬದ್ಧತೆಯನ್ನು ಕ್ವಾಡ್ ವಿದೇಶಾಂಗ ಸಚಿವರು ಪುನರುಚ್ಚರಿಸಿದ್ದಾರೆ. ಜಾಗತಿಕ ಮಟ್ಟದಲ್ಲಿ ನಿಷೇಧಿತ ಉಗ್ರರು, ಉಗ್ರ ಸಂಘಟನೆಗಳು, ಭಯೋತ್ಪಾದನೆಗೆ ಹಣಕಾಸಿನ ನೆರವನ್ನು ನೀಡುವವರ ಮೇಲೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂದು ಕ್ವಾಡ್ ವಿದೇಶಾಂಗ ಸಚಿವರು ಹೇಳಿದ್ದಾರೆ.

ಭಾರತ, ಅಮೆರಿಕ, ಜಪಾನ್ ಮತ್ತು ಆಸ್ಟ್ರೇಲಿಯಾ ಒಳಗೊಂಡ ಕ್ವಾಡ್ ಮಂಗಳವಾರ ತನ್ನ ಜಂಟಿ ಹೇಳಿಕೆ ಪ್ರಕಟಿಸಿದೆ. ಗಡಿಯಾಚೆಗಿನ ಉಗ್ರವಾದ ಸೇರಿ ಎಲ್ಲಾ ಮಾದರಿಯ ಭಯೋತ್ಪಾದನೆಗಳನ್ನು ಕ್ವಾಡ್ ಸ್ಪಷ್ಟವಾಗಿ ಖಂಡಿಸಿದೆ.

ಕಳೆದ ವರ್ಷ ಏ.22ರಂದು ಪಹಲ್ಗಾಮ್‌ನಲ್ಲಿ ಮೂವರು ಪಾಕಿಸ್ತಾನಿ ಉಗ್ರರು ನಡೆಸಿದ್ದ ಗುಂಡಿನ ದಾಳಿಗೆ 26 ಮಂದಿ ಬಲಿಯಾಗಿದ್ದರು. 2025ರ ಡಿ.14ರಂದು ಬೋಂಡಿ ಬೀಚ್‌ನಲ್ಲಿ ನಡೆದಿದ್ದ ಉಗ್ರರ ದಾಳಿಗೆ 15 ಮಂದಿ ಮೃತಪಟ್ಟಿದ್ದರು.

ಚೀನಾ ಏಕಪಕ್ಷೀಯ ನೀತಿಗೆ ಕ್ವಾಡ್ ಪರೋಕ್ಷ ವಿರೋಧ: ಭಯೋತ್ಪಾದನೆ ವಿಷಯದ ಹೊರತಾಗಿ ಕ್ವಾಡ್ ಇಂಡೋ-ಪೆಸಿಫಿಕ್ ಸಮುದ್ರ ಮಾರ್ಗದಲ್ಲಿ ಚೀನಾದ ಏಕಪಕ್ಷೀಯ ಅಥವಾ ಬಲವಂತದ ಕ್ರಮಗಳಿಗೆ ಪರೋಕ್ಷ ವಿರೋಧ ವ್ಯಕ್ತಪಡಿಸಿದೆ. ದಕ್ಷಿಣ ಚೀನಾ ಮತ್ತು ಪೂರ್ವ ಚೀನಾ ಸಮುದ್ರದಲ್ಲಿನ ಉದ್ವಿಗ್ನತೆಗಳ ಕುರಿತು ಕ್ವಾಡ್ ಕಳವಳ ವ್ಯಕ್ತಪಡಿಸಿದೆ. ಹಡಗುಗಳ ದಾರಿಯನ್ನು ತಡೆಯುವುದು, ಡಿಕ್ಕಿ ಹೊಡೆಯುವುದು ಮತ್ತು ಅಪಾಯಕಾರಿಯಾಗಿ ವಾಟರ್ ಕ್ಯಾನನ್‌ಗಳನ್ನು ಬಳಸುವಂತಹ ಸಾಗರೋತ್ತರ ಸಂಬಂಧಿತ ಕ್ರಮಗಳನ್ನು ಆತಂಕಕಾರಿ ಎಂದು ಕ್ವಾಡ್ ಉಲ್ಲೇಖಿಸಿದೆ.

ಪಶ್ಚಿಮ ಏಷ್ಯಾ ಕುರಿತು, ಜಾಗತಿಕ ವ್ಯಾಪಾರದ ನಿರಂತರ ಹರಿವನ್ನು ಖಚಿತಪಡಿಸಲು ಹೋರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರ ಮಾರ್ಗಗಳ ಸುರಕ್ಷತೆ ಹಾಗೂ ಅಡೆತಡೆರಹಿತ ಮುಕ್ತ ಸಂಚಾರದ ಮಹತ್ವವನ್ನು ಕ್ವಾಡ್ ವಿದೇಶಾಂಗ ಸಚಿವರು ತಿಳಿಸಿದ್ದಾರೆ.

ಖನಿಜ ಒಪ್ಪಂದಕ್ಕೆ ಭಾರತ-ಅಮೆರಿಕ ಸಹಿ: ಚೀನಾ ಅಪರೂಪದ ಖನಿಜಗಳ ರಫ್ತಿನ ಏಕಸ್ವಾಮ್ಯ ತಡೆಯುವ ಉದ್ದೇಶದಿಂದ ಭಾರತ ಮತ್ತು ಅಮೆರಿಕ ಖನಿಜಗಳ ಒಪ್ಪಂದವನ್ನು ಘೋಷಿಸಿದ್ದು, ವಿದೇಶಾಂಗ ಸಚಿವ ಎಸ್.ಜೈಶಂಕರ್ ಮತ್ತು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರೂಬಿಯೊ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಸರಿಯಾದ ಸಮಯದಲ್ಲಿ ನಿರ್ಣಾಯಕ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ ಎಂದು ಜೈಶಂಕರ್ ಹೇಳಿದ್ದಾರೆ.

ಶಾಂತಿ, ಸಮೃದ್ಧಿಗೆ ವಿಶ್ವಾಸಾರ್ಹ ಪಾಲುದಾರಿಕೆ ಅತ್ಯಗತ್ಯ

ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಶಾಂತಿ, ಸ್ಥಿರತೆ ಮತ್ತು ಸಮೃದ್ಧಿಯನ್ನು ತರಬೇಕಾದರೆ ಕ್ವಾಡ್ ಸದಸ್ಯ ರಾಷ್ಟ್ರಗಳ ನಡುವೆ ವಿಶ್ವಾಸಾರ್ಹ ಪಾಲುದಾರಿಕೆ ಬಹಳ ಅತ್ಯಗತ್ಯ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಕ್ವಾಡ್ ಸಭೆಯಲ್ಲಿ ಮಾತನಾಡಿದ ಅವರು, ಇಂಡೋ-ಪೆಸಿಫಿಕ್ ಪ್ರದೇಶದಲ್ಲಿ ಸಾಗರ ಭದ್ರತೆ ಮತ್ತು ಆರ್ಥಿಕ ಆದ್ಯತೆಗಳನ್ನು ಉತ್ತೇಜಿಸುವುದು ಮತ್ತು ಕ್ವಾಡ್ ರಾಷ್ಟ್ರಗಳ ನಡುವೆ ಪಾರದರ್ಶಕ ಪಾಲುದಾರಿಕೆ ಅಗತ್ಯ. ಈ ಪ್ರದೇಶವು ಜಾಗತಿಕ ಪ್ರಗತಿ ಮತ್ತು ಸ್ಥಿರತೆಯ ಮೂಲವಾಗಿ ಉಳಿಯಬೇಕು ಎಂದು ಜೈಶಂಕರ್ ಹೇಳಿದ್ದಾರೆ.

ಶೂನ್ಯ ಸಹಿಷ್ಣುತೆ: ಜೈಶಂಕರ್

ಕ್ವಾಡ್ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿದೇಶಾಂಗ ಸಚಿವ ಎಸ್. ಜೈಶಂಕರ್, ಭಯೋತ್ಪಾದನೆ ವಿಚಾರದಲ್ಲಿ ಶೂನ್ಯ ಸಹಿಷ್ಣುತೆ ಇರಲಿದೆ. ಉಗ್ರ ದಾಳಿಗೆ ಒಳಗಾದ ರಾಷ್ಟ್ರಗಳು ತಮ್ಮನ್ನು ತಾವು ರಕ್ಷಿಸಿಕೊಳ್ಳುವ ಹಕ್ಕನ್ನು ಹೊಂದಿವೆ ಎಂದು ಪ್ರತಿಪಾದಿಸಿದ್ದಾರೆ.

ಇಂಧನ, ರಸಗೊಬ್ಬರ, ವಿದೇಶಿ ವಿನಿಮಯಕ್ಕೆ ಒತ್ತು



ಜಾಗತಿಕ ಅಡಚಣೆಗಳಿಂದಾಗಿ ದೇಶೀಯ ಆರ್ಥಿಕತೆ ತೀವ್ರ ಬಾಹ್ಯ ಒತ್ತಡ ಎದುರಿಸುತ್ತಿದ್ದು, ದೀರ್ಘಾವಧಿಯ ಸ್ಥಿರತೆ ಕಾಯ್ದುಕೊಳ್ಳಲು ನಿರ್ದಿಷ್ಟ ಆಮದು ಮತ್ತು ಮೀಸಲು ವಲಯಗಳ ಮೇಲೆ ಕಾರ್ಯತಂತ್ರದ ಗಮನ ಹರಿಸುವುದು ಅತ್ಯಗತ್ಯವಾಗಿದೆ. ಹೆಚ್ಚುತ್ತಿರುವ ಜಾಗತಿಕ ಆರ್ಥಿಕ ಅನಿಶ್ಚಿತತೆಗಳನ್ನು ಎದುರಿಸಲು ಕೇಂದ್ರ ಸರ್ಕಾರ ಸಂಪನ್ಮೂಲ ನಿರ್ವಹಣೆಯ ಮೇಲ್ವಿಚಾರಣೆಯ ಕಡೆ ಹೆಚ್ಚಿನ ಗಮನ ಕೊಡುತ್ತಿದೆ.

ದೇಶೀಯ ಹಣದುಬ್ಬರದ

ಇಂಧನ ವೆಚ್ಚಗಳ ಏರಿಕೆ, ಹೆಚ್ಚಿನ ವಲಯಗಳಲ್ಲಿ ದೇಶೀಯ ಹಣದುಬ್ಬರದ ಪ್ರವೃತ್ತಿಯನ್ನು ತೀವ್ರಗೊಳಿಸಿದೆ. ಚಿಲ್ಲರೆ ಹಣದುಬ್ಬರ, ಮಾರ್ಚ್‌ನಲ್ಲಿ ಶೇ. 3.40 ರಿಂದ ಏಪ್ರಿಲ್‌ನಲ್ಲಿ ಶೇ. 3.48 ಕ್ಕೆ ಏರಿತು, ಆದರೆ ಸಗಟು ಹಣದುಬ್ಬರ ನಲವತ್ತೆರಡು ತಿಂಗಳ ಗರಿಷ್ಠ ಮಟ್ಟವಾದ ಶೇ.8.3 ಕ್ಕೆ ತಲುಪಿದೆ. ಪ್ರಾದೇಶಿಕ ಸಂಘರ್ಷ ಪ್ರಾರಂಭವಾದಾಗಿನಿಂದ, ಮೇ ಮಧ್ಯಭಾಗದಿಂದ ಸಂಕುಚಿತ ನೈಸರ್ಗಿಕ ಅನಿಲ (ಸಿಎನ್‌ಜಿ) ಬೆಲೆಗಳು ಪ್ರತಿ ಕೆಜಿಗೆ 4 ರೂ.ಗಳಷ್ಟು ಹೆಚ್ಚಾಗಿದೆ ಮತ್ತು ದೇಶೀಯ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಬೆಲೆಗಳು ಪ್ರತಿ 14.2 ಕೆಜಿ ಸಿಲಿಂಡರ್‌ಗೆ 60 ರೂ. ಗಳಷ್ಟು ಏರಿವೆ. ಈ ಅಂತಾರಾಷ್ಟ್ರೀಯ ಬೆಲೆ ಏರಿಕೆಯ ನೇರ ಪರಿಣಾಮ ಗ್ರಾಹಕರು ಮತ್ತು ಉದ್ಯಮಗಳ ಮೇಲೆ ಆಗುವುದನ್ನು ತಗ್ಗಿಸಲು, ಸರ್ಕಾರ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಲೀಟರ್‌ಗೆ 10 ರೂ. ಕಡಿತಗೊಳಿಸಿತು, ಇದರಿಂದಾಗಿ ಆದಾಯಕ್ಕೆ 1 ಲಕ್ಷ ಕೋಟಿ ರೂ. ಗಳಿಗಿಂತ ಹೆಚ್ಚಿನ ನಷ್ಟ ಉಂಟಾಗಿದೆ.

ಕೃಷಿ ವೆಚ್ಚಗಳ ಏರಿಕೆ

ಇಂಧನ ಮಾತ್ರವಲ್ಲದೆ, ನಿರ್ಣಾಯಕ ಹಡಗು ಸಾರಿಗೆ ಮಾರ್ಗಗಳ ಅಡಚಣೆಯಿಂದಾಗಿ ಕೃಷಿ ಆಮದು ವೆಚ್ಚಗಳು ಅಭೂತಪೂರ್ವ ಏರಿಕೆ ಕಾಣುತ್ತಿವೆ. ಯೂರಿಯಾ ಮತ್ತು ಡೈ-ಅಮೋನಿಯಂ ಫಾಸ್ಫೇಟ್ ಸೇರಿದಂತೆ ಅಗತ್ಯ ಮಣ್ಣಿನ ಪೋಷಕಾಂಶಗಳಿಗೆ ಬೇಕಾದ ಅಮೋನಿಯಾ, ಸಲ್ಫರ್ ಫಾಸ್ಫಾರಿಕ್ ಆಮ್ಲ ಮತ್ತು ನೈಸರ್ಗಿಕ ಅನಿಲದಂತಹ ಕಚ್ಚಾ ವಸ್ತುಗಳು ಹೆಚ್ಚಾಗಿ ಆಮದಾಗುತ್ತವೆ. ದೇಶೀಯ ಮಾರುಕಟ್ಟೆ, ತನ್ನ ಡೈ-ಅಮೋನಿಯಂ ಫಾಸ್ಫೇಟ್ ಅಗತ್ಯದ ಶೇಕಡಾ ಎಂಬತ್ತಕ್ಕಿಂತ ಹೆಚ್ಚು ಮತ್ತು ಒಟ್ಟಾರೆ ರಸಗೊಬ್ಬರ ಅಗತ್ಯಗಳ ಶೇಕಡಾ ಅರವತ್ತರಿಂದ ಎಪ್ಪತ್ತರಷ್ಟು ಆಮದಿನ ಮೇಲೆ ಅವಲಂಬಿತವಾಗಿರುವುದರಿಂದ, ರಾಷ್ಟ್ರೀಯ ಸಬ್ಸಿಡಿ ಹೊರೆ ಹೆಚ್ಚಾಗುವ ನಿರೀಕ್ಷೆಯಿದೆ. ಒಟ್ಟು ರಸಗೊಬ್ಬರ ಸಬ್ಸಿಡಿ ಬಜೆಟ್‌ನಲ್ಲಿ ನಿಗದಿಪಡಿಸಲಾದ 1.71 ಲಕ್ಷ ಕೋಟಿ ರೂ.ಗಳಿಗಿಂತ ಶೇಕಡಾ ಎಪ್ಪತ್ತೈದರಷ್ಟು ಹೆಚ್ಚಾಗುವ ನಿರೀಕ್ಷೆಯಿದ್ದು, ಜಾಗತಿಕ ಅಡಚಣೆಗಳು ಮುಂದುವರಿದರೆ ಈ ಹಣಕಾಸು ವರ್ಷದಲ್ಲಿ ದಾಖಲೆಯ 3 ಲಕ್ಷ ಕೋಟಿ ರೂಪಾಯಿಗಳನ್ನು ದಾಟುವ ಸಾಧ್ಯತೆಯಿದೆ.

ಲಾಜಿಸ್ಟಿಕ್ಸ್ ಅಪಾಯಗಳು ಮತ್ತು ದೃಢತೆ

ಮುಂದುವರಿದ ಪ್ರಾದೇಶಿಕ ಸಂಘರ್ಷ, ವಾಣಿಜ್ಯ ಕಾರ್ಯಾಚರಣೆಗಳಿಗೆ ವ್ಯಾಪಕ ಅಪಾಯ ಉಂಟುಮಾಡುತ್ತದೆ, ಇದರಲ್ಲಿ ಹೆಚ್ಚಿನ ಲಾಜಿಸ್ಟಿಕ್ಸ್ ವೆಚ್ಚಗಳು, ಸರಕುಗಳ ಆಗಮನದಲ್ಲಿ ವಿಳಂಬ, ದೀರ್ಘಾವಧಿಯ ಹಡಗು ಸಾರಿಗೆ ಸಮಯ, ಇನ್‌ಪುಟ್ ಕೊರತೆ ಮತ್ತು ರಫ್ತು ಆದೇಶಗಳ ಮೇಲಿನ ಹೆಚ್ಚಿನ ಅನಿಶ್ಚಿತತೆ ಸೇರಿವೆ.

- ಮೇ ಮಧ್ಯದಿಂದ ಇಂಧನ ವೆಚ್ಚ 7.5 ರೂಪಾಯಿ ಏರಿಕೆ.
- ಅಬಕಾರಿ ಕಡಿತದಿಂದ 1 ಲಕ್ಷ ಕೋಟಿ ರೂಪಾಯಿ ನಷ್ಟ.
- ರಸಗೊಬ್ಬರ ಸಬ್ಸಿಡಿ 3 ಲಕ್ಷ ಕೋಟಿಗೆ ತಲುಪುವ ಸಾಧ್ಯತೆ.
- ಸಣ್ಣ ಸಂಸ್ಥೆಗಳಿಗೆ 8.1 ಲಕ್ಷ ಕೋಟಿ ಪಾವತಿ ಬಾಕಿ.
- ಜಿಎಸ್‌ಟಿ ಆದಾಯ ಶೇಕಡಾ 8.3 ರಷ್ಟು ವಿಸ್ತರಣೆ.



ಉದ್ಯಮಗಳ ಮೇಲೆ ಒತ್ತಡ ಹೆಚ್ಚಳ

ದೇಶೀಯ ಉದ್ಯಮಗಳ ಕಾರ್ಯನಿರತ ಬಂಡವಾಳದ ಮೇಲೆಯೂ ಒತ್ತಡ ಹೆಚ್ಚುತ್ತಿದ್ದು, ವಿಶೇಷವಾಗಿ ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಉದ್ಯಮಗಳ (ಎಂಎಸ್‌ಎಂಇ) ಮೇಲೆ ಪರಿಣಾಮ ಬೀರುತ್ತಿದೆ. ಸಾರ್ವಜನಿಕ ವಲಯದ ಉದ್ಯಮಗಳು ಪ್ರಸ್ತುತ ಸಣ್ಣ ಉದ್ಯಮಗಳಿಗೆ ಪಾವತಿಸಬೇಕಾದ ಬಾಕಿ ಹಣದಲ್ಲಿ 8.1 ಲಕ್ಷ ಕೋಟಿ ರೂ.ಗಳನ್ನು ತಡೆಹಿಡಿದಿದ್ದು, ಕಡ್ಡಾಯವಾಗಿ ನಲವತ್ತೈದು ದಿನಗಳ ಇತ್ಯರ್ಥದ ಸಮಯ ಜಾರಿಗೆ ಆಡಳಿತಾತ್ಮಕ ನಿರ್ದೇಶನಗಳನ್ನು ನೀಡಲಾಗಿದೆ. ಈ ತೀವ್ರ ಬಾಹ್ಯ ಸವಾಲುಗಳ ಹೊರತಾಗಿಯೂ, ದೇಶೀಯ ಸ್ಥೂಲ ಆರ್ಥಿಕ ಸೂಚಕಗಳು ರಚನಾತ್ಮಕ ಸ್ಥಿರತೆಯನ್ನು ತೋರಿಸುತ್ತಿದ್ದು, ಒಟ್ಟು ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹಣೆಯಲ್ಲಿ ಶೇ. 8.3 ರಷ್ಟು ವಾರ್ಷಿಕ ಬೆಳವಣಿಗೆ, ದೇಶೀಯ ಸಗಟು ಟ್ರ್ಯಾಕ್ಟರ್ ಮಾರಾಟದಲ್ಲಿ ಶೇ.26 ಹೆಚ್ಚಳ, ಪ್ರಯಾಣಿಕ ವಾಹನಗಳ ಮಾರಾಟ ಮತ್ತು ಹೆಚ್ಚಿನ ಜೀವ ವಿಮಾ ಪ್ರೀಮಿಯಂಗಳಿಂದ ಇದು ಬೆಂಬಲಿತವಾಗಿದೆ.

ಅಗತ್ಯ ಸಂಪನ್ಮೂಲ ನಿರ್ವಹಣೆ

ಹೆಚ್ಚುತ್ತಿರುವ ಜಾಗತಿಕ ಸರಕುಗಳ ಮೌಲ್ಯ ಬಾಹ್ಯ ಆರ್ಥಿಕ ಒತ್ತಡದ ಹೆಚ್ಚಳಕ್ಕೆ ಕಾರಣವಾಗುತ್ತಿದ್ದು, ಮೂರು ಪ್ರಾಥಮಿಕ ಸಂಪನ್ಮೂಲಗಳ ವ್ಯವಸ್ಥಿತ ನಿರ್ವಹಣೆಯ ಅಗತ್ಯ ಸೃಷ್ಟಿಯಾಗಿದೆ. ಇದನ್ನು '3ಎಫ್', ಅಂದರೆ, ಇಂಧನ, ರಸಗೊಬ್ಬರ ಮತ್ತು ವಿದೇಶಿ ವಿನಿಮಯ ಎಂದು ವ್ಯಾಖ್ಯಾನಿಸಲಾಗುತ್ತಿದೆ. ಇದರಲ್ಲಿ ವಿದೇಶಿ ವಿನಿಮಯ ನೇರವಾಗಿ ಚಿನ್ನದ ಖರೀದಿಗೆ ಸಂಬಂಧಿಸಿದೆ. ಈ ಮೂರು ಅತ್ಯಗತ್ಯ ಘಟಕಗಳಿಗೆ ಅಂತಾರಾಷ್ಟ್ರೀಯ ಪಾವತಿಗಳನ್ನು ಸಂಪೂರ್ಣವಾಗಿ ವಿದೇಶಿ ವಿನಿಮಯದ ಮೂಲಕವೇ ನಿರ್ವಹಿಸಬೇಕಾಗುತ್ತದೆ, ಏಕೆಂದರೆ ಅಂತಾರಾಷ್ಟ್ರೀಯ ವ್ಯಾಪಾರ ವಹಿವಾಟುಗಳು ದೇಶೀಯ ಕರೆನ್ಸಿಯಲ್ಲಿನ ವಹಿವಾಟುಗಳನ್ನು ಬೆಂಬಲಿಸುವುದಿಲ್ಲ.



ಜಾಗತಿಕ ಬಿಕ್ಕಟ್ಟಿನ ಪರಿಣಾಮಗಳು

ಪಶ್ಚಿಮ ಏಷ್ಯಾ ವಲಯದಲ್ಲಿನ ಭೌಗೋಳಿಕ ರಾಜಕೀಯ ಅಸ್ಥಿರತೆ ವ್ಯಾಪಕ ವಾಣಿಜ್ಯ ಪರಿಣಾಮಗಳನ್ನು ಉಂಟುಮಾಡಿದ್ದು, ಸ್ಥಳೀಯ ಚಿಲ್ಲರೆ ಬೆಲೆಗಳು ಮತ್ತು ಪೂರೈಕೆ ಸರಪಳಿ ಮಾರ್ಗಗಳ ಮೇಲೆ ನೇರ ಪರಿಣಾಮ ಬೀರಿದೆ. ಹಾರ್ಮುಜ್ ಜಲಸಂಧಿಯನ್ನು ಸಂಪೂರ್ಣವಾಗಿ ಮುಚ್ಚಿದ್ದರಿಂದ ಫೆಬ್ರವರಿ ಅಂತ್ಯದಿಂದ ಜಾಗತಿಕ ಕಚ್ಚಾ ತೈಲ ಬೆಲೆಗಳಲ್ಲಿ ಶೇ. 50ರಷ್ಟು ಏರಿಕೆಯಾಗಿದೆ. ಈ ಹೆಚ್ಚುತ್ತಿರುವ ವೆಚ್ಚಗಳಿಂದಾಗಿ, ದೇಶೀಯ ಇಂಧನ ಚಿಲ್ಲರೆ ವ್ಯಾಪಾರಿಗಳು ಬೆಲೆ ಏರಿಕೆಯನ್ನು ಜಾರಿಗೊಳಿಸಿದ್ದು, ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 2.61 ರೂ. ಮತ್ತು ಡೀಸೆಲ್ ಬೆಲೆಯನ್ನು ಲೀಟರ್‌ಗೆ 2.71 ರೂ. ಹೆಚ್ಚಿಸಿದ್ದಾರೆ. ಹನ್ನೊಂದು ದಿನಗಳ ಅವಧಿಯಲ್ಲಿ ನಾಲ್ಕನೇ ಬಾರಿಗೆ ಬೆಲೆ ಏರಿಕೆಯಾಗಿದ್ದು, ಮೇ 15 ರಿಂದ ಇಂಧನ ಬೆಲೆ ಏರಿಕೆ ಸುಮಾರು 7.5 ರೂ. ಗಳಷ್ಟು ಏರಿಕೆಯಾದಂತಾಗಿದೆ.

ಕಿರುಸುದ್ದಿ

ಟ್ರಂಪ್ ಅಬ್ರಹಾಂ ಒಪ್ಪಂದ ತಿರಸ್ಕರಿಸಿದ ಪಾಕಿಸ್ತಾನ

• ಇಸ್ಲಾಮಾಬಾದ್: ಪಾಕಿಸ್ತಾನ, ಅಬ್ರಹಾಂ ಒಪ್ಪಂದಕ್ಕೆ (ಅಬ್ರಾಹಂ ಎಕಾರ್ಡ್ಸ್) ಸೇರಬೇಕೆಂಬ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಕರೆಯನ್ನು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಮಂಗಳವಾರ ತಿರಸ್ಕರಿಸಿದ್ದಾರೆ. ಮಾಧ್ಯಮ ಸಂದರ್ಶನವೊಂದರಲ್ಲಿ ಆಸಿಫ್, ಈ ಸಾಮಾನ್ಯೀಕರಣ ಒಪ್ಪಂದಕ್ಕೆ ಸೇರುವುದು ಪಾಕಿಸ್ತಾನದ ಮೂಲಭೂತ ತತ್ವಗಳು ಮತ್ತು ಸಿದ್ಧಾಂತಗಳಿಗೆ ಸಂಪೂರ್ಣವಾಗಿ ವಿರುದ್ಧವಾಗಿದೆ ಎಂದು ತಿಳಿಸಿದರು. ಅಮೆರಿಕ ಮತ್ತು ಇರಾನ್ ನಡುವಿನ ಮಾತುಕತೆಗಳಿಗೆ ಮಧ್ಯಸ್ಥಿಕೆ ವಹಿಸುತ್ತಿರುವ ಸೌದಿ ಅರೇಬಿಯಾ, ಕತಾರ್ ಈಜಿಪ್ಟ್, ಜೋರ್ಡಾನ್, ಟರ್ಕಿ ಮತ್ತು ಪಾಕಿಸ್ತಾನ ಸೇರಿದಂತೆ ಇತರ ದೇಶಗಳು ತಕ್ಷಣವೇ ಈ ಒಪ್ಪಂದಕ್ಕೆ ಸಹಿ ಹಾಕಬೇಕು ಎಂದು ಟ್ರಂಪ್ ಅವರು ಟ್ರುತ್ ಸೋಶಿಯಲ್‌ನಲ್ಲಿ ಪೋಸ್ಟ್ ಮಾಡಿದ ಬೆನ್ನಲ್ಲೇ ಈ ಪ್ರತಿಕ್ರಿಯೆ ಬಂದಿದೆ. 2020ರಲ್ಲಿ ಅಮೆರಿಕಾದ ಮಧ್ಯಸ್ಥಿಕೆಯಲ್ಲಿ ನಡೆದ ಅಬ್ರಹಾಂ ಒಪ್ಪಂದ, ಇಸ್ರೇಲ್ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್ ಹಾಗೂ ಬಹ್ರೇನ್ ಸೇರಿದಂತೆ ಹಲವಾರು ಅರಬ್ ದೇಶಗಳ ನಡುವೆ ರಾಜತಾಂತ್ರಿಕ, ಆರ್ಥಿಕ ಮತ್ತು ಭದ್ರತಾ ಸಂಬಂಧಗಳನ್ನು ಸ್ಥಾಪಿಸಿತ್ತು.

ದೀದಿಗೆ ಶಾಕ್: 12 ಟಿಎಂಸಿ ಸಂಸದರು ಶೀಘ್ರ ಬಿಜೆಪಿಗೆ?

• ಕೋಲ್ಕತ್ತಾ: ಬಂಗಾಳ ವಿಧಾನಸಭಾ ಚುನಾವಣೆಯಲ್ಲಿನ ಹೀನಾಯ ಸೋಲಿನ ನಂತರ, ತೃಣಮೂಲ ಕಾಂಗ್ರೆಸ್ ನೊಳಗಿನ ಆಂತರಿಕ ಬಿಕ್ಕಟ್ಟು ಉಲ್ಬಣಗೊಂಡಿದೆ. ಹಲವು ತೃಣಮೂಲ ಕಾಂಗ್ರೆಸ್(ಟಿಎಂಸಿ) ಸಂಸದರು ಬಿಜೆಪಿಯೊಂದಿಗೆ ಸಂಪರ್ಕದಲ್ಲಿದ್ದಾರೆ ಮತ್ತು ಅವರಲ್ಲಿ 12 ಸಂಸದರ ಗುಂಪೊಂದು ಅತಿಶೀಘ್ರದಲ್ಲಿ ಟಿಎಂಸಿ ತೊರೆದು ಬಿಜೆಪಿ ಸೇರಲಿದ್ದಾರೆ ಎಂದು ವರದಿಯಾಗಿದೆ. ಮೂಲಗಳ ಪ್ರಕಾರ, ಲೋಕಸಭೆಯಲ್ಲಿರುವ ಟಿಎಂಸಿ ಪಕ್ಷದ 29 ಸಂಸದರಲ್ಲಿ 12 ಮಂದಿ ಈಗಾಗಲೇ ಬಿಜೆಪಿ ಸೇರುವುದು ಬಹುತೇಕ ಖಚಿತವಾಗಿದೆ. ಇನ್ನೂ 6 ಸಂಸದರು ಬಿಜೆಪಿ ಸೇರುವ ಸಾಧ್ಯತೆಯಿದೆ.

ಪಕ್ಷಾಂತರ ನಿಷೇಧದಿಂದ ತಪ್ಪಿಸಲು 20 ಸಂಸದರ ಬೆಂಬಲ ಅಗತ್ಯ: ಪಕ್ಷಾಂತರ ನಿಷೇಧ ಕಾನೂನಿನಿಂದ ತಪ್ಪಿಸಲು ಕನಿಷ್ಠ 19-20 ಸಂಸದರನ್ನು ಒಟ್ಟುಗೂಡಿಸಲು ಸಾಧ್ಯತೆ ಇದೆ. ಈ ಸಂಭಾವ್ಯ ವಿಭಜನೆಯ ಬಗ್ಗೆ ಟಿಎಂಸಿ ನಾಯಕತ್ವಕ್ಕೂ ಮಾಹಿತಿ ಸಿಕ್ಕಿದ್ದು, ಪಕ್ಷ ಒಗ್ಗೂಡಿಸುವ ಪ್ರಯತ್ನಗಳು ಆರಂಭವಾಗಿವೆ ಎಂದು ಮೂಲಗಳು ಹೇಳಿವೆ. ಟಿಎಂಸಿ ಮುಖ್ಯಸ್ಥೆ ಮಮತಾ ಸೋದರಳಿಯ ಮತ್ತು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅಭಿಷೇಕ್ ಬ್ಯಾನರ್ಜಿ ಆಪ್ತರೆಂದು ಗುರುತಿಸಲ್ಪಟ್ಟ ಸಂಸದರು ಬಿಜೆಪಿ ಸೇರುವ ಸಾಧ್ಯತೆಯಿದೆ.

100 ಟಿಎಂಸಿ ನಗರಸಭಾ ಸದಸ್ಯರ ರಾಜೀನಾಮೆ: ಭ್ರಷ್ಟಾಚಾರ ವಿರೋಧಿ ತನಿಖೆ ಹಾಗೂ ರಾಜಕೀಯ ಒತ್ತಡ ಎದುರಿಸುತ್ತಿರುವ 100ಕ್ಕೂ ಹೆಚ್ಚು ಟಿಎಂಸಿ ನಗರಸಭಾ ಸದಸ್ಯರು ವೈಯಕ್ತಿಕ ಕಾರಣಗಳನ್ನು ನೀಡಿ ರಾಜೀನಾಮೆ ಸಲ್ಲಿಸಿದ್ದಾರೆ.

ಅಮೆರಿಕದಿಂದ ಕದನ ವಿರಾಮ ಗಂಭೀರ ಉಲ್ಲಂಘನೆ: ಇರಾನ್

• ಟೆಹ್ರಾನ್: ದಕ್ಷಿಣ ಇರಾನ್‌ನಲ್ಲಿರುವ ಇರಾನ್ ಕ್ಷಿಪಣಿ ಉಡಾವಣಾ ಕೇಂದ್ರಗಳ ಮೇಲೆ ಅಮೆರಿಕ ಸ್ವಯಂ ರಕ್ಷಣೆ ಕಾರಣಗಳನ್ನು ನೀಡಿ ವೈಮಾನಿಕ ದಾಳಿ ನಡೆಸಿದ್ದು, ತೀವ್ರ ಪ್ರತಿದಾಳಿ ನಡೆಸುವುದಾಗಿ ಇರಾನ್ ಎಚ್ಚರಿಕೆ ನೀಡಿದೆ. ಅಮೆರಿಕ ಮಂಗಳವಾರ ಕದನ ವಿರಾಮ ಒಪ್ಪಂದದ ಗಂಭೀರ ಉಲ್ಲಂಘನೆ ಮಾಡಿರುವುದಾಗಿ ಇರಾನ್ ಆರೋಪಿಸಿದೆ. ಅಮೆರಿಕ ವೈಮಾನಿಕ ದಾಳಿಯಿಂದ ಇರಾನ್-ಅಮೆರಿಕ ನಡುವಿನ ಉದ್ವಿಗ್ನತೆ ಹೆಚ್ಚಾಗಿದ್ದು, ಮಧ್ಯಪ್ರಾಚ್ಯ ಪ್ರದೇಶದಲ್ಲಿ ಆತಂಕ ಹೆಚ್ಚಿಸಿದೆ. ದಾಳಿಯಿಂದ ಹಾರ್ಮುಜ್ ಜಲಸಂಧಿ ಪ್ರವೇಶದ್ವಾರದಲ್ಲಿ ಒಂದು ಹಡಗಿಗೆ ಹಾನಿಯಾಗಿದೆ. ಅಮೆರಿಕದ ಯುದ್ಧ ವಿಮಾನಗಳ ಮೇಲೆ ಇರಾನ್ ಸೇನೆ ಖಂಡಾಂತರ ಕ್ಷಿಪಣಿಗಳಿಂದ ಪ್ರತಿದಾಳಿ ನಡೆಸಿದೆ. ದಾಳಿ-ಪ್ರತಿದಾಳಿ ಮಧ್ಯೆಯೇ ಉಭಯ ರಾಷ್ಟ್ರಗಳ ನಿಯೋಗಗಳು ಒಪ್ಪಂದ ಮಾತುಕತೆ ಅಂತಿಮಗೊಳಿಸುವ ಪ್ರಯತ್ನದಲ್ಲಿವೆ. ಒಪ್ಪಂದ ಅಂತಿಮಗೊಳ್ಳದಿದ್ದರೆ ದೊಡ್ಡ ದಾಳಿ ನಡೆಸುವುದಾಗಿ ಅಧ್ಯಕ್ಷ ಟ್ರಂಪ್ ಇತ್ತೀಚೆಗೆ ಇರಾನ್‌ಗೆ ಬೆದರಿಕೆ ಹಾಕಿದ್ದರು. ಅಮೆರಿಕ ಕದನ ವಿರಾಮವನ್ನು ಪಾಲಿಸುತ್ತಿದೆ ಎಂದು ಅಮೆರಿಕ ಅಧಿಕಾರಿಗಳು ಹೇಳಿದ್ದಾರೆ.

ಉತ್ತಮ ಒಪ್ಪಂದ ಇನ್ನೂ ಸಾಧ್ಯ: ಅಧ್ಯಕ್ಷ ಟ್ರಂಪ್ ಪರಸ್ಪರ ಲಾಭದಾಯಕ ಒಪ್ಪಂದ ಅಥವಾ ಯಾವುದೇ ಒಪ್ಪಂದ ಮಾಡಿಕೊಳ್ಳದಿರಲು ಬಯಸಿದ್ದರು. ಇನ್ನೂ ಇರಾನ್ ಜತೆ ಒಂದು ಉತ್ತಮ ಒಪ್ಪಂದ ಮಾಡಿಕೊಳ್ಳಲು ಅವಕಾಶ ಇದೆ ಎಂದು ಅಮೆರಿಕ ಗೃಹ ಇಲಾಖೆ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿದ್ದಾರೆ.

ಗಡಿ ಕಳ್ಳಸಾಗಣೆ ತಡೆಗೆ ಆ್ಯಂಟಿ ಡ್ರೋನ್ ವ್ಯವಸ್ಥೆ ಅಳವಡಿಕೆ

• ಬಿಕಾನೇರ್: ಅಂತಾರಾಷ್ಟ್ರೀಯ ಗಡಿಗಳಲ್ಲಿ ಶಸ್ತ್ರಾಸ್ತ್ರ ಮತ್ತು ಮಾದಕ ದ್ರವ್ಯಗಳ ಕಳ್ಳಸಾಗಣೆಯನ್ನು ತಡೆಗಟ್ಟಲು ಕೇಂದ್ರ ಸರ್ಕಾರ ಮುಂದಿನ ಆರು ತಿಂಗಳೊಳಗೆ ಆ್ಯಂಟಿ-ಡ್ರೋನ್ ವ್ಯವಸ್ಥೆಗಳನ್ನು ಅಳವಡಿಸುವ ಪ್ರಕ್ರಿಯೆ ಪೂರ್ಣಗೊಳಿಸಲಿದೆ.

ರಾಜಸ್ಥಾನದ ಬಿಕಾನೇರ್ ಜಿಲ್ಲೆಯ ಸಾಂಚು ಗಡಿ ಚೌಕಿಯಲ್ಲಿ ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಸಿಬ್ಬಂದಿಯನ್ನುದ್ದೇಶಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಈ ಯೋಜನೆ ಪ್ರಕಟಿಸಿದರು. ಸಮಗ್ರ ಗಡಿ ಭದ್ರತೆಗಾಗಿ ಬಹುಮುಖಿ ನಾಲ್ಕು ಅಂಶಗಳ ಭದ್ರತಾ ಗ್ರಿಡ್ ಅಗತ್ಯವಿದೆ ಎಂದು ಅವರು ತಿಳಿಸಿದರು. ಈ ವ್ಯವಸ್ಥೆ ಬಿಎಸ್‌ಎಫ್, ಸಶಸ್ತ್ರ ಪಡೆಗಳು, ಸ್ಥಳೀಯ ನಾಗರಿಕ ಆಡಳಿತ ಮತ್ತು ನಾಗರಿಕರನ್ನು ಒಳಗೊಂಡಿರುತ್ತದೆ.

ಡ್ರೋನ್‌ಗಳು ಭಾರತೀಯ ಭೂಪ್ರದೇಶದೊಳಗೆ ಇಳಿಯುವುದರಿಂದ, ಕಳ್ಳಸಾಗಣೆ ಸರಕುಗಳನ್ನು ಸ್ವೀಕರಿಸುವವರನ್ನು ಗುರುತಿಸಲು ಸ್ಥಳೀಯ ಪೊಲೀಸರೊಂದಿಗೆ ನಿಕಟ ಸಮನ್ವಯ ಅಗತ್ಯ. ಬಿಹಾರ, ಗುಜರಾತ್, ತ್ರಿಪುರಾ ಮತ್ತು ಪಶ್ಚಿಮ ಬಂಗಾಳ ಸೇರಿದಂತೆ ಗಡಿ ಪ್ರದೇಶಗಳಲ್ಲಿ ಈ ನಿಟ್ಟಿನಲ್ಲಿ ಸಮನ್ವಯ ಸಭೆಗಳು ನಡೆಯುತ್ತಿವೆ. ಜತೆಗೆ, ತಾಂತ್ರಿಕ ದುರುಪಯೋಗವನ್ನು ಎದುರಿಸಲು ಬಿಎಸ್‌ಎಫ್ ಕಾರ್ಯಾಚರಣೆಯ ವ್ಯಾಪ್ತಿಯನ್ನು ಈ ಹಿಂದೆ 15 ಕಿಲೋಮೀಟರ್‌ನಿಂದ 50 ಕಿಲೋಮೀಟರ್‌ಗೆ ವಿಸ್ತರಿಸಲಾಗಿದೆ. ವ್ಯಾಪ್ತಿಯಲ್ಲಿ ಅಕ್ರಮ ನಿರ್ಮಾಣಗಳು ಅಥವಾ ಅಸಹಜ ಜನಸಂಖ್ಯಾ ಬದಲಾವಣೆಗಳ ಬಗ್ಗೆ ಗಮನಹರಿಸಲಾಗುತ್ತದೆ. 2030ರ ವೇಳೆಗೆ ಎಲ್ಲಾ ಗಡಿ ಚೌಕಿಗಳಲ್ಲಿ ಮೂಲಸೌಕರ್ಯ ಬಲಪಡಿಸುವ ಗುರಿಯನ್ನು ಸರ್ಕಾರ ಹೊಂದಿದೆ.

ನಿಷೇಧಿತ ಪ್ರಾಣಿ ಹತ್ಯೆ ಬೇಡ, ಚಿತ್ರ ತೆಗೆಯಬೇಡಿ: ಮದನಿ

• ಲಖನೌ: ಬಕ್ರೀದ್ ಹಬ್ಬದ ಸಂದರ್ಭ ದೇಶದ ಕಾನೂನು ಉಲ್ಲಂಘಿಸಿ ನಿಷೇಧಿತ ಪ್ರಾಣಿಗಳ ಹತ್ಯೆ ಮಾಡದಂತೆ ಮತ್ತು ಅವುಗಳ ಚಿತ್ರಗಳನ್ನು ಜಾಲತಾಣಗಳಲ್ಲಿ ಪೋಸ್ಟ್ ಮಾಡದಂತೆ ಉತ್ತರಪ್ರದೇಶದ ಜಾಮಿಯತ್ ಉಲೆಮಾ ಮುಖ್ಯಸ್ಥ ಮೌಲಾನಾ ಅರ್ಷದ್ ಮದನಿ ಮುಸ್ಲಿಮರಿಗೆ ಕರೆ ನೀಡಿದ್ದಾರೆ. ಈದ್ ಉಲ್ ಅದಾ ಸಂದರ್ಭ ಮುಸ್ಲಿಮ್ ನಾಯಕರೊಬ್ಬರು ತಮ್ಮ ಸಮುದಾಯಕ್ಕೆ ಕಾನೂನು ಉಲ್ಲಂಘಿಸದಂತೆ ಕರೆ ನೀಡಿರುವುದು ಪ್ರಶಂಸಾರ್ಹ ನಡೆಯಾಗಿದೆ. ಪ್ರಾಣಿ ಹತ್ಯೆ ಮಾಡುವುದರ ಬಗ್ಗೆ ಜಾಹೀರಾತು ಅಥವಾ ಸಾಮಾಜಿಕ ಜಾಲತಾಣಗಳಲ್ಲಿ ಹತ್ಯೆ ಮಾಡಿದ ಪ್ರಾಣಿಗಳ ಚಿತ್ರಗಳನ್ನು ಪೋಸ್ಟ್ ಮಾಡದಿರಲು ಮದನಿ ಕರೆ ನೀಡಿದ್ದಾರೆ. ಸರ್ಕಾರಿ ಕಾನೂನು ಪಾಲಿಸಿ ಬಕ್ರೀದ್ ಆಚರಿಸಬೇಕು, ಪ್ರಾಣಿ ಹತ್ಯೆ ತಪ್ಪಿಸಬಹುದು. ನಮ್ಮ ಆಚರಣೆಯು ಇನ್ನೊಬ್ಬರಿಗೆ ತೊಂದರೆ ನೀಡಬಾರದು ಎಂದು ಮದನಿ ಹೇಳಿದ್ದಾರೆ. ಇತ್ತೀಚೆಗೆ ಗೋವನ್ನು ರಾಷ್ಟ್ರೀಯ ಪ್ರಾಣಿಯನ್ನಾಗಿ ಘೋಷಿಸಬೇಕೆಂದು ಮದನಿ ಉತ್ತರಪ್ರದೇಶ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರು. ಗುರುವಾರ (ಮೇ 28) ಮುಸ್ಲಿಮ್ ಸಮುದಾಯ ಬಕ್ರೀದ್ ಆಚರಿಸಲಿದೆ.

ಕೇರಳದ ಕನಸಿನ ಯೋಜನೆಗಳ ಬೆಂಬಲಕ್ಕೆ ನೂತನ ಮುಖ್ಯಮಂತ್ರಿ ಮನವಿ

ಕೇರಳ ಸಿಎಂ ಸತೀಶನ್ ಪ್ರಧಾನಿ ಮೋದಿ ಭೇಟಿ

• ಹೊಸದಿಲ್ಲಿ : ಕೇರಳದ ನೂತನ ಮುಖ್ಯಮಂತ್ರಿ ವಿ.ಡಿ.ಸತೀಶನ್ ಅವರು ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಹಾಗೂ ವಿತ್ತಸಚಿವೆ ನಿರ್ಮಲಾ ಸೀತಾರಾಮನ್ ಅವರನ್ನು ದಿಲ್ಲಿಯಲ್ಲಿ ಭೇಟಿ ಮಾಡಿದರು.ಸತೀಶನ್ ಅಧಿಕಾರ ಸ್ವೀಕರಿಸಿದ ಬಳಿಕ ಇದು ಪ್ರಧಾನಿಯವರೊಂದಿಗಿನ ಅವರ ಪ್ರಥಮ ಭೇಟಿಯಾಗಿದ್ದು, ಕೇರಳದ 'ಕನಸಿನ ಯೋಜನೆ'ಗಳಿಗೆ ಕೇಂದ್ರದ ಬೆಂಬಲ ಕೋರಿದ್ದಾಗಿ ಮಾಧ್ಯಮದವರಿಗೆ ತಿಳಿಸಿದ್ದಾರೆ.



ಕೇರಳದ ಸಮಸ್ಯೆಗಳು ಮತ್ತು ಆದ್ಯತೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಮತ್ತು ವಿತ್ತ ಸಚಿವರ ಜತೆ ಚರ್ಚಿಸಿದ್ದೇನೆ. ಕೇರಳವೀಗ ಹಣಕಾಸು ಬಿಕ್ಕಟ್ಟಿಗೆ ಸಿಲುಕಿದ್ದು, ಜೂನ್ ಮೊದಲ ವಾರ ರಾಜ್ಯದ ಹಣಕಾಸು ಸ್ಥಿತಿಯ ಬಗ್ಗೆ ಶ್ವೇತಪತ್ರ ಹೊರಡಿಸಲಾಗುವುದು. ಅದಕ್ಕೂ ಮುನ್ನ ತಾವು ಈ ಬಗ್ಗೆ ವಿವರಗಳಿಗೆ ಹೋಗುವುದಿಲ್ಲ ಎಂದೂ ಅವರು ತಿಳಿಸಿದರು.

ಕೇಂದ್ರ ಮತ್ತು ರಾಜ್ಯದ ಸಂಬಂಧಗಳಲ್ಲಿನ ಕೆಲವು 'ಸಮಸ್ಯೆ'ಗಳ ಬಗ್ಗೆ ಪ್ರಧಾನಿ ಮತ್ತು ವಿತ್ತಸಚಿವರಿಗೆ ನಾನು ಮಾಹಿತಿ ನೀಡಿದ್ದೇನೆ. ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ಅವರು ತಿಳಿಸಿದ್ದು, ಕೇಂದ್ರ ಸರಕಾರವೂ ಕೆಲವು ವಿಷಯಗಳನ್ನು ಪ್ರಸ್ತಾವಿಸಿದ್ದು, ರಾಜ್ಯ ಸರಕಾರ ಈ ಬಗ್ಗೆ ಪರಿಶೀಲಿಸಲಿದೆ ಎಂದರು. ದಕ್ಷಿಣದ ಕೆಲವು ವಿಪಕ್ಷ ಆಡಳಿತದ ರಾಜ್ಯ ಸರಕಾರಗಳು ತಮ್ಮ ಹಣಕಾಸು ವೈಫಲ್ಯಗಳನ್ನು ಮುಚ್ಚಿಕೊಳ್ಳಲು ಕೇಂದ್ರದ ನರೇಂದ್ರ ಮೋದಿ ಸರಕಾರದ ಜೊತೆ ಸಂಘರ್ಷಕ್ಕಿಳಿದಿರುವಂತೆಯೇ, ಕೇರಳದ ಹಿಂದಿನ ಎಡರಂಗ ಸರಕಾರವೂ ಇದೇ ರೀತಿ ಕೇಂದ್ರದೊಂದಿಗೆ ಸಂಘರ್ಷಕ್ಕಿಳಿದಿತ್ತು. ಇದೀಗ ಸತೀಶನ್ ಸರಕಾರವು, ಹಿಂದಿನ ಪಿಣರಾಯಿ ವಿಜಯನ್ ಸರಕಾರದ ಹಣಕಾಸು ನಿರ್ವಹಣೆಯಲ್ಲಿನ ವೈಫಲ್ಯಗಳನ್ನು ಶ್ವೇತಪತ್ರದ ಮೂಲಕ ತೆರೆದಿಡಲು ಮುಂದಾಗಿರುವುದು ಕುತೂಹಲ ಮೂಡಿಸಿದೆ.

ರಾಷ್ಟ್ರೀಯ ಹೆದ್ದಾರಿ ಯೋಜನೆಯ ಬಗ್ಗೆ ಪ್ರಸ್ತಾವಿಸಿದ ಸತೀಶನ್ ಅವರು, ಯೋಜನೆಗೆ ಅಗತ್ಯವಿರುವ ಭೂಸ್ವಾಧೀನಕ್ಕಾಗಿ 5,580ಕೋ.ರೂ.ಗಳನ್ನು ಸರಕಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿದೆ.ಈ ಮೊತ್ತವನ್ನು ಕೇರಳದ ಸಾಲ ಮಿತಿಯಿಂದ ಹೊರಕ್ಕಿಡಬೇಕೆಂದು ಕೋರಿರುವುದಾಗಿ ತಿಳಿಸಿದರು. ರಾಜ್ಯದ ಸಾಲ ಮಿತಿಯುವ ಜಿಎಸ್‌ಡಿಪಿ ನಿಯಮಗಳಡಿ ಅಧಿಕೃತವಾಗಿ ಶೇ.3ರಷ್ಟಿತ್ತು. ಆದರೆ ಈ ಮಿತಿಗೆ ಜೋಡಿಸಲ್ಪಟ್ಟ ಷರತ್ತುಗಳ ಕಾರಣದಿಂದ ಪರಿಣಾಮಕಾರಿ ಸಾಲ ಸಾಮರ್ಥ್ಯ ಶೇ.3.5ರಷ್ಟಿದೆ ಎಂದ ಅವರು, ಕೆ ಐಐಎಫ್‌ಬಿ ಮತ್ತು ಪಿಂಚಣಿ ನಿಧಿಗಳಿಗೆ ಸಂಬಂಧಿಸಿದ ಬಾಕಿ ಬಗ್ಗೆ ಪ್ರಸ್ತಾವಿಸಲಾಗಿದೆ. ಪ್ರಧಾನಿಯವರ ಜತೆ ಚರ್ಚಿಸಿದ ವಿಷಯಗಳ ಬಗ್ಗೆ ಇನ್ನಷ್ಟು ಚರ್ಚೆಗಳನ್ನು ಶ್ವೇತಪತ್ರ ಬಿಡುಗಡೆಯ ಬಳಿಕ ಕೇಂದ್ರದ ಜತೆ ನಡೆಸಲಾಗುವುದು ಎಂದರು.

ಚೀನಾ–ಪಾಕಿಸ್ತಾನ ಜಂಟಿ ಹೇಳಿಕೆಗೆ ಭಾರತದ ತೀಕ್ಷ್ಣ ತಿರುಗೇಟು

ಜಮ್ಮು-ಕಾಶ್ಮೀರ ಭಾರತದ ಅವಿಭಾಜ್ಯ ಅಂಗ

• ಹೊಸದಿಲ್ಲಿ: ಜಮ್ಮು-ಕಾಶ್ಮೀರ ಕುರಿತು ಚೀನಾ ಹಾಗೂ ಪಾಕಿಸ್ತಾನ ಹೊರಡಿಸಿರುವ ಜಂಟಿ ಹೇಳಿಕೆಗೆ ಭಾರತ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದು, ಭಾರತದ ಸಾರ್ವಭೌಮತ್ವಕ್ಕೆ ಧಕ್ಕೆ ತರುವ ಯಾವುದೇ ಉಲ್ಲೇಖಗಳನ್ನು ಸಂಪೂರ್ಣವಾಗಿ ತಿರಸ್ಕರಿಸುವುದಾಗಿ ಸ್ಪಷ್ಟಪಡಿಸಿದೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ಸೋಮವಾರ ಹೇಳಿಕೆ ಪ್ರಕಟಿಸಿದ್ದು, ಜಮ್ಮು-ಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಭಾಗಗಳಾಗಿದ್ದು, ಈ ವಿಚಾರದಲ್ಲಿ ಬೇರೆ ಯಾವುದೇ ರಾಷ್ಟ್ರಕ್ಕೆ ಪ್ರತಿಕ್ರಿಯೆ ನೀಡುವ ಅಥವಾ ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕಿಲ್ಲ ಎಂದು ಖಡಕ್ ಸಂದೇಶ ರವಾನಿಸಿದ್ದಾರೆ.

ಚೀನಾ-ಪಾಕಿಸ್ತಾನ ಜಂಟಿ ಹೇಳಿಕೆಯಲ್ಲಿ ಜಮ್ಮು-ಕಾಶ್ಮೀರ ಕುರಿತ ಉಲ್ಲೇಖಗಳನ್ನು ಭಾರತ "ಅನಗತ್ಯ ಹಾಗೂ ಅಸಂಗತ" ಎಂದು ಬಣ್ಣಿಸಿದ್ದು, ಭಾರತದ ನಿಲುವು ಎಲ್ಲರಿಗೂ ಚೆನ್ನಾಗಿ ತಿಳಿದಿರುವ ವಿಚಾರ ಎಂದು ಹೇಳಿದೆ.



ಇದೇ ವೇಳೆ, ಚೀನಾ-ಪಾಕಿಸ್ತಾನ ಆರ್ಥಿಕ ಕಾರಿಡಾರ್ (ಸಿಪಿಇಸಿ) ಯೋಜನೆಗಳ ವಿರುದ್ಧವೂ ಭಾರತ ಮತ್ತೊಮ್ಮೆ ಕಿಡಿಕಾರಿದೆ. ಈ ಯೋಜನೆಗಳ ಕೆಲವು ಭಾಗಗಳು ಭಾರತದ ಸಾರ್ವಭೌಮ ಪ್ರದೇಶದೊಳಗೆ ಬರುತ್ತವೆ ಎಂದು ಹೇಳಿರುವ ಭಾರತ, ಪಾಕಿಸ್ತಾನದ ಅಕ್ರಮ ಆಕ್ರಮಣವನ್ನು ಮಾನ್ಯಗೊಳಿಸುವ ಅಥವಾ ಬಲಪಡಿಸುವ ಯಾವುದೇ ಕ್ರಮಗಳನ್ನು ಸಹಿಸುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಈ ವಿಷಯವನ್ನು ಚೀನಾ ಮತ್ತು ಪಾಕಿಸ್ತಾನ ಸರ್ಕಾರಗಳಿಗೆ ಹಲವು ಬಾರಿ ತಿಳಿಸಲಾಗಿದೆ ಎಂದೂ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

ಇನ್ನೊಂದೆಡೆ, ಅಂತರಸೀಮಾ ಜಲ ಸಂಪನ್ಮೂಲ ಸಹಕಾರ ಕುರಿತು ಚೀನಾ ಮತ್ತು ಪಾಕಿಸ್ತಾನ ಉಲ್ಲೇಖಿಸಿರುವ ವಿಚಾರವನ್ನೂ ಭಾರತ ತಳ್ಳಿಹಾಕಿದೆ. ಎರಡು ರಾಷ್ಟ್ರಗಳಿಗೂ ಪರಸ್ಪರ ಗಡಿ ಇಲ್ಲದ ಕಾರಣ ಇಂತಹ ಸಹಕಾರದ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಭಾರತ ಹೇಳಿದೆ.

1963ರಲ್ಲಿ ಪಾಕಿಸ್ತಾನ ಮತ್ತು ಚೀನಾ ನಡುವೆ ನಡೆದ ಗಡಿ ಒಪ್ಪಂದವನ್ನು ಭಾರತ ಎಂದಿಗೂ ಮಾನ್ಯಗೊಳಿಸಿಲ್ಲ ಎಂದು ವಿದೇಶಾಂಗ ಸಚಿವಾಲಯ ಪುನರುಚ್ಚರಿಸಿದ್ದು, ಭಾರತದ ಭೌಗೋಳಿಕ ಅಖಂಡತೆ ಹಾಗೂ ಸಾರ್ವಭೌಮತ್ವದ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ ಎಂಬ ಸಂದೇಶವನ್ನು ಮತ್ತೊಮ್ಮೆ ವಿಶ್ವ ಸಮುದಾಯಕ್ಕೆ ರವಾನಿಸಿದೆ.

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

BCCB/AO/179/2026-27 ದಿನಾಂಕ: 22.05.2026

ಗೆ, ಶ್ರೀಮತಿ.ಗೋಫಕೃಷ್ಣ ಪ್ರಸಾದ್, ಕೋಂ.ಎಂ.ವಿ.ಕೃಷ್ಣಪ್ರಸಾದ್, ನಂ.116/5-1, 11ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು-03.

ಮಾನ್ಯರೇ,

ವಿಷಯ: ತಮಗೆ ಸೇರಿದ ಚರಾಸ್ತಿಗಳನ್ನು ಬಹಿರಂಗ ಹರಾಜು ಮುಖಾಂತರ ಮಾರಾಟ ಮಾಡುವ ಬಗ್ಗೆ

... Securitization and Reconstruction of Financial Assets and Enforcement of Security Interest Act-2002 ... ದಿನಾಂಕ 28.10.2024 ರಂದು ... ದಿನಾಂಕ 20.12.2024 ರಂದು ... e-auction ಮುಖಾಂತರ ... e-auction ನಲ್ಲಿ ... ದಿನಾಂಕ 21.04.2026ರ ... ರೂ. 6,35,750/- ಆಗಿರುತ್ತದೆ. ಸದರಿ ವಸ್ತುಗಳನ್ನು ದಿನಾಂಕ 10.06.2026 ರಂದು ಬೆಳಗ್ಗೆ 11:00 ಗಂಟೆಗೆ ಬಹಿರಂಗ ಹರಾಜು ಮಾಡಲು ನಿಗದಿ ಪಡಿಸಲಾಗಿದೆ. ...

ತಮ್ಮ ವಿಶ್ವಾಸಿ :-
ಸಹಿ/- ಅಧಿಕಾರ ಹೊಂದಿದ ಅಧಿಕಾರಿ
ಧನ್ಯವಾದಗಳೊಂದಿಗೆ, ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿ.

ಕರ್ನಾಟಕ ಸರ್ಕಾರ

ಆಯನೂರು ಉಪ ಅರಣ್ಯ ವಿಭಾಗ, ಶಿವಮೊಗ್ಗ.

ಸಂಖ್ಯೆ: ಸಅಸಂ/ಟೆಂಡರ್-/ಸಿಆರ್-01/2026-27 ದಿ: 25.05.2026

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ (ಕಾಲ್-2)
(ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026-27 ನೇ ಸಾಲಿಗೆ ಅನುದಾನ ನಿರೀಕ್ಷೆ ಮೇರೆಗೆ ವಿವಿಧ ಲೆಕ್ಕಶೀರ್ಷಿಕೆಯಡಿ ಮತ್ತು ಇ-ಪ್ರಕ್ಯೂರ್ ಮೆಂಟ್ ಪೋರ್ಟಲ್‌ನಲ್ಲಿ ನಮೂದಿಸಿದ ಕಾಮಗಾರಿ ನಿರ್ವಹಿಸುವ ಸ್ಥಳಗಳ ಬದಲಾವಣೆ ಒಳಗೊಂಡಂತೆ ಶಿವಮೊಗ್ಗ ಪ್ರಾದೇಶಿಕ ಅರಣ್ಯ ವಿಭಾಗದ ವಿವಿಧ ಅರಣ್ಯ ವಲಯಗಳ ವ್ಯಾಪ್ತಿಯಲ್ಲಿ "ನೆಡುತೋಪು ರಚನೆ, ನೆಡುತೋಪ ನಿರ್ವಹಣೆ ಮತ್ತು ವಿವಿಧ ಅಳತೆಯ ಸಸಿಗಳ ನಿರ್ವಹಣೆ" ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 2000ರ ಅನ್ವಯ 2026-27 ನೇ ಸಾಲಿಗೆ ಅರಣ್ಯ ಇಲಾಖೆಯಲ್ಲಿ ಅರಣ್ಯ ಗುತ್ತಿಗೆದಾರರಾಗಿ ನೋಂದಣಿಯಾಗಿರುವ ಹಾಗೂ ಅರಣ್ಯ ಇಲಾಖೆಯಲ್ಲಿ ವಿವಿಧ ಅಳತೆಯ ಸಸಿಗಳನ್ನು ಬೆಳೆಸುವುದು, ನೆಡುತೋಪು ಪೂರ್ವಭಾವಿ ಕಾಮಗಾರಿ ಹಾಗೂ ಟೆಂಡರಿಗಿಟ್ಟಿರುವ ಮಾದರಿಯ ಕಾಮಗಾರಿಗಳನ್ನು ನಿರ್ವಹಿಸಿ ಅನುಭವ ಹೊಂದಿರುವ ಹಾಗೂ ಕಾಮಗಾರಿ ನಿರ್ವಹಿಸುವ ವಲಯ ವ್ಯಾಪ್ತಿಯಲ್ಲಿ ಸಸ್ಯಕ್ಷೇತ್ರ ಹಾಗೂ ಸಸಿಗಳನ್ನು ಬೆಳೆಸಲು ಅಗತ್ಯ ಸೌಕರ್ಯ ಹೊಂದಿರುವ ಆಸಕ್ತ ಅರಣ್ಯ ಗುತ್ತಿಗೆದಾರರಿಂದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಸದರಿ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 01.06.2026 ರ ಸಂಜೆ 4.00 ಗಂಟೆಯವರೆಗೆ ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಛೇರಿಯ ವೇಳೆಯಲ್ಲಿ ಈ ಕಛೇರಿಯನ್ನು ಸಂಪರ್ಕಿಸಬಹುದಾಗಿರುತ್ತದೆ. ಹಾಗೂ ಟೆಂಡರ್ ಕುರಿತು ವಿವರಗಳನ್ನು ಅಧಿಕೃತ ವೆಬ್‌ಸೈಟ್ http://kppp.karnataka.gov.in ಮೂಲಕ ಪಡೆದುಕೊಳ್ಳಬಹುದಾಗಿರುತ್ತದೆ.

ಸಹಿ/- ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ, ಆಯನೂರು ಉಪ ವಿಭಾಗ, ಶಿವಮೊಗ್ಗ.

ವಾ.ಸಾ.ಸಂ.ಇ/ಶಿಇ/ಎಂ.ಎ/ಪಿ/26-27/109/05/277

ಕರ್ನಾಟಕ ಸರ್ಕಾರ

ತಾಲ್ಲೂಕು ಪಂಚಾಯಿತಿ ಕಾರ್ಯಾಲಯ ದೊಡ್ಡಬಳ್ಳಾಪುರ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಛೇರಿಯ ದೂರವಾಣಿ ಸಂ.080-27627287, ಇ-ಮೇಲ್ ವಿಳಾಸ :-eotpdbp001@gmail.com

ಸಂಖ್ಯೆ: ತಾಪಂದೊ/ಇ.ಪ್ರೊ/ಹೊ.ಸಂ/01/2026-27 ದಿನಾಂಕ: 26.05.2026

ಇ-ಟೆಂಡರ್ ಪ್ರಕಟಣೆ

2026-27 ಸಾಲಿಗೆ (ಜೂನ್-2026 ರಿಂದ ಮಾರ್ಚ್-2027ರವರೆಗೆ) ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ದೊಡ್ಡ ಬಳ್ಳಾಪುರ ತಾಲ್ಲೂಕು ಪಂಚಾಯಿತಿಯಲ್ಲಿ ಖಾಲಿ ಇರುವ 2-ಡಾಟಾ ಎಂಟ್ರಿ ಆಪರೇಟರ್, 3-ಗ್ರೂಪ್ 'ಡಿ' ಮತ್ತು 1-ವಾಹನ ಚಾಲಕ ಸೇವೆಯನ್ನು ಪಡೆಯಲು ಈ ಕೆಳಕಂಡಂತೆ ಇ-ಟೆಂಡರ್ ಕರೆಯಲಾಗಿರುತ್ತದೆ.

ವಿವರ: 1) ಟೆಂಡರ್ ಅರ್ಜಿಯನ್ನು ಸ್ವೀಕರಿಸುವ ಅಧಿಕಾರಿ ಕಾರ್ಯನಿರ್ವಾಹಕ ಅಧಿಕಾರಿ ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ. 2) ಟೆಂಡರ್ ಉಲ್ಲೇಖ ಮತ್ತು ಪ್ರಕಟಣೆಸಂ.ಕಾನಿಅ/ತಾಪಂದೊ/ಇ.ಪ್ರೊ/ಹೊ.ಸಂ/01/2026-272: 26.05.2026. 3) ಟೆಂಡರ್ ಅಂದಾಜು ಮೊತ್ತ-10,52,920/-(ಹತ್ತು ಲಕ್ಷದ ಐವತ್ತೆರಡು ಸಾವಿರದ ಒಂಬೈನೂರ ಇಪ್ಪತ್ತು ರೂಪಾಯಿಗಳು ಮಾತ್ರ). 4) ಇ.ಎಂ.ಡಿ ಮೊತ್ತ-ರೂ.26400/-(ಇಪ್ಪತ್ತಾರು ಸಾವಿರದ ನಾಲ್ಕುನೂರು ರೂಪಾಯಿಗಳು ಮಾತ್ರ). 5) ಟೆಂಡರ್ ಸಲ್ಲಿಸಲು ಪ್ರಾರಂಭಿಕ ದಿನಾಂಕ-26.05.2026. 6) ಭರ್ತಿ ಮಾಡಿದ ಟೆಂಡರು ಫಾರಂಗಳನ್ನು ಆನ್‌ಲೈನ್ ಮೂಲಕ ಸಲ್ಲಿಕೆಗೆ ಕೊನೆಯ ದಿನಾಂಕ-ದಿನಾಂಕ:12.06.2026. 7)ಟೆಂಡರ್ ತೆರೆಯುವುದು. ಅ) ತಾಂತ್ರಿಕ ಲಕೋಟೆ- 15.06.2026 ಬೆಳಗ್ಗೆ11.00 ಆ) ಆರ್ಥಿಕ ಲಕೋಟೆ- 15.06.2026 ಮಧ್ಯಾಹ್ನ 3.00. 8) ಕಾರ್ಯಾದೇಶ ನೀಡುವುದು- ಆರ್ಥಿಕ ಬಿಡ್ ಅನುಮೋದನೆಗೊಂಡ ನಂತರ. 9) ಇ-ಟೆಂಡರ್ ಡಾಕ್ಯುಮೆಂಟ್ ಲಭ್ಯವಾಗುವ ವೆಬ್ ಸೈಟ್ ವಿಳಾಸ-www.kppp.karnataka.gov.in. 10)ಹೆಚ್ಚಿನ ಮಾಹಿತಿಗಾಗಿ-ಕಾರ್ಯನಿರ್ವಾಹಕ ಅಧಿಕಾರಿಗಳ ಕಾರ್ಯಾಲಯ ತಾಲ್ಲೂಕು ಪಂಚಾಯಿತಿ, ದೊಡ್ಡ ಬಳ್ಳಾಪುರ ದೂರವಾಣಿ ಸಂಖ್ಯೆ080-27627287.

ಸಹಿ/-ಕಾರ್ಯನಿರ್ವಾಹಕ ಅಧಿಕಾರಿ,
ತಾಲ್ಲೂಕು ಪಂಚಾಯಿತಿ, ದೊಡ್ಡಬಳ್ಳಾಪುರ

ವಾಸಾಸಂಇ/ವಾಪ್ರ/820/ಶಿಡಿ ಸಾಯು/2026-27

ಹೆಸರು ಬದಲಾವಣೆ

ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕು, ಕೋಳಾಲ ಹೋಬಳಿ, ಸುಂಕದಹಳ್ಳಿಯ ಶಿವರಾಜು. D. ಹಾಗೂ ಧರ್ಮಪತ್ನಿಯಾದ ಸುಗುಣಮ್ಮ. S.C ನಮಗೆ 10/08/2023 ರಂದು ಮಡಿಲು ಚಿಲ್ಡ್ರನ್ ಆಸ್ಪತ್ರೆ, ತುಮಕೂರು (Madilu Children's Hospital Tumakuru) ಇಲ್ಲಿ ಗಂಡು ಮಗು ಜನನ ಆಗಿದ್ದು ತುಮಕೂರು ಮಹಾನಗರ ಪಾಲಿಕೆಯಲ್ಲಿ 803157/T/B/2023/004612 ನೊಂದಣಿಯಾಗಿದ್ದು ಮಗುವಿನ ಹೆಸರು ವಿಸೀಶ್ S.K ಎಂದು ನಮೂದಿಸುತ್ತದೆ, ಈಗ ಬದಲಾವಣೆ ಮಾಡಿ ವಿಕಾಸ್ K ಆಗಿ ತುಮಕೂರಿನ ನೋಟರಿಯವರ ಸಮುಖದಲ್ಲಿ ಪ್ರಮಾಣೀಕರಿಸುತ್ತೇನೆ.

ಸಹಿ/- ಶಿವರಾಜು D

ಜಾಹೀರಾತಿಗಾಗಿ ಸಂಪರ್ಕಿಸಿ: 9845438807, 9611755391

PUBLIC NOTICE

The Public are hereby informed that, my client **Mr. ISRAYELU VANKAYALAPATI**, No: 35A, 4th Cross, Netaji Layout, Vaddarahalli, Bangalore North Taluk, Bangalore -560 097, has lost the original Document relating to the title deed i.e., Original Sale Deed dated 06.05.2021 executed by Sri. Shankar Ram @ Shankar Ram Patel vide Document No.826/2021-22 of Book-I, and stored in CD No.BYPD861 in the office of the Sub-registrar, Byatarayanapura, Bangalore, in respect of the Schedule Property herein. He has lodged a Complaint with the jurisdictional Police Station. If anybody finds, be sent to my following address.

SCHEDULE PROPERTY

All that piece and parcel of the Property bearing **Site No.32**, Old Khatha No.685/32, New Khatha No.1389/30/3/685/32 issued by Vaderahalli Village Panchayath and PID No.150200201700620095, issued by Vaderahalli Village Panchayath, situated at Vaderahalli Village, Yelahanka Hobli, previously Bangalore North Taluk, presently Yelahanka Taluk, Bangalore, measuring East to West: 30 ft., and North to South: 52 ft., in all measuring 1560 Sq. Ft., and bounded on: **East by:** Site No.33, **West by:** Site No.31, **North by:** 30ft Road, **South by:** Private property

B. SUBRAYA KHARVI, Advocate
No: 231, 11th Main, 37th Cross,
4th T Block, Jayanagar, Bangalore.

ಕರ್ನಾಟಕ ಸರ್ಕಾರ

ಗದಗ-ಬೆಟಗೇರಿ ನಗರಸಭೆ ಕಾರ್ಯಾಲಯ-582101

ಜಿಲ್ಲಾ: ಗದಗ, ರಾಜ್ಯ: ಕರ್ನಾಟಕ
ದೂ: 08372-259932 ಇ-ಮೇಲ್: ka.gadag.betageri.cmc@gmail.com

ನಂ.ಗಬೆನಸ/ಕಾಂ.ವಿ/ಪಹಿ/ ಟೆಂಡರ್/2026-27 ದಿನಾಂಕ: 26-05-2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999-2000ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ನಿಯಮದನ್ವಯ ಗದಗ-ಬೆಟಗೇರಿ ನಗರಸಭೆಯ ಸನ್ 2026-27 ನೇ ಸಾಲಿನ ನಗರಸಭೆ ಅನುದಾನದಲ್ಲಿ ಒಟ್ಟು 03 ಕಾಮಗಾರಿಗಳಿಗೆ ಟೆಂಡರ್‌ಗಿಟ್ಟ ಮೊತ್ತ ರೂ.30.00ಲಕ್ಷಗಳಿಗೆ ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ-ಸಂಗ್ರಹಣಾ ವೇದಿಕೆಯಡಿ, ಇಂಡೆಂಟ್ ನಂ:- 1)DMA/2026-27/OW/WORK_INDENT-58727, 2)DMA/2026-27/OW/WORK_INDENT-58726, 3)DMA/2026-27/OW/WORK_INDENT-58728. http://kppp.karnataka.gov.in ದಲ್ಲಿ, ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ.

ಅದರಂತೆ ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇಎಂಡಿ ಟೆಂಡರ್ ಫೀಗಳನ್ನು Electronic ಪದ್ಧತಿಯಲ್ಲಿ ತುಂಬಿ ನಿಗದಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ	08-06-2026 Up to 16.00 Hours
ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ (Technical Bids)	09-06-2026 Up to 16.30 Hours

ಸದರಿ ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಿದ್ದಲ್ಲಿ kppp portal ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/-
ಪೌರಾಯುಕ್ತರು
ಗದಗ-ಬೆಟಗೇರಿ ನಗರಸಭೆ

ವಾ.ಸಾ.ಸಂ.ಇ/ಗದಗ/89/ದೀಕ್ಷಾಂತ/2026-27

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ

ಸ.ಪ ನಿವೇಶನ ಖಾತೆ ನಂ. 31-511-371, ವಾರ್ಡ್ ನಂ. 20, ಅಂಬಿಕಾ ಲೇಔಟ್, ಸೌತೇಗೌಡನಹಳ್ಳಿ ಗ್ರಾಮ, ಸೂಲಿಬೆಲೆ ರಸ್ತೆ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ಸಂ: ಬಿಐಎಎಪಿಎ/ಸಿಪಿ/ಭೂಉಬ/36/2024-25/26-27/492 ದಿನಾಂಕ : 25.05.2026

ತಿದ್ದುಪಡಿ ಪ್ರಕಟಣೆ

ದಿನಾಂಕ : 12/11/2025 ರಂದು "ಹೊಸದಿಗಂತ" ಮತ್ತು "ಈ ಸಂಜೆ" ದಿನಪತ್ರಿಕೆಗಳಲ್ಲಿ ಹೊರಡಿಸಿರುವ ಪ್ರಕಟಣೆಯಲ್ಲಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಚಿಕ್ಕೇನಹಳ್ಳಿ ಗ್ರಾಮದ ಸನಂ 147/4 ರಲ್ಲಿ 0ಎ-04ಗು, 143/3 ರಲ್ಲಿ 2ಎ-38ಗು + 02ಗು 'ಎ' ಖರಾಬು, 143/2 ರಲ್ಲಿ 1ಎ-02ಗು, 125/2 ರಲ್ಲಿ 1ಎ-34ಗು, 125/1 ರಲ್ಲಿ 1ಎ-28ಗು ಒಟ್ಟು 7ಎ-26ಗು + 02ಗು 'ಎ' ಖರಾಬು ಸೇರಿ ಒಟ್ಟಾರೆ 7ಎ-28ಗು ವಿಸ್ತೀರ್ಣದ ಜಮೀನುಗಳನ್ನು "ಕೈಗಾರಿಕೆ" ವಲಯದಿಂದ ಹಾಗೂ ಚಿಕ್ಕೇನಹಳ್ಳಿ ಗ್ರಾಮದ 143/3 ರಲ್ಲಿ 0ಎ-34ಗು ವಿಸ್ತೀರ್ಣದ ಜಮೀನನ್ನು "ವ್ಯವಸಾಯ" ವಲಯದಿಂದ "ಸಾರ್ವಜನಿಕ / ಅರೆಸಾರ್ವಜನಿಕ" ವಲಯಕ್ಕೆ ಭೂಉಪಯೋಗ ಬದಲಾವಣೆ ಎಂಬುದರ ಬದಲಾಗಿ ದೇವನಹಳ್ಳಿ ತಾಲ್ಲೂಕು, ಕುಂದಾಣ ಹೋಬಳಿ, ಚಿಕ್ಕೇನಹಳ್ಳಿ ಗ್ರಾಮದ ಸ.ನಂ 147/4 ರಲ್ಲಿ 0ಎ-04ಗು, 143/3 ರಲ್ಲಿ 3ಎ-32ಗು + 02ಗು 'ಎ' ಖರಾಬು, 143/2 ರಲ್ಲಿ 1ಎ-02ಗು, 125/2 ರಲ್ಲಿ 1ಎ-34ಗು, 125/1 ರಲ್ಲಿ 1ಎ-28ಗು ಒಟ್ಟು 8ಎ-20ಗು + 02ಗು 'ಎ' ಖರಾಬು ವಿಸ್ತೀರ್ಣದ ಜಮೀನುಗಳನ್ನು "ವ್ಯವಸಾಯ" ವಲಯದಿಂದ "ಸಾರ್ವಜನಿಕ / ಅರೆಸಾರ್ವಜನಿಕ" ವಲಯಕ್ಕೆ ಭೂಉಪಯೋಗ ಬದಲಾವಣೆ ಎಂದು ಓದಿಕೊಳ್ಳತಕ್ಕದ್ದು.

ಸಹಿ/- ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ

ವಾ.ಸಾ.ಸಂ.ಇ/ವಾಪ್ರ/ಶಿಡಿ ಸಾಯು/830/2026-27

INTERTEC TECHNOLOGIES LIMITED

(Under Voluntary Liquidation)
CIN NO. L85110KA1989PLC010456
Registered Office: 28, Shankar Mutt Road, Bangalore-560004
Phone:080-26679094/26611317;email: compliance@intertec1.com, URL:www.intertec1.com

Extract of the Standalone Audited Financial Results for Quarter & Year ended 31/03/2026(Rs. In Lakhs except EPS data)

No.	PARTICULARS	STANDALONE			
		Quarter Ended 31.03.2026	Quarter Ended 31.12.2025	Year Ended 31.12.2026	Year Ended 31.03.2025
1	Total Income:(from Operations or others)	11.04	0	152.420	3.23
2	Net profit for the period after tax	-1.63	-2.33	-1694.130	-389.13
3	Total Comprehensive Income (Comprising Profit/Loss) for the period (after tax)	-1.85	-5.55	-1694.130	-389.13
4	Paid-up Equity Share Capital(Face value Rs.10/-)	756.07	756.070	756.070	756.070
5	Earming per share of Rs.10/-each: Basic & Diluted(Rs)	-0.02	(0.073)	-22.410	(5.150)

Notes:
1 The above is an extract of the detailed format of Audited (standalone) financial results for the Quarter & Year ended 31st March 2026 filed with the the Stock Exchanges under Regulation 33 of the SEBI LODR(2015) Full format of the Financial Results avaliable at the Company website:www.intertec1.com & MSEI website: www.msei.in
2 The results have been reviewed by the Audit Committee & approved in meeting held on 26.05.2026

Place: Banglore
Date:26.05.2026

By Order of the Liquidator for Board
Ms. Medha Kulkarini
(Liquidator:IBBI/IPA-001/IP-P00121/2017-2018/10263)

ಯುಕೆನ್ ಇಂಡಿಯಾ ಲಿಮಿಟೆಡ್

YUKEN

ನೋಂದಣಿ. ಕಚೇರಿ: ಸಂಖ್ಯೆ 16 - ಸಿ, ದೊಡ್ಡನೆಕುಂದಿ ಕೈಗಾರಿಕಾ ಪ್ರದೇಶ, ಮಹಾದೇವಪುರ, ಬೆಂಗಳೂರು- 560 048, ಭಾರತ.

31 ಮಾರ್ಚ್ 2026 ರಂದು ಅಂತ್ಯಗೊಂಡ ತ್ರೈಮಾಸಿಕ ಮತ್ತು ವರ್ಷದ ಆಡಿಟ್ ಮಾಡಿದ ಹಣಕಾಸು ಫಲಿತಾಂಶಗಳ ಸಾರಾಂಶ

CIN : L29150KA1976PLC003017

(₹ ಲಕ್ಷಗಳಲ್ಲಿ, ಪ್ರತಿ ಷೇರಿನ ಡೇಟಾವನ್ನು ಹೊರತುಪಡಿಸಿ)

ಸಂಖ್ಯೆ	ವಿವರಣೆ	ಸ್ಟ್ಯಾಂಡಲೋನ್				ಕ್ರೋಢೀಕೃತ			
		ತ್ರೈಮಾಸಿಕ ಅಂತ್ಯ		ವರ್ಷ ಅಂತ್ಯ		ತ್ರೈಮಾಸಿಕ ಅಂತ್ಯ		ವರ್ಷ ಅಂತ್ಯ	
		31.03.2026	31.03.2025	31.03.2026	31.03.2025	31.03.2026	31.03.2025	31.03.2026	31.03.2025
		ಆಡಿಟೆಡ್	ಆಡಿಟೆಡ್	ಆಡಿಟೆಡ್	ಆಡಿಟೆಡ್	ಆಡಿಟೆಡ್	ಆಡಿಟೆಡ್	ಆಡಿಟೆಡ್	ಆಡಿಟೆಡ್
1	ವ್ಯವಹಾರ ಕಾರ್ಯಾಚರಣೆಗಳಿಂದ ಒಟ್ಟು ಆದಾಯ	11,650.32	10,346.96	40,251.61	39,693.03	13,392.12	12,559.14	46,618.47	46,109.38
2	ಅವಧಿಯ ನಿವ್ವಳ ಲಾಭ (ತೆರಿಗೆ ಮತ್ತು ವಿಶೇಷ ಅಂಶಗಳ ಮೊದಲು)	594.52	534.88	1,819.09	1,796.90	802.93	912.91	2,212.39	3,166.91
3	ಅವಧಿಯ ನಿವ್ವಳ ಲಾಭ (ತೆರಿಗೆಗೆ ಮೊದಲು ಹಾಗೂ ವಿಶೇಷ ಅಂಶಗಳ ನಂತರ)	594.52	534.88	1,819.09	1,796.90	802.93	912.91	2,212.39	3,166.91
4	ಅವಧಿಯ ನಿವ್ವಳ ಲಾಭ (ತೆರಿಗೆ ಮತ್ತು ವಿಶೇಷ ಅಂಶಗಳ ನಂತರ)	437.38	504.73	1,335.62	1,384.00	580.01	784.66	1,439.03	2,460.16
5	ಅವಧಿಯ ಒಟ್ಟು ಸಮಗ್ರ ಆದಾಯ [ಅವಧಿಯ ಲಾಭ (ತೆರಿಗೆಯ ನಂತರ) ಹಾಗೂ ಇತರೆ ಸಮಗ್ರ ಆದಾಯ (ತೆರಿಗೆಯ ನಂತರ) ಒಳಗೊಂಡಂತೆ]	418.77	410.34	1,290.12	1,289.61	563.86	682.31	1,400.87	2,357.81
6	ಪಾವತಿಸಲಾದ ಇಕ್ವಿಟಿ ಷೇರು ಮೂಲಧನ (ಪ್ರತಿ ಷೇರಿನ ಮುಖಬೆಲೆ ರೂ.10/-)	1,358.40	1,300.00	1,358.40	1,300.00	1,358.40	1,300.00	1,358.40	1,300.00
7	ಮೀಸಲು ನಿಧಿಗಳು			34,344.76	27,324.96			35,954.07	28,815.23
8	ಪ್ರತಿ ಷೇರಿನ ಆದಾಯ (ಪ್ರತಿ ರೂ.10/- ಮುಖಬೆಲೆಯ ಷೇರಿಗೆ) (ವಾರ್ಷಿಕರಿಸದ) - ಮೂಲ ಮತ್ತು ಕ್ಷೀಣೀಕೃತ	3.22	3.88	9.98	10.65	4.28	6.03	10.81	18.94

ಟಿಪ್ಪಣಿಗಳು:

(i) ಮೇಲಿನದು, ಸೆಬಿ (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವ ಅವಶ್ಯಕತೆಗಳು) ನಿಯಮಾವಳಿ, 2015 ರ ನಿಯಮ 33 ಅಡಿಯಲ್ಲಿ ಷೇರುಪೇಟೆಗಳಿಗೆ ಸಲ್ಲಿಸಲಾದ 31 ಮಾರ್ಚ್ 2026 ರಂದು ಅಂತ್ಯಗೊಂಡ ತ್ರೈಮಾಸಿಕ ಮತ್ತು ವರ್ಷದ ಹಣಕಾಸು ಫಲಿತಾಂಶಗಳ ವಿವರವಾದ ನಮೂನೆಯ ಸಂಕ್ಷಿಪ್ತ ಭಾಗವಾಗಿದೆ. ತ್ರೈಮಾಸಿಕ ಹಣಕಾಸು ಫಲಿತಾಂಶಗಳ ಸಂಪೂರ್ಣ ನಮೂನೆ ಷೇರುಪೇಟೆಗಳ ವೆಬ್‌ಸೈಟ್‌ಗಳಾದ www.bseindia.com, www.nseindia.com ಹಾಗೂ ಕಂಪನಿಯ ವೆಬ್‌ಸೈಟ್ www.yukenindia.com ನಲ್ಲಿ ಲಭ್ಯವಿದೆ.

(ii) ಕಂಪನಿಯ ಮೇಲ್ಕಂಡ ಲೆಕ್ಕಪರಿಶೋಧಿಸದ ಸ್ವತಂತ್ರ ಮತ್ತು ಏಕೀಕೃತ ಹಣಕಾಸು ಫಲಿತಾಂಶಗಳನ್ನು ಆಡಿಟ್ ಸಮಿತಿಯು ಪರಿಶೀಲಿಸಿದ್ದು, ನಿರ್ದೇಶಕರ ಮಂಡಳಿಯು 26 ಮೇ 2026 ರಂದು ನಡೆದ ಅವರ ಸಭೆಗಳಲ್ಲಿ ಅನುಮೋದಿಸಿದೆ. ಕಂಪನಿಯ ಕಾನೂನುಬದ್ಧ ಲೆಕ್ಕಪರಿಶೋಧಕರು ಮೇಲ್ಕಂಡ ಹಣಕಾಸು ಫಲಿತಾಂಶಗಳ ಸೀಮಿತ ಪರಿಶೀಲನೆಯನ್ನು ನಡೆಸಿದ್ದಾರೆ.

(iii) 31 ಮಾರ್ಚ್ 2026 ರಂದು ಅಂತ್ಯಗೊಂಡ ಹಣಕಾಸು ವರ್ಷದಿಗಾಗಿ ನಿರ್ದೇಶಕರ ಮಂಡಳಿಯು 15% ಅಂತಿಮ ಲಾಭಾಂಶವನ್ನು (ಪ್ರತಿ ಇಕ್ವಿಟಿ ಷೇರಿಗೆ ₹ 1.50) ಪಾವತಿಸಲು ಶಿಫಾರಸು ಮಾಡಿದೆ.

ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ

ಸ್ಥಳ : ಬೆಂಗಳೂರು
ದಿನಾಂಕ: 26.05.2026

ಮಂಡಳಿಯ ಆದೇಶದ ಪ್ರಕಾರ: ಸಿ.ಪಿ. ರಂಗಾಚಾರ್, ಮ್ಯಾನೇಜಿಂಗ್ ಡೈರೆಕ್ಟರ್

ಸ್ಥಾಪನೆ : 1907

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್

ಆಡಳಿತ ಕಚೇರಿ: # 3, ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ದೂ: 26678572 : 26600512 : 26609066: 9342781424, ಜನರಲ್ ಮ್ಯಾನೇಜರ್ : 26617980 : ಟೆಲಿ ಫ್ಯಾಕ್ಸ್ : (080) 26617980

ತಗಾದೆ ನೋಟಿಸ್

ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಮರುಸಂಗ್ರಹಣೆ ಮತ್ತು ಭದ್ರತಾ ಬಡ್ಡಿ ಕಾಯ್ದೆ 2002 ರ ಸೆಕ್ಷನ್ 13 (2) ರ ಅಡಿಯಲ್ಲಿ ಸೂಚನೆ
(ಇನ್ನು ಮುಂದೆ "ಆಕ್ಟ್" ಎಂದು ಕರೆಯಲಾಗುತ್ತದೆ).

01) ಸಾಲಗಾರರ ಹೆಸರು ಮತ್ತು ವಿಳಾಸ :- ... BBMP ವಾರ್ಡ್ ನಂ. 196 ... PID ನಂ.8916852395 ... ಪೂರ್ವದಿಂದ ಪಶ್ಚಿಮಕ್ಕೆ: 28 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 17 ಅಡಿ ... ಸಾಲ ಸೌಲಭ್ಯಗಳು: ರೂ. 21,00,000/- ರ ದೀರ್ಘಾವಧಿ ಸಾಲ. ಖಾತೆ ಸಂಖ್ಯೆ :- LTL-EMI-00247 ಸಾಲ ನೀಡಿದ ದಿನಾಂಕ :- 04.03.2025 ಬಾಕಿ ಸಾಲದ ಮೊತ್ತ - ರೂ. 21,56,730/- ... ದಿನಾಂಕ 06.05.2026 ರಂತೆ ... ಎನ್‌ಪಿಎ ದಿನಾಂಕ:-01.04.2026 ತಗಾದೆ ಸೂಚನೆ ದಿನಾಂಕ:-06.05.2026 ಶಾಖೆ: ಶಾಂತಿನಗರ

02) ಸಾಲಗಾರರ ಹೆಸರು ಮತ್ತು ವಿಳಾಸ :- ... ಬೆಂಗಳೂರು-560047 ... ಪೂರ್ವದಿಂದ: 36.1 ಅಡಿ, ಪಶ್ಚಿಮಕ್ಕೆ: 34 ಅಡಿ ಮತ್ತು ಉತ್ತರಕ್ಕೆ: 20.30 ಅಡಿ ಮತ್ತು ದಕ್ಷಿಣಕ್ಕೆ: 17.5 ಅಡಿ ... ಸಾಲ ಸೌಲಭ್ಯಗಳು: ದೀರ್ಘಾವಧಿ ಸಾಲ ರೂ. 18,45,000/- & 20,00,000/- ಖಾತೆ ಸಂಖ್ಯೆ :-ಎಲ್‌ಟಿಎಲ್-100051 & LTL EMI-212 ಸಾಲ ನೀಡಿದ ದಿನಾಂಕ:- 06.07.2010 & 27.10.2023 ಬಾಕಿ ಇರುವ ಸಾಲದ ಮೊತ್ತ - ರೂ.21,45,726 /- ... ದಿನಾಂಕ 06.05.2026 ರಂತೆ ... ಎನ್‌ಪಿಎ ದಿನಾಂಕ :- 27.03.2026 ತಗಾದೆ ಸೂಚನೆ ದಿನಾಂಕ:- 06.05.2026 ಶಾಖೆ:- ಶಾಂತಿನಗರ

03) ಸಾಲಗಾರರ ಹೆಸರು ಮತ್ತು ವಿಳಾಸ :- ... ಬೆಂಗಳೂರು-560047 ... ಪೂರ್ವದಿಂದ ಪಶ್ಚಿಮಕ್ಕೆ: 20 ಅಡಿ & ಉತ್ತರದಿಂದ ದಕ್ಷಿಣಕ್ಕೆ: 25 ಅಡಿ ... ಸಾಲ ಸೌಲಭ್ಯಗಳು: ರೂ. 15,00,000/- ಮತ್ತು 2,20,000/- ರ ದೀರ್ಘಾವಧಿ ಸಾಲ ಖಾತೆ ಸಂಖ್ಯೆ : SLTL EMI- 0054009 ಸಾಲ ನೀಡಲಾದ ದಿನಾಂಕ :- 07.12.2024 & 24.11.2025 ಬಾಕಿ ಸಾಲದ ಮೊತ್ತ - ರೂ.17,07,355/- ... ದಿನಾಂಕ 06.05.2026 ರಂತೆ ... ಎನ್‌ಪಿಎ ದಿನಾಂಕ:-07.04.2026 ತಗಾದೆ ಸೂಚನೆ ದಿನಾಂಕ:-06.05.2026 ಶಾಖೆ: ಶಾಂತಿನಗರ

04) ಸಾಲಗಾರರ ಹೆಸರು ಮತ್ತು ವಿಳಾಸ :- ... ಬೆಂಗಳೂರು-32. ... ಪೂರ್ವದಿಂದ ಪಶ್ಚಿಮಕ್ಕೆ: 37 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 31 ಅಡಿ ... ಪೂರ್ವದಿಂದ ಪಶ್ಚಿಮಕ್ಕೆ: 53 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 32 ಅಡಿ ... ಸಾಲ ಸೌಲಭ್ಯಗಳು : ದೀರ್ಘಾವಧಿ ಸಾಲ ರೂ. 41,75,000/-, 62,00,000/- & 30,00,000/- ಖಾತೆ ಸಂಖ್ಯೆ :- LTL :-1170, LTL EMI :-228 & 234 ಸಾಲ ನೀಡಿದ ದಿನಾಂಕ:- 19.01.2015, 05.03.2020 & 16.04.2020 ಬಾಕಿ ಸಾಲದ ಮೊತ್ತ - ರೂ. 95,51,269/- ... ದಿನಾಂಕ 02.05.2026 ರಂತೆ ... ಎನ್‌ಪಿಎ ದಿನಾಂಕ:-05.04.2026 ತಗಾದೆ ಸೂಚನೆ ದಿನಾಂಕ:- 02.05.2026

05) ಸಾಲಗಾರರ ಹೆಸರು ಮತ್ತು ವಿಳಾಸ :- ... ಬೆಂಗಳೂರು-05. ... ಪೂರ್ವದಿಂದ ಪಶ್ಚಿಮಕ್ಕೆ: 37 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 17.5 ಅಡಿ ... ಒಟ್ಟು ಅಳತೆ:- 1035 ಚದರ ಅಡಿ ... ಸಾಲ ಸೌಲಭ್ಯಗಳು : ದೀರ್ಘಾವಧಿ ಸಾಲ ರೂ. 80,00,000/-, 53,00,000/-, 6,00,000/- & 9,00,000/- ಖಾತೆ ಸಂಖ್ಯೆ :- LTL EMI :- 126, 132, 230 & 231 ಸಾಲ ನೀಡಿದ ದಿನಾಂಕ :- 01.08.2017, 31.08.2017, 12.03.2020 & 12.03.2020 ಬಾಕಿ ಸಾಲದ ಮೊತ್ತ - ರೂ. 1,19,34,486/- ... ದಿನಾಂಕ 02.05.2026 ರಂತೆ ... ಎನ್‌ಪಿಎ ದಿನಾಂಕ :- 01.04.2026 ತಗಾದೆ ಸೂಚನೆ ದಿನಾಂಕ:- 02.05.2026

06) ಸಾಲಗಾರರ ಹೆಸರು ಮತ್ತು ವಿಳಾಸ :- ... ಬೆಂಗಳೂರು-78. ... ಪೂರ್ವದಿಂದ ಪಶ್ಚಿಮಕ್ಕೆ: 22.5 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 30 ಅಡಿ ... ಸಾಲ ಸೌಲಭ್ಯಗಳು: ರೂ. 15,00,000/- ಮತ್ತು 6,00,000/- ರ ದೀರ್ಘಾವಧಿ ಸಾಲ. ಖಾತೆ ಸಂಖ್ಯೆ :- LTL EMI :- 97 & 124 ಸಾಲ ನೀಡಿದ ದಿನಾಂಕ:- 13.08.2021 & 30.03.2023 ಬಾಕಿ ಸಾಲದ ಮೊತ್ತ - ರೂ. 18,84,873/- ... ದಿನಾಂಕ 04.05.2026 ರಂತೆ ... ಎನ್‌ಪಿಎ ದಿನಾಂಕ :- 01.04.2026 ತಗಾದೆ ಸೂಚನೆ ದಿನಾಂಕ:- 04.05.2026

07) ಸಾಲಗಾರರ ಹೆಸರು ಮತ್ತು ವಿಳಾಸ :- ... ಬೆಂಗಳೂರು-50. ... ಒಟ್ಟು ಅಳತೆ: 1760 ಚದರ ಅಡಿ ... ಸಾಲ ಸೌಲಭ್ಯಗಳು: ದೀರ್ಘಾವಧಿ ಸಾಲ ರೂ. 20,00,000/- & 15,00,000/- ಖಾತೆ ಸಂಖ್ಯೆ :- LTC(EMI):000002 & LTL(EMI):000141 ಸಾಲ ನೀಡಿದ ದಿನಾಂಕ:- 06.01.2016 & 01.02.2019 ಬಾಕಿ ಸಾಲದ ಮೊತ್ತ - ರೂ. 29,77,891/- ... 17.04.2026 ರಂತೆ ... ಎನ್‌ಪಿಎ ದಿನಾಂಕ :- 01.03.2026 ತಗಾದೆ ಸೂಚನೆ ದಿನಾಂಕ:- 17.04.2026

08) ಸಾಲಗಾರರ ಹೆಸರು ಮತ್ತು ವಿಳಾಸ :- ... ರಾಮನಗರ-562159. ... ಪೂರ್ವದಿಂದ ಪಶ್ಚಿಮಕ್ಕೆ: 60 ಅಡಿ ಮತ್ತು ಉತ್ತರದಿಂದ ದಕ್ಷಿಣಕ್ಕೆ: 40 ಅಡಿ. ... ಸಾಲ ಸೌಲಭ್ಯಗಳು: ರೂ. 12,00,000/- ರ ದೀರ್ಘಾವಧಿ ಸಾಲ. ಖಾತೆ ಸಂಖ್ಯೆ :- LTL:000126 ಸಾಲ ನೀಡಿದ ದಿನಾಂಕ:- 21.03.2016 ಬಾಕಿ ಸಾಲದ ಮೊತ್ತ - ರೂ. 3,86,009/- ... ದಿನಾಂಕ 27.04.2026 ರಂತೆ ... ಎನ್‌ಪಿಎ ದಿನಾಂಕ :- 11.04.2026 ತಗಾದೆ ಸೂಚನೆ ದಿನಾಂಕ:- 27.04.2026 ಶಾಖೆ: ರಾಮನಗರ ಶಾಖೆ

09) ಸಾಲಗಾರರ ಹೆಸರು ಮತ್ತು ವಿಳಾಸ :- ... ರಾಮನಗರ-562159 ... ಸಂ.152900401202100006 ... BDALNSR(RA)14/91-92, dtd. 27.05.1992 ... ಒಟ್ಟು ಅಳತೆ: 23787.5 ಚದರ ಅಡಿ. ... ಸಾಲ ಸೌಲಭ್ಯಗಳು: ದೀರ್ಘಾವಧಿ ಸಾಲ ರೂ. 23,25,000/- ಖಾತೆ ಸಂಖ್ಯೆ :- LTL (EMI):000032 ಸಾಲ ನೀಡಿದ ದಿನಾಂಕ :- 11.05.2022 ಬಾಕಿ ಸಾಲದ ಮೊತ್ತ - ರೂ. 18,83,853/- ... ದಿನಾಂಕ 27.04.2026 ರಂತೆ ... ಎನ್‌ಪಿಎ ದಿನಾಂಕ :- 11.04.2026 ತಗಾದೆ ಸೂಚನೆ ದಿನಾಂಕ:- 27.04.2026 ಶಾಖೆ: ರಾಮನಗರ ಶಾಖೆ

ಸೂಚನೆ ನೀಡಿದ ದಿನಾಂಕದಿಂದ 60 ದಿನಗಳ ಒಳಗೆ ... ಸೆಕ್ಷನ್ 13 ರ ಉಪವಿಭಾಗ (4) ರ ಅಡಿಯಲ್ಲಿ ... ಸೆಕ್ಷನ್ 13 ರ ಉಪವಿಭಾಗ (2) ರ ಪ್ರಕಾರ ... ಸೆಕ್ಷನ್ 13 ರ ಉಪ-ವಿಭಾಗ (8) ರ ...

ದಿನಾಂಕ: 26.05.2026
ಸ್ಥಳ : ಬೆಂಗಳೂರು

ಸಹಿ/- ಅಧಿಕೃತ ಅಧಿಕಾರಿ
ದಿ ಬೆಂಗಳೂರು ಸಿಟಿ ಕೋ- ಆಪರೇಟಿವ್ ಬ್ಯಾಂಕ್ ಲಿ.

ಮಾದಕವಸ್ತು ಜಾಲ ವಿರುದ್ಧ ಪೊಲೀಸ್ ಕಾರ್ಯಾಚರಣೆ

2.40 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ



• **ಬೆಂಗಳೂರು:** ಮಾದಕ ವಸ್ತುಗಳ ಜಾಲದ ವಿರುದ್ಧ ಸಮರ ಸಾರಿರುವ ಸಿಸಿಬಿಯ ಮಾದಕ ವಸ್ತು ನಿಗ್ರಹ ದಳ ಮತ್ತು ಜೀವನ ಭೀಮಾನಗರ ಪೊಲೀಸರು ಜಂಟಿಯಾಗಿ ಕಾರ್ಯಾಚರಣೆ ನಡೆಸಿ, ಸುಮಾರು 2.40 ಕೋಟಿ ರೂ. ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ.

ವಿದೇಶದಿಂದ ಅಂಚೆ ಮೂಲಕ ತರಿಸಲಾಗಿದ್ದ ಹೈಡ್ರೋ ಗಾಂಜಾ ಹಾಗೂ ಕಾರಿನಲ್ಲಿ ಸಾಗಿಸುತ್ತಿದ್ದ ಎಂಡಿಎಂಎ ಸೇರಿದಂತೆ ನಿಷೇಧಿತ ಮಾದಕ ವಸ್ತುಗಳನ್ನು ವಶಪಡಿಸಿಕೊಂಡಿದ್ದು, ಹೊರರಾಜ್ಯದ ಇಬ್ಬರು ಪೆಡ್ಲರ್‌ಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಇಂಟರ್‌ನ್ಯಾಷನಲ್ ಪೋಸ್ಟ್ ಆಫೀಸ್ ಮೇಲೆ ಸಿಸಿಬಿ ರೈಡ್: ಮೇ 21 ರಂದು ಕೆಂಪೇಗೌಡ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿರುವ ಅಂತಾರಾಷ್ಟ್ರೀಯ ಅಂಚೆ ಕಚೇರಿಗೆ ವಿದೇಶದಿಂದ ಬಂದಿದ್ದ ಮೂರು ಅನುಮಾನಾಸ್ಪದ ಬಾಕ್ಸ್‌ಗಳಲ್ಲಿ ಮಾದಕ ವಸ್ತು ಇರುವ ಬಗ್ಗೆ ಕಸ್ಟಮ್ಸ್ ಅಧಿಕಾರಿಗಳು ಸಿಸಿಬಿ ಪೊಲೀಸರಿಗೆ ಖಚಿತ ಮಾಹಿತಿ ನೀಡಿದ್ದರು. ಅಂಚೆ ಕಚೇರಿ ಮೇಲೆ ದಾಳಿ ನಡೆಸಿ, ಬಾಕ್ಸ್‌ಗಳನ್ನು ಪರಿಶೀಲಿಸಿದಾಗ ಅದರಲ್ಲಿ ವಿದೇಶದಿಂದ ಕಳ್ಳಮಾರ್ಗದಲ್ಲಿ ತರಿಸಲಾಗಿದ್ದ 3.312 ಕೆ.ಜಿ. ಹೈಡ್ರೋ ಗಾಂಜಾ ಪತ್ತೆಯಾಗಿದೆ. ಜಪ್ತಿಮಾಡಲಾದ ಹೈಡ್ರೋ ಗಾಂಜಾದ ಮೌಲ್ಯ 1.16 ಕೋಟಿ ರೂ. ಆಗಿದೆ. ಈ ಜಾಲದ ಹಿನ್ನೆಲೆಯಲ್ಲಿ ಕೆಂಪೇಗೌಡ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ, ಡ್ರಗ್ಸ್ ಬುಕ್ ಮಾಡಿದ್ದ ಕಿಂಗ್‌ಪಿನ್‌ಗಳ ಪತ್ತೆಗೆ ತನಿಖೆ ಚುರುಕುಗೊಳಿಸಲಾಗಿದೆ.

ಡ್ರಗ್ಸ್ ಮಾರಾಟ: ಬಂಧನ

ಮೇ 22 ರಂದು ಜೀವನ ಭೀಮಾನಗರದ ಟನಲ್ ರಸ್ತೆಯಲ್ಲಿ ಕೇರಳ ನೋಂದಣಿಯ ಕಾರಿನಲ್ಲಿ ನಿಷೇಧಿತ ಡ್ರಗ್ಸ್ ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ಸ್ಥಳಕ್ಕೆ ಧಾವಿಸಿದ ಜೀವನ ಭೀಮಾನಗರ ಪೊಲೀಸರು, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ದಾಳಿ ನಡೆಸಿದ್ದಾರೆ. ಈ ವೇಳೆ ಹೊರರಾಜ್ಯದ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಅವರಿಂದ 27 ಗ್ರಾಂ ಎಂಡಿಎಂಎ ಕ್ರಿಸ್ಟಲ್ಸ್, 1.272 ಕೆ.ಜಿ. ಗಾಂಜಾ ಹಾಗೂ ಕೃತ್ಯಕ್ಕೆ ಬಳಸಿದ್ದ ಕಾರನ್ನು ವಶಕ್ಕೆ ಪಡೆಯಲಾಗಿದೆ. ಒಟ್ಟು 4 ಲಕ್ಷ ರೂ. ಮೌಲ್ಯದ ಮಾದಕ ವಸ್ತುವನ್ನು ಜಪ್ತಿ ಮಾಡಿದ್ದಾರೆ.

ರೈತರೊಂದಿಗೆ ಸಂವಾದ

• **ಬೆಂಗಳೂರು:** ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಬಿಡದಿ ಟೌನ್‌ಶಿಪ್ ಭೂಸ್ವಾಧೀನ ವಿರೋಧಿಸಿ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಬುಧವಾರ ಮಾಗಡಿ ಕ್ಷೇತ್ರದ 26 ಗ್ರಾಮಗಳ ರೈತರೊಂದಿಗೆ ಸಂವಾದ ನಡೆಸಲಿದ್ದಾರೆ.

» **ಬಿಡದಿ ಟೌನ್‌ಶಿಪ್‌ಗೆ ಭೂಸ್ವಾಧೀನ ಕುರಿತು 26 ಗ್ರಾಮಗಳ ಭೂ ಮಾಲೀಕರೊಂದಿಗೆ ಜೆಡಿಎಸ್‌ನಿಂದ ಸಂವಾದ**

» **ಕಾಂಗ್ರೆಸ್ ಸರ್ಕಾರದ ರೈತವಿರೋಧಿ ಧೋರಣೆಗೆ ವ್ಯಾಪಕ ಖಂಡನೆ**

ಬೈರ ಮಂಗಲದಿಂದ ಆರಂಭಗೊಂಡು 5 ಕೇಂದ್ರಗಳಲ್ಲಿ ನಡೆಯುವ ಈ ಸಂವಾದ ದಲ್ಲಿ ರೈತರ ಜೊತೆ ಮಾಜಿ ಶಾಸಕ ಎ.ಮಂಜುನಾಥ್ ಅವರೊಂದಿಗೆ ಬೈರಮಂಗಲ, ಕಂಚುಗಾರನ ಹಳ್ಳಿ, ಅರಳಾಳುಸಂದ್ರ, ಹೊಸೂರು, ಬನ್ನಿಗಿರಿ ಸೇರಿದಂತೆ ಇತರ ಗ್ರಾಮಗಳಿಗೆ ನಿಖಿಲ್ ಕುಮಾರಸ್ವಾಮಿ ಅವರು ಭೇಟಿ ನೀಡಲಿದ್ದಾರೆ. 9,600 ಎಕರೆ ಫಲವತ್ತಾದ ಭೂಮಿ ಸ್ವಾಧೀನ, 10 ಲಕ್ಷಕ್ಕೂ ಹೆಚ್ಚು ಮರ ಕಡಿತ, ತಿಂಗಳಿಗೆ 6 ಲಕ್ಷ ಲೀಟರ್ ಹಾಲು ಉತ್ಪಾದನೆಗೆ ಹೊಡೆತ ತರುವ ಈ ಯೋಜನೆ ಇದು ಅಭಿವೃದ್ಧಿಯಲ್ಲ, ವಿನಾಶ. ರೈತರ ಕಷ್ಟ-ಸುಖ ಆಲಿಸಿ ವಾಸ್ತವ ಸ್ಥಿತಿ ಏನೆಂದು ತೋರಿಸಲು ಈ ಗ್ರಾಮ ಭೇಟಿ ಹಮ್ಮಿಕೊಳ್ಳಲಾಗಿದೆ ಎಂದು ನಿಖಿಲ್ ಕುಮಾರಸ್ವಾಮಿ ತಿಳಿಸಿದ್ದಾರೆ.

ಮಳೆಯ ನಡುವೆ



ಮಂಗಳವಾರ ಸಂಜೆ ನಗರದಲ್ಲಿ ಸುರಿದ ಮಳೆಯಿಂದಾಗಿ ಮಹಿಳೆಯರು ಕೊಡೆ ರಕ್ಷಣೆಯಲ್ಲಿ ಸಾಗಿದರು.

ಕಿರುಸುದ್ದಿ

ಕಾಮಗಾರಿ: ರೈಲು ಸಂಚಾರದಲ್ಲಿ ವ್ಯತ್ಯಯ



• **ಬೆಂಗಳೂರು:** ಪುಣೆ ವಿಭಾಗದ ದೌಂಡ್-ಮನ್ಮಾಡ್ ರೈಲು ಮಾರ್ಗದ ವಿಸಾಪುರ-ರಂಜನ್‌ಗಾಂವ್ ರೋಡ್-ಸರೋಲಾ ನಿಲ್ದಾಣಗಳ ನಡುವೆ ಹಳಿ ದ್ವಿಗುಣಗೊಳಿಸುವ ಕಾಮಗಾರಿ ಸಲುವಾಗಿ, ಮಧ್ಯ ರೈಲ್ವೆಯು ಕೆಲ ರೈಲು ಸೇವೆಗಳ ಮಾರ್ಗ ಬದಲಾವಣೆ ಮತ್ತು ನಿಯಂತ್ರಿಸಲಾಗುತ್ತಿದೆ ಎಂದು ಸೂಚಿಸಿದೆ.

ಮೇ 27 ಮತ್ತು 29ರಂದು ಕೆಎಸ್‌ಆರ್ ಬೆಂಗಳೂರಿನಿಂದ ಹೊರಡುವ ರೈಲು ಸಂಖ್ಯೆ 12627 ಕೆಎಸ್‌ಆರ್ ಬೆಂಗಳೂರು – ಹೊಸದಿಲ್ಲಿ ಕರ್ನಾಟಕ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು ಸೋಲಾಪುರ, ಕುರ್ದುವಾಡಿ, ಲಾತೂರ್ ರೋಡ್, ಪರ್ಭಣಿ, ಅಂಕೈ ಮತ್ತು ಮನ್ಮಾಡ್ ಮಾರ್ಗವಾಗಿ ಸಂಚರಿಸಲಿದೆ. ಮೇ 27ರಂದು ಯಶವಂತಪುರದಿಂದ ಹೊರಡುವ ರೈಲು ಸಂಖ್ಯೆ 22685 ಯಶವಂತಪುರ – ಚಂಡೀಗಢ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ಪುಣೆ, ಲೋಣಾವಲಾ, ಕರ್ಜತ್, ಪನ್ವೇಲ್, ಕಲ್ಯಾಣ, ನಾಸಿಕ್ ರೋಡ್ ಮತ್ತು ಮನ್ಮಾಡ್ ಮಾರ್ಗವಾಗಿ ಸಂಚರಿಸಲಿದೆ.

ಮೇ 29 ರಂದು ಎಸ್‌ಎಸ್‌ಎಸ್ ಹುಬ್ಬಳ್ಳಿಯಿಂದ ಹೊರಡುವ ರೈಲು ಸಂಖ್ಯೆ 20657 ಎಸ್‌ಎಸ್‌ಎಸ್ ಹುಬ್ಬಳ್ಳಿ-ಹಜರತ್ ನಿಜಾಮುದ್ದೀನ್ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ಸೋಲಾಪುರ, ಕುರ್ದುವಾಡಿ, ಲಾತೂರ್ ರೋಡ್, ಪರ್ಭಣಿ, ಛತ್ರಪತಿ ಸಂಭಾಜಿನಗರ ಮತ್ತು ಮನ್ಮಾಡ್ ಮಾರ್ಗವಾಗಿ ಸಂಚರಿಸಲಿದೆ.

ಬಿಎಂಟಿಸಿ ಡಿಪೋ ಕಚೇರಿ ಸ್ಥಳಾಂತರ

• **ಬೆಂಗಳೂರು:** ಚಂದಾಪುರ ಆರ್‌ಟಿಒ ಕಚೇರಿಯು ಮೇ 29ರಿಂದ ಹುಸ್ಕೂರು ರಸ್ತೆಯ ಬಿಎಂಟಿಸಿ ಡಿಪೋ ಹತ್ತಿರದಲ್ಲಿ ನಿರ್ಮಿಸಲಾಗಿರುವ ನೂತನ ಕಟ್ಟಡಕ್ಕೆ ಸ್ಥಳಾಂತರಿಸಲಾಗಿದೆ.

ಚಂದಾಪುರದಲ್ಲಿನ ಪ್ರಾದೇಶಿಕ ಸಾರಿಗೆ ಅಧಿಕಾರಿ ಹಾಗೂ ಹೆಚ್ಚುವರಿ ಕಾರ್ಯದರ್ಶಿ, ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಕಚೇರಿಯನ್ನು ಮೇ 29 ರಿಂದ ಸರ್ವೇ ನಂ.29 ಚಿಕ್ಕನಾಗಮಂಗಲ, ಹುಸ್ಕೂರು ರಸ್ತೆಯ ಬಿಎಂಟಿಸಿ ಡಿಪೋ ಹತ್ತಿರದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಕಟ್ಟಡದ ವಿಳಾಸಕ್ಕೆ ಸ್ಥಳಾಂತರಿಸಲಾಗಿದೆ. ಆದರಿಂದ ಸಾರ್ವಜನಿಕರು ಇಲಾಖೆಗೆ ಸಂಬಂಧಪಟ್ಟ ಕೆಲಸಕಾರ್ಯಗಳಿಗೆ ಹೊಸ್ಕೂರಿಗೆ ಭೇಟಿ ನೀಡಬೇಕು.

ಜಾಹೀರಾತು ಏಜೆನ್ಸಿಗಳಿಂದ ಬಿಎಂಟಿಸಿ ಟೆಂಡರ್ ಆಹ್ವಾನ | ಆದಾಯ ಹೆಚ್ಚಳಕ್ಕೆ ವಿನೂತನ ಕ್ರಮ

ಟಿಕೆಟ್ ಹಿಂಭಾಗದಲ್ಲೂ ಜಾಹೀರಾತು

▸ **ಅನುಪಾ ನಾಯಕ್**

• **ಬೆಂಗಳೂರು:** ನಗರವಾಸಿಗಳ ಜೀವನಾಡಿಯಾಗಿ ರುವ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಬಸ್‌ನಲ್ಲಿ ಅನುದಿನವೂ ಪ್ರಯಾಣಿಸುವ ಲಕ್ಷಾಂತರ ಪ್ರಯಾಣಿಕರಿಗೆ ನೀಡಲಾಗುವ ಟಿಕೆಟ್‌ನಿಂದ ಹೆಚ್ಚುವರಿ ಆದಾಯಗಳಿಸಲು ಬಿಎಂಟಿಸಿ ಮುಂದಾಗಿದೆ.



ಈಗಾಗಲೇ ಬಿಎಂಟಿಸಿಯು ಪ್ರಯಾಣಿಕರ ಟಿಕೆಟ್ ಮೊತ್ತದ ಮೂಲ ಆದಾಯ ಹೊರತುಪಡಿಸಿ, ತಂಗುದಾಣದಲ್ಲಿನ ಮಳಿಗೆ ಬಾಡಿಗೆ, ಬಸ್‌ಗಳ ಹೊರಭಾಗ, ತಂಗುದಾಣ ಮುಂತಾದ ಕಡೆಗಳಲ್ಲಿ ಜಾಹೀರಾತುಗಳನ್ನು ಹಾಕಿ ಹೆಚ್ಚುವರಿಯಾಗಿ ಕೋಟ್ಯಂತರ ರೂ. ಆದಾಯಗಳಿಸುತ್ತಿದೆ.

ಇದರೊಂದಿಗೆ ಮುಂದಿನ ದಿನದಲ್ಲಿ ಟಿಕೆಟ್‌ನ ಹಿಂಭಾಗದಲ್ಲಿ ಜಾಹೀರಾತನ್ನು ಹಾಕಲು ಜಾಹೀರಾತು ಸಂಸ್ಥೆಗಳಿಂದ ಟೆಂಡರ್ ಆಹ್ವಾನಿಸಿದೆ. ಇದರಿಂದ ಇನ್ನು ಮುಂದೆ ಬಿಎಂಟಿಸಿಗೆ ಟಿಕೆಟ್ ಮೊತ್ತದೊಂದಿಗೆ ಅದರ ಹಿಂಭಾಗದಲ್ಲಿನ ಜಾಹೀರಾತಿನಿಂದಲೂ ಹೆಚ್ಚುವರಿ ಆದಾಯ ಬರಲಿದೆ.

ಒಂದು ವರ್ಷದ ಒಪ್ಪಂದ: ಆಯ್ಕೆಯಾದ ಜಾಹೀರಾತು ಸಂಸ್ಥೆಯು ಬಿಎಂಟಿಸಿಯ ಇಟಿಎಂ ರೋಲ್ ಪೂರೈಕೆದಾರರ ಮೂಲಕ ಬಿಎಂಟಿಸಿ ಟಿಕೆಟ್‌ಗಳ ಹಿಂಭಾಗದಲ್ಲಿ ಮುದ್ರಿಸಲಾಗುವ ಜಾಹೀರಾತು ಕಲಾಕೃತಿಯನ್ನು ಒದಗಿಸುವ ಹಕ್ಕುಗಳನ್ನು ಹೊಂದಿರುತ್ತದೆ. ಒಪ್ಪಂದದ ಅವಧಿಯು ಆರಂಭದಲ್ಲಿ ಒಂದು ವರ್ಷದ್ದಾಗಿದೆ. ಕಾರ್ಯ ಕ್ಷಮತೆಯ ಆಧಾರದ ಮೇಲೆ ಇನ್ನೊಂದು ವರ್ಷ ವಿಸ್ತರಿಸಬಹುದು ಎಂದು ಹಿರಿಯ ಅಧಿಕಾರಿ ಮಾಹಿತಿ ನೀಡಿದ್ದಾರೆ.

ಜಾಹೀರಾತುಗಳಿಗೆ ಕೆಲ ನಿರ್ಬಂಧ: ಟಿಕೆಟ್‌ಗಳಲ್ಲಿ ಕಾಣಿಸಿಕೊಳ್ಳಬಹುದಾದ ಜಾಹೀರಾತುಗಳ ಸ್ವರೂಪದ ಮೇಲೆ ನಿಗಮ ಹಲವಾರು ನಿರ್ಬಂಧ ವನ್ನು ವಿಧಿಸಿದೆ. ತಂಬಾಕು, ಮದ್ಯ, ಮಾದಕ ದ್ರವ್ಯ, ಅಶ್ಲೀಲ ವಸ್ತುಗಳಿಗೆ ಸಂಬಂಧಿಸಿದ ಜಾಹೀರಾತುಗಳನ್ನು ನಿಷೇಧಿಸಲಾಗಿದೆ. ಆಕ್ಷೇಪಾರ್ಹ ಅಥವಾ ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವೆಂದು ಪರಿಗಣಿಸ ಲಾದ ಯಾವುದೇ ಜಾಹೀರಾತನ್ನು ತಿರಸ್ಕರಿಸುವ ಹಕ್ಕನ್ನು ಬಿಎಂಟಿಸಿ ಕಾಯ್ದಿರಿಸಿದೆ. ಬಿಎಂಟಿಸಿ ತನ್ನ ಸ್ವಂತ ಜಾಹೀರಾತುಗಳು ಅಥವಾ ಸರ್ಕಾರಿ ಪ್ರಚಾರಗಳಿಗಾಗಿ ಟಿಕೆಟ್ ಪಟ್ಟಿಗಳಲ್ಲಿ ಶೇ.10ರಷ್ಟು ಕಾಯ್ದಿರಿಸಿದೆ.



> ಇದೇ ಮೊದಲ ಬಾರಿಗೆ ಟಿಕೆಟ್ ಹಿಂಭಾಗದಲ್ಲಿ ಜಾಹೀರಾತನ್ನು ಹಾಕಲು ಮಂಡಳಿ ಒಪ್ಪಿಗೆ ನೀಡಿದೆ. ಇದರಿಂದ ಬಿಎಂಟಿಸಿಯ ಆದಾಯ ಹೆಚ್ಚಾಗುತ್ತದೆ. ಪ್ರಸ್ತುತ ಟಿಕೆಟ್ ಜಾಹೀರಾತಿನಿಂದ ಹೆಚ್ಚುವರಿಯಾಗಿ ಎಷ್ಟು ಆದಾಯ ಬರಬಹುದೆಂದು ಹೇಳಲು ಸಾಧ್ಯವಿಲ್ಲ. ಟೆಂಡರ್ ಬಂದ ನಂತರದದಲ್ಲಿ ಸರಿಯಾಗಿ ಹೇಳಬಹುದು.
>
> ■ **ರಾಮಲಿಂಗಾರೆಡ್ಡಿ**, ಸಾರಿಗೆ ಸಚಿವ



ವಾರ್ಷಿಕ ₹57.48 ಕೋಟಿ ಆದಾಯ

ಪ್ರತಿನಿತ್ಯ 50 ಘಟಕಗಳಿಂದ ಸುಮಾರು 13.06 ಲಕ್ಷ ಕಿ.ಮೀ.ಗಳವರೆಗೆ 6,275 ಕ್ಕೂ ಹೆಚ್ಚಿನ ಬಸ್‌ಗಳಲ್ಲಿ ಸರಾಸರಿ 45 ಲಕ್ಷ ಪ್ರಯಾಣಿಕರು ವಿವಿಧ ಕಡೆಗಳಿಗೆ ಪ್ರಯಾಣ ಬೆಳೆಸುತ್ತಾರೆ. ಇದರಿಂದ ಸರಾಸರಿ 9,562.89 ಲಕ್ಷ ರೂ.ತಿಂಗಳಿಗೆ ಆದಾಯಗಳಿಸುತ್ತಿದೆ. ಬಿಎಂಟಿಸಿ ಬಸ್‌ಗಳಲ್ಲಿ ಪ್ರದರ್ಶಿಸಲಾಗುವ ಜಾಹೀರಾತುಗಳಿಂದ ಪ್ರತಿ ತಿಂಗಳು ಸುಮಾರು 4.79 ಕೋಟಿ ರೂ.ಗಳಿಸುತ್ತಿದ್ದು, ವಾರ್ಷಿಕ ಸುಮಾರು 57.48 ಕೋಟಿ ರೂ. ಆದಾಯಗಳಿಸುತ್ತದೆ.

ಟಿಕೆಟ್ ಮಾದರಿ ಬದಲಾವಣೆ ಇಲ್ಲ

ಟಿಕೆಟ್ ಹಿಂಭಾಗದಲ್ಲಿ ಜಾಹೀರಾತು ಹಾಕುವ ಸಲುವಾಗಿ ಟೆಂಡರ್ ಕರೆದಿದ್ದೇವೆ. ಪ್ರತಿ ರೋಲ್‌ಗೆ ಇಂತಿಷ್ಟು ಮೊತ್ತ ನಿಗದಿ ಮಾಡಲಾಗುತ್ತದೆ. ಸುಮಾರು 15 ಮೀ.ಉದ್ದವಿರುವ ಒಂದು ರೋಲ್‌ನಲ್ಲಿ ಸುಮಾರು ನೂರು ಟಿಕೆಟ್ ಬರುತ್ತದೆ. ಇದಕ್ಕೆ ಅಂದಾಜು 8 ರೂ. ಖರ್ಚು ಆಗುತ್ತದೆ. ಈಗಿರುವ ಟಿಕೆಟ್ ಮಾದರಿಯಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದು ಹಿರಿಯ ಅಧಿಕಾರಿ ಹೇಳಿದರು.

ಖಾಸಗಿ ಸಂಸ್ಥೆಗಳಿಗೆ ವಿದ್ಯುತ್ ವಿತರಣೆಗೆ ಅವಕಾಶ: ಖಂಡನೆ

• **ಬೆಂಗಳೂರು:** ರಾಜ್ಯದ ವಿದ್ಯುತ್ ಸರಬರಾಜು ಕಂಪನಿಗಳಾದ ಬೆಸ್ಕಾಂ, ಸೆಸ್ಕಾಂ, ಹೆಸ್ಕಾಂ, ಜೆಸ್ಕಾಂ ಹಾಗೂ ಮೆಸ್ಕಾಂನಂತಹ ಸಂಸ್ಥೆ ಇರುವಾಗ ಖಾಸಗಿ ಸಂಸ್ಥೆಗೆ ವಿದ್ಯುತ್ ವಿತರಣೆ ಮಾಡಲು ಪರವಾನಗಿ ನೀಡುತ್ತಿರುವುದು ಖಂಡನೀಯವಾಗಿದೆ ಎಂದು ಕರ್ನಾಟಕ ವಿದ್ಯುತ್ ಮಂಡಳಿ ನೌಕರರ ಸಂಘಗಳ ಒಕ್ಕೂಟದ ಅಧ್ಯಕ್ಷ ಬಲರಾಮ್ ಕೆ. ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೆಸ್ಕಾಂ, ಸೆಸ್ಕಾಂ, ಹೆಸ್ಕಾಂ, ಜೆಸ್ಕಾಂ ಹಾಗೂ ಮೆಸ್ಕಾಂನಂತಹ ಸಂಸ್ಥೆಯ ವ್ಯಾಪ್ತಿಯಲ್ಲಿ 19 ಜಿಲ್ಲೆಗಳಲ್ಲಿ ವಿದ್ಯುತ್ ವಿತರಣಾ ಪರವಾನಗಿ ನೀಡುವಂತೆ ಕೋರಿ ದಿ ಟಾಟಾ ಪವರ್ ಕಂಪನಿ ಲಿಮಿಟೆಡ್ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಅರ್ಜಿಸಲ್ಲಿಸಿದೆ. ಈ ಅರ್ಜಿ ತಿರಸ್ಕರಿಸಬೇಕೆಂದು ಒತ್ತಾಯಿಸಿದರು.

ರಾಜ್ಯದ ಎಲ್ಲಾ ವಿದ್ಯುತ್ ಕಂಪನಿಗಳು ಈಗಾಗಲೇ ನುರಿತ ಸಿಬ್ಬಂದಿ, ಸಾವಿರಾರು ಕೋಟಿ ರೂ.ಮೌಲ್ಯದ ವಿತರಣಾ ಜಾಲ, ಉಪಕೇಂದ್ರ ಹಾಗೂ ಯಂತ್ರೋಪಕರಣಗಳ ಬೃಹತ್ ಮೂಲಸೌಕರ್ಯವನ್ನು ಹೊಂದಿದೆ. ಸಾರ್ವಜನಿಕ ತೆರಿಗೆ ಹಣದಿಂದ ನಿರ್ಮಾಣವಾದ ಸಾಮ್ರಾಜ್ಯವನ್ನು, ಲಾಭದ ಆಸೆಗೆ ಪರ ರಾಜ್ಯದ ಖಾಸಗಿ ಸಂಸ್ಥೆಗೆ ನಮ್ಮ ರಾಜ್ಯದ ವಿದ್ಯುತ್ ಕ್ಷೇತ್ರವನ್ನು ಹಸ್ತಾಂತರಿಸುವುದು ಖಂಡನೀಯವಾಗಿದೆ ಎಂದರು.

ಅನುವಾದಕರು ಎದುರಿಸುವ ಸವಾಲು ಕುರಿತು ವಿಶೇಷ ಉಪನ್ಯಾಸ

ಅನುವಾದಕರಿಗೆ ಭಾಷಾ ಪರಿಣತಿ ಇರಲಿ

• **ಬೆಂಗಳೂರು:** ವಿಜ್ಞಾನ ಅನುವಾದಿಸುವವರಿಗೆ ಕನ್ನಡ, ಇಂಗ್ಲಿಷ್ ಹಾಗೂ ವಿಜ್ಞಾನ ಮೇಲೆ ಪರಿಣತಿ ಹೊಂದಿರಬೇಕು ಎಂದು ಬರಹಗಾರ ಡಾ.ನಾ.ಸೋಮೇಶ್ವರ ಹೇಳಿದರು.

ಇನ್ಸ್ಟಿಟ್ಯೂಟ್ ಆಫ್ ಟ್ರಾನ್ಸಲೇಷನ್ ಸ್ಟಡೀಸ್ ಮಲ್ಲೇಶ್ವರ ವತಿಯಿಂದ ಮಂಗಳವಾರ ಗಾಂಧಿ ಸಾಹಿತ್ಯ ಸಂಘದ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾದ ಇಂದಿನ ಕಾಲಘಟ್ಟದಲ್ಲಿ ಅನುವಾದಕರು ಎದುರಿಸುವ ಸವಾಲುಗಳ ಕುರಿತ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿ, ಯಾವ ಓದುಗರಿಗಾಗಿ ಅನುವಾದಿಸುತ್ತಿದ್ದೇವೆ ಎಂಬುದನ್ನು ಅರಿತು, ಅದಕ್ಕೆ ತಕ್ಕಂತೆ ಭಾಷೆ ಬಳಕೆ ಮಾಡಬೇಕೆಂದರು.

ಅನುವಾದಕರು ಪಾರಿಭಾಷಿಕ ಪದ ಹಾಗೂ ಆಡು ಭಾಷೆ ಮೇಲೆ ಸಂಪೂರ್ಣ ಹಿಡಿತ ಹೊಂದಿರಬೇಕು.



ಜೊತೆಗೆ ಇಂಗ್ಲಿಷ್‌ನಿಂದ ನೇರವಾಗಿ ಕನ್ನಡಕ್ಕೆ ಭಾಷಾಂತರ ಮಾಡಿದರೆ ಅಭಾಸವಾಗಬಹುದು. ಆದರಿಂದ ಆಯಾ ಪದವನ್ನು ಯಾವ ರೀತಿಯಲ್ಲಿ ಉಚ್ಚರಿಸುತ್ತಾರೆ, ಅದನ್ನು ಯಾವ ಅರ್ಥದಲ್ಲಿ ಬಳಕೆ ಮಾಡುತ್ತಾರೆ ಎಂಬುದನ್ನು ಅರಿತು ಅನುವಾದಿಸಬೇಕು ಎಂದು ಸಲಹೆ ನೀಡಿದರು.

ಚಲನಚಿತ್ರ ನಿರ್ದೇಶಕ ಎನ್.ಎಸ್.ಶಂಕರ್ ಮಾತನಾಡಿ, ಅನುವಾದಕರಿಗೆ ಕನ್ನಡ ಹಾಗೂ ಇಂಗ್ಲಿಷ್ ಭಾಷೆಯ ನಡುವೆ ನಿಕಟ ಪರಿಚಯ ಇಲ್ಲದಿದ್ದರೆ ಅಭಾಸವಾಗುತ್ತದೆ. ಆದರಿಂದ ಅನುವಾದಕರು ಇಂಗ್ಲಿಷ್‌ನಿಂದ ಕನ್ನಡಕ್ಕೆ ಅನುವಾದ ಮಾಡುವಾಗ ಅದನ್ನು ನೇರವಾಗಿ ಅನುವಾದಿಸದೆ, ಅದನ್ನು ಅರ್ಥೈಸಿಕೊಂಡು ಅನುವಾದಿಸಬೇಕು ಎಂದು ಹೇಳಿದರು.

ಪ್ರಸ್ತುತ ನಾವು ತಂತ್ರಜ್ಞಾನವನ್ನು ನಿರಾಕರಣೆ ಮಾಡಲು ಸಾಧ್ಯವಿಲ್ಲ, ಕೃತಕ ಬುದ್ಧಿಮತ್ತೆಯು ಅನುವಾದಿಸಿರುದನ್ನು ಮೂಲ ಭಾಷೆಗಳಲ್ಲಿ ತಿಳಿಸಲಾದ ಭಾವನೆಯನ್ನು ಹೊಂದಿದೆಯಾ ಎಂಬುದನ್ನು ತಿಳಿಯಲು ಅನುವಾದಕರೇ ಅಗತ್ಯವಾಗಿದೆ ಎಂದು ಹೇಳಿದರು. ಈ ವೇಳೆ ಸಂಘದ ಅಧ್ಯಕ್ಷ ಬಿ.ಆರ್. ರವೀಂದ್ರನಾಥ್, ಕಾರ್ಯದರ್ಶಿ ಎನ್.ಎಸ್. ಶ್ರೀಧರಮೂರ್ತಿ ಮುಂತಾದವರಿದ್ದರು.

ಹೃದ್ರೋಗ ಚಿಕಿತ್ಸಾ ಕ್ಷೇತ್ರದಲ್ಲಿ ಮೈಲುಗಲ್ಲು: ಟಿಎವಿಐ ಯಶಸ್ವಿ

• **ಬೆಂಗಳೂರು :** ಹೃದ್ರೋಗ ಚಿಕಿತ್ಸಾ ಕ್ಷೇತ್ರದಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿರುವ ನಗರದ ಹೆಲ್ತ್ ಸಂಸ್ಥೆಯ ನಾರಾಯಣ ಹೆಲ್ತ್ ಸಿಟಿ, ಪ್ಯೂರ್ ನೇಟಿವ್ ಆಯೋರ್ಟಿಕ್ ವಾಲ್ವ್ ರಿಗರ್ಜಿಟೇಷನ್ ಕಾಯಿಲೆಗೆ ಟ್ರಾನ್ಸ್ ಕ್ಯಾತಿಟರ್ ಆಯೋರ್ಟಿಕ್ ವಾಲ್ವ್ ಇಂಪ್ಲಾಂಟೇಶನ್ (ಟಿಎವಿಐ) ಚಿಕಿತ್ಸೆಯನ್ನು ಯಶಸ್ವಿಯಾಗಿ ನೆರವೇರಿಸಿದೆ.

ಹಿರಿಯ ಕನ್ಸಲ್ಟೆಂಟ್ ಕಾರ್ಡಿಯಾಲಜಿಸ್ಟ್ ಹಾಗೂ ಸ್ಟ್ರಕ್ಚರಲ್ ಇಂಟರ್ವೆಂಷನ್ ಸ್ಪೆಷಲಿಸ್ಟ್ ಡಾ. ಸೂರಜ್ ನರಸಿಂಹ ನೇತೃತ್ವದಲ್ಲಿ ಈ ಅಪರೂಪದ ಚಿಕಿತ್ಸೆ ನಡೆದಿದ್ದು, ಮುಕ್ತ ಹೃದಯ ಶಸ್ತ್ರಚಿಕಿತ್ಸೆಗೆ ಒಳಪಡುವುದು ಅಪಾಯಕರವಾಗಿದ್ದ ಇಬ್ಬರು ರೋಗಿಗಳಿಗೆ ಯಶಸ್ವಿಯಾಗಿ ಚಿಕಿತ್ಸೆ ನೀಡಲಾಗಿದೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಡಾ. ಸೂರಜ್ ನರಸಿಂಹನ್, ತೀವ್ರ ಆಯೋರ್ಟಿಕ್ ರಿಗರ್ಜಿಟೇಷನ್ ಹೊಂದಿರುವ ಮತ್ತು ಶಸ್ತ್ರಚಿಕಿತ್ಸೆಗೆ ಯೋಗ್ಯವಲ್ಲದ ಹಿರಿಯ ರೋಗಿಗಳಿಗೆ ಇದುವರೆಗೆ ಆಯ್ಕೆಗಳು ತುಂಬಾ ಸೀಮಿತವಾಗಿದ್ದವು. ಈಗ ಈ ಹೊಸ ತಂತ್ರಜ್ಞಾನದಿಂದ ಕೇವಲ ಒಂದು ತಾಸೊಳಗೆ, ತೊಡೆಯಲ್ಲಿ ಸಣ್ಣ ರಂಧ್ರದ ಮೂಲಕ ಚಿಕಿತ್ಸೆ ಸಾಧ್ಯವಾಗಿದೆ. ರೋಗಿಗಳು 12 ತಾಸಲ್ಲೇ ನಡೆಯಲು ಆರಂಭಿಸುತ್ತಾರೆ. ಇದು ಇಂತಹ ರೋಗಿಗಳಿಗೆ ಮಹತ್ವದ ಬದಲಾವಣೆಯಾಗಿದೆ ಎಂದು ಹೇಳಿದರು.

ಟಿಎವಿಐ, ಟಿಎವಿಆರ್ ತಂತ್ರಜ್ಞಾನಗಳು ಮುಂದುವರಿದ ಹೃದಯ ಕವಾಟದ ಕಾಯಿಲೆಗಳ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ನಗರದ ನಾರಾಯಣ ಇನ್‌ಸ್ಟಿಟ್ಯೂಟ್ ಆಫ್ ಕಾರ್ಡಿಯಾಕ್ ಸೈನ್ಸಸ್ ಈಗಾಗಲೇ 750ಕ್ಕೂ ಹೆಚ್ಚು ಟಿಎವಿಐ, ಟಿಎವಿಆರ್ ಚಿಕಿತ್ಸೆಯನ್ನು ಯಶಸ್ವಿಯಾಗಿ ನಡೆಸಿ, ದೇಶದ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿ ಹೊರಹೊಮ್ಮಿದೆ. ಮುಂದಿನ ದಿನಗಳಲ್ಲಿ ಇಂತಹ ಚಿಕಿತ್ಸೆಗಳ ಬೇಡಿಕೆ ಮತ್ತಷ್ಟು ಹೆಚ್ಚುವ ನಿರೀಕ್ಷೆಯಿದೆ ಎಂದು ತಿಳಿಸಿದರು.

ಸರಣಿ ಕಳವು: ಅಂತಾರಾಜ್ಯ ಕಳ್ಳರ ಬಂಧನ

• **ಬೆಂಗಳೂರು:** ಸರಣಿ ಕಳ್ಳತನದ ಮೂಲಕ ಸಾರ್ವಜನಿಕರಲ್ಲಿ ಭೀತಿ ಮೂಡಿಸಿದ್ದ ಅಂತರರಾಜ್ಯ ಕಳ್ಳರ ಎರಡು ಪ್ರತ್ಯೇಕ ಗ್ಯಾಂಗ್‌ಗಳನ್ನು ಭೇದಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ವೈಟ್‌ಫೀಲ್ಡ್ ಹಾಗೂ ಬಾಗಲಗುಂಟೆ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ಬೃಹತ್ ಕಳವು ಪ್ರಕರಣಗಳ ತನಿಖೆ ನಡೆಸಿದ ಪೊಲೀಸರು, ಒಟ್ಟು 8 ಮಂದಿ ಆರೋಪಿಗಳನ್ನು ಬಂಧಿಸಿ, ಅವರಿಂದ ಒಟ್ಟು 2.14 ಕೋಟಿ ರೂ.ಗೂ ಅಧಿಕ ಮೌಲ್ಯದ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ವಶಪಡಿಸಿಕೊಂಡಿದ್ದಾರೆ.

ವೈಟ್‌ಫೀಲ್ಡ್ ಠಾಣಾ ವ್ಯಾಪ್ತಿಯಲ್ಲಿ ಮನೆ ಹಾಗೂ ಜ್ಯುವೆಲ್ಲರಿ ಶಾಪ್‌ಗಳಲ್ಲಿ ಕಳ್ಳತನ ಮಾಡುತ್ತಿದ್ದ ಹೊರರಾಜ್ಯದ ನಾಲ್ವರು ಸೇರಿದಂತೆ ಒಟ್ಟು ಐದು ಮಂದಿ ಆರೋಪಿಗಳನ್ನು ಪೊಲೀಸರು



ಸೆರೆಹಿಡಿದಿದ್ದಾರೆ. ಈ ಆರೋಪಿಗಳು ಕಳೆದ ಮಾರ್ಚ್ ಹಾಗೂ ಮೇ ತಿಂಗಳಿನಲ್ಲಿ ವೈಟ್‌ಫೀಲ್ಡ್ ವ್ಯಾಪ್ತಿಯಲ್ಲಿ ಕಳ್ಳತನ ಎಸಗಿದ್ದರು. ತಾಂತ್ರಿಕ ಹಾಗೂ ಖಚಿತ ಮಾಹಿತಿ ಆಧರಿಸಿ ಹೈದರಾಬಾದ್ ಮತ್ತು ಶಿವಾಜಿನಗರದಲ್ಲಿ ದಾಳಿ ನಡೆಸಿದ ಪೊಲೀಸರು ಆರೋಪಿಗಳಿಂದ ಬರೋಬ್ಬರಿ 1.16 ಕೋಟಿ ರೂ. ಮೌಲ್ಯದ 584 ಗ್ರಾಂ ಚಿನ್ನಾಭರಣ, ಒಂದು ಕಾರು, ಒಂದು ದುಬಾರಿ ವಾಚ್ ಹಾಗೂ 9.85 ಲಕ್ಷ ರೂ. ನಗದನ್ನು ಜಪ್ತಿ ಮಾಡಿದ್ದಾರೆ. ಬಾಗಲಗುಂಟೆ ಪೊಲೀಸರು ಜ್ಯುವೆಲರಿ ಅಂಗಡಿಯ ಗೋಡೆ ಕೊರೆದು ಕಳ್ಳತನ ಮಾಡಿದ್ದ ಮೂವರು ಅಂತರರಾಜ್ಯ ಕಳ್ಳರನ್ನು ಹೆಡೆಮುರಿ ಕಟ್ಟಿದ್ದಾರೆ. ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ ಜ್ಯುವೆಲರಿ ಅಂಗಡಿಯ ಹಿಂಭಾಗದ ಗೋಡೆಯನ್ನು ಒಡೆದು, ಅಂಗಡಿಯಲ್ಲಿದ್ದ ಬೆಳ್ಳಿಯ ವಸ್ತುಗಳು ಹಾಗೂ ಪಕ್ಕದ ಸೆರಾಮಿಕ್ ಅಂಗಡಿಯಲ್ಲಿದ್ದ ಲ್ಯಾಪ್‌ಟಾಪ್, ಮೊಬೈಲ್ ಫೋನ್‌ಗಳನ್ನು ಕಳವು ಮಾಡಲಾಗಿತ್ತು. ವಾಯವ್ಯ ಡಿಸಿಪಿ ನಾಗೇಶ್ ಮಾರ್ಗದರ್ಶನದಲ್ಲಿ ಕಾರ್ಯಾಚರಣೆ ಕೈಗೊಂಡ ವಿಶೇಷ ತಂಡ ರಾಜಸ್ಥಾನದ ರಾಯಪುರ ಹಾಗೂ ನೆಲಮಂಗಲದ ದಾಸನಪುರದಲ್ಲಿ 98.39 ಲಕ್ಷ ರೂ. ಮೌಲ್ಯದ 35.874 ಕೆ.ಜಿ. ಬೆಳ್ಳಿಯಜಪ್ತಿ ಮಾಡಲಾಗಿದೆ.

ಉತ್ತರ ಪಾಲಿಕೆಯಲ್ಲಿ ಸ್ಥಳ ಗುರುತು | ಇನ್ನುಳಿದ ಪಾಲಿಕೆಗಳಿಗೆ ಶೀಘ್ರ ಜಾಗ ಗುರುತು

ವಾಹನಗಳ ನಿಲುಗಡೆಗೆ ಪಾಲಿಕೆವಾರು ಸ್ಥಳ

• **ಬೆಂಗಳೂರು:** ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳಲ್ಲಿ ಟೋಯಿಂಗ್ ಮಾಡುವ ಅನಾಥ ವಾಹನಗಳ ನಿಲುಗಡೆಗೆ ಪಾಲಿಕೆವಾರು ಸ್ಥಳವನ್ನು ಅಂತಿಮಗೊಳಿಸುವಂತೆ ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ವಿವಿಧ ಇಲಾಖೆಗಳೊಂದಿಗೆ ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, ಟೋಯಿಂಗ್ ಮಾಡಿದ ವಾಹನಗಳನ್ನು ನಿಲುಗಡೆ ಮಾಡುವ ಸಲುವಾಗಿ ಉತ್ತರನಗರ ಪಾಲಿಕೆಯಲ್ಲಿ ಈಗಾಗಲೇ ಸ್ಥಳವನ್ನು ಗುರುತಿಸಲಾಗಿದೆ. ಕೇಂದ್ರ ಮತ್ತು ದಕ್ಷಿಣನಗರ ಪಾಲಿಕೆಗಳಲ್ಲಿ ಸ್ಥಳ ಗುರುತಿಸುವ ಕಾರ್ಯ ಬಹುತೇಕ ಪೂರ್ಣಗೊಂಡಿದ್ದು, ಪೂರ್ವ ಹಾಗೂ ಪಶ್ಚಿಮ ನಗರ ಪಾಲಿಕೆಗಳಲ್ಲಿಯೂ ತ್ವರಿತವಾಗಿ ಸ್ಥಳಗಳನ್ನು ಗುರುತಿಸುವಂತೆ ಸೂಚನೆ ನೀಡಿದರು.

ಕಲ್ವರ್ಟ್ ನಿರ್ಮಾಣಕ್ಕೆ ಅನುಮತಿ ನೀಡಿ: ಕೋಗಿಲು ಜಂಕ್ಷನ್ ಕೇಂದ್ರೀಯ ವಿಹಾರ್ ಅಪಾರ್ಟ್ಮೆಂಟ್ ಬಳಿ ಕಲ್ವರ್ಟ್ ನಿರ್ಮಾಣ ಮಾಡುವ ಸಲುವಾಗಿ ಈಗಾಗಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದ್ದು, ಅದಕ್ಕೆ ಕೂಡಲೇ ಅನುಮೋದನೆ ನೀಡುವಂತೆ ಎನ್‌ಎಚ್‌ಎಐ ಅಧಿಕಾರಿಗಳಿಗೆ ಸೂಚನೆ ನೀಡಿದರು.



ಚಂದಾಪುರ-ಹೊಸೂರು ರಸ್ತೆಯ ಬಳಿ ಪ್ರೀಕಾಸ್ಟ್ ಕಲ್ವರ್ಟ್ ಬಾಕ್ಸ್ ಅಳವಡಿಸುವ ಕಾರ್ಯ ಪ್ರಗತಿಯಲ್ಲಿದ್ದು, ಆ ಸ್ಥಳದಲ್ಲಿ ಬೆಸ್ಕಾಂ ಕೇಬಲ್ ಸ್ಥಳಾಂತರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಎನ್‌ಎಚ್‌ಎಐ ಹಾಗೂ ಬೆಸ್ಕಾಂ ಅಧಿಕಾರಿಗಳು ಜಂಟಿ ಪರಿಶೀಲನೆ ನಡೆಸಿ ಕೂಡಲೇ ಸಮಸ್ಯೆಯನ್ನು ಬಗೆಹರಿಸಿಕೊಂಡು ಕಾಮಗಾರಿಯನ್ನು ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ವಾರದೊಳಗೆ ಸಮೀಕ್ಷಾ ವರದಿ ನೀಡಿ: ಅರ್ಕಾವತಿ ಬಡಾವಣೆಗೆ ಹೊಂದಿಕೊಂಡಿರುವ ಜಕ್ಕೂರು ಕೆರೆಯ ಪಕ್ಕದಲ್ಲಿರುವ ಸಂಪಿಗೆಹಳ್ಳಿ ಮುಖ್ಯ ರಸ್ತೆಯ ಅಗಲೀಕರಣಕ್ಕೆ ಸಂಬಂಧಿಸಿದಂತೆ ಬಿಡಿಎ ಹಾಗೂ ಉತ್ತರ ನಗರ ಪಾಲಿಕೆಯ ಅಧಿಕಾರಿಗಳು ಜಂಟಿಯಾಗಿ ಸಮೀಕ್ಷೆ ನಡೆಸಿ ವಾರದೊಳಗೆ ಸಮೀಕ್ಷಾ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದರು.

ಜಲಮಂಡಳಿ ಕಾಮಗಾರಿ ಶೀಘ್ರ ಪೂರ್ಣಗೊಳಿಸಿ: ವೈಟ್ ಟಾಪಿಂಗ್ ಕಾಮಗಾರಿ ಕೈಗೆತ್ತಿಕೊಳ್ಳಬೇಕಿರುವ ನಾಗವಾರ ರಸ್ತೆ, ಟ್ಯಾನರಿ ರಸ್ತೆ, ಲೋವರ್ ಅಗರಂ ರಸ್ತೆ, ತಿಮ್ಮಯ್ಯ ರಸ್ತೆ, ನೇತಾಜಿ ರಸ್ತೆ, ಸುಲ್ತಾನ್‌ಪಾಳ್ಯ ರಸ್ತೆ ಹಾಗೂ ನಾಗರಭಾವಿ ಮುಖ್ಯ ರಸ್ತೆಯಲ್ಲಿ ಕಾಮಗಾರಿ ಆರಂಭಿಸಬೇಕಿದೆ. ಆದರೆ, ಇದಕ್ಕೆ ಮುನ್ನ ಜಲಮಂಡಳಿ ವತಿಯಿಂದ ಕೈಗೆತ್ತಿಕೊಂಡಿರುವ ಪೈಪ್‌ಲೈನ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

ಅಗ್ನಿಶಾಮಕ ವಿಭಾಗ: ನಗರದಲ್ಲಿ 20 ಅಗ್ನಿಶಾಮಕ ಠಾಣೆಗಳು ಕಾರ್ಯನಿರ್ವಹಿಸಲಿದ್ದು, ಮಳೆಗಾಲ ಆರಂಭವಾಗುತ್ತಿರುವ ಹಿನ್ನೆಲೆಯಲ್ಲಿ ಆಯಾ ನಗರ ಪಾಲಿಕೆಗಳ ವ್ಯಾಪ್ತಿಯಲ್ಲಿರುವ ಅಗ್ನಿಶಾಮಕ ಠಾಣೆಗಳೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಅಗ್ನಿಶಾಮಕ ಠಾಣೆಗಳಲ್ಲಿ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದ್ದು, ಪಾಲಿಕೆಗಳೊಂದಿಗೆ ಸಮನ್ವಯ ಸಾಧಿಸಿ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಲಾಯಿತು. ಈ ಸಂದರ್ಭದಲ್ಲಿ ನಗರ ಪಾಲಿಕೆ ಆಯುಕ್ತರಾದ ರಮೇಶ್ ಡಿ.ಎಸ್., ಕೆ.ಎನ್.ರಮೇಶ್ ಮುಂತಾದವರು ಉಪಸ್ಥಿತರಿದ್ದರು.

ಹಿರಿಯ ಪರಿಸರ ಬರಹಗಾರ ನಾಗೇಶ್ ಹೆಗಡೆ ಅಭಿವ್ಯಕ್ತಿ

ನಾವು ಕಾಡಿನ ಮಿತ್ರರಾಗಬೇಕು

• **ಬೆಂಗಳೂರು:** ಪ್ರತಿದಿನವೂ ವನ್ಯಜೀವಿಗಳ ಸುದ್ದಿ ಬರುತಿದೆ. ಹೆಚ್ಚಾಗಿ ಮಾನವ – ವನ್ಯಜೀವಿಗಳ ಸಂಘರ್ಷಗಳ ಸುದ್ದಿ ಕೇಳಿ ಬರುತ್ತಿದೆ. ಕನಿಷ್ಠ ಮನಸ್ಥಿತಿಯಲ್ಲಿಯಾದರೂ ನಾವು ಕಾಡಿನ ಮಿತ್ರರಾಗಿರಬೇಕು ಎಂದು ಹಿರಿಯ ಪರಿಸರ ಬರಹಗಾರ ನಾಗೇಶ್ ಹೆಗಡೆ ಅಭಿಪ್ರಾಯಪಟ್ಟರು.

ನಗರದ ಸುಚಿತ್ರ ಸಭಾಂಗಣದಲ್ಲಿ, ಅಂಕಿತ ಪುಸ್ತಕ ಪ್ರಕಾಶನ, ಹೊಳೆಮತ್ತಿ ನೇಚರ್ ಫೌಂಡೇಶನ್ ಅವರ ಸಹಯೋಗದಲ್ಲಿ ಲೇಖಕ, ವನ್ಯಜೀವಿ ಸಂರಕ್ಷಕ ಸಂಜಯ್ ಗುಬ್ಬಿ ವಿರಚಿತ ಕಾಡಿನ ಗೆಳೆಯರ ಕಾಡುವ ಕಥೆಗಳು ಮತ್ತು ಕಾಡಿನೊಳಗೊಂದು ಮನೆಯ ಮಾಡಿ ಹೊಸ ಕೃತಿಗಳ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯದಲ್ಲಿ, ಶಿವರಾಮ ಕಾರಂತ ಹಾಗೂ ಅವರ ಮಗ, ಕುವೆಂಪು ಹಾಗೂ ತೇಜಸ್ವಿ ಹೀಗೆ ಅನೇಕರ ನಿಸರ್ಗ ಪ್ರೇಮ, ಪರಿಸರ ಮತ್ತು ಮಾನವನ ನಡುವಿನ ಅವಿನಾಭಾವ ಸಂಬಂಧವನ್ನು ಅನೇಕ ಕೃತಿಗಳಲ್ಲಿ ಸಾಂಕೇತಿಕವಾಗಿ ವಿವರಿಸುತ್ತಾರೆ. ಇತ್ತೀಚೆಗೆ ಓದುಗರ ಪೀಳಿಗೆ ಕುಂದುತ್ತಿದೆ ಎನ್ನುವ ಸಂದರ್ಭದಲ್ಲಿ, ಅಂಕಿತ ಪುಸ್ತಕ ಸಾವಿರ ಪುಸ್ತಕಗಳನ್ನು ಪ್ರಕಟಿಸಿದೆ. ವನ್ಯಜೀವಿಗಳ ಒಲವಿನ ಬಗ್ಗೆ ಹೇಳಹೊರಟಿರುವ ಸಂಜಯ್




ಗುಬ್ಬಿಯವರಂತಹ ರಾಯಭಾರಿಗಳು ಅಗತ್ಯ ಹಾಗೂ ಪ್ರಕೃತಿಯ ಮಹತ್ವವನ್ನು ತಿಳಿಸಲು ಇಂತಹ ಕೃತಿಗಳು ಅತ್ಯಗತ್ಯ ಎಂದು ಶ್ಲಾಘಿಸಿದರು.

ಕಾರ್ಯಕ್ರಮದಲ್ಲಿ, ಪತ್ರಕರ್ತ ಕಟ್ಟೆಗುರುರಾಜ್, ಲೇಖಕ, ವನ್ಯಜೀವಿ ಸಂರಕ್ಷಕರ ಸಂಜಯ್ ಗುಬ್ಬಿ, ಅಂಕಿತ ಪುಸ್ತಕ ಪ್ರಕಾಶಕ ಪ್ರಕಾಶ್ ಕಂಬತ್ತಳ್ಳಿ, ಹಿರಿಯ ಪರಿಸರ ತಜ್ಞ ನಾಗೇಶ ಹೆಗಡೆ ಸೇರಿದಂತೆ ಪುಸ್ತಕ ಹಾಗೂ ಪರಿಸರ ಪ್ರೇಮಿಗಳು ಉಪಸ್ಥಿತರಿದ್ದರು.

ಇಂದು ನಗರದಲ್ಲಿ...

- ರಾಷ್ಟ್ರೀಯ ಎಐ ಮತ್ತು ಡಿಜಿಟಲ್ ವಾಟರ್ ಶೃಂಗಸಭೆ 2026, ಸ್ಥಳ: ಫೋರ್ ಸೀಸನ್ಸ್ ಹೋಟೆಲ್, ಬೆಳಗ್ಗೆ 11
- ಬುದ್ಧ, ಬಸವ, ಡಾ.ಬಿ.ಆರ್. ಅಂಬೇಡ್ಕರ್ ಹಾಗೂ ಬಾಬು ಜಗಜೀವನರಾಮ್ ಅವರ ಜಯಂತಿ, ಸ್ಥಳ: ಸಂಗಮ ಸಭಾಂಗಣ, ಕೃಷಿ ಆಯುಕ್ತಾಲಯ, ಬೆಳಗ್ಗೆ 10
- ಶ್ರೀ ಗುರು ಪವಮಾನಾಚಾರ್ಯರಿಂದ ಶ್ರೀಮದ್ಭಾಗವತ-ಸ್ಕಂದ 1 ರಿಂದ 7 ಧಾರ್ಮಿಕ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಅಡ್ಡರಸ್ತೆ, ತ್ಯಾಗರಾಜನಗರ, ಸಂಜೆ 6ಕ್ಕೆ.
- ಶ್ರೀ ಮಳಗಿ ಆನಂದತೀರ್ಥಾಚಾರ್ಯರಿಂದ ಶ್ರೀಮದ್ ರಾಮಾಯಣ ವಿಷಯವಾಗಿ ಧಾರ್ಮಿಕ ಪ್ರವಚನ, ಸ್ಥಳ: ವಿಜಯ ಮಧ್ವಸಂಘ, ಗಂಗಾಧರ ಬಡಾವಣೆ, ವಿಜಯನಗರ, ಸಂಜೆ 6.30ಕ್ಕೆ.



ಪಾಟಿದಾರ್ ಅಬ್ಬರಕ್ಕೆ ಗುಜರಾತ್ ತತ್ತರ | ಫೈನಲ್‌ಗೇರಲು ಗುಜರಾತ್‌ಗಿದೆ ಇನ್ನೊಂದು ಅವಕಾಶ

ಸತತ 2ನೇ ಬಾರಿ ಫೈನಲ್‌ಗೆ ಆರ್‌ಸಿಬಿ

ಹೊಸ ಆರ್‌ಸಿಬಿ ತಂಡಕ್ಕೆ ತಡೆಯೊಡ್ಡುವವರೇ ಯಾರಿಲ್ಲ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ. ಕಪ್ ಬರ ಕಳೆದ ಬಾರಿಯೇ ನೀಗಿಸಿಕೊಂಡಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ಲೀಗ್ ಮೇಲೆ ಪ್ರಾಬಲ್ಯ ಸಾಧಿಸುತ್ತಾ ಎರಡನೇ ಕಪ್ ಗೆಲ್ಲುವುದಕ್ಕೆ ಅಣಿಯಾಗಿದೆ.

ಇಲ್ಲಿನ ಎಚ್‌ಸಿಎ ಕ್ರೀಡಾಂಗಣದಲ್ಲಿ ಮಂಗಳವಾರದಂದು ಕ್ವಾಲಿಫೈಯರ್ ಪಂದ್ಯ ನಡೆಯಿತು. ಪಾಟಿದಾರ್ ಬ್ಯಾಟಿಂಗ್ ಅಬ್ಬರಕ್ಕೆ ತತ್ತರಿಸಿದ ನಂತರ ಗುಜರಾತ್ ಟೈಟಾನ್ಸ್ ಆರ್‌ಸಿಬಿ ವೇಗಿಗಳ ದಾಳಿಗೆ ಕುಸಿಯಿತು. ಎಲ್ಲೆಲ್ಲೂ ಆರ್‌ಸಿಬಿ ಅಭಿಮಾನಿಗಳ ಹರ್ಷ, ಆಟಗಾರರ ಸಂಭ್ರಮ ಕಂಡುಬಂದಿತು. ಪಂದ್ಯದಲ್ಲಿ ಬ್ಯಾಟಿಂಗ್ ಆಹ್ವಾನ ಪಡೆದ ಆರ್‌ಸಿಬಿ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 254 ರನ್‌ಗಳಿಸಿತು. ಪಾಟಿದಾರ್ 93★, ಕೊಹ್ಲಿ 43 ಮತ್ತು ಕೃಣಾಲ್ 43 ರನ್ ಗಳಿಸಿದರು. ಗುಜರಾತ್ ಪರ ಹೋಲ್ಡರ್, ರಬಾಡ ತಲಾ 2 ವಿಕೆಟ್ ಪಡೆದುಕೊಂಡರು. ಗುರಿ ಬೆನ್ನತ್ತುವಾಗ ಗುಜರಾತ್ ಪರ ಯಾರೊಬ್ಬರೂ ಕ್ರೀಜ್‌ನಲ್ಲಿ ನಿಲ್ಲಲಿಲ್ಲ. ಪರಿಣಾಮ ಸರ್ವಪತನಗೊಂಡ ಜಿಟಿ ಸೋಲೊಪ್ಪಿಕೊಂಡಿದೆ. ಆರ್‌ಸಿಬಿ ಪರ ವೇಗಿಗಳು ಮಿಂಚಿದರು.

ಕೊಹ್ಲಿ-ಪಡಿಕ್ಕಲ್ ಕಮಾಲ್: ವೆಂಕಟೇಶ್ ಅಯ್ಯರ್ ಬಾರಿಸಿದ ಬೌಂಡರಿಯೊಂದಿಗೆ ಇನ್ನಿಂಗ್ಸ್ ಆರಂಭವಾಯಿತು. ಮೊದಲ ಓವರ್‌ನಲ್ಲಿ 3 ಭರ್ಜರಿ ಬೌಂಡರಿ ಬಾರಿಸಿದ ಅವರು, 19 ರನ್‌ಗೆ ಆಟ ನಿಲ್ಲಿಸಿಬಿಟ್ಟರು. ಮೂರನೇ ವಿಕೆಟ್‌ಗೆ ಒಂದಾದ ವಿರಾಟ್ ಕೊಹ್ಲಿ ಮತ್ತು ಪಡಿಕ್ಕಲ್ ಸ್ಫೋಟಕ ಬ್ಯಾಟಿಂಗ್ ಮಾಡಿದರು. ಪಡಿಕ್ಕಲ್ ಕೂಡ ಬರುತ್ತಲೇ ಬಿರುಸಿನ ಬ್ಯಾಟಿಂಗ್ ಮಾಡಿದರು. ಪವರ್‌ಪ್ಲೇನಲ್ಲಿ ಆರ್‌ಸಿಬಿ 76 ರನ್ ಬಾರಿಸಿತು. ಪಡಿಕ್ಕಲ್ ಮತ್ತು ಕೊಹ್ಲಿ 72 ರನ್‌ಗಳ ಜೊತೆಯಾಟ ನಿರ್ಮಿಸಿದರು. ವಿರಾಟ್ ಕೊಹ್ಲಿ 25 ಬಾಲ್‌ಗಳಲ್ಲಿ 43 ರನ್‌ಗಳಿಸಿ ವಿಕೆಟ್ ಒಪ್ಪಿಸಿದರು. ಅವರ ಹಿಂದೆಯೇ ಪಡಿಕ್ಕಲ್ ಕೂಡ ಪೆವಿಲಿಯನ್ ಹೊರಟರು.



ಪಾಟಿದಾರ್ ಅಬ್ಬರ

ಮಧ್ಯಮ ಓವರ್‌ಗಳ ಅಂತ್ಯದ ವರೆಗೆ ಆರ್‌ಸಿಬಿ ಕೊಂಚ ಹೊತ್ತು ವಿಕೆಟ್ ಉಳಿಸಿಕೊಂಡು ಆಡಿತು. ಪಾಟಿದಾರ್ ಮೊದಲಿನ 9 ಬಾಲ್‌ಗಳಲ್ಲಿ 9 ರನ್ ಗಳಿಸಿದರು. ಕೃಣಾಲ್ ಮತ್ತೊಂದು ಬದಿಯಲ್ಲಿ ನಿಂತುಕೊಂಡಂತೆ ಪಾಟಿದಾರ್ ಸಿಕ್ಸರ್‌ಗಳ ಅಬ್ಬರ ಶುರುವಾಯಿತು. ಬಾಲಿಗೆ ಪ್ರತಿಯೊಂದು ದಿಕ್ಕು ತೋರಿಸಿದ ಅವರು, 21 ಬಾಲ್ ಅನ್ನುವಷ್ಟರಲ್ಲಿ ಸ್ಫೋಟಕ ಅರ್ಧಶತಕ ಬಾರಿಸಿದರು. ತಮ್ಮ ಅಬ್ಬರ ಹಾಗೇ ಮುಂದುವರಿಸಿ ಡೆತ್ ಓವರ್‌ಗೆ ವಿಸ್ತರಿಸಿತು. ಪಾಟಿದಾರ್ ಸಿಕ್ಸರ್‌ಗಳ ಅಬ್ಬರ ನಿಲ್ಲಲೇ ಇಲ್ಲ. ಡೆತ್ ಓವರ್‌ನಲ್ಲಿ ಪಾಟಿದಾರ್ ಇನ್ನಷ್ಟು ಬಿರುಸಿನ ಬ್ಯಾಟಿಂಗ್ ಮಾಡಿದರು. ಬಂದ ಬಾಲ್‌ಗಳನ್ನೆಲ್ಲಾ ಸಿಕ್ಸರ್‌ಗಟ್ಟಿದರು. ಆಡಿದ 33 ಬಾಲ್‌ಗಳಲ್ಲಿ ಪಾಟಿದಾರ್ 9 ಸಿಕ್ಸರ್ ಚಚ್ಚಿದರು. 5 ಬೌಂಡರಿ ಬಾರಿಸಿದರು. ಔಟಾಗದೇ 93 ರನ್ ಬಾರಿಸಿದರು. ಕೃಣಾಲ್ 43ಕ್ಕೆ ಔಟಾದರೆ, ಜಿತೇಶ್ 15 ರನ್ ಗಳಿಸಿದರು.

ಗುಜರಾತ್ ತತ್ತರ

ಗುರಿ ಬೆನ್ನತ್ತುವಾಗ ಯಥಾಪ್ರಕಾರ ವೇಗಿ ಭುವನೇಶ್ವರ್ ಕುಮಾರ್ ಮಿಂಚಿದರು. ಮೂರನೇ ಓವರ್‌ನಲ್ಲಿ ಡಫಿ ಬೌಲಿಂಗ್‌ನಲ್ಲಿ ಸಾಯಿ ಸುದರ್ಶನ್ ಹಿಟ್ ವಿಕೆಟ್‌ಗೆ ಔಟಾದರು. ಬಳಿಕ ಮತ್ತೊಮ್ಮೆ ಭುವನೇಶ್ವರ್ ಕುಮಾರ್ ಮಿಂಚಿದರು. ಗಿಲ್ 2 ರನ್‌ಗೆ ವಿಕೆಟ್ ಒಪ್ಪಿಸಿದರು. ಮಧ್ಯಮ ಕ್ರಮಾಂಕದಲ್ಲಿ ಜಾಸ್ ಬಟ್ಲರ್ ಕೊಂಚ ಹೊತ್ತು ಪ್ರಯತ್ನ ಪಟ್ಟರೂ ಆರ್‌ಸಿಬಿ ಯಾವುದೇ ಅವಕಾಶ ಕೊಡಲಿಲ್ಲ. ನಿಶಾಂತ್ ಸಿಂಧು 5, ಜೇಸನ್ ಹೋಲ್ಡರ್ ಶೂನ್ಯಕ್ಕೆ ಔಟಾದರು. ಬಟ್ಲರ್ ಕೂಡ 29 ರನ್‌ಗೆ ವಿಕೆಟ್ ಒಪ್ಪಿಸಿದರು. ಇನ್ನುಳಿದ ಬ್ಯಾಟರ್‌ಗಳು ಹೇಳಿಕೊಳ್ಳುವ ಪ್ರದರ್ಶನ ನೀಡಲೇ ಇಲ್ಲ.

ಐದನೇ ಬಾರಿ ಫೈನಲ್‌ಗೆ ಆರ್‌ಸಿಬಿ

ಈ ಗೆಲುವಿನೊಂದಿಗೆ ಆರ್‌ಸಿಬಿ ನಾಲ್ಕನೇ ಬಾರಿ ಫೈನಲ್‌ಗೇರಿತು. ಈ ಹಿಂದೆ 2009, 2011, 2016 ಮತ್ತು 2025ರಲ್ಲಿ ಫೈನಲ್‌ಗೇರಿದ ಆರ್‌ಸಿಬಿ 2025ರಲ್ಲಿ ಚಾಂಪಿಯನ್ ಪಟ್ಟಕ್ಕೇರಿದೆ.

ಎರಡು ಸತತ ಫೈನಲ್; 4ನೇ ತಂಡ: ಆರ್‌ಸಿಬಿ ಐಪಿಎಲ್ ಪಂದ್ಯಾವಳಿಯ ಇತಿಹಾಸದಲ್ಲಿ ಸತತ ಎರಡು ಬಾರಿ ಫೈನಲ್‌ಗೇರಿದ ಮೂರನೇ ತಂಡ ಅನಿಸಿಕೊಂಡಿದೆ. ಈ ಹಿಂದೆ ಈ ದಾಖಲೆಗಳನ್ನು ಚೆನ್ನೈ ಸೂಪರ್ ಕಿಂಗ್ಸ್, ಮುಂಬೈ ಇಂಡಿಯನ್ಸ್ ಮತ್ತು ಗುಜರಾತ್ ಟೈಟಾನ್ಸ್ ತಂಡಗಳು ಮಾಡಿವೆ. 2025ರಲ್ಲಿ ಫೈನಲ್‌ಗೇರಿರುವ ಆರ್‌ಸಿಬಿಗೆ ಇದು ಎರಡನೇ ಫೈನಲ್.

ದಾಖಲೆಯ ಗುರಿ

255 ರನ್ ಗುರಿ ಐಪಿಎಲ್ ಇತಿಹಾಸದಲ್ಲಿ ಪ್ಲೇಆಫ್‌ನ ಅತಿ ಹೆಚ್ಚು ಸ್ಕೋರ್ ಆಗಿದೆ. 2023ರಲ್ಲಿ ಗುಜರಾತ್ 233 ರನ್ ಗಳಿಸಿತ್ತು. ಇದು ಈವರೆಗಿನ ಅತಿ ಹೆಚ್ಚು ಸ್ಕೋರ್ ಆಗಿತ್ತು. ಪಾಟಿದಾರ್, ಕೊಹ್ಲಿ ಮತ್ತು ಕೃಣಾಲ್ ಅಬ್ಬರದೊಂದಿಗೆ ಆರ್‌ಸಿಬಿ 254 ರನ್ ಬಾರಿಸಿದ್ದು, ಇದು ಪಂದ್ಯಾವಳಿಯ ಪ್ಲೇಆಫ್‌ನ ಅತಿ ಹೆಚ್ಚು ಸ್ಕೋರ್ ಆಗಿದೆ.

ಕಿರುಸುದ್ದಿ

ಪ್ರಜ್ಞಾನಂದ, ಗುಕೇಶ್, ದಿವ್ಯಾಗೆ ಶುಭಾರಂಭ

• **ಒಸ್ಲೋ (ನಾರ್ವೆ):** ಸೋಮವಾರ ಶುರುವಾದ ನಾರ್ವೆ ಚೆಸ್ ಓಪನ್ ಪಂದ್ಯಾವಳಿಯಲ್ಲಿ ಭಾರತೀಯ ಗ್ರ್ಯಾಂಡ್‌ಮಾಸ್ಟರ್‌ಗಳು ಉತ್ತಮ ಪ್ರದರ್ಶನ ನೀಡಿದ್ದಾರೆ. ಮೊದಲ ದಿನದ ಪ್ರಮುಖ ಫಲಿತಾಂಶದಲ್ಲಿ ಫ್ರಾನ್ಸ್‌ನ ಅಲಿರೆಝಾ ಫಿರೋಜ್ಜಾ, ವಿಶ್ವ ನಂ.1 ಆಟಗಾರ ಮ್ಯಾಗ್ನಸ್ ಕಾರ್ಲ್‌ಸನ್ ಅವರನ್ನು ಕ್ಲಾಸಿಕ್ ಪಂದ್ಯದಲ್ಲಿ ಮಣಿಸಿದರು. ಬಹುತೇಕ ಸಮಯ ಪಂದ್ಯದಲ್ಲಿ ಹಿಡಿತ ಸಾಧಿಸಿದ್ದ ಕಾರ್ಲ್‌ಸನ್, ಸಮಯದ ಒತ್ತಡದಲ್ಲಿ ಮಾಡಿದ ಒಂದು ದೊಡ್ಡ ತಪ್ಪಿನಿಂದ ಸಂಕಷ್ಟಕ್ಕೆ ಸಿಲುಕಿದರು. ಭಾರತದ ಎರಡನೇ ಶ್ರೇಯಾಂಕದ ಆಟಗಾರ ಆರ್. ಪ್ರಜ್ಞಾನಂದ ಹಾಗೂ ವೆಸ್ಲಿ ಸೊ ನಡುವಿನ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರ ನಡೆದ ಅರ್ಮಗೆಡನ್ ಹಣಾಹಣಿಯಲ್ಲಿ ಪ್ರಜ್ಞಾನಂದ ಜಯ ಸಾಧಿಸಿ ಹೆಚ್ಚುವರಿ ಅಂಕಗಳನ್ನು ತಮ್ಮದಾಗಿಸಿಕೊಂಡರು. ಹಾಲಿ ವಿಶ್ವ ಚಾಂಪಿಯನ್ ಡಿ. ಗುಕೇಶ್, ಜರ್ಮನಿಯ ಅಗ್ರ ಆಟಗಾರ ವಿನ್ಸೆಂಟ್ ಕೀಮರ್ ವಿರುದ್ಧ ಕಠಿಣ ಪೈಪೋಟಿ ನಡೆಸಿದರು. ಅಂತಿಮ ಹಂತದಲ್ಲಿ ಕೀಮರ್ ಮೇಲುಗೈ ಸಾಧಿಸಿ ಗೆಲುವಿನ ಅಂಚಿನಲ್ಲಿದ್ದರು. ಆದರೆ ಗುಕೇಶ್ ಅದ್ಭುತ ರಕ್ಷಣಾತ್ಮಕ ಆಟವಾಡಿ ಪಂದ್ಯವನ್ನು ಸಮಬಲಕ್ಕೆ ತಂದರು. ಬಳಿಕ ನಡೆದ ಅರ್ಮಗೆಡನ್ ಪಂದ್ಯದಲ್ಲಿ ಗೆದ್ದು ಅಮೂಲ್ಯ ಹೆಚ್ಚುವರಿ ಅಂಕಗಳನ್ನು ಕಲೆಹಾಕಿದರು. ಮೊದಲ ಸುತ್ತಿನ ನಂತರ ಕ್ಲಾಸಿಕ್ ವಿಭಾಗದಲ್ಲಿ ಏಕೈಕ ಗೆಲುವು ದಾಖಲಿಸಿದ ಫಿರೋಜ್ಜಾ ಅಂಕಪಟ್ಟಿಯಲ್ಲಿ ಮುನ್ನಡೆ ಸಾಧಿಸಿದ್ದಾರೆ.

ಮಹಿಳೆಯರ ವಿಭಾಗ: ಮಹಿಳಾ ವಿಭಾಗದಲ್ಲೂ ಆರಂಭದ ದಿನವೇ ಕುತೂಹಲಕರ ಪೈಪೋಟಿ ಕಂಡುಬಂದಿತು. ಕಝಕಿಸ್ತಾನದ ಬಿಬಿಸಾರಾಭಾಲಬಾಯೆವಾ ಅಗ್ರ ಆಟಗಾರ್ತಿ ಕೋನೇರು ಹಂಪಿ ವಿರುದ್ಧ ಕ್ಲಾಸಿಕಲ್ ವಿಭಾಗದಲ್ಲಿ ಜಯ ಸಾಧಿಸಿದರು. ಅನ್ನಾ ಹಾಗೂ ಝು ಜಿನರ್ ನಡುವಿನ ಪಂದ್ಯ ಸಮಬಲದಲ್ಲಿ ಅಂತ್ಯವಾಯಿತು. ನಂತರದ ಅರ್ಮಗೆಡನ್‌ನಲ್ಲಿ ಝು ಜಿನರ್ ಮೇಲುಗೈ ಸಾಧಿಸಿ ಹೆಚ್ಚುವರಿ ಅಂಕ ಪಡೆದರು. ಇನ್ನೊಂದು ಪಂದ್ಯದಲ್ಲಿ ಹಾಲಿ ಮಹಿಳಾ ವಿಶ್ವ ಚಾಂಪಿಯನ್ ಜು ವೆಂಜುನ್ ಹಾಗೂ ಭಾರತದ ದಿವ್ಯಾ ದೇಶಮುಖ್ ಹಣಾಹಣಿ ಡ್ರಾದಲ್ಲಿ ಅಂತ್ಯವಾಯಿತು.

ಓಟದಲ್ಲಿ ಕನ್ನಡಿಗರೇ ಟಾಪ್

• **ಬೆಂಗಳೂರು:** ಮಹಿಳೆಯರ 100 ಮೀ. ಟಿ37 ಸ್ಪರ್ಧೆಯಲ್ಲಿ ಕನ್ನಡಿಗರಾದ ಭಾರತಿ ಭಾರತೇಶ್ ಮತ್ತು ಹರ್ಷಿತಾ ಟಾಕೇರ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗೆದ್ದರು. ಕೂಟದ ವಿವಿಧ ಸ್ಪರ್ಧೆಯಲ್ಲಿ ಕರ್ನಾಟಕ ಅಥ್ಲೀಟ್‌ಗಳು ಪಾರುಪತ್ಯ ಸಾಧಿಸಿದರು. ಅಂತಾರಾಷ್ಟ್ರೀಯ ಪ್ಯಾರಾ ಅಥ್ಲೀಟ್ ಸಂಸ್ಥೆಯಿಂದ ಮಾನ್ಯತೆ ಪಡೆದ ಇಂಡಿಯಾ ಓಪನ್ ಪ್ಯಾರಾ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್ ಕೂಟವು ನಗರದ ಕಂಠೀರವ ಕ್ರೀಡಾಂಗಣದಲ್ಲಿ ಮಂಗಳವಾರದಂದು ಶುರುವಾಯಿತು. 16.99 ಸೆಕೆಂಡುಗಳಲ್ಲಿ ಓಟ ಮುಗಿಸಿದ ಭಾರತಿ ಮೊದಲ ಸ್ಥಾನ ಪಡೆದುಕೊಂಡರೆ, 17.73 ಸೆಕೆಂಡುಗಳಲ್ಲಿ ಕ್ರಮಿಸಿದ ಹರ್ಷಿತಾ ಎರಡನೇ ಸ್ಥಾನ ಪಡೆದುಕೊಂಡರು. ಚಂಡೀಗಢದ ಬಬ್ಲೀತ್ ಕೌರ್ ಮೂರನೇ ಸ್ಥಾನ ಪಡೆದರು. ಓಟದ ಸ್ಪರ್ಧೆಯಲ್ಲಿ ಕರ್ನಾಟಕ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿದರು. ಪುರುಷರ 100 ಮೀ. ಟಿ47 ವಿಭಾಗದಲ್ಲಿ ಬಾಬು ಜಾನು ಮೂರನೇ ಸ್ಥಾನ ಪಡೆದುಕೊಂಡರು. ಪ್ರಿಲಿಮ್ಸ್‌ನಲ್ಲಿ 11.36 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ ಮೂರನೇ ಸ್ಥಾನ ಪಡೆದು ಫೈನಲ್ಸ್‌ಗೆ ಅರ್ಹತೆ ಪಡೆದ ಅವರು, ಅಲ್ಲಿ 11.19 ಸೆಕೆಂಡುಗಳಲ್ಲಿ ಗುರಿ ಕ್ರಮಿಸಿ ಮೂರನೇ ಸ್ಥಾನ ಗಳಿಸಿದರು. ಮೊಹಮ್ಮದ್ ಬಾಸಿಲ್ 10.63 ಸೆಕೆಂಡುಗಳಲ್ಲಿ ಓಡಿ ಚಿನ್ನ ಗೆದ್ದರೆ, ದಿಲೀಪ್ ಎರಡನೇ ಸ್ಥಾನ ಗಳಿಸಿದರು.

ರಕ್ಷಿತಾ, ಶರತ್‌ಗೆ ಮೊದಲ ಸ್ಥಾನ

ಮಹಿಳೆಯರ 1500 ಮೀ. ಟಿ11 ಸ್ಪರ್ಧೆಯಲ್ಲಿ ಕರ್ನಾಟಕದ ರಕ್ಷಿತಾ ರಾಜು ಮೊದಲ ಸ್ಥಾನ ಪಡೆದರು. 5:17.45 ನಿಮಿಷಗಳಲ್ಲಿ ಗುರಿ ಕ್ರಮಿಸಿದ ಕನ್ನಡತಿ, ರಾಜಸ್ಥಾನದ ಶಾಲಿನಿ ಅವರನ್ನು ಹಿಂದಿಕ್ಕಿದರು. 6:7.55 ನಿಮಿಷಗಳಲ್ಲಿ ಓಟ ಮುಗಿಸಿದ ಶಾಲಿನಿ ಬೆಳ್ಳಿ, ಕರ್ಗಿಸ್ತಾನದ ಗುಲ್ನಾಜ್ 6:19.58 ಮೂರನೇ ಸ್ಥಾನ ಪಡೆದರು. ಇನ್ನು ಪುರುಷರ 1500ಮೀ. ಟಿ13 ವಿಭಾಗದಲ್ಲಿ ಮೊದಲ ಸ್ಥಾನ ಗಳಿಸಿದರು. ಸಾಮಾನ್ಯವಾಗಿ ಟಿ12 ವಿಭಾಗದಲ್ಲಿ ಸ್ಪರ್ಧಿಸುವ ಅವರು, 4:11.25 ನಿಮಿಷಗಳಲ್ಲಿ ಓಟ ಮುಗಿಸಿದರು. ಚಿರಾಗ್, ಬಳವಂತ ನಂತರದ ಸ್ಥಾನ ಗಳಿಸಿದರು. ಪುರುಷರ 100 ಮೀ. ಟಿ38 ವಿಭಾಗದಲ್ಲಿ 13.44ಸೆಕೆಂಡುಗಳಲ್ಲಿ ಗುರಿ ಕ್ರಮಿಸಿದ ದೇವ ಸಚ್ಚಿದಾನಂದ ಅವರು ಎರಡನೇ ಸ್ಥಾನ ಗಳಿಸಿದರು. ಇಷ್ಟೇ ಅಲ್ಲದೆ, ಕರ್ನಾಟಕ್ಕೆ ವಿವಿಧ ಪದಕಗಳು ದೊರಕಿದವು. ಮಹಿಳೆಯರ ಎಫ್-57 ಶಾಟ್‌ಪುಟ್ ಸ್ಪರ್ಧೆಯಲ್ಲಿ ಶಿಲ್ಪಾ ಅವರಿಗೆ ಎರಡನೇ ಸ್ಥಾನ ದೊರಕಿತು. 6.67ಮೀ. ದೂರ ಎಸೆದ ಅವರು, ಮೂರನೇ ಸ್ಥಾನದ ಪೂನಂ ಅವರನ್ನು ಹಿಂದಿಕ್ಕಿದರು. ಶರ್ಮಿಳಾ 9.86 ಮೀ. ದೂರ ಎಸೆದು ಮೊದಲ ಸ್ಥಾನ ಪಡೆದರು.

ಪ್ರಶಸ್ತಿ ವಿಜೇತರು

ಪ್ರಮೋದ್ ಭಗತ್: 2026ರ ವರ್ಷದ ಪ್ಯಾರಾ ಅಥ್ಲೀಟ್ ಪ್ರಶಸ್ತಿ ವಿಜೇತ
ದೀಪ್ತಿ ಜೀವನ್‌ಜಿ: 2026ರ ವರ್ಷದ ಪ್ಯಾರಾ ಅಥ್ಲೀಟ್ ಪ್ರಶಸ್ತಿ ವಿಜೇತೆ
ಅಭಿಲಾಷಾ ಚೌಧರಿ: 2026ರ ವರ್ಷದ ಪ್ಯಾರಾ ಕ್ರೀಡಾ ಕೋಚ್
ಇಂಡಿಯನ್ ಆಯಿಲ್: 2026ರ ವರ್ಷದ ಸಂಸ್ಥೆ ಪ್ರಶಸ್ತಿ
ದೀಪ್ತಿ ಬೋಪಯ್ಯ: ಪ್ಯಾರಾ ಕ್ರೀಡೆ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದ ವ್ಯಕ್ತಿ ಪ್ರಶಸ್ತಿ, **ಪಾಯಲ್ ನಾಗ್:** 2026ರ ವರ್ಷದ ಉದಯೋನ್ಮುಖ ಪ್ಯಾರಾ ಕ್ರೀಡಾಪಟು.**ಸತ್ಯ ಪ್ರಕಾಶ್ ಸಾಂಗ್ವಾನ್:** ಪ್ಯಾರಾ ಕ್ರೀಡೆಗೆ ಬೆಂಬಲ ನೀಡಿದ ಚಾಂಪಿಯನ್ ಪ್ರಶಸ್ತಿ,**ಮಹಾವಿ ೀರ್ ಸಿಂಗ್ ರಾವತ್:** ವರ್ಷದ ಮಾಧ್ಯಮ ವ್ಯಕ್ತಿ ಪ್ರಶಸ್ತಿ
ಪ್ಯಾರಾಲಿಂಪಿಕ್ಸ್ ಸೇರಿ ಪ್ಯಾರಾ ಕ್ರೀಡೆಗಳಲ್ಲಿ ಅಪ್ರತಿಮ ಸಾಧನೆ ತೋರಿದ, ಪ್ಯಾರಾ ಕ್ರೀಡೆಗೆ ಬೆನ್ನೆಲುಬಾಗಿ ನಿಂತ ಸಾಧಕರಿಗೆ ಭಾರತೀಯ ಪ್ಯಾರಾಲಿಂಪಿಕ್ ಸಮಿತಿ (ಪಿಸಿಐ) ಲಿಮಿಟ್‌ಲೆಸ್ ಇಂಪ್ಯಾಕ್ಟ್ ಅಂತಾರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಿತು.

ಇಂದು ಎಲಿಮಿನೇಟರ್ ಪಂದ್ಯ | ಸೋತವರು ಮನೆಗೆ | ಗೆದ್ದವರು ಸೆಮಿಫೈನಲ್‌ಗೆ

ಹೈದರಾಬಾದ್-ಆರ್‌ಆರ್ ನಡುವೆ ಕ್ವಾರ್ಟರ್

• **ಚಂಡೀಗಢ:** ಐಪಿಎಲ್ ಪಂದ್ಯಾವಳಿಯ ಸೆಮಿಫೈನಲ್ ಪ್ರವೇಶಕ್ಕಾಗಿ ರಾಜಸ್ಥಾನ ಹಾಗೂ ಹೈದರಾಬಾದ್ ತಂಡಗಳು ಬುಧವಾರದ ಎಲಿನೇಟರ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಪಂದ್ಯಾವಳಿಯಲ್ಲಿ ವಿಭಿನ್ನ ಮಾದರಿಯ ಪ್ಲೇಆಫ್ ಇದ್ದು, ಮೂರು ಮತ್ತು ನಾಲ್ಕನೇ ಸ್ಥಾನದಲ್ಲಿರುವ ತಂಡಗಳು ಎಲಿಮಿನೇಟರ್ ಪಂದ್ಯಗಳಲ್ಲಿ ಎದುರಾಗುತ್ತವೆ. ಅದು ಕ್ವಾರ್ಟರ್‌ಫೈನಲ್ ರೀತಿಯಲ್ಲೇ ನಡೆಯುತ್ತದೆ. ಸೋತವರು ಮನೆ ಹಾದಿ ಹಿಡಿದರೆ, ಗೆದ್ದವರು ಕ್ವಾಲಿಫೈಯರ್ 2 ಅಂದರೆ ಸೆಮಿಫೈನಲ್‌ಗೇರುತ್ತಾರೆ. 18 ಅಂಕ ಗಳಿಸಿದರೂ ರನ್‌ರೇಟ್ ವಿಚಾರದಲ್ಲಿ ಹಿನ್ನಡೆ ಅನುಭವಿಸಿರುವ ಹೈದರಾಬಾದ್ ಮೂರನೇ ಸ್ಥಾನದೊಂದಿಗೆ ಲೀಗ್ ಪಂದ್ಯಗಳನ್ನು ಮುಗಿಸಿತ್ತು. ಅತ್ತ ರಾಜಸ್ಥಾನ 16 ಅಂಕಗಳೊಂದಿಗೆ ನಾಲ್ಕನೇ ಸ್ಥಾನ ಪಡೆದುಕೊಂಡಿದೆ. ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತವರಲ್ಲಿ ಈ ಪಂದ್ಯ ನಡೆಯಲಿದೆ.

ಅಭಿಷೇಕ್ ಶರ್ಮ, ಟ್ರಾವಿಸ್ ಹೆಡ್, ಹೆನ್ರಿಕ್ ಕ್ಲಾಸೆನ್ ಅವರ ಅದ್ಭುತ ಲಯದ ಬಲದೊಂದಿಗೆ ಹೈದರಾಬಾದ್ ಕೂಟದಲ್ಲಿ ಮಿಂಚಿದೆ. ಇತ್ತ ರಾಜಸ್ಥಾನ ತಂಡದ ಪರ ವೈಭವ್ ಸೂರ್ಯವಂಶಿ, ಯಶಸ್ವಿ ಜೈಸ್ವಾಲ್ ಮತ್ತು ಜೋಫ್ರಾ ಆರ್ಚರ್ ಅವರ ಬಲದೊಂದಿಗೆ ರಾಜಸ್ಥಾನ ಮಿಂಚಿದೆ.



ಕೂಟದಲ್ಲಿ ಹೈದರಾಬಾದ್: ಐಪಿಎಲ್ ಆರಂಭಕ್ಕೂ ಮುನ್ನವೇ ದೊಡ್ಡ ಹೊಡೆತ. ತಂಡದ ಪ್ರಮುಖ ಬೌಲರ್, ನಾಯಕ ಪ್ಯಾಟ್ ಕಮಿನ್ಸ್ ಗಾಯದಿಂದ ಹೊರಬಿದ್ದಿದ್ದರು. ಅಭಿಷೇಕ್ ಶರ್ಮ, ಇಶಾನ್ ಕಿಶನ್ ವಿಶ್ವಕಪ್ ಗೆದ್ದ ಭಾರತ ತಂಡದಿಂದ ನೇರವಾಗಿ ಮೈದಾನಕ್ಕಿಳಿದಿದ್ದರು. ಆದರೆ ಒಂದು ಹಂತದಲ್ಲಿ ಬೌಲಿಂಗ್‌ನಲ್ಲಿ ದೊಡ್ಡ ಹಿನ್ನಡೆಯನ್ನೇ ಎದುರಿಸಿದ್ದ ಹೈದರಾಬಾದ್ ಮೊದಲ ಪಂದ್ಯದಲ್ಲೇ ಸೋತಿತ್ತು. ಮೊಹಮ್ಮದ್ ಶಮಿ ಅವರನ್ನು ಬಿಟ್ಟುಕೊಟ್ಟ ಪರಿಣಾಮ ಆರಂಭದಲ್ಲಿ ಅಲ್ಪ ಹಿನ್ನಡೆ ಅನುಭವಿಸಿತು. ಆದರೆ ಇಶಾನ್ ಕಿಶನ್ ಅವರ ನಾಯಕತ್ವದಲ್ಲಿ ಹೊಸ ಆಟಗಾರರು ಕಣಕ್ಕಿಳಿದರು. ಸಾಕೀಬ್ ಹುಸೈನ್, ಪ್ರಫುಲ್ ಹಿಂಗೆ ಸೇರಿದಂತೆ ಇದೇ ಮೊದಲ ಬಾರಿಗೆ ಐಪಿಎಲ್ ಆಡಿದ ಆಟಗಾರರೊಂದಿಗೆ ಗೆಲ್ಲುವ ಸವಾಲನ್ನು ಹೈದರಾಬಾದ್ ಹೊಂದಿತ್ತು. ಆದರೆ ಕ್ಲಾಸೆನ್, ಕಿಶನ್ ಮತ್ತು ಅಭಿಷೇಕ್ ಬೇರೊಂದು ಪ್ಲಾನ್‌ನಲ್ಲಿದ್ದರು. ಪ್ರತಿ ಪಂದ್ಯದಲ್ಲಿ ಮಿಂಚಿ ಗೆಲುವಿನ ನಗಾಲೋಟ ಶುರು ಮಾಡಿತು. ಮಧ್ಯಮ ಐಪಿಎಲ್‌ನಲ್ಲಿ ಹೈದರಾಬಾದ್ ಒಂದೂ ಪಂದ್ಯದಲ್ಲಿ ಸೋಲಲೇ ಇಲ್ಲ. ಪ್ಲೇಆಫ್ ಫೈಟ್‌ನಲ್ಲಿ ಶಕ್ತಿಯುತ ತಂಡವಾಗಿ ಹೊರಹೊಮ್ಮಿತು. ಮೊದಲೆರಡು ಸ್ಥಾನಕ್ಕೂ ಬಲಿಷ್ಠ ಪೈಪೋಟಿ ನೀಡಿರುವ ಹೈದರಾಬಾದ್ ಮೂರನೇ ಸ್ಥಾನದೊಂದಿಗೆ ಮುಗಿಸಿದೆ.

ಕೀ ಪ್ಲೇಯರ್ಸ್

ಬ್ಯಾಟಿಂಗ್
- ಹೆನ್ರಿಕ್ ಕ್ಲಾಸೆನ್: 606 ರನ್
- ಇಶಾನ್ ಕಿಶನ್: 569 ರನ್
- ಅಭಿಷೇಕ್ ಶರ್ಮ: 563 ರನ್
- ಟ್ರಾವಿಸ್ ಹೆಡ್: 393 ರನ್

ಬೌಲಿಂಗ್
- ಇಶಾನ್ ಮಾಲಿಂಗಾ: 19 ವಿಕೆಟ್
- ಸಾಕೀಬ್ ಹುಸೈನ್: 15 ವಿಕೆಟ್
- ಪ್ರಫುಲ್ ಹಿಂಗೆ: 11 ವಿಕೆಟ್
- ಪ್ಯಾಟ್ ಕಮಿನ್ಸ್, ಶಿವಾಂಗ್ ಕುಮಾರ್: 8 ವಿಕೆಟ್

ಕೂಟದಲ್ಲಿ ರಾಜಸ್ಥಾನ

ಹರಾಜಿಗು ಮುನ್ನವೇ ತಂಡದ ಪ್ರಮುಖ ಆಟಗಾರ ಸಂಜು ಸ್ಯಾಮ್ಸನ್ ಅವರನ್ನು ಬಿಟ್ಟುಕೊಟ್ಟಿದ್ದ ರಾಜಸ್ಥಾನ ರಾಯಲ್ಸ್ ಜಡೇಜಾ ಅವರನ್ನು ಖರೀದಿಸಿತ್ತು. ಪ್ರಮುಖ ಬದಲಾವಣೆಯಲ್ಲಿ ಹಸರಂಗಾ ಅವರನ್ನೂ ಬಿಟ್ಟಿತ್ತು. ಈ ನಡುವೆ ಪಂದ್ಯಾವಳಿಗೆ ಬರುವ ಮುನ್ನವೇ ಸ್ಯಾಮ್ ಕರ್‍ರನ್ ಅವರು ಗಾಯದಿಂದ ಹೊರಬಿದ್ದರು. ವೈಭವ್ ಸೂರ್ಯವಂಶಿ ಮತ್ತು ಜೈಸ್ವಾಲ್ ಆಟದೊಂದಿಗೆ ಮಿಂಚಿದ ತಂಡವು ಗೆಲುವಿನ ನಾಗಾಲೋಟದಲ್ಲಿ ಮೆರೆಯಿತು. ಮೊದಲಿನ ಪಂದ್ಯಗಳಲ್ಲಿ ಮಿಶ್ರ ಫಲ ಪಡೆದ ರಾಜಸ್ಥಾನ ಮಧ್ಯಮ ಕೂಟದಲ್ಲಿ ಮಿಂಚಿತು. ರಿಯಾನ್ ಪರಾಗ್ ನೇತೃತ್ವದಲ್ಲಿ ಆಡಿದ ಪಂದ್ಯಗಳಲ್ಲಿ ಆರ್‌ಆರ್ ಪ್ರಮುಖವಾಗಿ ಜೋಫ್ರಾ ಆರ್ಚರ್ ಬಲ ಪಡೆಯಿತು. ಪ್ರತಿ ಪಂದ್ಯದಲ್ಲೂ ಮಿಂಚಿದ ಆರ್ಚರ್ ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡರಲ್ಲೂ ವಿಶೇಷ ಪ್ರದರ್ಶನ ನೀಡಿದ್ದಾರೆ.

ಕೀ ಪ್ಲೇಯರ್ಸ್-ಪ್ರದರ್ಶನ

ಬ್ಯಾಟಿಂಗ್
- ವೈಭವ್ ಸೂರ್ಯವಂಶಿ: 583 ರನ್
- ಧ್ರುವ್ ಜುರೇಲ್: 458 ರನ್
- ಯಶಸ್ವಿ ಜೈಸ್ವಾಲ್: 397 ರನ್
- ರಿಯಾನ್ ಪರಾಗ್: 272 ರನ್

ಬೌಲಿಂಗ್
- ರವೀಂದ್ರ ಜಡೇಜಾ: 209 ರನ್, 8 ವಿಕೆಟ್
- ಜೋಫ್ರಾ ಆರ್ಚರ್: 21 ವಿಕೆಟ್
- ಬ್ರಿಜೇಶ್ ಶರ್ಮ: 13 ವಿಕೆಟ್
- ರವಿ ಬಿಷ್ಣೋಯ್: 11 ವಿಕೆಟ್

ಹೈದರಾಬಾದ್ ಪ್ರದರ್ಶನ

- ಪಂದ್ಯ 14
- ಗೆಲುವು 9
- ಸೋಲು 5
- ಅಂಕ 18
- ರನ್‌ರೇಟ್ +0.524

ಪಿಚ್ ರಿಪೋರ್ಟ್

ಹೊಸ ಚಂಡೀಗಢದಲ್ಲಿ ಪಂದ್ಯ ನಡೆಯಲಿದೆ. ಹಾಲಿ ರನ್ನರ್-ಅಪ್ ಪಂಜಾಬ್ ಕಿಂಗ್ಸ್ ತಂಡದ ತವರಾಗಿದ್ದು ಬ್ಯಾಟಿಂಗ್ ಪಿಚ್ ಅನ್ನುವ ಹೆಸರೂ ಪಡೆದಿದೆ. ಹೆಚ್ಚಿನ ಬೌನ್ಸ್, ಫ್ಲಾಟ್ ಪಿಚ್ ಮತ್ತು ಹತ್ತಿರದ ಬೌಂಡರಿ ಬ್ಯಾಟರ್‌ಗಳಿಗೆ ಲಾಭ ತಂದಿವೆ. ಎರಡನೇ ಇನ್ನಿಂಗ್ಸ್‌ನಲ್ಲಿ ಇಬ್ಬನಿ ಕಾಟ ಕೂಡ ಇರಬಹುದು. ಆದಾಗ್ಯೂ ಸ್ಪಿನ್ನರ್‌ಗಳಾದ ಜಡೇಜಾ, ಶಿವಾಂಗ್ ಕುಮಾರ್ ಅಂಥವರಿಗೆ ಅಲ್ಪ ಲಾಭ ಕೂಡ ನೀಡಲಿದೆ.





ಕೂಟದಲ್ಲಿ ಪ್ರದರ್ಶನ

- ಪಂದ್ಯ: 14
- ಗೆಲುವು: 8
- ಸೋಲು: 6
- ರನ್‌ರೇಟ್: +0.189

ಮುಖಾಮುಖಿ

- ಪಂದ್ಯ: 23, ಹೈದರಾಬಾದ್: 14
- ರಾಜಸ್ಥಾನ: 9, ಅಧಿಕ ಸ್ಕೋರ್: ಹೈದರಾಬಾದ್ 286, ಕನಿಷ್ಠ ಸ್ಕೋರ್: ರಾಜಸ್ಥಾನ 102/10

ಪಂದ್ಯದ ವಿವರ

ಯಾವಾಗ: ಬುಧವಾರ
ಎಲ್ಲಿ: ಚಂಡೀಗಢ
ಸಮಯ: ಸಂಜೆ 7:30
ಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೋ ಹಾಟ್‌ಸ್ಟಾರ್

ಸಬಲೆಂಕಾ ಗೆಲುವಿನಾರಂಭ

• **ಪ್ಯಾರಿಸ್:** ಸ್ವಾಭಾವಿಕ ಪ್ರದರ್ಶನ ನೀಡಿರುವ ವಿಶ್ವದ ನಂಬರ್ 1 ಟೆನಿಸ್ ಆಟಗಾರ್ತಿ ಅರ್ನಾ ಸಬಲೆಂಕಾ ನಿರೀಕ್ಷೆಯಂತೆ ರೋಲ್ಯಾಂಡ್ ಗ್ಯಾರೋಸ್ ಪಂದ್ಯಾವಳಿಯಲ್ಲಿ ಶುಭಾರಂಭ ಮಾಡಿದರು. ಮಂಗಳವಾರ ನಡೆದ ಪಂದ್ಯದಲ್ಲಿ ಬೌಝ್ಕೋಜ್ ಮಾನೇರಿಯೋ ಅವರೊಂದಿಗೆ ಆಡಿದ ಅವರು, ನೇರ ಸೆಟ್‌ಗಳ ಸುಲಭ ಜಯ ಸಾಧಿಸಿದರು. ಮೊದಲನೇ ಸುತ್ತಿನ ಪಂದ್ಯದಲ್ಲಿ 4 ಅಂಕಗಳ ಮುನ್ನಡೆ ಸಾಧಿಸಿದ ಸಬಲೆಂಕಾ ಸರ್ವ್ ಹಾಗೂ ಏಸ್ ಪಾಯಿಂಟ್‌ಗಳೊಂದಿಗೆ ಮಿಂಚಿದರು. ಆರಂಭದಿಂದಲೂ ಒತ್ತಡ ಹೇರುತ್ತಾ, ಮುನ್ನಡೆ ಸಾಧಿಸಿದರು. ಎದುರಾಳಿ ಒಂದಿಷ್ಟು ಪ್ರಯತ್ನ ಪಟ್ಟ ನಂತರ ಒಂದು ಅಂಕ ಗಳಿಸಿದ್ದಲ್ಲದೆ, 5-1ರೊಂದಿಗೆ ಪಂದ್ಯದಲ್ಲಿ ಕಂಬ್ಯಾಕ್ ಮಾಡಿದರು. ಮುಂದಿನ ಆಟದಲ್ಲಿ ಉತ್ತಮ ಪ್ರದರ್ಶನ ನೀಡಿದ ಎದುರಾಳಿ ಬೌಝ್ಕೋಜ್ ಸತತ ಮೂರು ಅಂಕ ಗಳಿಸಿದರು. ಸಬಲೆಂಕಾ ಪ್ರತಿರೋಧಕ್ಕೆ ಉತ್ತರ ಕೊಡುತ್ತಾ, ಸರ್ವ್ ಪಾಯಿಂಟ್‌ಗಳನ್ನು ಬ್ರೇಕ್ ಮಾಡುತ್ತಾ ಸಾಗಿದ ಎದುರಾಳಿ ಪಂದ್ಯವನ್ನು 5-4ಕ್ಕೆ ತಂದಿತ್ತರು. ಆದರೆ ಮುಂದಿನ ಸೆಟ್‌ನಲ್ಲಿ ಗೆಲುವು ಸಾಧಿಸಿದ ಸಬಲೆಂಕಾ ಸುತ್ತಿನ ಮುನ್ನಡೆ ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಸಬಲೆಂಕಾ ಅಗ್ರೆಸಿವ್ ಆಟವಾಡಿದರು. ಮೊದಲಿನಿಂದಲೂ ಆಕ್ರಮಣಕಾರಿ ಹೊಡೆತಗಳ ಮೂಲಕ ಮಿಂಚಿದ ಅವರು, 5-0ರಿಂದ ಮುನ್ನಡೆ ಸಾಧಿಸಿದರು. ಎದುರಾಳಿ ಮತ್ತೆ ಕಂಬ್ಯಾಕ್ ಮಾಡಿ 2 ಅಂಕ ಗಳಿಸಿದರು. ಆದರೆ ಸಬಲೆಂಕಾ 6-2ರಿಂದ ಪಂದ್ಯ ಗೆದ್ದರು. ಮತ್ತೊಂದು ಪಂದ್ಯದಲ್ಲಿ ಅನ್ ಲಿ, ಚೀನಾದ ಝೂಂಗ್ ಅವರೊಂದಿಗೆ 6-4, 6-2ರಿಂದ ಗೆದ್ದರು. ಜೋವಿಕ್ ಎಲಾಲಾ ಅವರೊಂದಿಗೆ 6-4, 6-2ರಿಂದ ಗೆಲುವು ಸಾಧಿಸಿದರು.

ಮುಲ್ಲರ್ ವಾಕೋವರ್: ಪ್ರಮುಖ ಆಟಗಾರ ಅಲೆಕ್ಸಾಂಡರ್ ಮುಲ್ಲರ್ ಅವರು ಸ್ಟೆಫಾನೋಸ್ ಸಿಟ್ಸಿಪಾಸ್ ವಿರುದ್ಧದ ಪಂದ್ಯದಲ್ಲಿ ಹೊರನಡೆದರು. ಮಂಗಳವಾರದ ಪಂದ್ಯದಲ್ಲಿ ಅವರು, ಹಿನ್ನಡೆ ಅನುಭವಿಸಿದ್ದರು. ಆರಂಭಿಕ ಸೆಟ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ ಎದುರಾಳಿ ಸ್ಟೆಫಾನೋಸ್ ಸಿಟ್ಸಿಪಾಸ್ 6-2ರಿಂದ ಗೆಲುವು ಸಾಧಿಸಿದರು. ಎರಡನೇ ಸೆಟ್‌ನಲ್ಲಿ ಕೂಡ ಮುನ್ನಡೆ ಕಾಯ್ದುಕೊಂಡರು. ಸ್ಟೆಫಾನೋಸ್ ಸಿಟ್ಸಿಪಾಸ್ 3 ಅಂಕ ಗಳಿಸಿದ್ದರು. ಮುಲ್ಲರ್ ಯಾವುದೇ ಅಂಕ ಗಳಿಸಿರಲಿಲ್ಲ, ಈ ನಡುವೆ ಗಾಯಗೊಂಡ ಮುಲ್ಲರ್ ವಾಕೋವರ್ ಕೊಟ್ಟರು.

ಕಾಮನ್‌ವೆಲ್ತ್ ಚಿನ್ನ ಗೆದ್ದ 8ರ ತಾಮಿರುಥ್

• **ಹೊಸದಿಲ್ಲಿ:** ತಮಿಳುನಾಡಿನ 8 ವರ್ಷದ ಬಾಲಕ ತಾಮಿರುಥ್ ಅಮುಧನ್ ಎಸ್. ಕಾಮನ್‌ವೆಲ್ತ್ ಚೆಸ್ ಚಾಂಪಿಯನ್‌ಶಿಪ್‌ನ ಮೂರೂ ವಿಭಾಗದ ಪಂದ್ಯಾವಳಿಯಲ್ಲಿ ಚಿನ್ನದ ಪದಕ ಗೆದ್ದು ಇತಿಹಾಸ ನಿರ್ಮಿಸಿದ್ದಾನೆ. ಶ್ರೀಲಂಕಾದ ಕಾಲುತಾರಾದಲ್ಲಿ ನಡೆದ ಅಂಡರ್-10 ಓಪನ್ ಕಾಮನ್‌ವೆಲ್ತ್ ಚಾಂಪಿಯನ್‌ಶಿಪ್ ಆಫ್ ಚೆಸ್ ಪಂದ್ಯಾವಳಿಯಲ್ಲಿ ಈ ಸಾಧನೆ ಮಾಡಿದ್ದು, ಸ್ಟ್ಯಾಂಡರ್ಡ್, ರ್‍ಯಾಪಿಡ್ ಮತ್ತು ಬ್ಲಿಟ್ಜ್ ಮೂರೂ ವಿಭಾಗದಲ್ಲಿ ಪದಕ ಗೆದ್ದಿದ್ದಾನೆ. ಒನ್ ಪ್ಲೇಯರ್ ಕೆಟಗೇರಿಯಲ್ಲಿ ಮೂರು ವಿಭಾಗಗಳಲ್ಲಿ ಚಾಂಪಿಯನ್‌ಶಿಪ್ ಪಂದ್ಯಗಳು ನಡೆಯುತ್ತವೆ. ಇದರಲ್ಲಿ ಕ್ಲೀನ್ ಸ್ವೀಪ್ ಮಾಡಿರುವ ಬಾಲಕ, 9 ಸುತ್ತಿನ ರ್‍ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ 8.5 ಅಂಕಗಳನ್ನು ಗಳಿಸಿ ವಿಶ್ವ ಚೆಸ್ ಕ್ಷೇತ್ರದಲ್ಲಿ ವಿಶೇಷ ಗಮನ ಸೆಳೆದಿದ್ದಾನೆ.



- ಸ್ಟ್ಯಾಂಡರ್ಡ್, ರ್‍ಯಾಪಿಡ್ ಮತ್ತು ಬ್ಲಿಟ್ಜ್ ವಿಭಾಗದಲ್ಲಿ ಚಿನ್ನ
- ಅಂಡರ್-10 ಚಾಂಪಿಯನ್ ಶಿಪ್‌ನಲ್ಲಿ ದಾಖಲೆ

ಈಗಾಗಲೇ ಐದು ಏಷ್ಯನ್ ಪದಕ: ಚೆಸ್‌ನಲ್ಲಿ ಈಗಾಗಲೇ ಐದು ಏಷ್ಯನ್ ಪದಕ ಗೆದ್ದಿರುವ ತಾಮಿರುಥ್ ದಾಖಲೆಗಳನ್ನು ಮಾಡಿದ್ದಾನೆ. ಅಂಡರ್-19 ಕಪ್ ಆಫ್‌ನಲ್ಲಿ ಬರುವ ಚೆಸ್ ಪಟು, ಈಎಲ್‌ಒ ರೇಟಿಂಗ್‌ನಲ್ಲಿ 2000 ಅಂಕಗಳನ್ನೂ ದಾಟಿರುವುದು ವಿಶೇಷ. ಇದಲ್ಲದೆ, ಈ ಹಿಂದೆ ನಡೆದಿದ್ದ ಆನ್‌ಲೈನ್ ಬ್ಲಿಟ್ಜ್ ಪಂದ್ಯದಲ್ಲಿ ಜರ್ಮನಿಯ ಗ್ರ್ಯಾಂಡ್‌ಮಾಸ್ಟರ್ ವಿನ್ಸೆಂಟ್ ಕೀಮರ್ ಅವರನ್ನು ಸೋಲಿಸಿ ಗಮನ ಸೆಳೆದಿದ್ದ.

ಭಾರತ ವಿರುದ್ಧದ ಸರಣಿಗೆ ಅಫ್ಘಾನ್ ತಂಡ

• **ಹೊಸದಿಲ್ಲಿ:** ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿ ಮಂಗಳವಾರ ಭಾರತ ವಿರುದ್ಧದ ಮೂರು ಪಂದ್ಯಗಳ ಏಕದಿನ ಸರಣಿ ಮತ್ತು ಜೂನ್‌ನಲ್ಲಿ ನಡೆಯಲಿರುವ ಏಕೈಕ ಟೆಸ್ಟ್‌ಗೆ ತನ್ನ ತಂಡಗಳನ್ನು ಪ್ರಕಟಿಸಿದೆ.


ಎಡಗೈ ಬ್ಯಾಟ್ಸ್‌ಮನ್ ಹಶ್ಮತುಲ್ಲಾ ಶಾಹಿದಿ ಎರಡೂ ತಂಡಗಳನ್ನು ಮುನ್ನಡೆಸಲಿದ್ದಾರೆ, ಇದರಲ್ಲಿ ರಹಮಾನುಲ್ಲಾ ಗುರ್ಬಾಜ್ ಮತ್ತು ಅಜ್ಮತುಲ್ಲಾ ಒಮರ್‌ಜೈ ಕೂಡ ಇದ್ದಾರೆ. ಆದಾಗ್ಯೂ, ಲೆಗ್ ಸ್ಪಿನ್ನರ್ ರಶೀದ್ ಖಾನ್ ಅವರನ್ನು ಟೆಸ್ಟ್ ತಂಡದಲ್ಲಿ ಮಾತ್ರ ಸೇರಿಸಿಕೊಳ್ಳಲಾಗಿದೆ. ಟೆಸ್ಟ್ ಜೂನ್ 6 ರಿಂದ 10 ರವರೆಗೆ ನ್ಯೂ ಚಂಡೀಗಢದಲ್ಲಿ ನಡೆಯಲಿದ್ದು, ಏಕದಿನ ಸರಣಿ ಜೂನ್ 14 ರಿಂದ 20 ರವರೆಗೆ ಧರ್ಮಶಾಲಾ, ಲಖನೌ ಮತ್ತು ಚೆನ್ನೈನಲ್ಲಿ ನಡೆಯಲಿದ್ದು, ಪಂದ್ಯಗಳು ನಡೆಯಲಿವೆ.

ಅಫ್ಘಾನಿಸ್ತಾನ ತಂಡಗಳು: ಟೆಸ್ಟ್ ತಂಡ: ಹಶ್ಮತುಲ್ಲಾ ಶಾಹಿದಿ (ನಾಯಕ), ಅಬ್ದುಲ್ ಮಲಿಕ್, ಸೆದಿಕುಲ್ಲಾ ಅಟಲ್, ರಹಮತ್ ಶಾ, ರಹಮಾನುಲ್ಲಾ ಗುರ್ಬಾಜ್, ರಹಮಾನುಲ್ಲಾ ಜದ್ರಾನ್, ಅಫ್ಸರ್ ಜಜೈ (ವಿಕೆ), ಇಕ್ರಮ್ ಅಲಿಖಿಲ್ (ವಿಕೆ), ಅಜ್ಮತುಲ್ಲಾ ಒಮರ್‌ಜೈ, ಶರಫುದ್ದೀನ್ ಅಶ್ರಫ್, ನಂಗ್ಯಾಲ್ ಖರೋಟೈ, ಖೈಸ್ ಅಹ್ಮದ್, ಬಿಲಾಲ್ ಸಮಿ, ಜಿಯಾ ಶರೀಫಿ, ಸಲೀಮ್ ಸಫಿ.

ಏಕದಿನ ತಂಡ: ಹಶ್ಮತುಲ್ಲಾ ಶಾಹಿದಿ (ನಾಯಕ), ರಹಮಾನುಲ್ಲಾ ಗುರ್ಬಾಜ್ (ವಿಕೆ), ಇಬ್ರಾಹಿಂ ಝದ್ರಾನ್, ಸೇದಿಕುಲ್ಲಾ ಅಟಲ್, ದರ್ವಿಶ್ ರಸೂಲಿ, ರಹಮತ್ ಷಾ, ಇಕ್ರಮ್ ಅಲಿಖಿಲ್, ಮೊಹಮ್ಮದ್ ನಬಿ, ಅಜ್ಮತುಲ್ಲಾ ಒಮರ್ಜಾಯ್, ರಶೀದ್ ಖಾನ್, ನಂಗ್ಯಾಲ್ ಎಎಮ್ ಗ್ರೋತಾರುಝಾಯ್, ಶರೀಫಿ, ಫರೀದ್ ಮಲಿಕ್, ಬಿಲಾಲ್ ಸಮಿ. ಮೀಸಲು ಪೂಲ್: ಖೈಸ್ ಅಹ್ಮದ್, ಸಲೀಮ್ ಸಫಿ, ಬಶೀರ್ ಅಹ್ಮದ್.

ಪದಬಂಧ

ರಾಜಾ ಸಂಗಮೇಶ ಹಿರೇಮಠ



5996

ಎಡದಿಂದ ಬಲಕ್ಕೆ
2.ಕಸೂತಿ ಮಾಡಿದ ಮೇಲುಹಾಸಿದು (3)
5.ಮೃತದೇಹ ತಿನ್ನುವ ದೊಡ್ಡ ಪಕ್ಷಿ (4)
6.ನಡತೆಗೆಡು ಎಂಬರ್ಥದ ನುಡಿಗಟ್ಟು (4)
7.ಗ್ರಾಮಸ್ಥರ ಕೈ ಕೆಳಗಿನ ಸೇವಕ (4)
9.ತನ್ನ ನಾಡಿನ ಮೇಲಿರುವ ಅಭಿಮಾನ (4)
11.ಹೊಟ್ಟೆಬಾಕನನ್ನು ಹೀಗೂ ಹೇಳಬಹುದು (4)
13.ಬಡಗಿಯ ಕೆಲಸ (4)
14.ಈತ ಅರ್ಜುನನ ಮೊಮ್ಮಗ (4)
15.ಮರಾವೆ ಇಲ್ಲದೆ ಹರಡುವ ವದಂತಿ (4)
17.ಪಕ್ಕ-ಬದಿ ಎಂಬರ್ಥದ ಶಬ್ದ (3)

ಮೇಲಿನಿಂದ ಕೆಳಕ್ಕೆ
1.ಕೊರಳಲ್ಲಿ ಧರಿಸುವ ಅಲಂಕಾರಿಕ ವಸ್ತು (2)
2.ತಪ್ಪು-ದೋಷವನ್ನು ಸರಿಮಾಡುವ ಕೆಲಸ (4)
3.ಜಯಂತಿ-ಉದಯಕುಮಾರ ಅಭಿನಯದ ಚಿತ್ರ ತಲೆಕೆಳಗಾಗಿದೆ (4)
4. ಜಾತ್ರೆಯಲ್ಲಿ ಸಿಗುವ ಪೊಳ್ಳು ಎಂಬರ್ಥದ ಸಿಹಿತಿಂಡಿ (2)
8.ಮಲ್ಲಯುದ್ಧದ ಪಟ್ಟಿನ ಕಡೆಯಲ್ಲಿ ಎಲ್ಲೋಯಿದೆ (3)
10.ಇದು ಪ್ರಚೋದನೆ ನೀಡುವಂಥಾದ್ದು (3)
12.ಮತ-ತರ ಒಳಗೊಂಡ ಮೇಲುಕೀಳು (4)
13.ದೂರ-ದೂರಕ್ಕೆ ಇಡುವ ಹೆಜ್ಜೆ (4)
14.ಗೊತ್ತು ಹಚ್ಚುವಿಕೆ-ಪರಿಶೋಧನೆಯಿದು (2)
16.ಒಂದು ವಸ್ತುವಿನ ಅಗ್ರಭಾಗ (2)

5995 ಉತ್ತರ

ಎಡದಿಂದ ಬಲಕ್ಕೆ:
1.ತ್ರಿಪುರ 2.ಕಾರ್ತಿಕ
4.ಆದೇಶ 6.ಜಲಾಶಯ
7.ಕುಲಗೋತ್ರ
8.ತೋಯಾಶಯ
10.ಚಲಾಚಲ
13.ಕದನರಾಗಿ
16.ರಸಾಂಜನ
17.ಕರಾಮತ್ತು

ಮೇಲಿನಿಂದ ಕೆಳಕ್ಕೆ:
1. ತ್ರಿಭುಜ 3.ಕಳತ್ರ
4.ಆಯವ್ಯಯ 5.ಲವಕುಶ
8.ತೋರಣದ್ವಾರ 9.ಶತಕ
11.ಚಿನ್ನಂಗಿ 12.ಚಕಾರವೆತ್ತು
14.ದಲನ 15.ರಾಜಕ

ಕಿರುಸುದ್ದಿ

ಕಾರ್ಮಿಕರಿಗೆ ಕನಿಷ್ಠ ವೇತನ ನಿರ್ಧಾರ ಸಂತಸ

ದಾವಣಗೆರೆ: ಕಾರ್ಮಿಕ ಸಂಘಟನೆಗಳು ನಡೆಸಿದ ನಿರಂತರ ಬೀದಿ ಹೋರಾಟ ಮತ್ತು ಕಾನೂನು ಹೋರಾಟಗಳ ಮಹತ್ವದ ಫಲವಾಗಿ ಕಾರ್ಮಿಕ ಇಲಾಖೆಯು ಕನಿಷ್ಠ ವೇತನ ಪರಿಷ್ಕರಣೆಯ ಅಂತಿಮ ಅಧಿಸೂಚನೆಯನ್ನು ಹೊರಡಿಸಿರುವ ನಿರ್ಧಾರವನ್ನು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ರಾಜ್ಯ ಸಮಿತಿಯು ಸ್ವಾಗತಿಸುತ್ತದೆ. ನಗರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಜೆಸಿಟಿಯು ನ ಆವರಗೆರೆ ಉಮೇಶ್ ಮಾತನಾಡಿ, ಉಚ್ಚ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಮತ್ತು ಇತರ ಪ್ರಕರಣಗಳಲ್ಲಿ ನೀಡಲಾದ ತೀರ್ಪಿನ ಅನ್ವಯ ಈ ಹಿಂದೆ ಹೊರಡಿಸಲಾಗಿದ್ದ ಅಧಿಸೂಚನೆಗಳನ್ನು ರದ್ದುಪಡಿಸಲಾಗಿತ್ತು. ಸುಪ್ರೀಂ ಕೋರ್ಟಿನ ಮಾರ್ಗಸೂಚಿಗಳನ್ನು ಅನುಸರಿಸಿ ಹೊಸದಾಗಿ ಕನಿಷ್ಠ ವೇತನ ಲೆಕ್ಕಾಚಾರ ಮಾಡಲು ನ್ಯಾಯಾಲಯವು ನಿರ್ದೇಶನ ನೀಡಿತ್ತು ಎಂದರು. ಈ ಪರಿಷ್ಕೃತ ಅಂತಿಮ ಅಧಿಸೂಚನೆಯು ರಾಜ್ಯದ ಒಟ್ಟು 80 ಅನುಸೂಚಿತ ಉದ್ಯಮಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಅನ್ವಯವಾಗಲಿದೆ. 2022ರಲ್ಲಿ ಪ್ರಾರಂಭವಾದ ಈ ಪ್ರಕ್ರಿಯೆಯ ಭಾಗವಾಗಿ ಕಳೆದ ಎರಡು ವರ್ಷಗಳ ಕಾಲದ ವೇರಿಯಬಲ್ ಡಿಯರ್ನೆಸ್ ಅಲೋಯನ್ಸ್ ಅನ್ನು ಸೇರಿಸುವ ಅಗತ್ಯವನ್ನು ಸರ್ಕಾರವು ಪರಿಗಣಿಸಿದೆ ಎಂದು ಸಂತಸ ವ್ಯಕ್ತಪಡಿಸಿದರು. ಕಾರ್ಮಿಕರ ಹಿತದೃಷ್ಟಿಯಿಂದ ಅಂತಿಮ ಅಧಿಸೂಚನೆಯನ್ನು ಜಾರಿಗೊಳಿಸುವ ಮುನ್ನ ಪರಿಷ್ಕರಣೆ ಮಾಡಿ ನಮ್ಮ ಮುಖ್ಯ ಹಕ್ಕೋತ್ತಾಯವಾಗಿದ್ದ ಎಲ್ಲಾ ರೀತಿಯ ಕಾರ್ಮಿಕರಿಗೆ ಮಾಸಿಕ ಕನಿಷ್ಠ ವೇತನ 36000 ರೂ. ಜಾರಿಗೊಳಿಸಬೇಕು ಎಂದು ಜೆಸಿಟಿಯು ಮೂಲಕ ಕಾರ್ಮಿಕ ಇಲಾಖೆಗೆ ಈ ಮೂಲಕ ಆಗ್ರಹಿಸುತ್ತಿದ್ದೇವೆ ಎಂದರು.

ಜೂ.5ಕ್ಕೆ ಹಸಿರು ಅಭಿಯಾನ

ಚಂದ್ರಗುತ್ತಿ: ಜೂನ್ 5ರ ವಿಶ್ವ ಪರಿಸರ ದಿನದ ಅಂಗವಾಗಿ ಸೊರಬ ತಾಲೂಕಿನ ಚಂದ್ರಗುತ್ತಿ ಸಮೀಪದ ಹರೀಶಿ ವಿನಯ್ ಕ್ರೀಡಾಂಗಣದಲ್ಲಿ ಪರಿಸರ ಸಂರಕ್ಷಣೆ ಹಾಗೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಬೃಹತ್ ಗಿಡ ನೆಡುವ ಹಸಿರು ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ರಾಘವಿ ಚಾರಿಟೇಬಲ್ ಟ್ರಸ್ಟ್ ಹಾಗೂ ಸೇವಾ ಫೌಂಡೇಶನ್ ವತಿಯಿಂದ ಜಂಟಿಯಾಗಿ ಈ ವಿಶೇಷ ಪರಿಸರ ಪೂರಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಟ್ರಸ್ಟ್‌ನ ಅಧ್ಯಕ್ಷ ಹಾಗೂ ಸಮಾಜ ಸೇವಕ ರಾಘವೇಂದ್ರ ಸುಂಟರಹಳ್ಳಿ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಪ್ರಕೃತಿಯ ಸಮತೋಲನವನ್ನು ಕಾಯ್ದುಕೊಳ್ಳುವುದು ಮತ್ತು ಪರಿಸರವನ್ನು ಮುಂದಿನ ಪೀಳಿಗೆಗೆ ರಕ್ಷಿಸುವುದು ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಾಗಿದೆ. ಈ ನಿಟ್ಟಿನಲ್ಲಿ ಕೇವಲ ಆಚರಣೆಗೆ ಸೀಮಿತವಾಗದೆ, ಸಾರ್ವಜನಿಕರಲ್ಲಿ ನೈಜ ಪರಿಸರ ಪ್ರಜ್ಞೆ ಬೆಳೆಸುವ ಉದ್ದೇಶದಿಂದ 'ಪರಿಸರಕ್ಕೆ ಪೂರಕವಾಗಿ ನಾವೆಲ್ಲರೂ ಕೆಲಸ ಮಾಡೋಣ' ಎಂಬ ಧ್ಯೇಯವಾಕ್ಯದೊಂದಿಗೆ ಈ ಗಿಡ ನೆಡುವ ಕಾರ್ಯವನ್ನು ಹಮ್ಮಿಕೊಳ್ಳಲಾಗುತ್ತಿದೆ ಎಂದು ಹೇಳಿದರು.

ದಕ್ಷಿಣ ನಗರ ಪಾಲಿಕೆಗೆ ಆಯುಕ್ತ ಕೆ.ಎನ್.ರಮೇಶ್ ಸಲಹೆ

ತ್ಯಾಜ್ಯ ನಿರ್ವಹಣೆ ಕುರಿತು ಜನರಲ್ಲಿ ಅರಿವು ಮೂಡಿಸಿ



ಬೆಂಗಳೂರು: ಪ್ರತಿ ವಾರ್ಡ್‌ನಲ್ಲಿ ತ್ಯಾಜ್ಯ ನಿರ್ವಹಣಾ ಕಲಿಕಾ ಕೇಂದ್ರ ಸ್ಥಾಪನೆ ಅತ್ಯಗತ್ಯವಾಗಿದೆ. ಹಾಲಿ ಇರುವಂತಹ ತ್ಯಾಜ್ಯ ನಿರ್ವಹಣಾ ಕಲಿಕಾ ಕೇಂದ್ರಗಳಿಗೆ ಶಾಲಾ-ಕಾಲೇಜು ವಿದ್ಯಾರ್ಥಿಗಳನ್ನು ಭೇಟಿ ಮಾಡಿಸಿ ಅರಿವು ಮೂಡಿಸಬೇಕೆಂದು ನಾಗರಿಕ ಸಂಸ್ಥೆಗಳು ಬೆಂಗಳೂರು ದಕ್ಷಿಣ ನಗರ ಪಾಲಿಕೆಗೆ ಸಲಹೆ ನೀಡಿದ್ದಾರೆ.

ದಕ್ಷಿಣ ನಗರ ಪಾಲಿಕೆ ಆಯುಕ್ತ ಕೆ.ಎನ್.ರಮೇಶ್ ತಮ್ಮ ಕಚೇರಿಯಲ್ಲಿ ಘನತ್ಯಾಜ್ಯ ನಿರ್ವಹಣೆ ಸಮಸ್ಯೆಗಳ ಪರಿಹಾರಕ್ಕೆ ನಾಗರಿಕ ಸಂಸ್ಥೆಗಳ ಸಲಹಾ ಸಭೆ ನಡೆಸಿದರು. ಬಿಎಸ್‌ಡಬ್ಲ್ಯೂಎಂಎಲ್ ರಾಯಭಾರಿ, ನಟ ಅನಿರುದ್ಧ ಜಾಟ್ಕರ್ ಸೇರಿದಂತೆ ಕುಮಾರಸ್ವಾಮಿ ಬಡಾವಣೆಯ ಸಿಟಿಜನ್ ಟಾಸ್ಕ್ ಫೋರ್ಸ್‌ನವರು ಪಾಲಿಕೆಯ ವ್ಯವಸ್ಥೆಯೊಡನೆ ತಮ್ಮ ಬಡಾವಣೆಗಳ ಸ್ವಚ್ಛತೆಗೆ ಘನತ್ಯಾಜ್ಯ ಸಂಗ್ರಹಣೆ ಹಾಗೂ ನಿರ್ವಹಣೆಗಾಗಿ ಹಾಲಿ ಅಳವಡಿಸಿಕೊಂಡಿರುವ ಯೋಜನೆಗಳ ಕುರಿತಂತೆ ಸಮಗ್ರವಾಗಿ ಚರ್ಚಿಸಿ ಪಾಲಿಕೆಗೆ ಹಲವಾರು ಸಲಹೆ ನೀಡಿದರು. ಜೆ.ಪಿ.ನಗರದಲ್ಲಿ ವುಮೆನ್ ಆಫ್ ವಿಸ್ಡಮ್ ಸಂಸ್ಥೆಯ ಸಕ್ರಿಯ ಪ್ರಯತ್ನದಿಂದಾಗಿ ಮಿತ್ರ ತ್ಯಾಜ್ಯ ಮುಕ್ತ ವಾತಾವರಣ ನಿರ್ಮಾಣವಾಗಿದೆ. ಶೇ. 100 ರಷ್ಟು ಕಸ ವಿಂಗಡಣೆ ಮಾಡಲಾಗುತ್ತಿದೆ. ಅರವಣಿ ತಂಡದ ಮೂಲಕ ಗೋಡೆ ಚಿತ್ರಗಳನ್ನು ಬಿಡಿಸಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಇದೇ ಮಾದರಿಯಲ್ಲಿ ಎಲ್ಲಾ ಅಪಾರ್ಟ್‌ಮೆಂಟ್‌ಗಳು ಹಾಗೂ ಪಿಜಿಗಳಲ್ಲೂ ಕಸ ವಿಂಗಡಣೆಯನ್ನು ಕಡ್ಡಾಯ ಮಾಡುವುದು ಸೂಕ್ತ ಎಂದು ತಿಳಿಸಿದರು.

ಸಿಎಸ್‌ಆರ್ ನಿಧಿ ಬಳಸಿಕೊಳ್ಳಲು ಸಲಹೆ: ರಾಜಕಾಲುವೆಗಳ ಬಫರ್ ವಲಯಗಳಲ್ಲಿ ಲೀಣ್ ಕಂಪೋಸ್ಟರ್‌ಗಳನ್ನು ಅಳವಡಿಸಲು ಹಾಗೂ ವಾರ್ಡ್ ಮಟ್ಟದಲ್ಲಿ ಶ್ರೆಡ್ಡರ್ ಯಂತ್ರಗಳು, ಕಸದ ವಾಹನಗಳು ಮತ್ತು ಕಸ ನಿರ್ವಹಣಾ ಕಲಿಕಾ ಕೇಂದ್ರಗಳನ್ನು ಸ್ಥಾಪಿಸಲು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಗಾಗಿ ಬೃಹತ್ ಸಂಸ್ಥೆಗಳನ್ನು ಕೋರಲು ತೀರ್ಮಾನಿಸಿ, ಸ್ಥಳೀಯ ಮಟ್ಟದಲ್ಲಿ ಕಂಪೋಸ್ಟಿಂಗ್ ಮಾಡಲು ಪಾಲಿಕೆಯಿಂದ ಜಾಗ ಗುರುತಿಸುವಿಕೆ ಹಾಗೂ ಅಗತ್ಯ ಅನುಮತಿಗಳನ್ನು ನೀಡುವ ಅವಶ್ಯಕತೆ ಕುರಿತು ಆಯುಕ್ತರಿಗೆ ನಾಗರಿಕ ಸಂಸ್ಥೆಗಳು ಸಲಹೆ ನೀಡಿವೆ.

ಕುರಿ, ಮೇಕೆ ಸಾಕಾಣಿಕೆ ವೈಜ್ಞಾನಿಕ ತರಬೇತಿ ಕಾರ್ಯಾಗಾರ

ಬೆಂಗಳೂರು: ಕುರಿ ಮತ್ತು ಮೇಕೆ ಸಾಕಾಣಿಕೆ ಒಂದು ಉದ್ಯಮವಾಗಿ ಬೆಳೆಯುತ್ತಿದೆ. ಕುರಿ ಮತ್ತು ಮೇಕೆ ಸಾಕಾಣಿಕೆಯನ್ನು ವೈಜ್ಞಾನಿಕವಾಗಿ ಅಳವಡಿಸಿಕೊಂಡಾಗ ಉತ್ತಮ ಆದಾಯದ ಜತೆಗೆ ಉದ್ದಿಮೆದಾರರಾಗಲು ಅನುಕೂಲವಾಗುತ್ತಿದೆ ಎಂದು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ವಿ.ಸುರೇಶ್ ತಿಳಿಸಿದರು.

ಜಿಕೆವಿಕೆ ವಿಸ್ತರಣಾ ನಿರ್ದೇಶನಾಲಯ ರೈತ ತರಬೇತಿ ಸಂಸ್ಥೆ ಮತ್ತು ಹೆಬ್ಬಾಳದ ಪಶುವೈದ್ಯಕೀಯ ಮಹಾವಿದ್ಯಾಲಯದ ಸಹಯೋಗದೊಂದಿಗೆ ಸೋಮವಾರದಿಂದ ಮೇ 27ರವರೆಗೆ ಆಯೋಜಿಸಲಾಗಿರುವ ವೈಜ್ಞಾನಿಕ ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿ, ತಳಿಗಳ ಬೇಡಿಕೆಗೆ ಅನುಗುಣವಾಗಿ ಸಾಕಾಣಿಕೆ ಮಾಡಿದರೆ ಬೇಡಿಕೆಯ ಜೊತೆಗೆ ಹೆಚ್ಚು ಆದಾಯಪಡೆಯಬಹುದು. ರೈತರು ತಳಿಗಳ ಆಯ್ಕೆಗೆ ಸಂಬಂಧಪಟ್ಟ ವಿಜ್ಞಾನಿಗಳ ಜೊತೆ ಚರ್ಚಿಸಿ, ತಳಿ ಮತ್ತು ಮರಿಗಳು ಬಗ್ಗೆ ತಿಳಿದುಕೊಳ್ಳಬೇಕು ಎಂದು ಹೇಳಿದರು.

ಪಶು ವೈದ್ಯಕೀಯ ಮಹಾವಿದ್ಯಾಲಯದ ಡೀನ್ ಡಾ. ನಾಗರಾಜ ಆರ್. ಮಾತನಾಡಿ, ಕುರಿ ಮತ್ತು ಮೇಕೆ ಸಾಕಾಣಿಕೆ ತರಬೇತಿ ಕಾರ್ಯಕ್ರಮ ಆಯೋಜಿಸುತ್ತಿರುವುದು ರೈತರಿಗೆ ಅನುಕೂಲವಾಗುತ್ತಿದೆ. ಕುರಿ ಮತ್ತು ಮೇಕೆ ಸಾಕಾಣಿಕೆಯ ತಾಂತ್ರಿಕ ಮಾಹಿತಿ ಪಡೆದು ವೈಜ್ಞಾನಿಕವಾಗಿ ಸಾಕಾಣಿಕೆ ಮಾಡಿದರೆ ಉತ್ತಮ ಇಳುವರಿ ಪಡೆಯಬಹುದು. ಆಯಾ ಪ್ರದೇಶಕ್ಕೆ ಅನುಗುಣವಾಗಿ ಕುರಿ ಮತ್ತು ಮೇಕೆಗಳ ಆಯ್ಕೆ ಮಾಡಿ ಸಾಕಾಣಿಕೆ ಮಾಡಿದರೆ ಉತ್ಕೃಷ್ಟ ಗುಣಮಟ್ಟದ ತಳಿಗಳನ್ನು ಪಡೆಯಬಹುದು. ವಿವಿಧ ತಳಿಗಳನ್ನು ಮಿಶ್ರ ಮಾಡದೆ ಸಾಕಾಣಿಕೆ ಮಾಡಿದರೆ, ರೋಗಗಳು ನಿಯಂತ್ರಣದ ಜೊತೆಗೆ ತಳಿಗಳ ಅಭಿವೃದ್ಧಿ ಮಾಡಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ವಿಸ್ತರಣಾ ನಿರ್ದೇಶಕ ಡಾ. ವೈ.ಎನ್. ಶಿವಲಿಂಗಯ್ಯ, ರೈತ ತರಬೇತಿ ಸಂಸ್ಥೆ ಮುಖ್ಯಸ್ಥ ಡಾ.ಸಿ. ನಾರಾಯಣಸ್ವಾಮಿ, ಕಾರ್ಯಕ್ರಮ ಆಯೋಜಕ ಡಾ.ಶಿವಶಂಕರ್ ಎಂ., ಪ್ರಾಧ್ಯಾಪಕಿ ಡಾ.ಲತಾ ಆರ್. ಕುಲಕರ್ಣಿ ಸೇರಿದಂತೆ ತರಬೇತಿಯಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ 31 ಶಿಬಿರಾರ್ಥಿಗಳು ಭಾಗವಹಿಸಿದ್ದರು.

ಕರ್ನಾಟಕ ಸಂಘಟಕರ ಸಮಾವೇಶದಲ್ಲಿ ಬರಗೂರು

ಸಂಘಟನೆಗೆ ತಲೆಬಾಗಲೇಬೇಕು

ಬೆಂಗಳೂರು: ಸಂಘಟನೆಗಳ ಶಕ್ತಿಯ ಮುಂದೆ ಯಾವುದೇ ಆಡಳಿತವೂ ತಲೆಬಾಗಲೇಬೇಕು. ಆದರೆ ಸಂಘಟನೆಗಳ ಉದ್ದೇಶ ಕೇವಲ ಆಡಳಿತವನ್ನು ಮಣಿಸುವುದಲ್ಲ, ಸಮಾಜದ ಆಶಯಗಳನ್ನು ಪ್ರತಿನಿಧಿಸಿ ಪ್ರಜಾಪ್ರಭುತ್ವವನ್ನು ಜೀವಂತವಾಗಿಡುವುದಾಗಿದೆ ಎಂದು ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ನಗರದ ಕನ್ನಡ ಭವನದ ನಯನ ರಂಗಮಂದಿರದಲ್ಲಿ ನಡೆದ ಕರ್ನಾಟಕ ಸಂಘಟಕರ ಸಮಾವೇಶವನ್ನು ಉದ್ಘಾಟಿಸಿದ ಅವರು, ಇಂದಿನ ಕಾಲಘಟ್ಟದಲ್ಲಿ ಸಂಘಟನೆಗಳು ಹಾಗೂ ಸಾಂಸ್ಕೃತಿಕ ಚಳವಳಿಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಆಡಳಿತ ವ್ಯವಸ್ಥೆಗೆ ಕಿವಿ ಮತ್ತು ಕಣ್ಣು ಎರಡೂ ಅಗತ್ಯ. ಜನರ ಮಾತು ಕೇಳುವ ಗುಣ ಮತ್ತು ಸಮಸ್ಯೆಗಳನ್ನು ನೋಡುವ ದೃಷ್ಟಿಯೇ ನಿಜವಾದ ಪ್ರಜಾಪ್ರಭುತ್ವದ ಲಕ್ಷಣ. ಆದರೆ, ಇಂದಿನ ವ್ಯವಸ್ಥೆಯಲ್ಲಿ ಕಿವಿ ಮತ್ತು ಕಣ್ಣಿಗಿಂತ ನಾಲಿಗೆಯೇ ಹೆಚ್ಚು ಕೆಲಸ ಮಾಡುತ್ತಿದೆ. ಕಾಗದರಹಿತ ಕಚೇರಿಗಳನ್ನು ಮಾಡಬಹುದು, ಆದರೆ ಭ್ರಷ್ಟಾಚಾರರಹಿತ ಕಚೇರಿಗಳನ್ನು ಯಾವಾಗ ಮಾಡುತ್ತೀರಿ ಎಂಬ ಪ್ರಶ್ನೆ ಇನ್ನೂ ಉಳಿದಿದೆ ಎಂದು ಅವರು ಟೀಕಿಸಿದರು.

ಕರ್ನಾಟಕದಲ್ಲಿ ಅಕಾಡೆಮಿಗಳು, ಪ್ರಾಧಿಕಾರಗಳು ಮತ್ತು ಸಾಂಸ್ಕೃತಿಕ ಸಂಸ್ಥೆಗಳ ಸ್ಥಾಪನೆಯ ಮೂಲಕ ಬಹುತ್ವದ ಸಂಸ್ಕೃತಿಗೆ ಉತ್ತೇಜನ ನೀಡಲಾಗಿದೆ. ಆದರೆ ಈ ಸಂಸ್ಥೆಗಳಿಗೆ ಸರ್ಕಾರಗಳು ಎಷ್ಟರ ಮಟ್ಟಿಗೆ ಬಲ ನೀಡಿವೆ ಎಂಬ ಪ್ರಶ್ನೆಯೂ ಉದ್ಭವವಾಗುತ್ತದೆ ಎಂದರು.

ಹಿರಿಯ ಸಂಘಟಕ ಶ್ರೀನಿವಾಸ್ ಜಿ. ಕಪ್ಪಣ್ಣ ಮಾತನಾಡಿ, ಸರ್ಕಾರವೇ ಅನುಮೋದಿಸಿ ಗೆಜೆಟ್ ಮಾಡಿರುವ ಸಾಂಸ್ಕೃತಿಕ ನೀತಿಯೇ ಜನರಿಗೆ ತಲುಪಿಲ್ಲ, ಗೆಜೆಟ್‌ನಲ್ಲಿ ಪ್ರಕಟವಾದ ನೀತಿ ಜನರಿಗೆ ಯಾಕೆ ತಲುಪಲಿಲ್ಲ? ಇದರ ಹೊಣೆ ಯಾರದು ಎಂಬುದಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಉತ್ತರಿಸಬೇಕು ಎಂದು ಒತ್ತಾಯಿಸಿದರು.

ಕಾರ್ಯಕ್ರಮದಲ್ಲಿ ಮೂರನೇ ಕರ್ನಾಟಕ ಸಂಘಟಕರ ಸಮಾವೇಶದ ಅಧ್ಯಕ್ಷ ರಾಜಶೇಖರ್ ಕದಂಬ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಮುಕುಂದರಾಜ್, ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್, ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ.ನಾಗರಾಜ್ ಮೂರ್ತಿ ಸೇರಿದಂತೆ ಇತರರಿದ್ದರು.

ಮಕ್ಕಳಲ್ಲಿ ದೇಶಭಕ್ತಿ ಬೆಳೆಯಲಿ



ಕೆಂಗೇರಿ: ಮಕ್ಕಳು ಸಾಧನೆ ಮಾಡುವ ಮೂಲಕ ದೇಶದ ಶಕ್ತಿಯಾಗಿ ಬೆಳೆಯಬೇಕು ಎಂದು ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಕರೆ ನೀಡಿದರು.

ಭಾರತ್ ನಗರ ಕೆಂಪೇಗೌಡ ಆಟದ ಮೈದಾನದಲ್ಲಿ ಹಮ್ಮಿಕೊಳ್ಳಲಾದ ಬಸವ ಜಯಂತಿ, ಡಾ.ಶಿವಕುಮಾರ ಸ್ವಾಮಿಗಳ 119ನೇ ಜಯಂತ್ಯುತ್ಸವ ಹಾಗೂ ಪದ್ಮಭೂಷಣ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ ಅವರ 81ನೇ ಜನ್ಮದಿನಾಚರಣೆ ಅಂಗವಾಗಿ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ವಿದ್ಯಾರ್ಥಿಗಳು ಕೇವಲ ಅಂಕಗಳಿಸುವಿಕೆಗೆ ಮಾತ್ರ ಸೀಮಿತವಾಗಬಾರದು, ಹಿರಿಯರು, ತಂದೆ ತಾಯಿ ಹಾಗೂ ಗುರುಗಳಿಗೆ ಗೌರವಿಸುವ ಸಂಸ್ಕಾರ ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ತುಮಕೂರಿನ ಸಿದ್ಧಗಂಗಾ ಮಠದ ಪೀಠಾಧ್ಯಕ್ಷ ಶ್ರೀ ಸಿದ್ದಲಿಂಗ ಸ್ವಾಮೀಜಿ ಮಾತನಾಡಿ, ವಿದ್ಯಾರ್ಥಿಗಳು ಕೇವಲ ಪ್ರತಿಭಾವಂತರಾದರೆ ಸಾಲದು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು, ಆಚಾರ ವಿಚಾರಗಳನ್ನು ಮೈಗೂಡಿಸಿಕೊಳ್ಳಬೇಕು ಎಂದರು.

ಶಾಸಕ ಎಸ್.ಟಿ.ಸೋಮಶೇಖರ್ ಮಾತನಾಡಿ, ನನ್ನ ಕ್ಷೇತ್ರದಲ್ಲಿ ವ್ಯಾಸಂಗ ಮಾಡುತ್ತಿರುವ ಬಡ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಮುಂದಾಗಿದ್ದೇನೆ ಎಂದು ತಿಳಿಸಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.90ಅಂಕ ಪಡೆದ ಸುಮಾರು 1700 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ಬಿಜಿಎ ರೇಖಾ, ಯುವ ಮುಖಂಡ ನಿಶಾಂತ್ ಸೋಮಶೇಖರ್ ಮುಂತಾದವರಿದ್ದರು.

ಮಾರ್ನಿಂಗ್ ಶೋ

ರಾಗಿಣಿ ಐಪಿಎಸ್ 2 ಚಿತ್ರಕ್ಕೆ ಚಾಲನೆ





ಕನ್ನಡ ಚಿತ್ರರಂಗದಲ್ಲಿ ತುಪ್ಪದ ಬೆಡಗಿ ಎಂದೇ ಗುರುತಿಸಿಕೊಂಡಿರುವ ನಟಿ ರಾಗಿಣಿ ದ್ವಿವೇದಿ ಅವರ ಹುಟ್ಟುಹಬ್ಬದ ಸಂದರ್ಭದಲ್ಲಿ ಅವರ ನೂತನ ಚಿತ್ರದ ಘೋಷಣೆಯಾಗಿದೆ. ಚಿತ್ರದ ಹೆಸರು ರಾಗಿಣಿ ಐಪಿಎಸ್-2. ರಾಗಿಣಿ ದ್ವಿವೇದಿ ಅಭಿನಯದ ಈ ಸಿನಿಮಾದ ಮೂಲಕ ನವರಸ ನಾಯಕ ಜಗ್ಗೇಶ್ ಅವರ ಪುತ್ರರಿಬ್ಬರೂ ನಿರ್ದೇಶನಕ್ಕಿಳಿದಿದ್ದಾರೆ. ಹನ್ನೆರಡು ವರ್ಷಗಳ ಹಿಂದೆ ರಾಗಿಣಿ ಐಪಿಎಸ್ ಎಂಬ ಚಿತ್ರ ತೆರೆಕಂಡು ಆಗ ಭರ್ಜರಿ ಯಶಸ್ಸು ಕಂಡಿತ್ತು. ಇದೀಗ ಅದರ ಮುಂದುವರಿದ ಭಾಗವಾಗಿ ರಾಗಿಣಿ ಐಪಿಎಸ್ 2 ಚಿತ್ರ ಮೂಡಿಬರುತ್ತಿದೆ. ನವರಸ ನಾಯಕ ಜಗ್ಗೇಶ್ ಅವರ ಪುತ್ರರಾದ ಗುರುರಾಜ್ ಹಾಗೂ ಯತಿರಾಜ್ ಜಗ್ಗೇಶ್ ಇಬ್ಬರೂ ಸೇರಿ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದಾರೆ. ಇದುವರೆಗೆ ನಟರಾಗಿ ಗುರುತಿಸಿಕೊಂಡಿದ್ದ ಗುರುರಾಜ್ ಹಾಗೂ ಯತಿರಾಜ್ ಈ ಚಿತ್ರದ ಮೂಲಕ ನಿರ್ದೇಶಕರಾಗಿ ಹೊಸ ಹೆಜ್ಜೆ ಇಡುತ್ತಿದ್ದಾರೆ. ನಿರ್ಮಾಪಕ ಕೆ.ಮಂಜು ಹಾಗೂ ರಾಗಿಣಿ ವೆಂಚರ್ಸ್ ಜಂಟಿಯಾಗಿ ಈ ಚಿತ್ರವನ್ನು ನಿರ್ಮಿಸುತ್ತಿದೆ.

ರಾಗಿಣಿ ಐಪಿಎಸ್ ಚಿತ್ರದ ಮುಂದುವರಿದ ಭಾಗವಾಗಿ ರಾಗಿಣಿ ಐಪಿಎಸ್ 2 ಸಿನಿಮಾ ಆರಂಭಿಸುತ್ತಿದ್ದೇವೆ. ನಾವಿಬ್ಬರೂ 2019 ರಿಂದಲೂ ನಿರ್ದೇಶನಕ್ಕಾಗಿ ಸಾಕಷ್ಟು ತಯಾರಿ ಮಾಡಿಕೊಂಡಿದ್ದೇವೆ. ನಟನೆಯೇ ಬೇರೆ. ನಿರ್ದೇಶನವೇ ಬೇರೆ. ನಿರ್ದೇಶನಕ್ಕೆ ತಯಾರಿ ಅಗತ್ಯ. ರಾಗಿಣಿ ಅವರು ಈಗಾಗಲೇ ಜನಪ್ರಿಯ ನಟಿ ಅಲ್ಲದೆ ಅಪಾರ ಅಭಿಮಾನಿಗಳನ್ನು ಹೊಂದಿರುವ ನಟಿ. ಅವರ ಚಿತ್ರವನ್ನು ನಿರ್ದೇಶನ ಮಾಡುವುದು ಅಷ್ಟು ಸುಲಭವಲ್ಲ. ರಾಗಿಣಿ ಐಪಿಎಸ್ 2, ರಾಗಿಣಿ ಐಪಿಎಸ್ ಚಿತ್ರದ ಮುಂದುವರಿದ ಭಾಗ. ಆ ಚಿತ್ರದ ಕಥೆ ಎಲ್ಲಿಗೆ ಕೊನೆಯಾಗಿತ್ತೊ, ಅಲ್ಲಿಂದಲೇ ಈ ಚಿತ್ರದ ಕಥೆ ಮುಂದುವರೆಯುತ್ತದೆ ಎಂದು ನಿರ್ದೇಶಕ ಗುರುರಾಜ್ ಹಾಗೂ ಯತಿರಾಜ್ ಅವರು ಹೇಳಿದರು.

ಚಿತ್ರದ ನಾಯಕಿ ರಾಗಿಣಿ ದ್ವಿವೇದಿ ಮಾತನಾಡುತ್ತ ನನ್ನ ನೂತನ ಚಿತ್ರದ ಘೋಷಣೆಯನ್ನು ನನ್ನ ಹುಟ್ಟುಹಬ್ಬದ ದಿನ ಮಾಧ್ಯಮದವರ ಉಪಸ್ಥಿತಿಯಲ್ಲೇ ಮಾಡುತ್ತಿದ್ದೇವೆ. ಕೆ.ಮಂಜು ಅವರು ನಿರ್ಮಾಣಕ್ಕೆ ಜೊತೆಯಾಗಿರುವುದು ಹಾಗೂ ಜಗ್ಗೇಶ್ ಪುತ್ರರಾದ ಗುರುರಾಜ್ - ಯತಿರಾಜ್ ನಿರ್ದೇಶಿಸುತ್ತಿರುವುದು ಖುಷಿಯಾಗಿದೆ ಎಂದು ಹೇಳಿದರು.

ನಿರ್ಮಾಪಕ ಕೆ.ಮಂಜು ಮಾತನಾಡುತ್ತ ರಾಗಿಣಿ ಅವರು ಚಿತ್ರರಂಗಕ್ಕೆ ಬಂದ ದಿನದಿಂದಲೂ ಅವರನ್ನು ನಾನು ಬಲ್ಲೆ, ಅವರೊಬ್ಬ ಉತ್ತಮ ಕಲಾವಿದೆ. ಇತ್ತೀಚೆಗೆ ರಾಗಿಣಿ ಅವರು ಫೋನ್ ಮಾಡಿ ನಿಮಗೆ ಕಥೆ ಹೇಳಲು ನಿರ್ದೇಶಕರು ಬರುತ್ತಿದ್ದಾರೆ ಅಂತ ಹೇಳಿದರು. ಯಾರು ಎಂದು ಹೇಳಲಿಲ್ಲ, ಅನಂತರ ನನ್ನ ಆತ್ಮೀಯ ಸ್ನೇಹಿತರಾದ ಜಗ್ಗೇಶ್ ಅವರ ಮಕ್ಕಳಾದ ಗುರುರಾಜ್ - ಯತಿರಾಜ್ ಬಂದು ರಾಗಿಣಿ ಐಪಿಎಸ್ 2 ಚಿತ್ರದ ಕಥೆ ಹೇಳಿದರು. ಕಂಟೆಂಟ್ ಚೆನ್ನಾಗಿದೆ. ರಾಗಿಣಿ ವೆಂಚರ್ಸ್ ನಿರ್ಮಾಣಕ್ಕೆ ಜೊತೆಯಾಗಿದ್ದಾರೆ. ಆದಷ್ಟು ಬೇಗ ಚಿತ್ರಕ್ಕೆ ಚಾಲನೆ ಸಿಗಲಿದೆ ಎಂದು ಹೇಳಿದರು. ಉದ್ಯಮಿ ಸುಬ್ರಹ್ಮಣ್ಯ ಅವರು ಸಹ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ನಿರ್ದೇಶನಕಿಳಿದ ಗುರುರಾಜ್ - ಯತಿರಾಜ್ ಜಗ್ಗೇಶ್

ಗುರುತ್ವಾಕರ್ಷಣೆ ಸದ್ಯದಲ್ಲೇ ತೆರೆಗೆ





ಮದರ್ ಪ್ರಾಮಿಸ್ ಟಾಕೀಸ್ ಬ್ಯಾನರ್ ಅಡಿಯಲ್ಲಿ, ಮಹೇಂದರ್ ಸಿ. ಗುಂಡೇಗಾಲ ಅವರು ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಮೊದಲ ಬಾರಿಗೆ ನಿರ್ದೇಶನ ಮಾಡುವುದರ ಜೊತೆಗೆ ಚಿತ್ರದ ನಿರ್ಮಾಣವನ್ನೂ ಸಹ ಮಾಡಿರುವ ಚಿತ್ರ ಗುರುತ್ವಾಕರ್ಷಣೆ. ಈ ಚಿತ್ರಕ್ಕೆ ಸಹ ನಿರ್ಮಾಪಕರಾಗಿ ದಿಲೀಪ್ ಸಿದ್ದಪ್ಪಾಜಿ ಕೊಳ್ಳೇಗಾಲ ಅವರು ಸಾಥ್ ನೀಡಿದ್ದಾರೆ. ಈವರೆಗೂ ಕೆಲವು ಕಿರುಚಿತ್ರಗಳನ್ನು ನಿರ್ದೇಶಿಸಿ ಗುರುತಿಸಿಕೊಂಡಿರುವ ಮಹೇಂದರ್ ಸಿ. ಗುಂಡೇಗಾಲ ಅವರಿಗೆ ಇದು ಚೊಚ್ಚಲ ನಿರ್ದೇಶನದ ಚಿತ್ರ. ಈಗಾಗಲೇ ಚಿತ್ರದ ಚಿತ್ರೀಕರಣ ಹಾಗೂ ಪೋಸ್ಟ್ ಪ್ರೊಡಕ್ಷನ್ ಕೆಲಸಗಳು ಮುಗಿದಿದ್ದು ಚಿತ್ರವೀಗ ಸೆನ್ಸಾರ್ ಹಂತದಲ್ಲಿದೆ.

ಗುರುತ್ವಾಕರ್ಷಣೆ ಚಿತ್ರದ ಶೀರ್ಷಿಕೆ ಕೇಳಿದ ತಕ್ಷಣ ಎಲ್ಲರಿಗೂ ಇದೊಂದು ವೈಜ್ಞಾನಿಕ ಕಾನ್ಸೆಪ್ಟ್ ಒಳಗೊಂಡ ಚಿತ್ರ ಅನಿಸುವುದು ಸಹಜ. ಆದರೆ ಇದು ವೈಜ್ಞಾನಿಕ ಕಂಟೆಂಟ್ ಇರುವ ಚಿತ್ರವಲ್ಲ, ಗುರುತ್ವಾಕರ್ಷಣೆಯನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಏನಾಗುತ್ತದೆ? ಎಂಬುದನ್ನು ಈ ಚಿತ್ರದಲ್ಲಿ ತೋರಿಸಿದ್ದೇವೆ. ಇದು ಕೊಳ್ಳೇಗಾಲ ಮತ್ತು ಚಾಮರಾಜನಗರದಲ್ಲಿ ನಡೆಯುವ ಕಥೆ. ಗುರುತ್ವಾಕರ್ಷಣೆ ಚಿತ್ರದ ಚಿತ್ರೀಕರಣವನ್ನು ಸಹ ಅಲ್ಲೇ ನಡೆಸಲಾಗಿದೆ. ಈಗಾಗಲೇ ನೀತು ನಿಶಾದ್ ಅವರು ಸಂಗೀತ ನಿರ್ದೇಶನದಲ್ಲಿ ಮೂಡಿಬಂದಿರುವ ಎರಡು ಹಾಡುಗಳು ಹಾಗೂ ಟೀಸರ್ ಎ2 ಮ್ಯೂಸಿಕ್ ಮೂಲಕ ಬಿಡುಗಡೆಯಾಗಿದ್ದು, ಅಧಿಕ ಸಂಖ್ಯೆಯಲ್ಲಿ ವೀಕ್ಷಣೆ ಸಹ ಆಗುತ್ತಿದೆ. ಸದ್ಯದಲ್ಲೇ ಗುರುತ್ವಾಕರ್ಷಣೆ ಚಿತ್ರವನ್ನು ತೆರೆಗೆ ತರುವ ಪ್ರಯತ್ನ ಕೂಡ ನಡೆಯುತ್ತಿದೆ. ನನ್ನ ತಾಯಿಗೆ ನಾನು ನಿರ್ದೇಶಕನಾಗಬೇಕೆಂಬ ಆಸೆ. ಅವರು ಕಣ್ಣು ಮುಚ್ಚುವ ಮೊದಲು ಹೇಳಿದ ಮಾತು ಈಡೇರಿಸಲು, ಅವರ ಆಸೆ- ಆಶಯದಂತೆ ಸತತ ಒಂದುವರೆ ವರ್ಷ ಹಗಲಿನಲ್ಲಿ ಕೆಲಸ ಮಾಡಿ ರಾತ್ರಿ ಈ ಚಿತ್ರದ ಕಥೆಯನ್ನು ಸಿದ್ದಮಾಡಿಕೊಳ್ಳುತ್ತಿದ್ದೆ. ಕೊಳ್ಳೇಗಾಲ ಮತ್ತು ಮೈಸೂರಿನ ಪ್ರತಿಭೆಗಳನ್ನು ಒಗ್ಗೂಡಿಸಿಕೊಂಡು ನಿರ್ಮಾಣ ಮಾಡಿರುವ ಸಿನಿಮಾ ಇದು ಎನ್ನುತ್ತಾರೆ ನಿರ್ದೇಶಕ ಮಹೇಂದರ್ ಸಿ. ಗುಂಡೇಗಾಲ.

ಜಯಂತ್ ದೊರೆ ಈ ಚಿತ್ರದ ನಾಯಕನಾಗಿ ನಟಿಸಿದ್ದು, ಸುಕೃತಿ ಅವರು ನಾಯಕಿಯ ಪಾತ್ರ ನಿರ್ವಹಿಸಿದ್ದಾರೆ. ಪ್ರಭಾಕರ್, ದಿವ್ಯಕುಮಾರ್ ಸತ್ತೇಗಾಲ, ಮಂಡ್ಯ ಸಿದ್ದು, ವಿಜಯ್ ಕಿರಣ್, ಮಾಸ್ಟರ್ ಶೌರ್ಯ ಮತ್ತು ಡಾ.ಭಾನುಪ್ರಕಾಶ್ ಎ. ಎಸ್. ಮುಂತಾದವರು ಈ ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ. ಪವಿತ್ರನ್ - ವಿಘ್ನೇಶ್ ವಿಕ್ಕಿ ಅವರ ಛಾಯಾಗ್ರಹಣ ಹಾಗೂ ರಕ್ಷಿತ್‌ರಾಜ್ ಅವರ ಸಂಕಲನ ಗುರುತ್ವಾಕರ್ಷಣೆ ಚಿತ್ರಕ್ಕಿದೆ.

ಹೊಂಬಾಳೆ ಮ್ಯೂಸಿಕ್ ತೆಕ್ಕೆಗೆ ದೇವಿ ಮಹಾತ್ಮೆ ಆಡಿಯೋ



ಟೈಟಲ್ ಹಾಗೂ ಪೋಸ್ಟರ್ ನಿಂದ ಸಿನಿ ಪ್ರೇಕ್ಷಕರಲ್ಲಿ ನಿರೀಕ್ಷೆ ಹೆಚ್ಚು ಮಾಡಿರುವ ದೇವಿ ಮಹಾತ್ಮೆ ಚಿತ್ರತಂಡದಿಂದ ಹೊಸ ಅಪ್ ಡೇಟ್ ಸಿಕ್ಕಿದೆ. ಈ ಚಿತ್ರದ ಹಾಡುಗಳು ಪ್ರತಿಷ್ಠಿತ ನಿರ್ಮಾಣ ಸಂಸ್ಥೆಗೆ ಮಾರಾಟವಾಗಿರುವುದು ಚಿತ್ರತಂಡದ ಸಂತಸಕ್ಕೆ ಕಾರಣವಾಗಿದೆ. "ಹೊಂಬಾಳೆ ಮ್ಯೂಸಿಕ್" ದೇವಿ ಮಹಾತ್ಮೆ ಸಿನಿಮಾದ ಆಡಿಯೋ ಹಕ್ಕನ್ನು ಖರೀದಿ ಮಾಡಿದೆ. ಅಂದಹಾಗೇ ಈ ಚಿತ್ರದ ಸೃಷ್ಟಿಕರ್ತರು ನಾಗರಾಜ ಸೋಮಯಾಜಿ. ಮರ್ಯಾದೆ ಪ್ರಶ್ನೆ ಚಿತ್ರದ ನಂತರ ನಾಗರಾಜ ಸೋಮಯಾಜಿ ಅವರ ನಿರ್ದೇಶನ ಸಾರಥ್ಯದಲ್ಲಿ ಮೂಡಿಬರ್ತಿರುವ ಚಿತ್ರ ಇದಾಗಿದೆ. ದೇವಿ ಮಹಾತ್ಮೆ ಕಾಮಿಡಿ, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ನಾಗರಾಜ ಸೋಮಯಾಜಿ ಅವರೇ ಕಥೆ, ಚಿತ್ರಕಥೆ ಬರೆದು ಆಕ್ಷನ್ ಕಟ್ ಹೇಳುತ್ತಿದ್ದಾರೆ. ಬರವಣಿಗೆಯಲ್ಲಿ ಅರವಿಂದ್ ಕುಪ್ಳೀಕರ್, ಭಾಸ್ಕರ್ ಬಂಗೇರ ಹಾಗೂ ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಅವರುಗಳು ಜೊತೆಯಾಗಿದ್ದಾರೆ. ಯುವಿಜಿ ಸ್ಟುಡಿಯೋ ಬ್ಯಾನರ್ ನಡಿ ವಿದ್ಯಾ ಗಾಂಧಿರಾಜನ್ ಅವರು ಈ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಗಾಂಧಿರಾಜನ್ ಅವರು ನಿರ್ಮಾಣದಲ್ಲಿ ಸಾಥ್ ಕೊಟ್ಟಿದ್ದಾರೆ. ಒಂದೊಳ್ಳೆ ತಾಂತ್ರಿಕ ವರ್ಗ ಈ ಚಿತ್ರದಲ್ಲಿ ಕೆಲಸ ಮಾಡ್ತಿದ್ದು, ಎಸ್. ಕೆ. ರಾವ್ ಅವರ ಛಾಯಾಗ್ರಹಣ ಹಾಗೂ ಲಿಖಿತ್ ಪ್ರಸಾದ್ ಕೆ. ಶೆಟ್ಟಿ ಅವ ಸಂಗೀತ ನಿರ್ದೇಶನ, ಉಜ್ವಲ್ ಚಂದ್ರ ಅವರ ಸಂಕಲನ ದೇವಿಮಹಾತ್ಮೆ ಚಿತ್ರಕ್ಕಿದೆ.

ಹೊಂಬಾಳೆ ಸಂಸ್ಥೆ ಖರೀದಿಸಿದ ಮೊದಲ ಚಲನಚಿತ್ರ ಆಡಿಯೋ ದೇವಿ ಮಹಾತ್ಮೆ

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. Printed at M N S Printers No.345/4, Bhattarahalli, Virgo Nagar Post Old Madras Road, K R Puram, Bangalore 560 049 and Published at No. 1/1, 1Floor, 6th cross, 8th Main, Malleshwara, Bengaluru 03 Ph: (080) 23560302, 340 , Editor: P.S.Prakash, Group Editor: Vinayak S. Bhat, Posted at PSO Bengaluru, Bengaluru 26